"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ:21ನೇ ಜೂನ್ 2017
ಸೋಮವಾರ

## ವಿಷಯಾನುಕ್ರಮಣಿಕೆ

1. ಸಭೆಯ ಮುಂದಿಡಲಾದ ಕಾಗದ ಪತ್ರಗಳು.
2. ವಿಶೇಷ ಪ್ರಸ್ತಾವಗಳು

ಅ) ರಾಜ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಹುದ್ದೆಗೆ ನಡೆದ ಟಿಇಟಿ ಪರೀಕ್ಷೆಯ ಕೀ ಉತ್ತರದಲ್ಲಿ ತಪ್ಪು ಉತ್ತರವನ್ನು ಸರಿ ಉತ್ತರ ಎಂದು ನಮೂದಿಸಿರುವ ಬಗ್ಗೆ.

ಶ್ರೀ ರಮೇಶ್‌ಬಾಬು
ಶ್ರೀ ಕೆ.ಆರ್.ರಮೇಶ್‌ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಆ) ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 19 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಲ್ಲದಿರುವ ಬಗ್ಗೆ.

ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)
ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)

ಇ) ಕಾಸರಗೋಡು ಕನ್ನಡಿಗರ ಮೇಲೆ ಮಲೆಯಾಳಿ ಭಾಷೆ ಹೇರಿಕೆಯಿಂದ ಆಗುವ ಭಾಷಾ ದೌರ್ಜನ್ಯ ಕುರಿತು.

ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಶ್ರೀ ಕೆ.ಆರ್.ರಮೇಶ್‌ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಈ) ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಗ್ರೂಪ್ 'ಡಿ' ಹುದ್ದೆಗೆ ಹೊರಗುತ್ತಿಗೆ ಆಧಾರದ ಮೇಲೆ ಬಹಳ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಕುರಿತು.

ಶ್ರೀ ಸೋಮಣ್ಣ ಮ.ಬೇವಿನಮರದ
ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
ಶ್ರೀ ಹೆಚ್.ಆಂಜನೇಯ(ಸಮಾಜ ಕಲ್ಯಾಣ ಸಚಿವರು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

3. ಚುನಾವಣಾ ಪ್ರಸ್ತಾವ

"ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರನ್ನು ನಾಮನಿರ್ದೇಶನ ಮಾಡುವುದು"

**(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)**

4. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಅ) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ ತಿದ್ದುಪಡಿ) ವಿಧೇಯಕ, 2017

ಶ್ರೀ ಕೆ.ಆರ್.ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)
ಶ್ರೀ ರಾಮಚಂದ್ರಗೌಡ
ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)
ಶ್ರೀ ರಮೇಶ್ ಬಾಬು

5. ಪ್ರಕಟಣೆ

6. ಸಭೆಯ ಮುಂದಿಡಲಾದ ಕಾಗದ ಪತ್ರಗಳು

7. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಅ) ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ, 2017

ಡಾ: ಶರಣಪ್ರಕಾಶ ಆರ್.ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು)
ಶ್ರೀ ರಾಮಚಂದ್ರಗೌಡ
ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)
ಶ್ರೀ ರಾಮಚಂದ್ರಗೌಡ
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆ) ಕರ್ನಾಟಕ ರಾಜ್ಯ ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017

ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು)
ಶ್ರೀ ರಾಮಚಂದ್ರಗೌಡ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ವಿ.ಎಸ್.ಉಗ್ರಪ್ಪ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಇ) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕ, 2017

ಶ್ರೀ ಬಸವರಾಜ ರಾಯರೆಡ್ಡಿ
ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ
ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ಭಾನುಪ್ರಕಾಶ್
ಶ್ರೀ ರಾಮಚಂದ್ರಗೌಡ
ಶ್ರೀ ರಮೇಶ್ ಬಾಬು
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ಬಿ.ಜೆ.ಪುಟ್ಟಸ್ವಾಮಿ
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಪುಟ್ಟಣ್ಣ
ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)
ಶ್ರೀ ಎಂ.ಆರ್.ಸೀತಾರಾಮ್(ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

8. ಪ್ರಕಟಣೆ

9. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಅ) ಭಾರತ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017

ಶ್ರೀ ಟಿ.ಬಿ.ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು)
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)
ಶ್ರೀ ರಾಮಚಂದ್ರಗೌಡ

ಶ್ರೀ ಕೆ.ಗೋವಿಂದರಾಜು
ಶ್ರೀ ರಮೇಶ್ ಬಾಬು
ಶ್ರೀ ಪುಟ್ಟಣ್ಣ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಆ) ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2017

ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಪುಟ್ಟಣ್ಣ
ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
ಶ್ರೀ ಕೆ.ಟಿ.ಶ್ರೀಕಂಠೇಗೌಡ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಇ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2017

ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)
ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಶ್ರೀ ರಮೇಶ್ ಬಾಬು
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ಬಸವರಾಜ ಪಾಟೀಲ್ ಇಟಗಿ
ಶ್ರೀಮತಿ ಉಮಾಶ್ರೀ(ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

10. ಸಭೆಯ ಮುಂದಿಡಲಾದ ಕಾಗದ ಪತ್ರಗಳು
11. ಶಾಸನ ರಚನೆ

ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ-2) ವಿಧೇಯಕ, 2017 ಹಾಗೂ
ಆ) ಕರ್ನಾಟಕ ಧನವಿನಿಯೋಗ (ಸಂಖ್ಯೆ-3) ವಿಧೇಯಕ, 2017

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು)
ಶ್ರೀ ವಿ.ಸೋಮಣ್ಣ
ಶ್ರೀ ಕೆ.ಟಿ.ಶ್ರೀಕಂಠೇಗೌಡ
ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
ಶ್ರೀ ವಿ.ಎಸ್.ಉಗ್ರಪ್ಪ
ಶ್ರೀ ರಘುನಾಥರಾವ್ ಮಲ್ಕಾಪೂರೆ
ಶ್ರೀ ಕೃಷ್ಣ ಭೈರೇಗೌಡ
ಶ್ರೀ ಎಂ.ಕೆ.ಪ್ರಾಣೇಶ್
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)

ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು)
ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)
ಶ್ರೀ ಪುಟ್ಟಣ್ಣ
ಶ್ರೀ ರಮೇಶ್ ಬಾಬು

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಇ) ಕರ್ನಾಟಕ ಸ್ಟಾಂಪು(ಎರಡನೇ ತಿದ್ದುಪಡಿ) ವಿಧೇಯಕ, 2017

ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಈ) ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್(ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2017

ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)
ಶ್ರೀ ವಿ.ಎಸ್.ಉಗ್ರಪ್ಪ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಉ) ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ)(ತಿದ್ದುಪಡಿ) ವಿಧೇಯಕ, 2017

ಶ್ರೀ ಹೆಚ್.ಆಂಜನೇಯ(ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)
ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು)
ಶ್ರೀ ವಿ.ಎಸ್.ಉಗ್ರಪ್ಪ
ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

12. ಪ್ರಕಟಣೆ

13. ಸಭೆಯ ಮುಂದಿಡಲಾದ ಕಾಗದ ಪತ್ರಗಳು
14. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ
15. ನಿಯಮ 330 ಮತ್ತು ನಿಯಮ 72ರ ಅಡಿಯಲ್ಲಿ ಸ್ವೀಕೃತವಾದ ಸೂಚನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

16. ಸಚಿವರ ಹೇಳಿಕೆ
17. ಸಾರಾಂಶ

*********

(868)/21-6-2017/11-10/ಎಲ್ಎಂ/ಎಕೆ

**<u>ಕರ್ನಾಟಕ ವಿಧಾನ ಪರಿಷತ್ತು</u>**

**ಸೋಮವಾರ, *21ನೇ ಜೂನ್, 2017.***

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**

**ಬೆಳಿಗ್ಗೆ 11 ಗಂಟೆ 13 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿಯವರಾದ (ಶ್ರೀ ಡಿ.ಎಚ್.ಶಂಕರಮೂರ್ತಿ) ರವರು**

**ಪೀಠದಲ್ಲಿ ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 1.ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅ) **ಕಾರ್ಯದರ್ಶಿಯವರು:–** ಮಾನ್ಯ ಸಭಾಪತಿಗಳ ಅಪ್ಪಣೆ ಮೇರೆಗೆ,

ಘನತೆವೆತ್ತ ರಾಷ್ಟ್ರಪತಿಯವರಿಂದ ಒಪ್ಪಿಗೆ ಪಡೆದಿರುವ "ಬಾಲ್ಯ ವಿವಾಹ ನಿಷೇಧ ಕರ್ನಾಟಕ(ತಿದ್ದುಪಡಿ) ವಿಧೇಯಕ 2010ನ್ನು" ಸಭೆಯ ಮುಂದೆ ಮಂಡಿಸುತ್ತೇನೆ.

ಆ) **ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):–** ಮಾನ್ಯ ಸಭಾಪತಿಗಳೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2017ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಕರ್ನಾಟಕದಲ್ಲಿನ ರಾಷ್ಟ್ರೀಯ ಉದ್ಯಾನಗಳು ಮತ್ತು ವನ್ಯಜೀವಿಧಾಮಗಳ ಆಡಳಿತ ನಿರ್ವಹಣೆ ಮೇಲಿನ ವರದಿಯನ್ನು (ಸಂಖ್ಯೆ–6)ಸಭೆಯ ಮುಂದೆ ಮಂಡಿಸುತ್ತೇನೆ.

**(ಲಗತ್ತಿಸಲಾಗಿದೆ)**

**ಈ) ಕಾರ್ಯದರ್ಶಿಯವರು**(ಕ.ವಿ.ಪ)**:–** ಮಾನ್ಯ ಸಭಾಪತಿಗಳ ಅಪ್ಪಣೆ ಮೇರೆಗೆ,

ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ,2017
2) ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ, 2017
3) ಕರ್ನಾಟಕ ರಾಜ್ಯ ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017
4) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು(ತಿದ್ದುಪಡಿ) ವಿಧೇಯಕ,2017

**ಸಭಾಪತಿಯವರು:–** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 2.ವಿಶೇಷ ಪ್ರಸ್ತಾವಗಳು

ಅ) **ರಾಜ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಹುದ್ದೆಗೆ ನಡೆದ ಟಿಇಟಿ ಪರೀಕ್ಷೆ ಕೀ ಉತ್ತರದಲ್ಲಿ ತಪ್ಪು ಉತ್ತರವನ್ನು ಸರಿ ಉತ್ತರ ಎಂದು ನಮೂದಿಸಿರುವ ಬಗ್ಗೆ.**

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

-----

**ಶ್ರೀ ರಮೇಶ್ ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ರಾಜ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಸಹ ಶಿಕ್ಷಕರ ಹುದ್ದೆಗೆ ದಿನಾಂಕ: 15-1-2017ರಂದು ನಡೆದ ಟಿಇಟಿ (ಕರ್ನಾಟಕ ಟೀಚರ್ ಎಲಿಜಿಬಿಲಿಟಿ ಟೆಸ್ಟ್) ಪರೀಕ್ಷೆಯಲ್ಲಿನ ಪ್ರಶ್ನೆ ಸಂಖ್ಯೆ: 130ರಲ್ಲಿ " ಕರ್ನಾಟಕದ ಪ್ರಥಮ ಹಿಂದುಳಿದ ವರ್ಗಗಳ ಆಯೋಗವನ್ನು ಇವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು" ಎನ್ನುವ ಪ್ರಶ್ನೆಗೆ 4 ವಸ್ತುನಿಷ್ಠತೆಗಳನ್ನು ನೀಡಲಾಗಿದ್ದು, 1) ಎಲ್.ಜಿ.ಹಾವನೂರು 2) ಚಿನ್ನಪ್ಪ ರೆಡ್ಡಿ 3)ನಾಗನಗೌಡ 4) ವೆಂಕಟಸ್ವಾಮಿ, ಎಂದು ನೀಡಲಾಗಿರುತ್ತದೆ. ಆದರೆ 1) ಕರ್ನಾಟಕ ಕೈಪಿಡಿ 2011(ಕರ್ನಾಟಕದ ಗೆಜೆಟಿಯರ್ ಇಲಾಖೆ) 2) ಕರ್ನಾಟಕ ಸಂಗಾತಿ ( ಕನ್ನಡ ಅಭಿವೃದ್ಧಿ ಪ್ರಾಧಿಕಾರ) ಹಾಗೂ 3) 7ನೇ ತರಗತಿಯ ಸಮಾಜ  ವಿಜ್ಞಾನ ಪುಸ್ತಕ (ಕರ್ನಾಟಕ ಪಠ್ಯ ಪುಸ್ತಕ ಸಂಘ (ರಿ)) 4) ಭಾರತದ ಸಂವಿಧಾನ (ಡಾ: ಕೆ.ಎಂ.ಸುರೇಶ್) ಈ ಎಲ್ಲಾ ಪುಸ್ತಕಗಳಲ್ಲಿಯೂ ಸಹ ಕರ್ನಾಟಕದ ಪ್ರಥಮ ಹಿಂದುಳಿದ ವರ್ಗಗಳ ಅಯೋಗವನ್ನು ಶ್ರೀ ಎಲ್.ಜಿ.ಹಾವನೂರು ಇವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು ಎಂದು ನಮೂದಿಸಲಾಗಿರುತ್ತದೆ. ಆದರೆ ಸದರಿ ಟಿಇಟಿ ಪರೀಕ್ಷೆಯಲ್ಲಿ ನೀಡಲಾದ ಕೀ  ಉತ್ತರದಲ್ಲಿ ಶ್ರೀ ನಾಗನಗೌಡ ಇವರ ಅಧ್ಯಕ್ಷತೆಯಲ್ಲಿ ಕರ್ನಾಟಕದ ಪ್ರಥಮ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿದ್ದಾರೆಂದು ಉತ್ತರಿಸಿದೆ. ಆದರೆ ಶ್ರೀ ನಾಗನಗೌಡರವರು ಹಿಂದುಳಿದ ವರ್ಗಗಳ ಸಮಿತಿಯ ಅಧ್ಯಕ್ಷರೆಂದು ಮೇಲ್ಕಂಡ ಪುಸ್ತಕಗಳಲ್ಲಿ ನಮೂದಾಗಿರುತ್ತದೆ. ಇದು ಘನಘೋರ ತಪ್ಪೆಂಬುದು ಎಲ್ಲರಿಗೂ ಅರ್ಥವಾಗುವ ಸಂಗತಿ. ಶ್ರೀ ನಾಗರಾಜು ಟಿ.ಬಿ. ತಮ್ಮಡಹಳ್ಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ ಇವರು ಸರಿಯಾಗಿ ಉತ್ತರಿಸಿದ್ದರು ಸಹ ಟಿಇಟಿ ನೀಡಿದ ಕೀ ಉತ್ತರದಲ್ಲಿನ ತಪ್ಪಿನಿಂದಾಗಿ, ಕೇವಲ ಒಂದು ಅಂಕದಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಸಹ ಶಿಕ್ಷಕರ  ಹುದ್ದೆಗೆ ನಡೆದ ಟಿಇಟಿ ಪರೀಕ್ಷೆಯಿಂದ ವಂಚಿತರಾಗಿರುತ್ತಾರೆ. ಆದುದರಿಂದ ಈ ತಪ್ಪನ್ನು ಕೂಡಲೇ ಸರಿಪಡಿಸಿ, ಶ್ರೀ ನಾಗರಾಜು ಟಿ.ಬಿ ಈ ಅಭ್ಯರ್ಥಿಗೆ ಟಿಇಟಿ ಪರೀಕ್ಷೆಯಲ್ಲಿ ಅರ್ಹತೆ ದೊರಕಿಸಿಕೊಡಬೇಕೆಂಬ ವಿಷಯವನ್ನು ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರಲ್ಲಿ  ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಕೆ.ಆರ್.ರಮೇಶ್ ಕುಮಾರ್(ಆರೋಗ್ಯ ಸಚಿವರು)**(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):- ಮಾನ್ಯ ಸಭಾಪತಿಗಳೆ,  ಮಾನ್ಯ ಸದಸ್ಯರು ಓದಿರುವ ಸೂಚನೆಯನ್ನು ನಾನು ಗಮನಿಸಿದ್ದೇನೆ. ನಮ್ಮ ಕೀ ಉತ್ತರವೆ ತಪ್ಪು ಇದೆ. ಆದ್ದರಿಂದ ಸರಿಯಾದ ಉತ್ತರವನ್ನು ಬರೆದಿರುವವರಿಗೆ ಅನ್ಯಾಯವಾಗಿದೆ. ಇದು ಅಕ್ಷಮ್ಯ ಅಪರಾಧ. ಆಗಿರುವ ಅನ್ಯಾಯವನ್ನು ಸರಿಪಡಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಮೇಶ್‌ಬಾಬು:-** ಮಾನ್ಯ ಸಭಾಪತಿಗಳೆ, ಎಲ್ಲಾ ಸರ್ಕಾರಿ ಪುಸ್ತಕಗಳಲ್ಲಿ, ಸರ್ಕಾರಿ ದಾಖಲೆಗಳಲ್ಲಿ ಶ್ರೀ ಎಲ್.ಜಿ.ಹಾವನೂರುರವರೆ ಪ್ರಥಮ ಅಧ್ಯಕ್ಷರು ಎಂದು ಇದೆ. ಇದು ತಪ್ಪು ಎಂದು ಒಂದು ಅಂಕದಲ್ಲಿ ಆ ಅಭ್ಯರ್ಥಿಗೆ ಸರ್ಕಾರಿ ಕೆಲಸ ಕೈಬಿಟ್ಟು ಹೋಗಿದೆ. ದಯಮಾಡಿ ಸರ್ಕಾರ ಶೀಘ್ರವಾಗಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

**ಶ್ರೀ ಕೆ.ಆರ್.ರಮೇಶ್ ಕುಮಾರ್:-** ಮಾನ್ಯ ಸಭಾಪತಿಗಳೆ, ಈ ಸಮುದ್ರದಲ್ಲಿ ಇಂತಹ ದೊಡ್ಡ ಮನುಷ್ಯರು ಸೇರಿಕೊಂಡು ಬಿಟ್ಟಿದ್ದಾರೆ. ತಪ್ಪಾಗುವುದನ್ನು Confucius ಎಂಬ ಒಬ್ಬ ಮಹಾನ್ ಜೈನಾ ದೇಶದ ಪ್ರವರ್ತಕ ಹೇಳುತ್ತಾನೆ, "To own a mistake ends in a single mistake. To commit a mistake and deny a mistake amounts to double mistake." I am not prepared to commit a double mistake. Let it end up in a single mistake. It is a mistake. We will correct ourselves. It's an assurance to you.

**ಆ) ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 19 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಲ್ಲದಿರುವ ಬಗ್ಗೆ.**

-------

**ಶ್ರೀ ಐವನ್ ಡಿ'ಸೋಜಾ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಗಳೆ, ನಿಯಮ 330-ಎ ಅಡಿಯಲ್ಲಿ ವಿಶೇಷ ಪ್ರಸ್ತಾವ ಮಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಮಂಗಳೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹತ್ತೊಂಭತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ದಿನಾಂಕ: 19.6.2017ರಂದು ಆರಂಭವಾಗಿದೆ. ಈ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಬೇಕಾಗಿದ್ದ 650 ಅತಿಥಿ ಉಪನ್ಯಾಸಕರುಗಳ ನೇಮಕಾತಿ ಆಗದೆ ವಿದ್ಯಾರ್ಥಿಗಳಿಗೆ ಉಪನ್ಯಾಸಕರಿಲ್ಲವೆಂಬ ಕಾರಣ ನೀಡಿ ಕಾಲೇಜುಗಳಿಗೆ ರಜೆ ನೀಡಲಾಗುತ್ತಿದೆ. ಮಂಗಳೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಟ್ಟ ಕಾರ್ ಸ್ಟ್ರೀಟ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 70 ಉಪನ್ಯಾಸಕರ ಪೈಕಿ 50 ಅತಿಥಿ ಉಪನ್ಯಾಸಕರಿದ್ದು, ಸುಮಾರು 1700 ವಿದ್ಯಾರ್ಥಿಗಳು ಕಾಲೇಜಿನಲ್ಲಿ ಕಲಿಯುತ್ತಿದ್ದಾರೆ. ಉಪನ್ಯಾಸಕರ ಗೈರು ಹಾಜರಿಯಲ್ಲಿ ವಿದ್ಯಾರ್ಥಿಗಳಿಗೆ ಬೋಧಕರು ಇಲ್ಲದೆ ಮನೆಗಳಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತೆರಳುತ್ತಿದ್ದು, ಪೋಷಕರು ಸರ್ಕಾರಿ ಕಾಲೇಜುಗಳ ಅವ್ಯವಸ್ಥೆ ಬಗ್ಗೆ ತೀವ್ರವಾದ ಅಸಮಧಾನ ವ್ಯಕ್ತಪಡಿಸಿದ್ದಾರೆ. ಸರ್ಕಾರವು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವುದಾಗಿ ಹೇಳಿಕೆ ನೀಡಿದ್ದರೂ ಯಾವುದೇ ಆದೇಶ ಕಳುಹಿಸದೆ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳದೆ ಬಡ ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆ. ಅಲ್ಲದೆ ಖಾಸಗಿ ಕಾಲೇಜುಗಳಲ್ಲಿ ತರಗತಿಗಳು ನಡೆಯುತ್ತಿದ್ದು, ಸರ್ಕಾರಿ ಕಾಲೇಜು ಆಯ್ಕೆ ಮಾಡಿಕೊಂಡಿರುವ ವಿದ್ಯಾರ್ಥಿಗಳಿಗೆ ಉಪನ್ಯಾಸಕರು ಇಲ್ಲವೆಂಬ ಕಾರಣಕ್ಕಾಗಿ ಮನೆಗೆ ಕಳುಹಿಸಿದರೆ ಸರ್ಕಾರಿ ಕಾಲೇಜುಗಳಿಗೆ ವಿದ್ಯಾರ್ಥಿಗಳು ಪ್ರವೇಶ ಪಡೆಯಲು ಏತಕ್ಕಾಗಿ ಮುಂದೆ ಬರುತ್ತಾರೆ ಎಂಬ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಈ ಬಗ್ಗೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಕಾಲೇಜು ಪ್ರಾರಂಭಗೊಳ್ಳುವ ಸಂದರ್ಭದಲ್ಲಿಯೇ ಗಮನ ಹರಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿ ಕೂಡಲೇ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿ ತರಗತಿಗಳು ನಡೆಯುವಂತೆ ನಿರ್ದೇಶನ ನೀಡಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಬಸವರಾಜ್ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಗಳೆ, ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ಕಾಲೇಜುಗಳ ಪ್ರಾರಂಭೋತ್ಸವವಾಗುತ್ತಿದೆ, ಪ್ರಾರಂಭದ ಹಂತದಲ್ಲಿಯೇ ಅತಿಥಿ ಉಪನ್ಯಾಸಕರ ಸೇವೆಯನ್ನು ಮುಂದುವರೆಸಿ ಕಾಲೇಜುಗಳಿಗೆ ಪೋಸ್ಟಿಂಗ್ ಕೊಡುತ್ತೇವೆ. ಹೀಗಾಗಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ. ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

**(ಮುಂದು)**

(869) 21.06.2017 / YL-RN / 11.20

**(ಸಭಾಪತಿಯವರ ಉಪಸ್ಥಿತಿ)**

ಇ) **ವಿಷಯ:-** ಕಾಸರಗೋಡು ಕನ್ನಡಿಗರ ಮೇಲೆ ಮಲೆಯಾಳಿ ಭಾಷೆ ಹೇರಿಕೆಯಿಂದ ಆಗುವ ಭಾಷಾ ದೌರ್ಜನ್ಯ ಕುರಿತು.

*****

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದ ಕರಾವಳಿ ಜಿಲ್ಲೆಗಂಟಿಕೊಂಡ ಕಾಸರಗೋಡು ಕರ್ನಾಟಕದ ಅವಿಭಾಜ್ಯ ಅಂಗವಾಗಿ, ಭಾವನಾತ್ಮಕ ಮತ್ತು ಭಾಷಾ ಸಂಬಂಧಗಳನ್ನು ಹೊಂದಿರುವ ಗಡಿನಾಡ ಜಿಲ್ಲೆ. ನೆಲ, ಜಲ ಮತ್ತು ಜನರ ಬದುಕಿನಲ್ಲಿ ಮಾತೃ ಭಾಷೆಯಾದ ಕನ್ನಡದ ಸೊಗಡು ತುಂಬಿಕೊಂಡಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಸರಗೋಡಿನಲ್ಲಿ ಜನಿಸಿದ, ಕನ್ನಡದ ಕವಿ ಕೈಯಾರ ಕಿಂಞ್ಞಣ್ಣ ರೈ ಯವರು, ಪಂಜೆ ಮಂಗೇಶರಾಯರು ಮತ್ತು ಶ್ರೇಷ್ಠ ಸಾಹಿತಿ ಮಂಜೇಶ್ವರ ಗೋವಿಂದ ಪೈಗಳ ಸಹಿತ ಅನೇಕ ಮೇದಾವಿಗಳು, ಕಾಸರಗೋಡಿನಲ್ಲಿ ಜನಿಸಿ, ಕರ್ನಾಟಕ ರಾಜ್ಯಕ್ಕೆ ಕಾಸರಗೋಡು ಸೇರಬೇಕೆಂದು ಬದುಕಿನುದ್ದಕ್ಕೂ ಹೋರಾಟ ನಡೆಸಿದ್ದರು.

ದುರಾದೃಷ್ಟಕ್ಕೆ, ಕೇರಳ ಸರ್ಕಾರ ಕನ್ನಡ ನೆಲವಾದ ಕಾಸರಗೋಡಿನಲ್ಲಿ ಮಲೆಯಾಳಂ ಕಡ್ಡಾಯಗೊಳಿಸಿ, ಆದೇಶ ಹೊರಡಿಸಿ, ಅಲ್ಲಿನ ಕನ್ನಡಿಗರ ಕನ್ನಡತನವನ್ನೇ ಕಸಿಯುತ್ತಿದೆ. ತಮ್ಮ ಉಸಿರಿನೊಂದಿಗೆ ಕನ್ನಡ ಬೆರತಿದೆ. ಕನ್ನಡದ ಮೇಲಿನ ದಬ್ಬಾಳಿಕೆ ತಡೆಯುವುದಕ್ಕಾಗಿ ಕನ್ನಡಿಗರು ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದು ಕಾಸರಗೋಡಿನಿಂದ ಕಣ್ಣೂರಿನವರೆಗೆ, ದಿನ ನಿತ್ಯ ಪ್ರತಿಭಟನೆ ಮಾಡುತ್ತಿದ್ದಾರೆ.

ಗೌರವಾನ್ವಿತ ಸಭಾಪತಿಯವರೇ, ಭಾಷೆಯ ಆಯ್ಕೆ ಮಕ್ಕಳ ಮತ್ತು ರಕ್ಷಕರ ವಿವೇಚನೆಗೆ ಬಿಟ್ಟಿದ್ದು ಎಂಬುವುದು ಈ ಸಂವಿಧಾನದ ಆಶಯವಾಗಿದ್ದರೂ, ಕಾಸರಗೋಡಿನ ನೆಲದಲ್ಲಿ ಶಿಕ್ಷಣಕ್ಕೂ ಮಲೆಯಾಳಂ ಕಡ್ಡಾಯಗೊಳಿಸಿ ಕೇರಳ ಸರ್ಕಾರ ಕನ್ನಡಿಗರ ಮೇಲೆ ಭಾಷಾ ದೌರ್ಜನ್ಯ ನಡೆಸುತ್ತಿದೆ.

ಸರ್, ಹಿರಿಯ ಕವಿ ಕಯ್ಯಾರರು ಹೇಳಿದಂತೆ, **"ಬನ್ನಿರೋ ಬನ್ನಿರಿ ಕನ್ನಡದ ಮನೆಗೆ ಬೆಂಕಿ ಬಿದ್ದಿದೆ, ನಂದಿಸಿ ಬನ್ನಿರೋ"** ಎಂಬ ಮಾತು ಈಗ ಕಾಸರಗೋಡಿನಲ್ಲಿ ಕೇರಳ ಸರ್ಕಾರ ಸತ್ಯವಾಗಿಸುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ರಾಜ್ಯ ಸರ್ಕಾರವನ್ನು ಒತ್ತಾಯಿಸುವುದೇನೆಂದರೆ, ತಕ್ಷಣ ಕೇರಳ ಸರ್ಕಾರಕ್ಕೆ ಕನ್ನಡಿಗರ ಮೇಲಿನ ಭಾಷಾ ದೌರ್ಜನ್ಯ ನಿಲ್ಲಿಸುವಂತೆ, ಕನ್ನಡಿಗರಿಗೆ ಭಾಷಾ ಅನ್ಯಾಯ ಮಾಡದಂತೆ ರಾಜ್ಯ ಸರ್ಕಾರ ಒತ್ತಡ ಹೇರಬೇಕೆಂದು ಮುಖ್ಯಮಂತ್ರಿಗಳ ಮಟ್ಟದಲ್ಲಿ ಕೇರಳ ಸರ್ಕಾರಕ್ಕೆ ಕಾಸರಗೋಡಿನಲ್ಲಿ ಕನ್ನಡ ಉಳಿಸಲು ಮತ್ತು ಮಳೆಯಾಳಂ ಹೇರದಂತೆ ಒತ್ತಾಯ ಮಾಡಿ, ಕಾಸರಗೋಡಿನ ಕನ್ನಡಿಗರ ರಕ್ಷಣೆಗೆ ಧಾವಿಸಬೇಕೆಂದು ಈ ಮೂಲಕ ಸರ್ಕಾರವನ್ನು ಆಗ್ರಹಿಸುತ್ತೇನೆ.

**ಶ್ರೀ ಕೆ.ಆರ್. ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ) (ಕನ್ನಡ ಮತ್ತು ಸಂಸ್ಕೃತಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ಈ ಭಾರತ ದೇಶವು ಒಂದು ಫೆಡರಲ್ ರಿಪಬ್ಲಿಕ್. ನಮ್ಮ ದೌರ್ಭಾಗ್ಯವೆಂದರೆ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಿದಂತಹ ಸಂದರ್ಭದಲ್ಲಿ ಹೆಚ್ಚು ಕನ್ನಡಿಗರು ಇವತ್ತು ಕೇರಳ ಪ್ರಾಂತ್ಯದಲ್ಲಿ ನೆಲೆಸುತ್ತಿದ್ದಾರೆ. ಮಾನ್ಯ ಗೌರವಾನ್ವಿತ ಸದಸ್ಯರು ಸಲಹೆ ಮಾಡಿರುವಂತೆ ನಮ್ಮ ಸರ್ಕಾರ ಕೂಡಲೇ ಇದನ್ನು ಗಂಭೀರವಾದ ವಿಷಯವೆಂದು ಪರಿಗಣಿಸಿ, ಕೇರಳ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಸರ್ಕಾರದೊಂದಿಗೆ ಮಾತನಾಡಿ ಕಾಸರಗೋಡಿನ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕನ್ನಡಿಗರ ರಕ್ಷಣೆಯ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಕಾಸರಗೋಡಿನಲ್ಲಿ ನೆಲೆಸಿರತಕ್ಕಂಥ ಕನ್ನಡಿಗರು ನಮ್ಮ ಸಹೋದರರಂತೆ. ಅವರ ಭಾವನೆಗಳಿಗೆ ದಕ್ಕೆಯಾಗಿರುವುದರ ಬಗ್ಗೆ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ನಮ್ಮ ಸಹಮತ ಇದೆ. ಬೇರೆ ಯಾವುದೇ ಆಲೋಚನೆ ನಮಗೆ ಇಲ್ಲ. ಪರಿಸ್ಥಿತಿಯ ತೀವ್ರತೆಯನ್ನು ಕೂಡಲೇ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಕೇರಳ ಸರ್ಕಾರದ ಜೊತೆಗೆ ಮಾತನಾಡಿ ಪರಿಹಾರ ಕೊಡಬೇಕು. ಕನ್ನಡಿಗರ ಪರವಾಗಿ ಮುಂದಿನ ಕ್ರಮ ಕೈಗೊಳ್ಳಬೇಕೆಂಬ ದಿಕ್ಕಿನಲ್ಲಿ ನನ್ನ ಕರ್ತವ್ಯವನ್ನು ನಾನು ಮಾಡುತ್ತೇನೆ.

ಈ) **ವಿಷಯ:-** ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಗ್ರೂಪ್ 'ಡಿ' ಹುದ್ದೆಗೆ ಹೊರಗುತ್ತಿಗೆ ಆಧಾರದ ಮೇಲೆ ಬಹಳ ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಕುರಿತು.

*****

**ಶ್ರೀ ಸೋಮಣ್ಣ ಮ ಬೇವಿನಮರದ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಗ್ರೂಪ್-ಡಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ರಾಜ್ಯ ಸರ್ಕಾರ ಮುಂದಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸುವ ಪ್ರಕ್ರಿಯೆ ಆರಂಭಿಸಲಾಗಿದೆ. ಅಡುಗೆಯವರು, ಮೊದಲಾದ ಹುದ್ದೆಗಳಿಗೆ ಎಸ್.ಎಲ್.ಎಲ್.ಸಿ. ಪಾಸಾಗಿರಬೇಕೆಂದು ಷರತ್ತನ್ನು ವಿಧಿಸಲಾಗಿದೆ, ವಯಸ್ಸಿನ ಮಿತಿಯನ್ನು ಹೇರಲಾಗಿದೆ.

ಸರ್ಕಾರದ ಈ ಕ್ರಮದಿಂದ ಈಗಾಗಲೇ ಆ ಸ್ಥಾನಗಳಲ್ಲಿ ತಮ್ಮ ಸರಕಾರದ ಷರತ್ತಿನ ಪ್ರಕಾರ ಎಸ್.ಎಸ್.ಎಲ್.ಸಿ. ಪಾಸಾದವರು ಸಹ ಕೆಲಸ ಮಾಡುತ್ತಿದ್ದು, ಇದರಿಂದ, ಹೊರಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವವರಿಗೆ ಘೋರ ಅನ್ಯಾಯವಾಗುತ್ತಿದ್ದು, ಅವರನ್ನು ಕೆಲಸಕ್ಕೆ ಸೇರಿಸಿಕೊಳ್ಳುವಾಗ ಅಂದಿನ ನಿಯಮಾವಳಿಗಳ ಪ್ರಕಾರ ನೇಮಕ ಮಾಡಲಾಗಿತ್ತು ಮತ್ತು ಸೇವೆಯನ್ನು ಖಾಯಂ ಮಾಡಲು ಈಗಾಗಲೇ ಅವರೆಲ್ಲ ಮನವಿ ಸಲ್ಲಿಸಿರುತ್ತಾರೆ. ಈ ಹಿಂದೆ ಹೊರಗುತ್ತಿಗೆ ನೌಕರರನ್ನು ಕೈಬಿಡಲಾಗುವುದಿಲ್ಲ ಎಂದು ಇದೇ ಸದನದಲ್ಲಿ ಸರ್ಕಾರ ಭರವಸೆ ಕೊಟ್ಟಿರುತ್ತದೆ.

ಕಾರಣ ನೇರ ನೇಮಕಾತಿ ಪ್ರಕ್ರಿಯೆಯನ್ನು ಕೈಬಿಟ್ಟು ಹಾಲಿ ಹೊರಗುತ್ತಿಗೆ ನೌಕರರನ್ನು ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಿಯಾದರೂ, ಇವರುಗಳನ್ನು ಖಾಯಂ ಮಾಡಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಸಚಿವರೆ ಉತ್ತರ ತಯಾರಿದ್ದರೆ ಹೇಳಿ. ಇಲ್ಲವೆಂದಾದರೆ, ಸಮಯವನ್ನು ಕೊಡಲಾಗುತ್ತದೆ.

**ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೆ, ಉತ್ತರವನ್ನು ತರಿಸಬೇಕಾಗಿದೆ. ಈಗಾಗಲೇ ಇದರ ಬಗ್ಗೆ ಸಂಘದ ಮುಖಂಡರ ಜೊತೆ ಮಾತನಾಡಲಾಗಿದೆ. ಸಧ್ಯಕ್ಕೆ ಪೂರ್ಣ ವಿವರವೂ ನನ್ನ ಹತ್ತಿರವಿಲ್ಲ. ಆದ್ದರಿಂದ ವಿವರವನ್ನು ತರಿಸುವುದಕ್ಕೆ ಕಾಲಾವಕಾಶವನ್ನು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೆ, ಇದೇ ವಿಚಾರವಾಗಿ ಸದನದಲ್ಲಿ ಭರವಸೆಯನ್ನು ಕೊಟ್ಟಿದ್ದಾರೆ. ಆದರೆ, ಈಗ ಏಕೆ ಕೊಟ್ಟಿರತಕ್ಕಂಥ ಭರವಸೆಯನ್ನು ವಾಪಸ್ಸು ತೆಗೆದುಕೊಳ್ಳುತ್ತಿದ್ದಾರೆ. ಹೊರಗುತ್ತಿಗೆ ನೌಕರರನ್ನು ಖಾಯಂಗೊಳಿಸಬೇಕೋ ಅಥವಾ ಮುಂದುವರೆಸಬೇಕೋ ಎಂಬ ಮಾತಿಗೆ ಅಡ್ಡಿ ಇಲ್ಲವೆಂದು ಒಪ್ಪಿಕೊಂಡಿದ್ದಾರೆ. ಆದರೆ, ಈಗ ಏತಕ್ಕಾಗಿ ಮಾನ್ಯ ಸಚಿವರು ಈ ರೀತಿ ಮಾತನಾಡುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಸಚಿವರೆ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸದನದಲ್ಲಿ ಮಾತು ಕೊಟ್ಟಿದ್ದೀರೆಂದು ಸದಸ್ಯರು ಹೇಳುತ್ತಿದ್ದಾರೆ. ಅದರ ಬಗ್ಗೆ ನೋಡಿ.

**ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೆ, ಸಂಘದ ಮುಖಂಡರ ಜೊತೆ ಮಾತನಾಡಿದ್ದೇವೆ. ನಾವು ತಾತ್ಕಾಲಿಕ ತಡೆ ಎಂದು ಹೇಳಿದ್ದೆವು. ಈಗಷ್ಟೇ ಈ ವಿಚಾರ ಬಂದಿದ್ದರಿಂದ ನನ್ನ ಹತ್ತಿರ ಪೂರ್ಣ ಮಾಹಿತಿ ಇಲ್ಲದ ಕಾರಣ ಕಾಲಾವಕಾಶವನ್ನು ನೀಡಿದರೆ ಪೂರ್ಣವಾಗಿ ಮಾಹಿತಿ ಕೊಡುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ ಒಂದು ಕೆಲಸ ಮಾಡಿ. ಸಮಯವನ್ನು ತೆಗೆದುಕೊಂಡು ನಿಮ್ಮ ಹತ್ತಿರ ನಾಳೆ, ನಾಡಿದ್ದು ಮಾಹಿತಿ ಬಂದ ಮೇಲೆ, ಗೌರವಾನ್ವಿತ ಸದಸ್ಯರನ್ನು ಸಂಪರ್ಕಿಸಿ ಮಾತನಾಡಿ.

**ಶ್ರೀ ಸೋಮಣ್ಣ ಮ.ಬೇವಿನಮರದ:-** ಮಾನ್ಯ ಸಭಾಪತಿಯವರೆ, ಹಾಸ್ಟೆಲ್‌ಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವಂತಹವರನ್ನು ಹೊರಗೆ ಕಳುಹಿಸುತ್ತಿದ್ದಾರೆ.

**ಸಭಾಪತಿಯವರು:-** ಅದರ ಬಗ್ಗೆ ಸಚಿವರು ಮಾತನಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸೋಮಣ್ಣ ಮ ಬೇವಿನಮರದ:–** ಮಾನ್ಯ ಸಭಾಪತಿಯವರೆ, ಈಗಾಗಲೇ ಗ್ರೂಪ್-ಡಿ ವೃಂದದ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರ ಮುಂದಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಿ, ಅರ್ಹತೆಯ ಆಧಾರದ ಮೇಲೆ ಸಂದರ್ಶನ ಮಾಡಿ ಕಳುಹಿಸಿಕೊಡಲಾಗುತ್ತಿದೆ.

**ಸಭಾಪತಿಯವರು:–** ಇದರ ಬಗ್ಗೆ ಚರ್ಚೆ ಬೇಡ. ಮಾನ್ಯ ಸಚಿವರು ನನ್ನ ಹತ್ತಿರ ಮಾಹಿತಿ ಇಲ್ಲವೆಂದು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮಾಹಿತಿ ಇಲ್ಲದಿದ್ದರೂ ಪರವಾಗಿಲ್ಲ. ದಯವಿಟ್ಟು ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ನೌಕರರನ್ನು ಕಛೇರಿಗೆ ವಾಪಸ್ಸು ಕರೆಸಿ, ಸದನದಲ್ಲಿ ಏನು ಭರವಸೆಯನ್ನು ಮಾನ್ಯ ಸಚಿವರು ನೀಡಿರುತ್ತಾರೆಯೋ, ಅದರ ಪ್ರಕಾರ ದಯವಿಟ್ಟು ನಡೆದುಕೊಳ್ಳಬೇಕು.

**ಸಭಾಪತಿಯವರು:–** ಮಾನ್ಯ ಸಚಿವರೆ, ನಾನು ಸಹ ಸದನದಲ್ಲಿ ಏನು ಭರವಸೆಯನ್ನು ನೀಡಿರುತ್ತೀರೋ, ಅದರ ಪ್ರಕಾರ ನಡೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**3.ಚುನಾವಣಾ ಪ್ರಸ್ತಾವ**

**"ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರನ್ನು ನಾಮ ನಿರ್ದೇಶನ ಮಾಡುವುದು"**

*****

**ಸಭಾಪತಿಯವರು:–** ವಿಧಾನ ಮಂಡಲದ ಅಂದರೆ, ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಸಮಯ ಮುಗಿಯುತ್ತಿದೆ. ಮೊದಲು ಎರಡು ವರ್ಷಗಳಿಗೊಮ್ಮೆ ಮಾಡುತ್ತಿದ್ದೆವು. ವಿಧಾನ ಸಭೆಯಲ್ಲಿ ಪ್ರತಿ ವರ್ಷ ಮಾಡುತ್ತಿರುವುದರಿಂದ ವಿಧಾನ ಪರಿಷತ್ತಿನಲ್ಲಿಯೂ ಸಹ ಕಳೆದ ವರ್ಷದಿಂದ ಪ್ರತಿ ವರ್ಷ ಮಾಡುತ್ತಿದ್ದೇವೆ. ಹಾಗಾಗಿ ಈಗಿರುವ ಸಮಿತಿಗಳ ಸಮಯ ಮುಂದಿನ ತಿಂಗಳು ಮುಗಿಯುತ್ತಿದೆ. ಮುಂದಿನ ತಿಂಗಳೊಳಗೆ ಮತ್ತೆ ಸದನ ನಡೆಸುವುದು ಕಷ್ಟದಾಯಕವಾಗಿದೆ. ಅದರಿಂದ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು, ಮಾನ್ಯ ಸದಸ್ಯರನ್ನು ನಾಮನಿರ್ದೇಶನ ಮಾಡಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಸರ್ಕಾರದ ಪರವಾಗಿ ಮಾನ್ಯ ಸಭಾನಾಯಕರು ಅಥವಾ ಹಿರಿಯ ಸಚಿವರು ಪ್ರಸ್ತಾವವನ್ನು ಮಂಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ) (ಸಭಾನಾಯಕರ ಪರವಾಗಿ):-** ಮಾನ್ಯ ಸಭಾಪತಿಯವರೆ, ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರನ್ನು ನಾಮನಿರ್ದೇಶನ ಮಾಡಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಮಾನ್ಯ ಸಭಾನಾಯಕರ ಪರವಾಗಿ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಸರ್ಕಾರದ ಪರವಾಗಿ ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರನ್ನು ನಾಮನಿರ್ದೇಶನ ಮಾಡಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಮಂಡಿಸಿರುವ ಪ್ರಸ್ತಾವವನ್ನು ನಾನು ಅನುಮೋದಿಸುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲಾಯಿತು</u>

**ಸಭಾಪತಿಯವರು:-** ಶ್ರೀ ಕೆ.ಆರ್.ರಮೇಶ್ ಕುಮಾರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಅನುಮೋದಿಸಿರುವ ಪ್ರಸ್ತಾವ ಈ ರೀತಿ ಇದೆ;

**"ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರನ್ನು ನಾಮನಿರ್ದೇಶನ ಮಾಡಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವುದು."**

**<u>ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರನ್ನು ನಾಮನಿರ್ದೇಶನ ಮಾಡಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡಲಾಯಿತು</u>**

**4) ಶಾಸನ ರಚನೆ**

**<u>ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ</u>**

***<u>ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ ತಿದ್ದುಪಡಿ) ವಿಧೇಯಕ, 2017</u>***

***<u>ಪರ್ಯಾಲೋಚನಾ ಪ್ರಸ್ತಾವ</u>***

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕೆ.ಆರ್.ರಮೇಶ್ ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ):–** ಮಾನ್ಯ ಸಭಾಪತಿಯವರೆ, 2017ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ ತಿದ್ದುಪಡಿ) ವಿಧೇಯಕವನ್ನು ಕೆಲವು ವರ್ಷಗಳ ಹಿಂದೆ ಏನು introduce ಮಾಡಿರುತ್ತಾರೆಯೋ, ಅದು ಕೇವಲ "ಶೇಕಡಾ ಐದರಷ್ಟಕ್ಕೆ' ಮಾತ್ರ ಸೀಮಿತವಾಗಿತ್ತು. ಅದರ ಜೊತೆಗೆ ಹೊಸದಾಗಿ ನೇಮಕವಾಗಿ ಬರುವವರಿಗೂ counselling ಕೊಟ್ಟಿರುತ್ತಾರೆ. ಮೊದಲ ಸಲ ಇನ್ನು ಉದ್ಯೋಗಕ್ಕೆ ಕಾಲು ಇಡುವ ಮೊದಲೆ, ಅವರು ಕೇಳುವ ಜಾಗವನ್ನು ನೀಡುವುದೆಂದರೆ, ನಮಗೆ critical vacancies ಪೂರ್ಣಗೊಳಿಸುವುದಕ್ಕೆ ಆಗುತ್ತಿಲ್ಲ.

**(ಮುಂದು)** . . .

(870) 21–06–2017 (11–30)BSD-RN

ಶ್ರೀ ರಮೇಶ್ ಕುಮಾರ್ (ಮುಂದು)

ಸುಮಾರು 40 ಸಾವಿರ ಜನ ಉದ್ಯೋಗಿಗಳಿದ್ದು, ಬೇಡಿಕೆಗಳು ಜಾಸ್ತಿ ಇತ್ತು. Five percent counseling ಎಂದಿಟ್ಟುಕೊಂಡರೂ, ಜನಪ್ರತಿನಿಧಿಗಳ ಶಿಫಾರಸ್ಸಿನಿಂದ, ಕೆಲವರು ತೀರಾ ಕಷ್ಟದಲ್ಲಿರುವವರು, ಕೆಲವರು ANM (Auxiliary Nurse Midwifery) ಇರುವವರು ಹಾಗೂ Paramedical Staff ನವರೆಲ್ಲರೂ ಬಂದು ನಮ್ಮ ಹತ್ತಿರ ಗೋಳಾಡುತ್ತಿದ್ದರು. ಅಲ್ಲದೇ ಬಹಳ ದೂರದಲ್ಲಿರುತ್ತಾರೆ, ಕುಟುಂಬದಲ್ಲಿ ತೊಂದರೆ ಇರುತ್ತದೆ. ಹಾಗಾಗಿ ಮಾನವೀಯ ಕಾರಣಗಳಿಂದ 5% ನಿಂದ 15%ಗೆ ವಿಸ್ತರಿಸಿದ್ದೇವೆ. ಈ ಎರಡೂ ಸೂಚನೆಗಳನ್ನು ಕೊಟ್ಟಿದ್ದೇವೆ. ಕೆಲವರು ಜನಾನುರಾಗಿಗಳಾಗಿ 10 ವರ್ಷಕ್ಕೂ ಮೇಲ್ಪಟ್ಟು ಕೆಲವು ಊರುಗಳಲ್ಲಿದ್ದಾರೆ. ಅಂತಹ ವೈದ್ಯರ ಸೇವೆಯು ಅಲ್ಲಿಯೇ ಮುಂದುವರೆಯಲಿ ಎಂದು ಜನರು ಬಯಸುತ್ತಾರೆ. ಅನಾವಶ್ಯಕವಾಗಿ ಅವರಿಗೆ ತೊಂದರೆ ಕೊಡುವ ಉದ್ದೇಶ ಇಲ್ಲ. ಕೆಲವರು ಬಹಳ ಜಾಣತನದಿಂದ ಕಾನೂನು ಉಪಯೋಗಿಸಿಕೊಂಡು ಅವರ ಸ್ವಾರ್ಥ ಸಾಧನೆಗಾಗಿ ಗಟ್ಟಿಯಾಗಿ ಗೂಟ ಹೊಡೆದುಕೊಂಡು ಕುಳಿತಿರುವವರನ್ನು ಸಾರ್ವಜನಿಕ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿತದೃಷ್ಟಿಯಿಂದ ಬದಲಿಸಲೂ ಬೇಕಾಗಿದೆ. ಈ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ತಿದ್ದುಪಡಿ ತಂದಿದ್ದು, ಮಾನ್ಯ ಸಭೆಯು ಇದಕ್ಕೆ ಅನುಮತಿಸಬೇಕೆಂದು ತಮ್ಮ ಮುಖೇನ ಕೋರಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇಲ್ಲಿ ಒಂದು ಪ್ರಮುಖವಾದ ಪ್ರಶ್ನೆ ಏನೆಂದರೆ, ಗ್ರಾಮಾಂತರ ಪ್ರದೇಶಗಳಿಗೆ ಆಗತಾನೆ ಬಂದ ವೈದ್ಯರನ್ನು ಕಳುಹಿಸುವುದರಿಂದ ಪ್ರಯೋಜನವಾಗುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿಯೂ ತೀವ್ರತರವಾದ ಕಾಯಿಲೆ ಹೊಂದಿರುವ ಜನರಿದ್ದು, ಅಲ್ಲಿಗೆ ಹೋಗಲು experience ಹೊಂದಿರುವ ವೈದ್ಯರು ಹೋಗಬೇಕು. Experience ಇರುವ ವೈದ್ಯರು ಕೇವಲ ಬೆಂಗಳೂರು ಅಥವಾ ದೊಡ್ಡ ದೊಡ್ಡ ನಗರಗಳಲ್ಲಿ ಇರಬೇಕು ಎಂದರೆ ಸಮಸ್ಯೆಯಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಜಿಲ್ಲಾ ಮತ್ತು ತಾಲ್ಲೂಕು headquarters ಗಳಲ್ಲಿ ಅನುಭವ ಇರುವ ವೈದ್ಯರನ್ನು ಹಾಕಬೇಕಾಗುತ್ತದೆ. ಈ ಕಿವಿ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಇದು ನಿಜಕ್ಕೂ ಒಳ್ಳೆಯ ವಿಧೇಯಕವಾಗಿದ್ದು, 5% ಮಾತ್ರ ಇದೆ ಎಂದಾಗ ಈ 5% ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ ಎನ್ನುವಂತೆ ಏನೂ ಉಪಯೋಗ ಆಗುವುದಿಲ್ಲ. ಯಾರಾದರೂ ತೊಂದರೆ ಅನುಭವಿಸುತ್ತಿರುವವರಿಗೆ ಪತ್ರ ಕೊಡಲು ನಮ್ಮಗೆ ಸಾಧ್ಯವಾಗುವುದಿಲ್ಲ. ಏಕೆಂದರೆ ಇದು ಆಗುವ ಕೆಲಸ ಅಲ್ಲ. ಪತ್ರ ಕೊಡಬೇಕಾದರೆ ಇದು ಆಗುವ ಕೆಲಸ ಅಲ್ಲ, ಸಮಾಧಾನಕ್ಕೆ ಪತ್ರ ಕೊಡುತ್ತಿದ್ದೇವೆ ಎಂದು ಹೇಳಿ ಕಳುಹಿಸುತ್ತೇವೆ. ಈ ರೀತಿ ಪರಿಸ್ಥಿತಿ ಇದ್ದು, ಇದನ್ನು ತಂದಿರುವುದಕ್ಕೆ ಸ್ವಾಗತ ಮಾಡುತ್ತೇನೆ. ಉಳಿದ ವಿಷಯಗಳ ಬಗ್ಗೆ ಮಾನ್ಯ ಸಚಿವರಿಗೆ ಅನುಭವ ಇದ್ದು, ರಾಜ್ಯದಲ್ಲಿ ಎಲ್ಲಾ ಭಾಗಗಳಲ್ಲಿ ವೈದ್ಯರು ಇರುವ ರೀತಿಯನ್ನು ಗಮನಿಸಿ, ಯಶಸ್ವಿಯಾಗಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಅಧಿನಿಯಮವನ್ನು ಸ್ವಾಗತ ಮಾಡುತ್ತಾ, 5% ನಿಂದ 15% ಜಾಸ್ತಿ ಮಾಡಿರುವುದರಿಂದ ಹೆಚ್ಚಿನ ಸಿಬ್ಬಂದಿಗಳಿಗೆ ಅವಕಾಶ ಸಿಗುತ್ತದೆ. ಆದರೆ 10 ವರ್ಷ ಎಂದು ಕಂಡೀಷನ್ ಹಾಕಿರುವುದನ್ನು, elective ಆಗಿ ಹೇಗೆ ಅನ್ವಯ ಮಾಡುತ್ತಾರೆ? ಅವರು ಪ್ರಸ್ತಾಪ ಮಾಡಬೇಕೆಂದರೆ ಉಲ್ಲೇಖ ಮಾಡಿದ್ದರು. ನಾಳೆ ಇದನ್ನೇ ದುರುಪಯೋಗ ಮಾಡಿಕೊಂಡು, ಇಲಾಖೆಯಲ್ಲಿ 10 ವರ್ಷ ಆಗಿರುವವನ್ನು ಕಡ್ಡಾಯವಾಗಿ transfer ಮಾಡುತ್ತೇವೆ ಎಂದು transfer policy ಇದೆಯೇ? ಇಲ್ಲವಾದರೆ 10 ವರ್ಷಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

subjective ಆಗಿ apply ಮಾಡಿದರೆ...... ಅವರು ಉಲ್ಲೇಖ ಮಾಡುವಾಗಲೇ ದುರುಪಯೋಗದ ಬಗ್ಗೆ ಹೇಳಿದರು. ಅದಕ್ಕೆ ಸ್ಪಷ್ಟವಾದ ಅವಕಾಶವನ್ನು ಕಲ್ಪಿಸಿಕೊಟ್ಟಂತೆ ಇರುತ್ತದೆ. 5% ನಿಂದ 15% ಮಾಡಿ, ಹೆಚ್ಚಿನ ಜನರಿಗೆ ಅನುಕೂಲವಾಗುವುದನ್ನು ಖಂಡಿತ ಸ್ವಾಗತ ಮಾಡುತ್ತೇನೆ. ಆದರೆ 10 ವರ್ಷ ಒಂದೇ ಪ್ರದೇಶದಲ್ಲಿ ಸೇವೆ ಮಾಡಿರುವವರಿಗೆ ಕಡ್ಡಾಯವಾಗಿ ಮಾಡುವುದಾದರೆ ಅಭ್ಯಂತರ ಇಲ್ಲ. ಆದರೆ selective ಅನ್ವಯ ಮಾಡುವುದಾದರೆ ಹೇಗೆ? ಅವರು ಹೇಳಿದಂತೆ popular doctors ಗೆ ಒಂದು ಪ್ರದೇಶದಲ್ಲಿ ಮುಂದುವರೆಯಲು ಬೇಡಿಕೆ ಇದ್ದಾಗ ಮಾಡಲು ಅವಕಾಶ ಇರುವುದಿಲ್ಲ ಅಥವಾ 10 ವರ್ಷ ಆಗಿದೆ ಎಂದು ಮನಸೋಇಚ್ಛೆ ಅಂದು ಹೇಳುವುದಿಲ್ಲ, ಮಾನದಂಡ ಅನ್ವಯ ಮಾಡಿ ಮಾಡಿಕೊಳ್ಳಬಹುದು. ಹಾಗಾಗಿ 10 ವರ್ಷಗಳ ಕಾನೂನಿನ ಬಗ್ಗೆ ಸ್ವಲ್ಪ ವಿಷದವಾಗಿ ಹೇಳಬೇಕು. ಅದು ಸರಿಯಾಗಿದೆಯೋ ಅಥವಾ ಇಲ್ಲವೋ, ಅದನ್ನು ಹೇಗೆ ಮಾಡುತ್ತಾರೆ? ಆಗ ಸ್ವಲ್ಪ ಸ್ಪಷ್ಟತೆ ಬರುತ್ತದೆ.

ಇನ್ನು ಎರಡನೆಯದಾಗಿ, ಅವರೇ ಉಲ್ಲೇಖಿಸಿರುವಂತೆ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ವೈದ್ಯರು ಗ್ರಾಮಾಂತರ ಪ್ರದೇಶಗಳಲ್ಲಿಯೇ ಇದ್ದು, ನಗರ ಪ್ರದೇಶಗಳಲ್ಲಿರುವ ವೈದ್ಯರು ನಗರ ಪ್ರದೇಶಗಳಲ್ಲಿಯೇ ಇರುತ್ತಾರೆ. ಇದಕ್ಕೆ ಮೂರು ವಲಯಗಳನ್ನು ಮಾಡಿಕೊಂಡಿರುವುದರಿಂದ ಇದರ ಮಾನದಂಡದ ಬಗ್ಗೆ ಹೇಳಿದರೆ ಇನ್ನಷ್ಟು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತದೆ. ಹಾಗಾಗಿ ಈ ವಿಧೇಯಕವನ್ನು ಸ್ವಾಗತಿಸುತ್ತಾ, ಈ ಸಂಗತಿಗಳ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಆಡಳಿತದಲ್ಲಿ ಪಾರದರ್ಶಕತೆ ತರುವ ಮತ್ತು ಇಲಾಖೆಯ ಮೇಲೆ ಉತ್ತಮ ನಿಯಂತ್ರಣ ಹೊಂದುವ ದೃಷ್ಟಿಯಿಂದ ತಂದಿರುವ ಈ ವಿಧೇಯಕವು ನಿಜಕ್ಕೂ ಸ್ವಾಗತಾರ್ಹ ಎಂದು ನಾನು ಭಾವಿಸಿದ್ದೇನೆ. ಆದರೆ ಇಲ್ಲಿ ಎರಡು-ಮೂರು ವಿಚಾರಗಳ ಬಗ್ಗೆ, ಅಂದರೆ ಮೊದಲನೆಯದಾಗಿ ಸೆಕ್ಷನ್ 6ನಲ್ಲಿ '(1) rural area; (2) Zone - B in urban area and thereto; (3) Zone – A in urban area'ಎಂದು ಇದೆ. ಇದರಲ್ಲಿ ಯಾವ ratio ದಲ್ಲಿ ವರ್ಗಾವಣೆ ಮಾಡಲು 15% ಬಳಸುತ್ತಾರೆ? ಏಕೆಂದರೆ ಬಹಳಷ್ಟು ಕಡೆ ಗ್ರಾಮೀಣ ಭಾಗದಲ್ಲಿ ಇರುವ ವೈದ್ಯರು invariably ಬೆಂಗಳೂರು, ಮೈಸೂರು ಅಥವಾ ಬೆಳಗಾಂ ನಗರಗಳಿಗೆ ವರ್ಗಾವಣೆ ಬಯಸುತ್ತಾರೆ. ಹಾಗಾಗಿ ನನಗೆ ಅನಿಸಿದಂತೆ ಈ three categories ಅಂದರೆ '(1) rural area; (2) Zone - B in urban area and thereto; (3) Zone – A in urban area' ಗಳಲ್ಲಿ ಇಷ್ಟು percentage ಎಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಾರೆಯೋ? ಆಗ uniformity ಕಾಣಲು ಸಾಧ್ಯತೆ ಇದ್ದು, ಈ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡಬೇಕು. ಇಲ್ಲವಾದಲ್ಲಿ ಯಾವ ವೈದ್ಯರು ಶ್ರೀನಿವಾಸಪುರದಲ್ಲಿರುತ್ತಾರೆಯೋ, ಯಾವ ವೈದ್ಯರು ಪಾವಗಡದಲ್ಲಿರುತ್ತಾರೆಯೋ ಅಥವಾ ಯಾವ ವೈದ್ಯರು ಹೆಚ್.ಡಿ. ಕೋಟೆಯಲ್ಲಿರುತ್ತಾರೆಯೋ, ಅವರೆಲ್ಲರೂ ಬೆಂಗಳೂರಿಗೆ ಬರಬೇಕೆಂದು ಹೇಳುತ್ತಾರೆ. ಇದನ್ನು ಯಾವ category ಗಳಲ್ಲಿ ಯಾವ ಯಾವ ratio ಗಳಲ್ಲಿ ಬಳಸುತ್ತಾರೆ ಎಂಬುದನ್ನು ಹೇಳಬೇಕೆಂದು ಬಯಸುತ್ತೇನೆ.

ಇನ್ನು ಎರಡನೆಯದಾಗಿ, reasons ಗಳನ್ನು ಕೊಟ್ಟಿದ್ದು, 'There are more number of officers and staff who have completed ten years of service in a same place.' ಬಹುಶಃ ಅನೇಕ ವೈದ್ಯರನ್ನು ನೋಡಿದಾಗ, ಇದರಲ್ಲಿ Medical Education and Health & Family Welfare ಎಂದು ಇಬ್ಬರು ಮಂತ್ರಿಗಳಿದ್ದಾರೆ. ನಾನು ಒಂದು ಆಸ್ಪತ್ರೆಯನ್ನು ಉದಾಹರಣೆಯಾಗಿ ನೀಡುತ್ತೇನೆ. ವಿಕ್ಟೋರಿಯಾದಲ್ಲಿ INU(Institute of Nephro Urology) ಎಂದು ಇದೆ. Nephrology and Urology Specialists ಆಗಿದ್ದು, ಅಲ್ಲಿ ಒಬ್ಬರೋ ಇಬ್ಬರೋ ಬಿಟ್ಟರೆ ಉಳಿದ ಎಲ್ಲಾ ವೈದ್ಯರು ಆಸ್ಪತ್ರೆಗಳಲ್ಲಿ ಬೆಳಿಗ್ಗೆ ಸಹಿ ಹಾಕಿ ಮತ್ತೆ ಸಾಯಂಕಾಲ ಬಂದು ಸಹಿ ಹಾಕಿ ಮಧ್ಯದ ಅವಧಿಯಲ್ಲಿ practice ಮಾಡುತ್ತಾರೆ. ಅವರು 10 ವರ್ಷವಾದರೂ ಅಲ್ಲಿಯೇ ಏಕೆ ಉಳಿದುಕೊಳ್ಳುತ್ತಾರೆಂದರೆ, ಸರ್ಕಾರಿ ಸಂಬಳ ಯಾವುದೇ ತೊಂದರೆ ಇಲ್ಲದೇ ಸತತವಾಗಿ ಬರುತ್ತಿರುತ್ತದೆ. ಇದರ ಜೊತೆಗೆ private management ನಲ್ಲಿ practice ಮಾಡುವುದಕ್ಕೆ ಅವಕಾಶ ಇರುವುದರಿಂದಾಗಿ ನಗರ, ಪಟ್ಟಣಗಳಲ್ಲಿ ಇರಲು ಬಯಸುತ್ತಾರೆ. ಬಹುಶಃ ಇದನ್ನು classify ಮಾಡಿ, ಪಟ್ಟಣಗಳಲ್ಲಿ ಇರುವ ವೈದ್ಯರಿಗೆ ಅವರ ಅವಧಿಯಲ್ಲಿ ಇಷ್ಟು ವರ್ಷ ಗ್ರಾಮಾಂತರ ಮತ್ತು ಇಷ್ಟು ವರ್ಷ ನಗರಗಳಲ್ಲಿ ಎಂದು Zone-A, Zone-B and rural ಎಂದು classify ಮಾಡಿದರೆ ಗ್ರಾಮಾಂತರ ಪ್ರದೇಶ ಮತ್ತು ಪಟ್ಟಣಗಳಲ್ಲಿವವರಿಗೆ ಒಳ್ಳೆಯ ವೈದ್ಯಕೀಯ ಸೌಲಭ್ಯ ಸಿಗಲು ಸಾಧ್ಯತೆ ಇದೆ. ಆ ದಿಕ್ಕಿನಲ್ಲಿ ಸರ್ಕಾರ ಯಾವ ಚಿಂತನೆ ನಡೆಸಿದೆ ಎಂದು ಕೇಳಬಯಸುತ್ತೇನೆ ಮತ್ತು ಈ ಹಿನ್ನೆಲೆಯಲ್ಲಿ ಏನಾದರೂ modify ಮಾಡುವುದಕ್ಕೆ ಸಾಧ್ಯತೆ ಇದೆಯೇ ಎಂದು ಕೇಳಬಯಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ನಮ್ಮ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಒಳ್ಳೆಯ ತಿದ್ದುಪಡಿ ತಂದಿದ್ದು, ಇದರಲ್ಲಿ 10 ವರ್ಷ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಡ್ಡಾಯ ಎಂದು ಮಾಡದೇ ಇರುವುದು ಒಳ್ಳೆಯದೇ ಆಯಿತು. ನಗರ ಪ್ರದೇಶಗಳಿಗೆ ವೈದ್ಯರು ಬಂದರೆ, ಅದು Mangalore Wenlock Hospital ಇರಬಹುದು, ನನ್ನ ಜಿಲ್ಲೆಗೆ ಸೀಮಿತವಾಗಿ ಹೇಳುವುದಾದರೆ, ನಂತರ ಅವರು ಯಾವ ಕಾರಣಕ್ಕೂ ಬೇರೆ ಕಡೆ super specialty Hospital ಇದ್ದರೂ ಹೋಗುವುದಿಲ್ಲ. ಮಂಗಳೂರಿನಿಂದ ವಾಮಂಜೂರಿಗೆ ಹೋಗುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಾರೆ. ಏಕೆಂದರೆ private practice ಅನ್ನು adopt ಮಾಡಿಕೊಂಡಿರುತ್ತಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡಿಕೊಂಡು ಮಧ್ಯಾಹ್ನದ ಸಮಯದಲ್ಲಿ ಅವರಿಗೆ ಬೇಕಾದಂತೆ private practice ಮಾಡಕೊಳ್ಳುತ್ತಾರೆ. ಇದರ ಬಗ್ಗೆ ಕೇಳಿದರೆ ವರ್ಗಾವಣೆ ಮಾಡಬೇಕೆಂದು ಎಲ್ಲಿದೆ ಎಂದು ಕೇಳುತ್ತಾರೆ. ಇದಕ್ಕೆ ಏನೂ ಕಾನೂನು ಇಲ್ಲ ಎನ್ನುತ್ತಾರೆ.

(ಮುಂದು)

**(871) 21-06-2017 SK-VK 11.40**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಐವನ್ ಡಿ'ಸೋಜಾ:–** ಈಗ ತಾವು 10 ವರ್ಷ ಕಡ್ಡಾಯ ಮಾಡದೇ ಇದ್ದದ್ದು ಒಳ್ಳೆಯದಾಯಿತು ಮತ್ತು 10 ವರ್ಷ ಸೇವೆ ಸಲ್ಲಿಸಿದವರಿಗೆ ಕಡ್ಡಾಯವಾಗಿ ಗ್ರಾಮೀಣ ಪ್ರದೇಶಕ್ಕೆ ಕಳುಹಿಸುವುದಕ್ಕೆ ಮಾನ್ಯ ಸಚಿವರು ಒಂದು ಕೆಲಸವನ್ನು ಮಾಡಬೇಕಾಗುತ್ತದೆಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಬೇರೆ ವಿಧೇಯಕ ಬರುತ್ತದೆ ಅದರಲ್ಲಿ ಇದೆ. ನಾನು ನೋಡಿದ್ದೇನೆ ಡಾಕ್ಟರ್‌ಗಳು ಇವತ್ತು ಗ್ರಾಮೀಣ ಭಾಗದಲ್ಲಿ ಅನೇಕ Super Speciality Hospital ಇದ್ದರೂ ಕೂಡ, ಮಾನ್ಯ ಸಚಿವರು ಅನೇಕ ಆಸ್ಪತ್ರೆಗಳನ್ನು upgrade ಮಾಡಿದ್ದಾರೆ. Community Hospitals ಆಗಿ ಮಾಡಿದ್ದೀರಿ. ಅಲ್ಲಿ 25–30 ಬೆಡ್‌ಗಳಿದ್ದರೆ ಯಾವ Super Speciality Hospital doctors or Post Graduation ಆಗಿರುವ doctors ಈ ಭಾಗಗಳಿಗೆ ಹೋಗುವುದೇ ಇಲ್ಲ. ನಾವು ಹೆಚ್ಚಿನ ಜವಾಬ್ದಾರಿಗಳನ್ನು ಕೊಡುತ್ತೇವೆ ಮತ್ತು ಶೇಕಡ 5 ರಿಂದ 15 ಕ್ಕೆ ಏರಿಕೆ ಮಾಡಿರುವುದರಿಂದ ಅನೇಕ ಡಾಕ್ಟರ್‌ಗಳಿಗೆ ಕೂಡ ಅವಕಾಶಗಳು ಸಿಗುತ್ತದೆ. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಇದರಿಂದ ಜನರಿಗೆ ಖಂಡಿತವಾಗಿಯೂ ಸಹಾಯವಾಗುತ್ತದೆ ಮತ್ತು ಜನರಿಗೆ ಲಾಭವಾಗುತ್ತದೆ. ಎಲ್ಲೋ ಒಂದು ಕಡೆ ಡಾಕ್ಟರ್‌ಗಳಿಗೆ ವರ್ಗಾವಣೆ ಮಾಡುವುದಕ್ಕೆ ನೋಡುತ್ತಾರೆಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನಿಸಿರಬಹುದು. ಆದರೆ at large ಇದು public ಗೆ benefit ಆಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬು ಅವರೆ, ನಿಮ್ಮದೇನಾದರೂ clarification ಇದ್ದರೆ ಕೇಳಿ.

**ಶ್ರೀ ರಮೇಶ್ ಬಾಬು:-** ಮಾನ್ಯ ಸಭಾಪತಿಯವರೇ, 2011 ರ ಅಧಿನಿಯಮಕ್ಕೆ ಇದೊಂದು ತಿದ್ದುಪಡಿಯನ್ನು ತಂದಿರುವುದು ಸ್ವಾಗತಾರ್ಹವಾಗಿದೆ. ಅದು ಈಗಾಗಲೇ counselling ಮುಖಾಂತರ ಅವಕಾಶ ಕೊಡುವುದಕ್ಕೆ, ಒಂದು ಅವಕಾಶವನ್ನು ಕೊಟ್ಟಿದ್ದಾರೆ. ಇದನ್ನು ಮತ್ತೇ ವರ್ಗೀಕರಣ ಮಾಡಿದ್ದಾರೆ. ಶೇಕಡ 5 ರಷ್ಟು ಇದ್ದದ್ದನ್ನು ಶೇಕಡ 15 ರಷ್ಟು ಮಾಡಿದ್ದಾರೆ. ಈಗಾಗಲೇ ಕೌನ್ಸಿಲ್ ಮುಖಾಂತರ ಮಾಡುವುದರಿಂದ ಇದು ಏನೊಂದು ಸಮಸ್ಯೆಯಾಗುವುದಿಲ್ಲ. ಸರ್ಕಾರದ ಉದ್ದೇಶವೂ ಸದುದ್ದೇಶವಿದೆ. ಗ್ರಾಮೀಣ ಪ್ರದೇಶದಲ್ಲಿ ವೈದ್ಯಕೀಯ ಸೇವೆ ಕೊಡಬೇಕೆನ್ನುವುದು ಸದುದ್ದೇಶವಿದೆ. ಒಂದು ಒಳ್ಳೆಯ ಕಾಯಿದೆಯನ್ನು ತಂದಿದ್ದಾರೆ. ಬಹುತೇಕ ಅವರು ಇದಕ್ಕಿಂತ ದೊಡ್ಡ ಕಾಯಿದೆಯನ್ನು ನಿರೀಕ್ಷೆ ಮಾಡಿದ್ದಿರಬಹುದು. ಕೆಳಮನೆಯಲ್ಲಿ ಅದು Joint Committee ಗೆ ಆಗಿದೆ. ಬಹುತೇಕ ಬಡ ರೋಗಿಗಳನ್ನು ಉದ್ದೇಶವಾಗಿಟ್ಟುಕೊಂಡು ಅವರು ಮಾಡಿದಂತಹ ಪ್ರಯತ್ನ ಮತ್ತು ಇಲ್ಲಿ ಇರುವಂತಹ ಒಂದು ವೈದ್ಯಕೀಯ ಸಂಸ್ಥೆಗಳ ಲಾಬಿ ತಡೆಯುವಂತಹ ಪ್ರಯತ್ನವನ್ನು ಮಾಡಿದೆ ಎಂದು ನನ್ನ ಅನಿಸಿಕೆಯನ್ನು ಹೇಳುತ್ತಾ, ಆದಷ್ಟು ಬೇಗ ಸದನದ ಚರ್ಚೆಗೆ ಬರಲಿ ಎಂದು ಆಶಯವನ್ನು ವ್ಯಕ್ತಪಡಿಸುತ್ತಾ, ಈ ತಿದ್ದುಪಡಿ ಕಾಯಿದೆಯನ್ನು ನಾನು ಸ್ವಾಗತಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಸದಸ್ಯರು ಹೇಳಿರುವಂತಹ ಅಭಿಪ್ರಾಯಗಳಿಗೆ ಮಾನ್ಯ ಸಚಿವರು ಉತ್ತರ ನೀಡಬೇಕು.

**ಶ್ರೀ ಕೆ.ಆರ್. ರಮೇಶ್‌ಕುಮಾರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಈ ಸದನದ ಅತ್ಯಂತ ಹಿರಿಯ ಸದಸ್ಯರಲ್ಲೊಬ್ಬರಾದ ಗೌರವಾನ್ವಿತ ರಾಮಚಂದ್ರಗೌಡರು ಒಂದು ಸ್ಪಷ್ಟ ಮಾತನ್ನು ಹೇಳಿದ್ದಾರೆ. ಇವರೆನ್ನೆಲ್ಲಾ ಗ್ರಾಮೀಣ ಪ್ರದೇಶಕ್ಕೆ ಕಳುಹಿಸಿಬಿಟ್ಟರೆ, ಅವರಿಗೆ ಅನುಭವ ಇರುವುದಿಲ್ಲ. ಗ್ರಾಮೀಣ ಪ್ರದೇಶಕ್ಕೆ ಅನುಭವಿ ವೈದ್ಯರುಗಳ ಸೇವೆ ಬೇಡ, ಹೊಸ ವೈದ್ಯರುಗಳನ್ನು ಗ್ರಾಮೀಣ ಪ್ರದೇಶಕ್ಕೆ ಕಳುಹಿಸಬೇಕೆನ್ನುವುದಲ್ಲ. First time appointment ಆಗಿ ಬಂದವರಿಗೆ, ತನಗೆ ಎಲ್ಲಿಗೆ ಬೇಕೋ ಅಲ್ಲಿಗೆ ಹೋಗುವುದಕ್ಕೆ ಅವಕಾಶ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದು ಬೇಡ. ಅವರು service ಗೆ ಕಾಲಿಡುವ ಮೊದಲೇ, ತಾನು ಕೇಳಿದಲ್ಲಿ ಹೋಗಬೇಕೆಂದರೆ, ಆತನಿಗೆ service ಆಗುತ್ತದೆಯೇ ಹೊರತು ಜನರಿಗೆ service ಆಗುವುದಿಲ್ಲ. ಆದರೆ ಆತಂಕ ಬೇಡ. ಗ್ರಾಮೀಣ ಪ್ರದೇಶದಲ್ಲಿ ವೈದ್ಯರುಗಳನ್ನು ತುಂಬುವಂತಹದ್ದು ಮತ್ತು ಅನುಭವಿಗಳನ್ನು ಹಾಕುವಂತಹದ್ದರ ಬಗ್ಗೆ ಜವಬ್ದಾರಿ ವಹಿಸಿಕೊಳ್ಳುತ್ತೇವೆ. ಮಾನ್ಯ ಪ್ರತಿ ಪಕ್ಷದ ನಾಯಕರು ಎರಡೇ ವಾಕ್ಯಗಳಲ್ಲಿ ಹೇಳಿದರು. ಇದು ಹೌದು ಅಗತ್ಯವಿದೆ. ಆತ್ಮವಂಚನೆ ಮಾಡಿಕೊಂಡು ಜನರಿಗೆ ಪತ್ರ ಕೊಡಬೇಕಾಗಿಲ್ಲ. ಇದೇ ನೋಡಿ, ನಮಗೂ ಮತ್ತು ಬೇರೆ ವರ್ಗಗಳಲ್ಲಿ ಇರುವವರಿಗೂ ವ್ಯತ್ಯಾಸ. ನಮಗೆ ಗೊತ್ತಿಲ್ಲದೇ, ನಾವು ಸ್ಪಷ್ಟವಾಗಿ ಸತ್ಯವನ್ನು ಮಾತನಾಡುತ್ತೇವೆ. ತಾವು ಹೇಳುವ ಮಾತು ನಿಜ. ಕಾಡುತ್ತಾರೆ, ಹೇಳಿದರೆ ಅರ್ಥ ಮಾಡಿಕೊಳ್ಳುವುದಿಲ್ಲ. 'ಒಂದು ಲೆಟರ್ ಕೊಟ್ಟುಬಿಡಿ ಸಾರ್' ಎಂದು ಕೇಳುತ್ತಾರೆ. ನಮಗೆ ಗೊತ್ತಿದ್ದು, ನಾವೇ ಈ ಸಭೆಯಲ್ಲಿ ಕುಳಿತಿದ್ದೇವೆ ಮತ್ತು ನಾವೇ ಶಾಸನ ಮಾಡುತ್ತೇವೆಂದು ಹೇಳಿದ ಮೇಲೂ ಮನಸ್ಸಿನ ಅಂತರಾಳದಿಂದ ಮಾನ್ಯ ಸದಸ್ಯರು ಹೇಳಿದ ಮಾತುಗಳನ್ನು ನಾನು ಅತ್ಯಂತ ಗೌರವದಿಂದ ಆಲಿಸಿದ್ದೇನೆ ಮತ್ತು ಭಾವನೆಗಳನ್ನು ಗೌರವಿಸಿದ್ದೇನೆ. ಅದಕ್ಕೆ ಅವಕಾಶ ಇರಬಾರದೆಂದು ಹೇಳುತ್ತಾ, ಈ ಪ್ರಯತ್ನವನ್ನು ಮಾಡುತ್ತೇನೆ.

ಮಾನ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕರವರು ಒಂದು ಮಾತನ್ನು ಹೇಳಿದ್ದಾರೆ. "Discretion is the best part of valour." You need to have discretion. ಹತ್ತು ವರ್ಷಗಳ ಕಡ್ಡಾಯ ಎನ್ನುವುದನ್ನು ಮಾಡಿದರೆ, ಸ್ವಾರ್ಥಿಗಳು ಅದನ್ನೇ ಹಿಡಿದುಕೊಂಡು ಕುಳಿತುಕೊಳ್ಳುವ ಸಂಭವ ಇರುತ್ತದೆ ಮತ್ತು ಇನ್ನೊಂದು ಕಡೆಗೆ ಜನರಿಗೆ ಬೇಕಾಗಿರುವಂತಹವರನ್ನು ನಾವು ಬಲವಂತವಾಗಿ ಆಚೆ ತಳ್ಳಿ ಜನರ ಅವಿಶ್ವಾಸಕ್ಕೆ ನಾವು ಗುರಿಯಾಗಬೇಕಾಗುತ್ತದೆ. BDA ನಲ್ಲಿ ಸೈಟ್ ಕೊಡುವುದಕ್ಕೆ ನನಗೆ discretion ಕೊಡುತ್ತಾರೆ. ನನ್ನ ಮಕ್ಕಳಿಗೆ ಮತ್ತು ಮನೆಯವರಿಗೆ ಕೊಟ್ಟುಬಿಟ್ಟರೆ discretion ಆಗುತ್ತದೆಯೇ? ನಾವು ಸದಾ ಕಾಲ ಸಾರ್ವಜನಿಕ ಜೀವನದಲ್ಲಿರುವವರು we are subjected to... So, please Sir, do not have such fears. At least I can assure you; as long as I am there in office I shall not be irrational and indiscrete. I can't give you an assurance for all those who are likely to come in days to come.

ನಮ್ಮ ಸದನದಲ್ಲಿ, ನಮ್ಮ ಸಂವಿಧಾನದ ಬಗ್ಗೆ ಕಾನೂನಿನ ಬಗ್ಗೆ ಎಲ್ಲಾ ವಿಚಾರಗಳಲ್ಲಿ ಬಹಳ ಶ್ರದ್ಧೆಯಿಂದ ಅಭ್ಯಾಸ ಮಾಡಿಕೊಂಡು ಮತ್ತು ತಮ್ಮ ತಮ್ಮ ಅನುಭವಗಳನ್ನು ಸದನಕ್ಕೆ ಕೊಟ್ಟು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೈಡ್ ಮಾಡುವುದರಲ್ಲೊಬ್ಬರಾದ ನನ್ನ ಆತ್ಮೀಯ ಸದಸ್ಯರಾದ ಮಾನ್ಯ ಉಗ್ರಪ್ಪನವರು ಕೆಲವು ಮಾತುಗಳನ್ನು ಹೇಳಿದ್ದಾರೆ. ಮಾನ್ಯ ಉಗ್ರಪ್ಪನವರಿಗೆ ನಾನು ಇಷ್ಟೇ ಹೇಳುವುದು. ಇಡೀ ನಮ್ಮ ಆರೋಗ್ಯ ವ್ಯವಸ್ಥೆ ಸರ್ಕಾರಿ ಸೌಮ್ಯದಲ್ಲಿರುವಂತಹ ಮೂರು ಹಂತಗಳು. Primary, Secondary and Tertiary Stage. ನಮಗೆ Tertiary Stage ನಲ್ಲಿ treatment ಕೊಡುವಂತಹ experts Primary Health Centres ನಲ್ಲಿ ಬೇಕಾಗುವುದಿಲ್ಲ. ಅವರು secondary stage ನಲ್ಲಿಯೂ ಬೇಕಾಗುವುದಿಲ್ಲ. ಅವರು Super Speciality Hospital doctors and specialization ಹೊಂದಿದವರನ್ನು ನಾನು ಸಾರ್ಥಕವಾಗಿ ಬಳಕೆ ಮಾಡಿಕೊಳ್ಳಬೇಕಾಗಿದ್ದರೆ, ಆ ಭಾಗದಲ್ಲಿಯೇ ಅವರನ್ನು ನಾನು ಉಪಯೋಗಿಸಬೇಕಾಗುತ್ತದೆ. ಆದ್ದರಿಂದ ಅವರು ಅನಿವಾರ್ಯವಾಗಿ ಅಲ್ಲಲ್ಲಿಯೇ settle ಆಗುತ್ತಿರುತ್ತಾರೆ. ನಮಗೆ ತಜ್ಞರ ಕೊರತೆ secondary stage ನಲ್ಲಿ ಇದೆ. ಸರ್ಕಾರ ತಮ್ಮ ಎಲ್ಲಾ ಪ್ರಯತ್ನಗಳನ್ನು ಆ ತಜ್ಞರ ಕೊರತೆಗಳನ್ನು ನೀಗಿಸುವುದಕ್ಕೆ ಮಾಡುತ್ತಿದ್ದೇವೆ. ಸಾಮಾನ್ಯ ವೈದ್ಯಾಧಿಕಾರಿಗಳು ಯಾರಿದ್ದಾರೆ? General Duty Medical Officers out of 2353 posts only 50 posts are vacant. ಉಳಿದಿರುವ ಎಲ್ಲಾ ಹುದ್ದೆಗಳನ್ನು ತುಂಬಿದ್ದೇವೆ. ತಜ್ಞರ ಪ್ರಶ್ನೆ ಬಂದಾಗ, 1300 ತಜ್ಞರ ಹುದ್ದೆಗಳು ನಮ್ಮ ಇಲಾಖೆಯಲ್ಲಿ ಖಾಲಿಯಿದೆ. ಲೋಕಸೇವಾ ಆಯೋಗದಿಂದ ಅವರೆನ್ನೆಲಾ ಆಹ್ವಾನಿಸಿ ನಾವು ಮಾಡಿದ ಪ್ರಯತ್ನ ಸಫಲವಾಗಲಿಲ್ಲ. Contract basis ಮೇಲೆ ಬನ್ನಿ 1,25,000 ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೇವೆ. ಆದರೂ respond ಮಾಡಿಲ್ಲ. Call basis ಮೇಲೆ ಬಂದು ನಮ್ಮ ಆಸ್ಪತ್ರೆಗೆ ಬಂದು ರೋಗಿಗಳನ್ನು ನೋಡಿ ಎಂದು ಹೇಳಿದ್ದೇವೆ. ಈಗ open bidding ಗೆ ಹೋಗಬೇಕೆಂದು ತೀರ್ಮಾನ ಮಾಡಿದ್ದೇವೆ. ಹಣ ಸ್ವಲ್ಪ ದುಬಾರಿಯಾದರೂ ಕೂಡ ಅವರು ಏನಾದರೂ ಹಣವನ್ನು ಹೆಚ್ಚಿಗೆ ಬಯಸಿದರೆ ಕೊಡಬೇಕು. ಹಣ ಮುಖ್ಯವಲ್ಲ ನಮ್ಮ ಜನರ ಆರೋಗ್ಯ ಮುಖ್ಯ ಎಂದು ಹೇಳಿ we are doing it. Private practice ಬಗ್ಗೆ ನಾನು ಸದನಕ್ಕೆ ಇಷ್ಟೇ ಹೇಳಬಲ್ಲೆ ಬಹಳ intelligent ಆಗಿ ನಮ್ಮ ಗೆಳೆಯ ಮಾನ್ಯ ರಮೇಶ್ ಬಾಬುರವರು ಒಂದು ಮಾತನ್ನು ಹೇಳಿದರು. 'Vested Interest' ಎನ್ನುವ ಪದ ಏಕೆ ಬಳಕೆಗೆ ಬಂತು? ಯಾರು ಜವಬ್ದಾರಿಯ ಆಯಕಟ್ಟಿನ ಸ್ಥಾನಗಳಲ್ಲಿರುತ್ತಾರೆ, ಅವರಿಗೆ ಏನು ನಿಗದಿತವಾದ ಜವಾಬ್ದಾರಿ, assigned responsibility ಇರುತ್ತೆ ಮತ್ತು ಅದರ ನಿರ್ವಹಣೆಗಾಗಿ ಅವರಲ್ಲಿ ಏನು ಅಧಿಕಾರ ಕೇಂದ್ರಿಕೃತ ಜವಬ್ದಾರಿ ಇರುತ್ತದೆ, ಅದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಅವರ ಸಾರ್ವಜನಿಕ ಹಿತವನ್ನು ಅಲಕ್ಷ್ಯ ಮಾಡಿ ತಮಗಾಗಿ ಬಳಕೆ ಮಾಡಿಕೊಂಡಾಗ vested interest ಎಂದು ಹೇಳುತ್ತೇವೆ. ನಾವು ಈ ಸದನಕ್ಕೆ ಮತ್ತು ಆ ಸದನಕ್ಕೆ ಬರಬೇಕಾಗಿದ್ದರೆ, ಎಷ್ಟೋ ಜನರು ನಮಗೆ ಸಹಾಯ ಮಾಡುತ್ತಾರೆ. ನಮಗೆ ಯಾರು ಜ್ಞಾಪಕಕ್ಕೆ ಬರುವುದಿಲ್ಲ. ನನ್ನ ರಕ್ತ ಸಂಬಂಧಿಗಳು, ಸ್ನೇಹಿತರು ಮತ್ತು ನನಗೆ ಬೇಕಾದವರು ಇವರು ಇಲ್ಲೇ ಇರಬೇಕು ಮತ್ತು ಅವರು ಅಲ್ಲೇ ಇರಬೇಕು ಎಂದು ಹೇಳಿ, ಅವರು government doctor ಆಗಿ ಇರಬೇಕು ಮತ್ತು private practice ನ್ನು ಮಾಡಬೇಕೆಂದು ಹೇಳುತ್ತೇವೆ. ಶಾಸನ ತಂದರೆ ಅಡ್ಡಿ ಪಡಿಸುತ್ತೇವೆ. ಇದು ಇವತ್ತು ನಿನ್ನೆಯ ಕಥೆಯಲ್ಲ. This is a constant struggle that has been going on for centuries and centuries between the vested interests and those who are exploited. It is anticipated. ಯಾರು ಕೂಡ ಸುಖವಾಗಿರುವಂತಹವರು ಮತ್ತು advantageous position ನಲ್ಲಿ ಇರತಕ್ಕಂಥವರು ಅಷ್ಟು ಸುಲಭವಾಗಿ ತಮ್ಮ ಸಾಮ್ರಾಜ್ಯವನ್ನು ಬಿಟ್ಟುಕೊಡುವುದಿಲ್ಲ. They will offer the resistance to the last degree. ಆದರೆ ನಾವು ಯಾರು ಕಂಕಣಬದ್ಧರಾಗಿರುತ್ತೇವೆ ಸಾರ್ವಜನಿಕ ಸೇವೆಗೆ ನಮಗೆ our conscious should be clean. ಯಾವ ಕಾರಣಕ್ಕೂ ಕೂಡ dilute ಆಗುವುದಿಲ್ಲ. ಸಾರ್ವಜನಿಕ ಹಿತವನ್ನು ಬಲಿ ಕೊಡುವುದಿಲ್ಲ.

(ಮುಂದು..)

872/21.06.2017/11.50/hv.vk

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೆ.ಆರ್.ರಮೇಶ್‌ಕುಮಾರ್(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಇದನ್ನೇ ನಾವು nepotism ಮತ್ತು favouritism ಎಂದು ಹೇಳುವುದು. ಇದನ್ನು ಮಾಡಬೇಕಾದರೆ ಮನಸ್ಸೋ ಇಚ್ಛೆ ನಾವು ಏನು ಮಾಡುತ್ತೇವೆ ಅದನ್ನು arbitrary, capricious ಎಂದು ಹೇಳುತ್ತೇವೆ. ಈ ವಿಧೇಯಕ ಇವೆಲ್ಲವನ್ನು ನಿರ್ಬಂಧಿಸುತ್ತದೆ. ಇದಕ್ಕೆ as an individual ನಿಮ್ಮ ಮೇಲೆ impose ಮಾಡಿಕೊಳ್ಳುವಂತಹದ್ದು, ಎರಡನೆಯದಾಗಿ, if you are a wise man ನಿಮಗೆ ಬೇಕಾಗಿರುವುದೆಲ್ಲವನ್ನು ಕೂಡ ಕಾನೂನಿನ ಚೌಕಟ್ಟಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನುಸುಳಿಸುವಂತಹದ್ದು. ಬುದ್ಧಿವಂತ ಬೇರೆ, ಜಾಣ ಬೇರೆ. ಬುದ್ಧಿವಂತ ತನ್ನ ಬುದ್ಧಿಯನ್ನು ಮತ್ತು ಜ್ಞಾನವನ್ನು ಸಮಾಜದ ಹಿತಕ್ಕಾಗಿ ಧಾರೆಯೆರೆಯುತ್ತಾನೆ. ಜಾಣ ಎಲ್ಲವನ್ನು ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಾನೆ. ಸಾರ್ವಜನಿಕ ಬದುಕಿನಲ್ಲಿ ಇರುವವರು ಕಾಳಜಿಯುಳ್ಳವರು, ಪ್ರಾಮಾಣಿಕರು ಮತ್ತು ಬುದ್ಧಿವಂತರಾಗಿರಬೇಕೇ ಹೊರತು ಜಾಣರಾಗಬಾರದು. ಮಾನ್ಯ ಉಗ್ರಪ್ಪನವರಲ್ಲಿ ನಾನು ಅತ್ಯಂತ ನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ. ಅವರು ಹೇಳಿರುವಂತಹ ಅಂಶಗಳು ಮಾನ್ಯ ಶರಣ ಪ್ರಕಾಶ್ ಆರ್.ಪಾಟೀಲ್‌ರವರ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. I think he is a very potential, dynamic Minister to take care of those things. ಈ ವಿಧೇಯಕಕ್ಕೆ ತಿದ್ದುಪಡಿಯನ್ನು ತಂದಿರುವಂತಹ ಮುಖ್ಯ ಉದ್ದೇಶವೇನೆಂದರೆ, ಸರ್ಕಾರಿ ಸೇವೆಗೆ ಖಾಸಗಿ ಸೇವೆಯನ್ನು second statusಗೆ ತಳ್ಳಿ, ತಮ್ಮ ಹಿತವನ್ನು primary statusನಲ್ಲಿ ಇಡುವವರನ್ನು ಸ್ವಲ್ಪ ನಿಯಂತ್ರಿಸಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ನನ್ನ ಗೆಳೆಯ ಮತ್ತು ಸರ್ಕಾರದ ಮುಖ್ಯ ಸಚೇತಕರಾದ ಐವನ್ ಡಿ'ಸೋಜಾರವರು ಒಂದು ಮಾತನ್ನು ಹೇಳಿದ್ದಾರೆ. Please understand my earnestness and intention. ಪಾಪ ANM's (Auxiliary Nursing and Midwifery) and Para Medical Staff ಮೈಸೂರಿನಲ್ಲಿ ಅಥವಾ ರಾಯಚೂರಿನಲ್ಲಿ ಇರುತ್ತಾರೆ. ಬದುಕಬೇಕೆನ್ನುವ ಆಸೆಯಿಂದ ಎಲ್ಲಿ ನೇಮಕಾತಿಯನ್ನು ನೀಡಿದರೆ ಅಲ್ಲಿಗೆ ಹೋಗುತ್ತಾರೆ. ಸುಮಾರು 6-7 ವರ್ಷಗಳ ಕಾಲ ಅವರು ಒಂದು ಕಡೆ, ಅವರ ಕುಟುಂಬ ಒಂದು ಕಡೆಗೆ ಇರುತ್ತದೆ. ಅವರು ಕೂಡ ನಮ್ಮವರೇ. ಮಾನವೀಯತೆಯ ದೃಷ್ಟಿಯಿಂದ ಅವರ ಬೇಡಿಕೆಗಳಿಗೆ ಸ್ಪಂದಿಸಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಮಾನ್ಯ ಸದನಕ್ಕೆ ಈ ತಿದ್ದುಪಡಿ ವಿಧೇಯಕದ ಅವಶ್ಯಕತೆಯ ಬಗ್ಗೆ ಮನವರಿಕೆ ಮಾಡಲು ಎಲ್ಲ ರೀತಿಯ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ ಎನ್ನುವ ವಿಶ್ವಾಸ ನನಗಿದೆ. ದಯಮಾಡಿ ಈ ವಿಧೇಯಕಕ್ಕೆ ಸದನವು ತನ್ನ ಅಂಗೀಕಾರವನ್ನು ವ್ಯಕ್ತಪಡಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**<u>ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು</u>**

**<u>ಖಂಡ 2 ಮತ್ತು 3</u>**

**ಸಭಾಪತಿಯವರುঃ–** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ."

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**<u>(ಖಂಡ 2 ಮತ್ತು 3ನ್ನು ವಿಧೇಯಕಕ್ಕೆ ಸೇರಿಸಲಾಯಿತು)</u>**

**<u>ಖಂಡ 1 ಇತ್ಯಾದಿ</u>**

**ಸಭಾಪತಿಯವರುঃ–** ಪ್ರಸ್ತಾವ ಏನೆಂದರೆ;

**" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"**

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**<u>ಪ್ರಸ್ತಾವದ ಅಂಗೀಕಾರ</u>**

**ಶ್ರೀ ಕೆ.ಆರ್.ರಮೇಶ್‌ಕುಮಾರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)ঃ–** ಸನ್ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರುঃ–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ)(ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.**

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು</u>**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 5.ಪ್ರಕಟಣೆ

**ಸಭಾಪತಿಯವರುಃ–** ವಿಧಾನಸಭೆಯ ಮಾನ್ಯ ಸಭಾಧ್ಯಾಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕಃ20.06.2017ರಂದು ತಿದ್ದುಪಡಿಗಳೊಂದಿಗೆ;

1. ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ತಿದ್ದುಪಡಿ ವಿಧೇಯಕ, 2017
2. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕ, 2017
3. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2017
4. ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಅರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2017
5. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2017
6. ಕರ್ನಾಟಕ ಅನುಸೂಚಿತ ಜಾತಿಗಳು ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕ, 2017

ಇವುಗಳನ್ನು ತಿದ್ದುಪಡಿಗಳಿಲ್ಲದೇ ಅನುಮೋದಿಸಿ ವಿಧಾನ ಪರಿಷತ್ತಿನ ಸದನದ ಸಹಮತಿಯನ್ನು ಕೋರಿರುವುದನ್ನು ಈ ಸದನದ ಗಮನಕ್ಕೆ ತರುತ್ತಿದ್ದೇನೆ.

## 6. ಸಭೆಯ ಮುಂದಿಡಲಾದ ಕಾಗದಪತ್ರಗಳು

**ಕಾರ್ಯದರ್ಶಿ(ಕ.ವಿ.ಪ)ಃ–** ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ 2017 ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕ 2017 ಹಾಗೂ ವಿಧಾನಸಭೆಯಿಂದ ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡಲಾಗುತ್ತಿದೆ;

1. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2017

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

2. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ತಿದ್ದುಪಡಿ) ವಿಧೇಯಕ, 2017
3. ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ ಅರ್ಜನೆ ಮತ್ತು ವರ್ಗಾವಣೆ (ತಿದ್ದುಪಡಿ) ವಿಧೇಯಕ, 2017
4. ಕರ್ನಾಟಕ ಅನುಸೂಚಿತ ಜಾತಿಗಳು ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕ, 2017

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ತಾವು ಹಿಂದೆ ಆದೇಶವನ್ನು ಕೊಟ್ಟಿದ್ದೀರಿ ಮತ್ತು ವಿಧೇಯಕಗಳನ್ನು ತರುವ ಬಗ್ಗೆ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಕನಿಷ್ಠ ಮೂರು ದಿನಗಳ ಮುಂಚೆ ಮಾನ್ಯ ಸದಸ್ಯರುಗಳಿಗೆ ವಿಧೇಯಕಗಳ ಪ್ರತಿಯನ್ನು ನೀಡಬೇಕೆಂದು ನಿರ್ಣಯವಾಗಿತ್ತು. ಅಧಿವೇಶನದ ಕೊನೆಯ ದಿನವಾಗಿರುವ ಈ ದಿನ ಸರ್ಕಾರ ಇಷ್ಟೊಂದು ಸಂಖ್ಯೆಯಲ್ಲಿ ವಿಧೇಯಕಗಳನ್ನು ಸದನದ ಅಂಗೀಕಾರಕ್ಕಾಗಿ ಮಂಡನೆ ಮಾಡಿದರೆ, ಯಾವಾಗ ನಾವು ಓದಿ ಚರ್ಚೆ ಮಾಡುವುದು ಎನ್ನುವುದು ನನ್ನ ಪ್ರಶ್ನೆಯಾಗಿದೆ. ಆದ್ದರಿಂದ ತಮ್ಮಲ್ಲಿ ನಾನು ಮನವಿ ಮಾಡುವುದೇನೆಂದರೆ, ಮಂಡನೆ ಮಾಡಿರುವುದನ್ನು ಏನು ಮಾಡುವುದಕ್ಕೂ ಆಗುವುದಿಲ್ಲ. ಖಂಡಿತವಾಗಿಯೂ ಇಷ್ಟೊಂದು ವಿಧೇಯಕಗಳ ಮೇಲೆ ಚರ್ಚೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವುದೇ ಚರ್ಚೆ ಇಲ್ಲದೇ ವಿಧೇಯಕಗಳಿಗೆ ಅನುಮೋದನೆಯನ್ನು ನೀಡಿ ಎನ್ನುವುದು ಸರಿಯಾದ ಕ್ರಮವಲ್ಲ.

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):-** ಸನ್ಮಾನ್ಯ ಸಭಾಪತಿಯವರೇ, ನನಗೆ ಮಾನ್ಯ ಸದಸ್ಯರ ಕಳಕಳಿ ಅರ್ಥವಾಗುತ್ತದೆ. ದೊಡ್ಡದೊಡ್ಡ ತಿದ್ದುಪಡಿಗಳು ಇರುವಂತಹ ವಿಧೇಯಕಗಳನ್ನು ತರಬೇಕಾದರೆ, ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿನ ನಿರ್ಣಯದಂತೆ ನಡೆದುಕೊಳ್ಳಲಾಗುತ್ತದೆ. ಆದರೆ, ಈಗ ತಂದಿರುವಂತಹ ವಿದೇಯಕಗಳು ಕೇವಲ ಸಣ್ಣಪುಟ್ಟ ತಿದ್ದುಪಡಿಗಳಿಗಾಗಿ ಮಂಡನೆ ಮಾಡಲಾಗಿದೆ. ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ತಿದ್ದುಪಡಿ ವಿಧೇಯಕ 2017ರಲ್ಲಿ ಶೇಕಡಾ 50ರಷ್ಟು ಸೀಟುಗಳನ್ನು ಕರ್ನಾಟಕ ರಾಜ್ಯದ ಮಕ್ಕಳಿಗೆ ಮೀಸಲಿಡಬೇಕು ಎನ್ನುವ ಒಂದೇ ಒಂದು ತಿದ್ದುಪಡಿಯನ್ನು ತರಲಾಗಿದೆ. ಈ ರೀತಿ ಸಣ್ಣಪುಟ್ಟ ತಿದ್ದುಪಡಿಗಳನ್ನು ಒಳಗೊಂಡಿರುವ ವಿಧೇಯಕಗಳನ್ನು ಈಗ ಚರ್ಚೆಗೆ ತೆಗೆದುಕೊಳ್ಳಬೇಕೆನ್ನುವುದು ನನ್ನ ವಿನಂತಿಯಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ನಿನ್ನೆ ದಿನ ಕಾರ್ಯಕಲಾಪಗಳ ಪಟ್ಟಿ ಜೊತೆಗೆ 4 ವಿಧೇಯಕಗಳು ನನ್ನ ಕಛೇರಿಗೆ ಬಂದಿತ್ತು. ಅದನ್ನು ಅಚ್ಚು ಹಾಕಿಸಿ ಮಾನ್ಯ ಸದಸ್ಯರುಗಳಿಗೆ ಕಳುಹಿಸಿಕೊಡಲಾಗಿದೆ. ಆ ನಾಲ್ಕು ವಿಧೇಯಕಗಳನ್ನು ನಾನು ಸಹ ಓದಿದ್ದೇನೆ. ಆ ನಾಲ್ಕು ವಿಧೇಯಕಗಳಲ್ಲಿ ಸಣ್ಣ ಪುಟ್ಟ ಒಂದೆರಡು ಪದಗಳನ್ನು ಬದಲಾವಣೆ ಮಾಡುವಂತಹ ತಿದ್ದುಪಡಿಗಳು ಇವೆ. ಆ ನಾಲ್ಕು ವಿಧೇಯಕಗಳನ್ನು ಮೊದಲು ಚರ್ಚೆಗೆ ತೆಗೆದುಕೊಂಡು ನಂತರ ಬೇರೆ ವಿಚಾರಕ್ಕೆ ಸಂಬಂಧಪಟ್ಟಂತೆ ಸದನದ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇನೆ. ಆದ್ದರಿಂದ ನಿನ್ನೆ ರಾತ್ರಿ ಕಾರ್ಯಕಲಾಪಗಳ ಪಟ್ಟಿಯ ಜೊತೆಗೆ ಬಂದಂತಹ ವಿಧೇಯಕಗಳ ಪೈಕಿ ಒಂದು ವಿಧೇಯಕವನ್ನು ಈಗ ನಾನು ಚರ್ಚೆಗೆ ತೆಗೆದುಕೊಳ್ಳುತ್ತಿದ್ದೇನೆ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ನಾಲ್ಕು ದಿನಗಳ ಹಿಂದೆ ನಾನು ಪ್ರಸ್ತಾಪಿಸಿದ ಶೂನ್ಯವೇಳೆಯ ಪ್ರಸ್ತಾವಕ್ಕೆ ಈ ದಿನವೂ ಉತ್ತರ ಬಂದಿಲ್ಲ. ನಿನ್ನೆ ಉತ್ತರ ಕೊಡುತ್ತೇವೆಂದು ಸರ್ಕಾರ ಹೇಳಿತ್ತು.

**ಸಭಾಪತಿಯವರು:–** ಮಾನ್ಯ ಶರವಣನವರೇ, ಮಾನ್ಯ ಸಭಾ ನಾಯಕರು ಸದನಕ್ಕೆ ಬರುತ್ತಾರೆ, ಆಗ ಈ ವಿಚಾರದ ಬಗ್ಗೆ ಮಾತನಾಡೋಣ. ಈಗ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ವಿಧೇಯಕವನ್ನು ಪರ್ಯಾಲೋಚನೆಗಾಗಿ ಸದನದ ಮುಂದೆ ಮಂಡಿಸಬೇಕು.

## 7. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಅ) ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ,2017

### ಪರ್ಯಾಲೋಚನಾ ಪ್ರಸ್ತಾವ

**ಡಾ:ಶರಣಪ್ರಕಾಶ ಆರ್.ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

**ಡಾಃಶರಣಪ್ರಕಾಶ ಆರ್.ಪಾಟೀಲ್(ವೈದ್ಯಕೀಯ ಶಿಕ್ಷಣ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ ಬಹಳ ಸಣ್ಣ ತಿದ್ದುಪಡಿಯನ್ನು ತಂದಿದ್ದೇವೆ. ಈ ಹಿಂದೆ Compulsory Rural Services Bill ಎರಡು ಸದನಗಳ ಅನುಮೋದನೆ ದೊರೆತಿದ್ದರೂ ಸಹ ಅದನ್ನು ಅನುಷ್ಠಾನಗೊಳಿಸುವುದಕ್ಕೆ ಸಾಧ್ಯವಾಗಿರಲಿಲ್ಲ. ಏಕೆಂದರೆ, ಹೈಕೋರ್ಟ್‌ನಲ್ಲಿ ಅದಕ್ಕೆ stay ಇತ್ತು. ಆದ್ದರಿಂದ ಕಾನೂನು ಇಲಾಖೆ ಮತ್ತು ಅಡ್ವೋಕೇಟ್ ಜನರಲ್‌ರವರ ಜೊತೆಗೆ ಸಮಾಲೋಚನೆ ಮಾಡಿದಾಗ, 'ಕೆಲವೊಂದು ತಿದ್ದುಪಡಿಗಳನ್ನು ತಂದರೆ ಅದು ಸರಿ ಹೋಗುತ್ತದೆ' ಎನ್ನುವ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿರುತ್ತಾರೆ.

(873) 21.06.17, 12.00, TCH-BNS **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಶರಣ ಪ್ರಕಾಶ್ .ಆರ್ ಪಾಟೀಲ್ (ಮುಂದು...)**

ಹಾಗಾಗಿ, ಕಾನೂನು ಇಲಾಖೆ ಮತ್ತು ಅಡ್ವೋಕೇಟ್ ಜನರಲ್‌ರವರ ಜೊತೆ ಸಮಾಲೋಚನೆ ಮಾಡಿ, ಕೆಲವೊಂದು ತಿದ್ದುಪಡಿ ಮಾಡಿದರೆ, ಅದಕ್ಕೆ ಸರಿಯಾಗಿರುತ್ತದೆಂದು ಒಂದು ಸಲಹೆ ಇರುವುದರಿಂದ, ನಾವು ಕೇವಲ 'Training' ಎನ್ನುವಂಥ ಪದ ಏನು ಇದೆ, ಆ 'Training' ಎನ್ನತಕ್ಕಂಥ ಪದವನ್ನು ತೆಗೆದು 'Service' ಎಂದು ಮಾಡುತ್ತಿದ್ದೇವೆ. ಏಕೆಂದರೆ, 'Training' ಎನ್ನುವ ಪದ ಇದ್ದರೆ lengthening of the course ಎಂದು ಆಗುತ್ತದೆ. ಹಾಗಾಗಿ, ಅದಕ್ಕೆ ಆಕ್ಷೇಪ ಬರುತ್ತದೆ ಎನ್ನುವ ಕಾರಣಕ್ಕಾಗಿ ಆ 'Training' ಎನ್ನುವಂಥ ಪದವನ್ನು ತೆಗೆಯುತ್ತಿದ್ದೇವೆ. ಎರಡನೆಯದಾಗಿ, ಇಲ್ಲಿ ನಾವು ತಿದ್ದುಪಡಿಯನ್ನು ಏನು ಮಾಡುತ್ತಿದ್ದೇವೆಂದರೆ, ಅವರು ಇಲ್ಲಿ ಕಡ್ಡಾಯ ಗ್ರಾಮೀಣ ಸೇವೆ ಮಾಡದಿದ್ದರೆ, ಅಂದರೆ ದೇಶದಲ್ಲಿನ ಯಾವುದೇ ಯೂನಿವರ್ಸಿಟಿಯವರು ಆ ಪದವಿಯನ್ನು ಕೊಡಬಾರದು ಎನ್ನತಕ್ಕಂಥದ್ದನ್ನು, ಅದರ ಅವಶ್ಯಕತೆ ಇಲ್ಲವೆಂದು ನಾವು ಕೈಬಿಡುತ್ತಿದ್ದೇವೆ. ಇನ್ನೊಂದು ವಿಚಾರ ಏನೆಂದರೆ, ಕರ್ನಾಟಕದಲ್ಲಿ ಯಾರು ನೋಂದಾವಣಿ ಮಾಡಬೇಕು ಎನ್ನುತ್ತಿದ್ದಾರೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂದರೆ, ನಮ್ಮ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನಲ್ಲಿ ಅವರು ಕಡ್ಡಾಯವಾಗಿ ಒಂದು ವರ್ಷ ಗ್ರಾಮೀಣ ಸೇವೆಯನ್ನು ಮಾಡಬೇಕು ಎನ್ನತಕ್ಕಂಥದ್ದು ಕೂಡ ಇದರಲ್ಲಿ ನಾವು ಒಂದು ಸಣ್ಣ ತಿದ್ದುಪಡಿ ಮಾಡುವುದು ಇದೆ. ಅದಕ್ಕೆ ತಾವು ಒಪ್ಪಿಗೆ ಕೊಡಬೇಕೆಂದು ನಾನು ಕೇಳುತ್ತೇನೆ.

**ಸಭಾಪತಿಯವರು:–** ಮಾನ್ಯ ರಾಮಚಂದ್ರಗೌಡರವರೆ, ತಮ್ಮದೇನು ಮಾತನಾಡುವುದು ಇದೆ ಮಾತನಾಡಿ.

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬಹಳ ಒಳ್ಳೆಯ ತಿದ್ದುಪಡಿಯನ್ನು ತಂದಿದ್ದಾರೆ. 'ತರಬೇತಿ' ಎನ್ನುವ ಪದವನ್ನು ಏತಕ್ಕೆ ಬಿಡಬೇಕು ಎಂದುಕೊಂಡಿದ್ದೆನು ಎಂದರೆ, ಈಗಾಗಲೇ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಬಹಳ ಪ್ರಮುಖವಾಗಿ "ಕಡ್ಡಾಯ ಸೇವಾ ತರಬೇತಿಗಾಗಿ" ಎನ್ನುವುದನ್ನು, "ಕಡ್ಡಾಯ ಸೇವೆಗಾಗಿ" ಎಂದು ಮಾಡಿರುವುದು ಸರಿ ಇದೆ. "ಕಿರಿಯ ನಿವಾಸಿ ತರಬೇತಿ ಪಡೆಯುವವನು (ಜೂನಿಯರ್ ರೆಸಿಡೆಂಟ್ ಟ್ರೈನಿ)" ಎಂಬ ಪದಗಳಿಗೆ "ಕಿರಿಯ ನಿವಾಸಿ (ಜೂನಿಯರ್ ರೆಸಿಡೆಂಟ್)" ಎಂಬ ತಿದ್ದುಪಡಿ ಬಹಳ ಚೆನ್ನಾಗಿದೆ. ಇದರಲ್ಲೇನು ತೊಂದರೆ ಇಲ್ಲ. ಆದರೆ, ಹೊಸದಾಗಿ ಪದವಿ ಪಡೆದ ಕೂಡಲೇ ಹಳ್ಳಿಗಳಿಗೆ ಪೋಸ್ಟಿಂಗ್‌ನ್ನು ಮಾಡಬೇಡಿ. ನೀವು ಕಡ್ಡಾಯ ಮಾಡಿದ್ದೀರಿ. ನೀವು ಹೊಸದಾಗಿ ಪದವಿ ಪಡೆದು ಬಂದವರನ್ನು ಹಳ್ಳಿಗಳಿಗೆ ಪೋಸ್ಟಿಂಗ್ ಮಾಡಿದರೆ, ಅಲ್ಲಿ ಅವನು ಯಾವ ತರಹ ಚಿಕಿತ್ಸೆಯನ್ನು ಕೊಡುತ್ತಾನೆಂದು ನಮಗೆ ಗೊತ್ತಾಗುವುದಿಲ್ಲ. ಕನಿಷ್ಟ ಪಕ್ಷ ಅವನು ಬೆಂಗಳೂರಿನ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಒಂದು ವರ್ಷ ಅಥವಾ ಎರಡು ವರ್ಷ ಸೇವೆ ಮಾಡಿ, ನಂತರ ಅವನು ಗ್ರಾಮೀಣ ಸೇವೆಗೆ ಹೋಗಬೇಕು. ಇದು ಏನಾಗುತ್ತದೆ ಎಂದರೆ, ನಾನು ಆಗಲೇ ತಿಳಿಸಿರುವಂತೆ ಮಾನ್ಯ ಆರೋಗ್ಯ ಸಚಿವರು ಇದನ್ನು ಕಡ್ಡಾಯ ಮಾಡಬೇಕು.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ನೀವು ಹೇಳುವುದು ಸರಿಯಾಗಿದೆ. ಬೆಂಗಳೂರಿನಲ್ಲಿ ಅವರಿಗೆ ತರಬೇತಿ ಕೊಟ್ಟು ಹಳ್ಳಿಗೆ ಕಳುಹಿಸುವುದನ್ನು ಎರಡು ವರ್ಷ ಎಂದು ಮಾಡಿರಿ.

**ಸಭಾಪತಿಯವರು:–** ಮಾನ್ಯ ಸಚಿವರಿಗೆ ಅದನ್ನು ಒಂದು ವರ್ಷ ಮಾಡುವ ಬಗ್ಗೆ ಸಾಕಾಗಿದೆ. ನೀವು ಹೇಳಿದ ಹಾಗೆ, ಅದನ್ನು ಎರಡು ವರ್ಷಕ್ಕೆ ಮಾಡಿದರೆ, ದೊಡ್ಡ ಗಲಾಟೆ ಆಗುತ್ತದೆ. ಒಂದು ವರ್ಷ ತರಬೇತಿ ಮತ್ತು ಒಂದು ವರ್ಷ ಸೇವೆ ಎಂದು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಎಂ.ಬಿ.ಬಿ.ಎಸ್. ಮಾಡಿಕೊಂಡ ತಕ್ಷಣವೇ ನೀವು ಗ್ರಾಮಾಂತರ ಪ್ರದೇಶಗಳಿಗೆ ಕಳುಹಿಸಿದರೆ ಅವರಿಗೆ ಅನುಭವ ಇರುವುದಿಲ್ಲ. ಅವರಿಗೆ ಅನುಭವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಬೇಕಿದೆ. ಅವರು injection ಕೊಡಬಹುದು, Stethoscope ಇಟ್ಟು ನೋಡಬಹುದು, ಹೊಟ್ಟೆಗೆ ಬಡಿದು ನೋಡಬಹುದು, ಧಡ್‌ಧಡ್ ಎನ್ನುವುದನ್ನೆಲ್ಲಾ ಕೇಳಿಸಿಕೊಳ್ಳಬಹುದು. ಅದು ಮಾನ್ಯ ಸಚಿವರಿಗೆ ಗೊತ್ತಿದೆ, ಅವರು ಡಾಕ್ಟರ್ ಆಗಿದ್ದಂಥವರು. ನಾನು ಡಾಕ್ಟರ್ ಅಲ್ಲ. I am an Engineer. ನಾನು, ಡಾಕ್ಟರ್‌ಗಳಿಗೆ ಏನೇನು ಸಲಕರಣೆಗಳ ಬೇಕು ಅದನ್ನು manufacture ಮಾಡತಕ್ಕಂಥ Engineer. ಹೀಗಾಗಿ, ನಾನು ಹೇಳುವುದೇನೆಂದರೆ, ಅದನ್ನು ಕಡ್ಡಾಯ ಮಾಡಿರುವುದು ಸರಿಯಾಗಿದೆ. ಆದರೆ, ಅವರಿಗೆ ಮೊದಲನೆಯ ವರ್ಷವೇ ಕಡ್ಡಾಯ ಮಾಡಬೇಡಿ. ಅವನು ಮೂರು ವರ್ಷಗಳು ಕೆಲಸ ಮಾಡಬೇಕು. ಆ ಮೂರನೇ ವರ್ಷದಲ್ಲಿ ಒಂದು ವರ್ಷ ಗ್ರಾಮೀಣ ಸೇವೆ ಮಾಡಬೇಕು. ಇಲ್ಲದೇ ಹೋದರೆ ಅವನಿಗೆ ಯಾವುದೇ ಜವಾಬ್ದಾರಿಯನ್ನು ಕೊಡುವುದಿಲ್ಲವೆಂದು, ಈ ರೀತಿಯಾಗಿ ಏನಾದರೊಂದು ಮಾಡಿದರೆ ಅನುಕೂಲವಾಗುತ್ತದೆ ಎನ್ನುವುದು ನನ್ನ ಭಾವನೆ. ಆದ್ದರಿಂದ ದಯಮಾಡಿ ಇದನ್ನು ಪರಿಗಣಿಸಬೇಕು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ 2017ನ್ನು ಜಾರಿಗೆ ತರಲಾಗುತ್ತಿದೆ. ನನಗೆ ಅನ್ನಿಸುತ್ತದೆ ಈ ಹಿಂದೆ ವಿಧೇಯಕವನ್ನು ತರಬೇಕಾದರೂ ಕೂಡ ಉದ್ದೇಶವೇನಿದೆ ಎಂದು ಹೇಳಿದರೆ, ಗ್ರಾಮಾಂತರ ಪ್ರದೇಶದಲ್ಲಿ ಏನು ವೈದ್ಯರ ಕೊರತೆ ಇದೆ, ಆ ವೈದ್ಯರ ಕೊರತೆಯನ್ನು ಸರಿದೂಗಿಸಲು ಮತ್ತು ಕಡ್ಡಾಯವಾಗಿ ಅವರು ಒಂದು ವರ್ಷ ಗ್ರಾಮಾಂತರ ಪ್ರದೇಶದಲ್ಲಿ ಸೇವೆಯನ್ನು ಸಲ್ಲಿಸುವ ಉದ್ದೇಶಕ್ಕೆ ಅದನ್ನು ತೆಗೆದುಕೊಂಡು ಬಂದಿದ್ದು. ಅದನ್ನು implement ಮಾಡಬೇಕಾದರೆ, ತಾಂತ್ರಿಕವಾದ ಸಮಸ್ಯೆಗಳು ಬರಬಹುದು ಎನ್ನುವ ಕಾರಣಕ್ಕಾಗಿ ಈ ತಿದ್ದುಪಡಿಯನ್ನು ತರುತ್ತಿದ್ದೀರಿ. ಆ 'ತರಬೇತಿ' ಎಂಬುದನ್ನು, 'ಕಡ್ಡಾಯ ಸೇವೆ' ಎಂಬ ಪದವನ್ನು ಉಪಯೋಗ ಮಾಡಿಕೊಂಡು ಬದಲಾವಣೆ ಮಾಡಬೇಕೆಂದು ಹೇಳುತ್ತಿದ್ದೀರಿ. ಈಗ ತಾವು Certificate ನ್ನು ಕೊಡಬೇಕಾದರೆ ' Temporary Registration' ಎಂದು ಕೊಡುತ್ತೀರಿ. ಏಕೆಂದರೆ ಆ Certificate ನ್ನು ಕೊಡದೇ ಇದ್ದರೆ, ಅವರಿಗೆ ಏನು ಅನುಭವ ಇದೆ ಅದನ್ನು ಗ್ರಾಮಾಂತರ ಪ್ರದೇಶದಲ್ಲಿ ಉಪಯೋಗ ಮಾಡುವುದಕ್ಕೆ ಬರುವುದಿಲ್ಲ. ನನ್ನದು ಎರಡು–ಮೂರು ಪ್ರಶ್ನೆಗಳಿವೆ. ಮೊದಲನೆಯದು, ಯಾರು ನಮ್ಮ ರಾಜ್ಯದವರು ಆಗಿರುವುದಿಲ್ಲ ಆದರೆ, ನಮ್ಮ ರಾಜ್ಯದಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಮಾಡಿದ್ದಾರೆ, ಅವರಿಗೆ ನೀವು ಏನು ಮಾಡುತ್ತೀರಿ? ಅವರಿಗೆ ನೀವು permanent ನೋಂದಣಿ ಕೊಟ್ಟರೆ, ನಾಳೆ ಇಲ್ಲಿಯವರು ಅಂದರೆ, ಕರ್ನಾಟಕದವರು ನಮಗೆ ಸೇವೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿಲ್ಲ ಎನ್ನುವ ಕಾರಣಕ್ಕಾಗಿ, ನಮಗೆ permanent ನೋಂದಣಿ ಕೊಡುತ್ತಿಲ್ಲವೆಂದು ಕೋರ್ಟ್‌ಗೆ ಹೋದರೆ, ಆಗ ನಿಮಗೆ ಸಮಸ್ಯೆ ಆಗುತ್ತದೆ. ಯಾರು ಹೊರಗಿನಿಂದ ಕರ್ನಾಟಕಕ್ಕೆ ಬಂದು ವೈದ್ಯಕೀಯ ವಿದ್ಯಾಭ್ಯಾಸ ಮಾಡಿದ್ದಾರೆ ಅವರಿಗೆ ಕಡ್ಡಾಯ ಸೇವೆ ಅನ್ವಯವಾಗುವುದಿಲ್ಲ, ಅವರು ಹೊರಗಡೆ ಹೋಗಿ practice ಮಾಡಬಹುದು. ಅವರಿಗೆ ನೀವು permanent ನೋಂದಣಿ ಮಾಡಲು ಅವಕಾಶ ಕೊಡುತ್ತೀರಿ. ಹಾಗಾಗಿ, ಇದನ್ನು ತಾವು ಹೇಗೆ ಅನ್ವಯಗೊಳಿಸುತ್ತೀರಿ ಎಂದು ಹೇಳುವುದನ್ನು ಒಂದು ವಿಮರ್ಶೆ ಮಾಡಬೇಕು. ಎರಡನೆಯದು, M.B.B.S., ಆದ ನಂತರ, Post Graduation ಗೆ ಹೋಗಬೇಕಾದರೆ, ಈ ಒಂದು ವರ್ಷ ಸೇವೆಯನ್ನು, ಅದಕ್ಕೆ ತಾವು ಕಡ್ಡಾಯ ಮಾಡುತ್ತೀರೇನು? ಇನ್ನು ಮೂರನೆಯ ಪ್ರಶ್ನೆ ಕೇಳುವಂಥದ್ದು. ಇದಕ್ಕೆ ನೇರವಾಗಿ ಸಂಬಂಧಪಡುವಂಥದ್ದಲ್ಲ. ಯಾರು ಕರ್ನಾಟಕದಲ್ಲಿ ವೈದ್ಯಕೀಯ ವಿದ್ಯಾಭ್ಯಾಸ ಮಾಡಿದ್ದಾರೆ, ಅವರು ಕರ್ನಾಟಕದ Post Graduation seats ಗಳಿಗೆ ಅರ್ಜಿ ಹಾಕುವುದಕ್ಕೆ ಅರ್ಹರು. ನಮ್ಮವರು ಅಂದರೆ, ಕರ್ನಾಟಕದವರು ಕಡ್ಡಾಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸೇವೆ ಮಾಡಬೇಕು. ಇದಾದ ಮೇಲೆ ಅವರಿಗೆ Post Graduation ಮಾಡಲು ಅವಕಾಶ ಕೊಡುತ್ತೀರಿ. ಯಾರು ಹೊರಗಿನಿಂದ ಬಂದು ಇಲ್ಲಿ medical ಓದುತ್ತಾರೆ, ಅವರಿಗೆ ನೇರವಾಗಿ Post Graduation seats ಗೆ ಅವಕಾಶ ಕೊಡುತ್ತೀರಿ. ಇದರಿಂದ ಕರ್ನಾಟಕದ ಯಾರು ವೈದ್ಯಕೀಯ ವಿದ್ಯಾರ್ಥಿಗಳು ಇದ್ದಾರೆ ಅವರಿಗೆ ಅನ್ಯಾಯವಾಗುತ್ತದೆ. ಹಾಗಾಗಿ, ಈ ನೋಂದಣಿಯ ಕಾಯ್ದೆ ಏನಿದೆ, ಅದು ಎಲ್ಲೋ ಒಂದು ಕಡೆ, ನೀವು ಅದನ್ನು ಒಂದು ವರ್ಷ ಸೇವೆ ಕಡ್ಡಾಯ ಮಾಡಿರುವುದರಿಂದ, ಅದು ಕರ್ನಾಟಕದ ವಿದ್ಯಾರ್ಥಿಗಳ ಆಸಕ್ತಿಗೆ ವಿರುದ್ಧವಾಗಿದೆ. ಯಾರು ಹೊರಗಿನಿಂದ ಬಂದಿರುತ್ತಾರೆ ಅವರಿಗೆ ಹೆಚ್ಚು ಅನುಕೂಲವಾಗುತ್ತದೆ. ಹಾಗಾಗಿ ನನ್ನ ವಿನಂತಿ ಏನೆಂದರೆ, C.E.T ನಲ್ಲಿ Domicile Certificate ಅನ್ನು ಕೊಡಬೇಕಾದರೆ, ಏನು ಕಾನೂನನ್ನು ಅನ್ವಯ ಮಾಡಿದ್ದಾರೆ, ನಾನು ತಮಗೆ ಇದರ ಬಗ್ಗೆ ಕಾಗದ ಬರೆದಿದ್ದೇನೆ. ಅದೇ ರೀತಿ Domicile ಬಗ್ಗೆ ತಾವು ಕಾನೂನನ್ನು ತರದೇ ಇದ್ದರೆ, ತಾವು ತಂದಿರುವಂಥ ಈ ವಿಧೇಯಕ ಮತ್ತು ಇಂದಿನ ಎಲ್ಲಾ ನಿಯಮಗಳು ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಹೆಚ್ಚು ಅನುಕೂಲ ಆಗುವ ಹಾಗೆ, ನಮ್ಮ Post Graduation seats ಗಳು ದೊಡ್ಡ ಸಂಖ್ಯೆಯಲ್ಲಿ ಹೊರ ರಾಜ್ಯಕ್ಕೆ ಹೋಗುವ ಹಾಗೆ, ಒಂದು ರೀತಿಯಲ್ಲಿ ಅನುಕೂಲ ಮಾಡಿಕೊಡುವಂಥ ರೀತಿಯಲ್ಲಿ ಇದೆ. ಹಾಗಾಗಿ, ಅದನ್ನೂ ಕೂಡ ವಿಮರ್ಶೆ ಮಾಡಿಕೊಂಡು, ಕರ್ನಾಟಕ ರಾಜ್ಯದಲ್ಲಿ ಓದುತ್ತಿರುವಂಥ medical ವಿದ್ಯಾರ್ಥಿಗಳು ಈ ಕಡ್ಡಾಯ ಸೇವೆಯ ಕಾರಣಕ್ಕಾಗಿ, Post Graduation seats ನಿಂದ ವಂಚಿತರಾಗದಿರುವ ದೃಷ್ಟಿಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು ಏನು ಮಾಡುತ್ತೀರಿ ಎನ್ನುವ ಬಗ್ಗೆ ಸ್ಪಷ್ಟೀಕರಣ ಕೊಟ್ಟರೆ, ಖಂಡಿತ ಚೆನ್ನಾಗಿರುತ್ತದೆ. ಗ್ರಾಮಾಂತರ ಪ್ರದೇಶದಲ್ಲಿ ನಮ್ಮ ಜನರಿಗೆ ಆರೋಗ್ಯ ಸೇವೆ ಸಿಗಬೇಕು ಎನ್ನುವ ಕಾರಣಕ್ಕಾಗಿ ತಾವೇನು ವಿಧೇಯಕವನ್ನು ತಂದಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೆ, ಇದು Original Act 2012 ರಲ್ಲಿ ಆಗಿರುತ್ತದೆ. ಈ 2012 Act ಗೆ, more particularly, Sections 3, 4 and 5 ಗೆ ಇವರು ತಿದ್ದುಪಡಿಯನ್ನು ತಂದಿದ್ದಾರೆ. Section 3ನಲ್ಲಿ M.B.B.S. Graduation ಮಾಡುವಂಥವರಿಗೆ, Section 4ನಲ್ಲಿ M.D. and M.S. ಮಾಡುವಂಥವರು. Section 5ನಲ್ಲಿ Super Specialty, like D.M. (Doctorate of Medicine) ಹಾಗೂ ಇನ್ನಿತರೆ ಮಾಡುವಂಥವರಿಗೆ. ನನಗೆ ಈ Act ನ title ನೋಡಿದ ಕೂಡಲೇ ಈ amendment ಗೂ ಮತ್ತು title ಗೂ ಏನೂ ಸಂಬಂಧವಿಲ್ಲದಂತೆ ಕಾಣುತ್ತಿದೆ. ಮಾನ್ಯ ಸಭಾಪತಿಯವರೆ, title ಇರುವಂಥದ್ದು, 'The Karnataka Compulsory Service Training by Candidates Completed Medical Courses (Amendment) Bill, 2017' ಎಂದು ಮಾಡಿದ್ದಾರೆ. ಇಲ್ಲಿ 'training' ಎನ್ನುವ ಪದವನ್ನು omit ಮಾಡುತ್ತಿದ್ದಾರೆ. ಹಾಗಾದರೆ, ಮೊದಲನೆಯದಾಗಿ ಇವರು ಮಾಡಬೇಕಾಗಿದ್ದು, title ಹಾಗೂ Act ನ amendment ನ್ನು ತರಬೇಕಾದರೆ, ಏತಕ್ಕೆ 'training' ಅನ್ನುವುದನ್ನು ಇಟ್ಟುಕೊಂಡಿದ್ದಾರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇದು ಮೊದಲನೆಯದು. 'training' ಎನ್ನುವುದನ್ನು ಬಿಟ್ಟ ನಂತರ, 'service' ಎಂದು ಹೇಳುತ್ತಿದ್ದಾರೆ. ನನಗೆ ದಯಮಾಡಿ ಹೇಳಬೇಕು, 'service' ಗೂ ಮತ್ತು 'training' ಗೂ ಇರುವ ವ್ಯತ್ಯಾಸವೇನು? ಒಂದು ಸಾರಿ Government Service ಎಂದು treat ಮಾಡಿದ ನಂತರ, ಯಾವ ರೀತಿಯಲ್ಲಿ ಆ service ಗೆ apply ಆಗತಕ್ಕಂಥ ಕಾನೂನುಗಳು ಈಗಾಗಲೇ 'service' ಎಂದರೇನು ಎಂದು Supreme Court ಮತ್ತು High Courts ಸಾಕಷ್ಟು ಕಾನೂನುಗಳನ್ನು laid down ಮಾಡಿದ್ದಾರೆ. ಪ್ರಮುಖವಾಗಿ ಇಲ್ಲಿ 'training' ಎನ್ನುವುದನ್ನು ತೆಗೆಯಬೇಕು ಎಂದು ಹೇಳುತ್ತಿದ್ದಾರೆ. ನನಗೆ ಇದರ ಬಗ್ಗೆ ನೋಡಿ, Section 3ನಲ್ಲಿ ಯಾರು ಎಂ.ಬಿ.ಬಿ.ಎಸ್., ಮಾಡುತ್ತಾರೆ ಅವರಿಗೆ ಮಾತ್ರ rural service. Section 3 reads as follows:

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

> ***"3. Compulsory service of candidates completed medical course**.-(1) Every candidate after successful completion of MBBS degree and after completion of one year internship course shall undergo one year compulsory rural service training in Government Primary Health Centres or Government Hospitals in rural areas allotted on the basis of merit through process of counseling in such manner as may be prescribed. During such service he shall be called as Junior Resident trainee."*

ಎಂದು ಹೇಳಲಾಗಿದೆ. ಎರಡನೆಯದು, ಯಾರು M.D., ಅಥವಾ M.S., ಮಾಡುತ್ತಾರೆ ಇದನ್ನು ನೋಡಿದರೆ ಇವರ್‍ಯಾರು ಗ್ರಾಮೀಣ ಪ್ರದೇಶಕ್ಕೆ ಹೋಗುವುದಿಲ್ಲ.

**(ಮುಂದು. . . )**

(874) 21.6.2017 12.10 ಪಿಕೆಬಿಎನ್‌ಎಸ್

ಶ್ರೀ ವಿ.ಎಸ್.ಉಗ್ರಪ್ಪ (ಮುಂದುವರೆದಿದೆ)

ಸೆಕ್ಷನ್ 4ರಲ್ಲಿ "... and who has successfully completed post graduate diploma or degree shall undergo one year compulsory service training in Government hospital in urban area selected and posted on the basis of merit through process of counseling...." ಎಂದು ಹೇಳುತ್ತಾರೆ. ಸೆಕ್ಷನ್ 5ರಲ್ಲಿ "Every candidate who has successfully completed super specialty courses shall undergo one year compulsory service training in the allotted District Government Hospital." ಈ ಮೂರರಲ್ಲಿ M.B.B.S., ನವರೊಬ್ಬರನ್ನು ಬಿಟ್ಟರೆ, M.D., M.S., Super Specialty, ಇವರು ಯಾರೂ ಗ್ರಾಮೀಣ ಪ್ರದೇಶಗಳಿಗೆ ಹೋಗುವುದಿಲ್ಲ. ಕಾನೂನಿನಲ್ಲೇ no, you need not go to rural areas. You have to work only either in urban area or in district ಎಂದು ಮಾಡುತ್ತಿದ್ದೇವೆ. Will it serve the purpose? ಇದನ್ನು ಸರ್ಕಾರ ಯೋಚನೆ ಮಾಡಬೇಕು. ಕನಿಷ್ಠ ಪ್ರಾರಂಭದ ಒಂದು ವರ್ಷವಾದರೂ you have to go and work in a village ಎಂದು ಮಾಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸಭಾಪತಿಗಳೆ, service ಎಂದು treat ಮಾಡಿದ ಮೇಲೆ stipend ಎನ್ನುವ ಪ್ರಶ್ನೆ ಬರುವುದಿಲ್ಲ. Training ಇದ್ದಾಗ stipend ನ ಪ್ರಶ್ನೆ ಬರುತ್ತದೆ. ಆದರೆ ಸೆಕ್ಷನ್ಸ್ 3, 4 ಮತ್ತು 5 ರಲ್ಲಿ stipend ಎಂದೇ ಹೇಳುತ್ತಿದ್ದೀರಿ. ಈ ಎರಡೂ ಸಹ co-relate ಆಗುವ chances ಕಾಣುತ್ತಿಲ್ಲ. ಸರ್ಕಾರ ಇದರ ಬಗ್ಗೆ explanation ಕೊಡಬೇಕು. ಈ ದಿಸೆಯಲ್ಲಿ clarity ಕೊಡುವುದು ಸೂಕ್ತ ಎಂದು ನಾನು ಭಾವಿಸುತ್ತೇನೆ. ಉದ್ದೇಶ ಸರಿಯಿದೆ, ಆದರೆ ಉದ್ದೇಶದ ಹಿಂದೆ ಇರುವಂತಹ ಏನು ಸಮಸ್ಯೆಗಳಿವೆ ಅಥವಾ ಗೊಂದಲಗಳಿವೆ, ಇವುಗಳನ್ನು ಯಾವ ರೀತಿ ನಿರ್ವಹಿಸುತ್ತೀರಿ ಎಂಬುದನ್ನು ಕೇಳಬಯಸುತ್ತೇನೆ.

**ಡಾ: ಶರಣಪ್ರಕಾಶ ಆರ್.ಪಾಟೀಲ್:-** ಮಾನ್ಯ ಸಭಾಪತಿಗಳೆ, ಹಿರಿಯರಾದ ಮಾನ್ಯ ರಾಮಚಂದ್ರೇಗೌಡರು ಒಂದು ಪ್ರಶ್ನೆ ಎತ್ತಿದರು. ಫ್ರೆಶ್ ಆಗಿ ಪಾಸ್ ಆಗಿರುವಂತಹ graduates ಗಳನ್ನು ಗ್ರಾಮೀಣ ಪ್ರದೇಶಗಳಿಗೆ ಕಳುಹಿಸಿದರೆ ಅವರಿಗೆ ಅಷ್ಟು ಅನುಭವ ಇರುವುದಿಲ್ಲ, ಹಾಗಾಗಿ ಮೊದಲು ಬೆಂಗಳೂರು ಅಥವಾ ಅಂತಹ ಪ್ರದೇಶಗಳಿಗೆ ಹಾಕಿ ನಂತರ ಗ್ರಾಮೀಣ ಪ್ರದೇಶಗಳಿಗೆ ಕಳುಹಿಸಿ ಕೊಡಿ ಎನ್ನುವ ಸಲಹೆ ಕೊಟ್ಟರು. ನಾನು ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಇಲ್ಲಿ ಒಂದು ವರ್ಷದ service ಮಾತ್ರ ಇರುತ್ತದೆ. ಈ ವಿಧೇಯಕ ತಂದಿರುವ ಉದ್ದೇಶವೇ ಗ್ರಾಮೀಣ ಪ್ರದೇಶದಲ್ಲಿ ಏನು ಹುದ್ದೆಗಳು ಖಾಲಿ ಇವೆ, ವೈದ್ಯರ ಕೊರತೆ ಇದೆ ಅದನ್ನು ನೀಗಿಸುವುದಕ್ಕೆ ಎಂಬುದನ್ನು ಹೇಳಬಯಸುತ್ತೇನೆ. ಹಾಗಾಗಿ ಅವರು ಯಾವುದೇ ರೀತಿ ಆತಂಕ ಪಡುವ ಅವಶ್ಯಕತೆ ಇಲ್ಲ. ಒಬ್ಬ graduate ಪಾಸ್ ಆಗಿ Housemanship ಅನ್ನು ಮುಗಿಸಿದ ಮೇಲೆ ನಾವು ಅವರನ್ನು Primary Health Centres (PHCs) ಗೆ ಕಳುಹಿಸುತ್ತಿದ್ದೇವೆ. ನಮ್ಮ ರೂಲ್ಸ್‌ನಲ್ಲಿ ನಾವು prescribe ಮಾಡಿದ್ದೇವೆ. Under the supervision of other existing Doctors ಅವರು ಕೆಲಸ ಮಾಡುತ್ತಾರೆ. ಹಾಗಾಗಿ ಅಲ್ಲಿ ಏನೂ ತೊಂದರೆ ಆಗುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ವೈದ್ಯರನ್ನು ಒದಗಿಸುವ ಉದ್ದೇಶದಿಂದ ಮಾಡಿರುವುದರಿಂದ ಅದು ಆ ರೀತಿ ಮಾಡುವುದಕ್ಕೆ ಬರುವುದಿಲ್ಲ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಗಣೇಶ್ ಕಾರ್ಣಿಕ್‌ರವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವರು, students from other States ಯಾರಿರುತ್ತಾರೋ, ಅವರನ್ನು ಸದರಿ ಉದ್ದೇಶದ ವ್ಯಾಪ್ತಿಯಿಂದ ಬಿಡುತ್ತಿದ್ದೀರಿ ಎಂದು ಹೇಳಿದರು. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ತಪ್ಪು ಕಲ್ಪನೆಯಾಗಿದೆ ಎಂದು ನಾನು ಭಾವಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರು ವಿವರವಾಗಿ ತಿದ್ದುಪಡಿ ಮತ್ತು original Act ನ್ನು ಓದಿದರೆ ಅದರಲ್ಲಿ ಸ್ಪಷ್ಟತೆ ಸಿಗುತ್ತದೆ. 2012ರ original Act ನಲ್ಲಿ, ಈ ರಾಜ್ಯದಲ್ಲಿ ಓದಿರುವಂತಹ ಯಾವುದೇ ಒಬ್ಬ M.B.B.S., graduate ಆತ ಕಡ್ಡಾಯವಾಗಿ rural service ಮಾಡಬೇಕು ಎಂದಿತ್ತು. ಇಲ್ಲಿಗೆ ಬೇರೆ ರಾಜ್ಯದಿಂದ ಬಂದಿರುವ ವಿದ್ಯಾರ್ಥಿಗಳಿಗೆ relaxation ಕೊಟ್ಟು ಇಲ್ಲೇ ನೋಂದಣಿ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ ಎಂಬ ಮಾತನ್ನು ಹೇಳುತ್ತಿದ್ದೀರಿ. ಈ ರೀತಿಯ ನಿಮ್ಮ ಕಲ್ಪನೆ ಸರಿಯಲ್ಲ. Other States ನಲ್ಲಿ ಇರುವವರು ಇಲ್ಲಿ ಬಂದು ರಿಜಿಸ್ಟ್ರೇಷನ್ ಮಾಡಬೇಕು ಎಂದಿದ್ದರೆ, ನಮ್ಮ ರಾಜ್ಯದಲ್ಲಿ ಅವರು ಓದಿದ್ದರೆ ಮತ್ತು ಅವರು ಹೊರಗಿನ ರಾಜ್ಯದವರಾಗಿದ್ದು ಇಲ್ಲಿಗೆ ಬಂದು ರಿಜಿಸ್ಟ್ರೇಷನ್ ಮಾಡಬೇಕಾದರೆ ಕಡ್ಡಾಯವಾಗಿ compulsory rural service ಮಾಡಬೇಕು. ಅವರಿಗೆ exemption ಇಲ್ಲ. original Act ನಲ್ಲಿ ನಿರ್ದಿಷ್ಟ ಸೆಕ್ಷನ್‌ಗೆ ಸಂಬಂಧಪಟ್ಟಂತೆ, ನಮ್ಮ ದೇಶದ ಯಾವುದೇ ವಿಶ್ವವಿದ್ಯಾಲಯದಲ್ಲಿ ಅವರಿಗೆ ಡಿಗ್ರಿ ಪ್ರದಾನ ಮಾಡಬಾರದು ಎಂಬುದನ್ನು ನಾವು delete ಮಾಡಿದ್ದೇವೆ. ಅದನ್ನು delete ಮಾಡಿದ ಮೇಲೆ, ನಮ್ಮ ರಾಜ್ಯಕ್ಕೆ ಬಂದು ಪ್ರಾಕ್ಟೀಸ್ ಮಾಡಬೇಕು ಅಥವಾ ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನಲ್ಲಿ ರಿಜಿಸ್ಟ್ರೇಷನ್ ಮಾಡಬೇಕೆಂದರೆ ಕಡ್ಡಾಯವಾಗಿ ಒಂದು ವರ್ಷ ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಬೇಕಾಗುತ್ತದೆ. ಅವರಿಗೆ ವಿನಾಯಿತಿ ಇಲ್ಲ. ನೀವು ಇನ್ನೊಂದು ವಿಚಾರವನ್ನು ಹೇಳಿದಿರಿ. Immediate ಆಗಿ Post Graduation ಗೆ ಹೋಗಬೇಕಾದರೆ ಏನು ಮಾಡತ್ತೀರಿ ಎಂಬ ಬಗ್ಗೆ ಕೇಳಿದಿರಿ. ಅದಕ್ಕೆ Act ನಲ್ಲಿ relaxation ಇದೆ. Original Act ನಲ್ಲಿ, M.B.B.S., ಮಾಡಿಕೊಂಡು ಅವರಿಗೆ ತಕ್ಷಣ Post Graduation ಗೆ ಸೀಟ್ ಸಿಕ್ಕಿದರೆ ಅಂಥವರು Post Graduation ಗೆ ಹೋಗಬಹುದು. ಅವರಿಗೆ ನಿರ್ಬಂಧ ಇಲ್ಲ. ಆದರೆ, Post Graduation ಮಾಡಿದ ಮೇಲೆ ಒಂದು ವರ್ಷ compulsory rural service ಮಾಡಬೇಕು ಎನ್ನುವುದು provision Act ನಲ್ಲಿದೆ. ಈ ಕುರಿತು ಮಾನ್ಯ ಸದಸ್ಯರಿಗೆ ಸ್ಪಷ್ಟವಾಯಿತು ಎಂದು ಭಾವಿಸುತ್ತೇನೆ. ಮಾನ್ಯ ಸಭಾಪತಿಗಳೆ, ಹೋದ ಸಲ ಈ Act ಗೆ ತಿದ್ದುಪಡಿ ತಂದಾಗ ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿತ್ತು. 2013ರಲ್ಲೇ ತಿದ್ದುಪಡಿ ಮಾಡಿದ್ದೆವು, PGT Rules ನಲ್ಲಿ domicile ಅನ್ನು prescribe ಮಾಡಿದ್ದಾಗ ಅದು ಸುಪ್ರೀಂ ಕೋರ್ಟ್‌ನಲ್ಲಿ struck down ಆಯಿತು. ಹಾಗಾಗಿ ನಾವು restore ಮಾಡಬೇಕಾಗಿತ್ತು. ಇದನ್ನು ಪರಿಶೀಲನೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದೇನೆ. We are examining it legally as to

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

how it can be done. ಅದನ್ನು ಪ್ರತ್ಯೇಕವಾಗಿ ಪರಿಶೀಲನೆ ಮಾಡಿ, ನಮ್ಮ ರಾಜ್ಯದ ವಿದ್ಯಾರ್ಥಿಗಳ ಹಿತವನ್ನು ಯಾವ ರೀತಿ ಕಾಪಾಡಬೇಕೋ ಆ ನಿಟ್ಟಿನಲ್ಲಿ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನಮ್ಮ ರಾಜ್ಯದಲ್ಲಿ ಯಾರು ಪ್ರಾಕ್ಟೀಸ್ ಮಾಡಬಯಸುತ್ತಾರೋ, ಅವರು ಯಾವುದೇ category ಯ ಜನ ಆಗಿದ್ದರೂ, ಯಾವುದೇ ರಾಜ್ಯದಿಂದ ಬಂದಿರಲಿ, ಅವರು ನಮ್ಮ ರಾಜ್ಯದಲ್ಲಿ ಓದಿದ್ದರೆ ಕಡ್ಡಾಯವಾಗಿ ಒಂದು ವರ್ಷ rural service ಮಾಡಲೇಬೇಕು.

ಮಾನ್ಯ ಉಗ್ರಪ್ಪನವರು ಕೆಲವೊಂದು issues ನ್ನು point out ಮಾಡಿದರು. Training ಎನ್ನುವುದನ್ನು ಏಕೆ ತೆಗೆಯುತ್ತಿದ್ದೀರಿ? 'Training' ಮತ್ತು 'Service' ಗೆ ಇರುವ ವ್ಯತ್ಯಾಸವೇನು ಎಂದು ಪ್ರಶ್ನೆ ಮಾಡಿದರು. ಇದರಲ್ಲಿ ಒಂದೇ ಒಂದು ಸ್ಪಷ್ಟೀಕರಣ ಏನೆಂದರೆ, 'Training' ಎನ್ನುವುದನ್ನೇ continue ಮಾಡಿದರೆ, it will be lengthening of the course. Housemanship ಆದಮೇಲೆ 'Training' ಎಂದು ಬಿಟ್ಟರೆ it will be lengthening of the course. ಹಾಗಾಗಿ ಅದು ಬೇಡ, compulsory service ಎಂದು ಮಾಡಬೇಕು. 'Service' ಎಂದರೆ lengthening of the course ಆಗುವುದಿಲ್ಲ. ಬೇರೆ ರಾಜ್ಯದಲ್ಲಿ 'Service' ಎಂದೇ ಇದೆ. ಹಾಗಾಗಿ 'Training' ಎನ್ನುವ ಪದವನ್ನು delete ಮಾಡಿದ್ದೇವೆ, 'Service' ಎಂಬುದನ್ನು ಇಟ್ಟಿದ್ದೇವೆ. ಗ್ರಾಮೀಣ ಪ್ರದೇಶದಲ್ಲಿ M.B.B.S. Graduates ಮಾತ್ರ ಹೋಗುತ್ತಾರೆ, ಬೇರೆಯವರು ಹೋಗುವುದಿಲ್ಲ ಎಂಬ ಮಾತನ್ನು ಹೇಳಿದರು. ಅದು partly true ಏಕೆಂದರೆ, ನಮ್ಮ ಗ್ರಾಮೀಣ ಪ್ರದೇಶದಲ್ಲಿ ಏನು ವ್ಯವಸ್ಥೆ ಇದೆ ಅಂದರೆ, PHCs ಏನಿವೆಯೋ ಅಲ್ಲಿಗೆ sanctioned posts ಕೇವಲ M.B.B.S., ವೈದ್ಯರೇ ಇರಬೇಕು ಎಂಬುದಾಗಿದೆ. ಹಾಗಾಗಿ ಅಲ್ಲಿ M.B.B.S., ಮಾಡಿದವರನ್ನೇ ಕಳುಹಿಸಬೇಕಾಗುತ್ತದೆ. ಮಾನ್ಯ ಸದಸ್ಯರು, Post Graduates ಗ್ರಾಮೀಣ ಪ್ರದೇಶಕ್ಕೆ ಹೋಗುವುದಿಲ್ಲ ಎನ್ನುವ ಮಾತನ್ನು ಹೇಳಿದರು. ಅದು ಹಾಗಿಲ್ಲ. Post Graduates ಎಂದರೆ, Specialists ಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಡಿ ಬರುವ ತಾಲ್ಲೂಕು ಆಸ್ಪತ್ರೆಗಳಲ್ಲಿ, Community Health Centres ಗಳಲ್ಲಿ ಮತ್ತು District hospitals ಗಳಲ್ಲಿ ಹಾಕುತ್ತೇವೆ. Community Health Centres ಎಲ್ಲವೂ ಗ್ರಾಮೀಣ ಪ್ರದೇಶಗಳಲ್ಲೇ ಇವೆ. ಅಲ್ಲಿಗೆ Post Graduates ಗಳನ್ನು ಪೋಸ್ಟಿಂಗ್

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬಹುದು. ಎಲ್ಲಿ sanctioned posts ಇದೆಯೋ ಅಂತಹ ಕಡೆ ಇವರ ಸೇವೆ ಬಳಸಿಕೊಳ್ಳುತ್ತಿರುವುದರಿಂದ ತಜ್ಞರೂ ಕೂಡ ಗ್ರಾಮೀಣ ಪ್ರದೇಶಗಳಿಗೆ ಹೋಗುತ್ತಾರೆ. Community Health Centres, ತಾಲ್ಲೂಕು ಆಸ್ಪತ್ರೆ ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಹೋಗಿಯೇ ಹೋಗುತ್ತಾರೆ. In the case of Super Specialists, ಅವರೇಕೆ ಗ್ರಾಮೀಣ ಪ್ರದೇಶಗಳಿಗೆ ಹೋಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ ಎಂದರೆ ಅಲ್ಲಿ ಅವರಿಗೆ ಸೌಲಭ್ಯಗಳಿರುವುದಿಲ್ಲ. ಆದ್ದರಿಂದ ಅವರು ಜಿಲ್ಲಾ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವುದಕ್ಕೆ provision ಮಾಡಲಾಗಿದೆ. ಮುಂಚೆಯೇ ಇದನ್ನು Principal Act ನಲ್ಲಿ ಏನು ಪಾಸ್ ಮಾಡಿದ್ದೇವೆಯೋ ಅದು ಕೋರ್ಟ್‌ನಲ್ಲಿ ಸ್ಟೇ ಆಗಿದೆ. ಹಾಗಾಗಿ ನಾವು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಇಲಾಖೆಯ ಜೊತೆ ಚರ್ಚೆ ಮಾಡಿ, to overcome certain difficulties, we have brought this Act. ಇದರಿಂದ ಏನಾಗುತ್ತದೆ ಎಂದರೆ, ಗ್ರಾಮೀಣ ಪ್ರದೇಶದಲ್ಲಿ ವೈದ್ಯರನ್ನು ಒದಗಿಸಿ ಕೊಡುವುದಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಈ ವಿಧೇಯಕವನ್ನು ತಂದಿದ್ದೇವೆ.

(ಮುಂದು . . . )

(875)21-6-2017 MM-KS[AK] 12.20 (ಸಭಾಪತಿಯವರ ಉಪಸ್ಥಿತಿ)

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, M.B.B.S., course ಮುಗಿದ ಕೂಡಲೇ 'training' ಎಂಬುದರ ಬದಲು 'service' ಎಂದು ಮಾಡಿದ್ದಾರೆ. ಅವರನ್ನು ಗ್ರಾಮಾಂತರ ಪ್ರದೇಶಗಳಿಗೆ ಕಳುಹಿಸಿ ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯರುಗಳ ಕೊರತೆಯನ್ನು ನೀಗಿಸುವುದು ನಿಮ್ಮ ಉದ್ದೇಶವಾಗಿದೆ. Whether a Doctor who has just completed his five years of college education, whether he can deal with a patient? Medicine ಅನ್ನು ಕೊಡುವುದಕ್ಕೆ, prescribe ಮಾಡುವುದಕ್ಕೆ ಅವನಿಗೆ unless he is supervised, ಅವರಿಗೆ ತರಬೇತಿ ಅವಧಿಯಲ್ಲಿ ಆ ಸಾಮರ್ಥ್ಯವಿರುವುದೇ?

**ಸಭಾಪತಿಯವರು:–** ಅವರಿಗೆ independent charge ಕೊಡುವುದಿಲ್ಲ, ಇನ್ನೊಬ್ಬರ ಕೈ ಕೆಳಗೆ ಕೆಲಸ ಮಾಡಬೇಕು ಎಂದು ಹೇಳಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**Sri IVAN D'SOUZA**:- Whether he is a full-fledged Doctor?

**ಡಾ. ಶರಣಪ್ರಕಾಶ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಮಂತ್ರಿಗಳು)**:- ಮಾನ್ಯ ಸಭಾಪತಿಯವರೆ, He is a full-fledged Doctor. After he has completed his one year Housemanship, the Degree is awarded to him. Then, he is a full-fledged Doctor and he is licensed to practice anywhere. ಬಹಳಷ್ಟು ಜನರು practice ಮಾಡುತ್ತಿದ್ದಾರೆ ಅವರಿಗೆ ನಾವು allow ಮಾಡುತ್ತಿದ್ದೇವೆ. ಇಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರು ಬೇರೆಯವರ ಉಸ್ತುವಾರಿಯಲ್ಲಿ ಕೆಲಸ ಮಾಡಬೇಕೆಂದು ನಿಯಮಾವಳಿಗಳಲ್ಲಿ ಸೂಚಿಸಲಾಗಿದೆ. ಹಾಗಾಗಿ ಅದರಲ್ಲಿ ಯಾವುದೇ ತೊಂದರೆಯಿಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ)**:- ಮಾನ್ಯ ಸಭಾಪತಿಯವರೆ, ನನಗೆ ಒಂದು ಸಂದೇಹವಿದೆ. ಕರ್ನಾಟಕದಲ್ಲಿ ಒಬ್ಬ ವೈದ್ಯಕೀಯ ವಿದ್ಯಾರ್ಥಿ ಮೆಡಿಸಿನ್ ನಾಲ್ಕುವರೆ ವರ್ಷ ಮತ್ತು ಒಂದು ವರ್ಷ ಒಟ್ಟು ಐದುವರೆ ವರ್ಷ ಪೂರೈಸುತ್ತಾನೆ, ಅವನು ಕರ್ನಾಟಕದಲ್ಲಿ ನೋಂದಣಿ ಮಾಡಿಸಬೇಕಾದರೆ ಒಂದು ವರ್ಷ ಕಡ್ಡಾಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸೇವೆ ಸಲ್ಲಿಸಿರಬೇಕೆಂದು ನಿಯಮ ಮಾಡಿದ್ದೀರಿ. ಆದರೆ ಅವರು ಬೇರೆ ರಾಜ್ಯಗಳಲ್ಲಿ ಹೋಗಿ ನೋಂದಣಿ ಮಾಡಿಸಿದರೆ ಅಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಸೇವೆ ಅಗತ್ಯವಿರುವುದಿಲ್ಲ. ಎಲ್ಲೋ ಒಂದು ಕಡೆ ಈ ಕಾನೂನನ್ನು ತಂದಿರುವುದರಿಂದ ಕರ್ನಾಟಕದಲ್ಲಿ ವೈದ್ಯಕೀಯ ಪದವಿ ಓದಿರುವ ವಿದ್ಯಾರ್ಥಿಗಳು ಇಲ್ಲಾದರೆ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ವರ್ಷ ಸರ್ವಿಸ್ ಮಾಡಬೇಕೆಂದು ಅವರು ಬೇರೆ ರಾಜ್ಯಕ್ಕೆ ಹೋಗಿ ಅಲ್ಲಿ ನೋಂದಣಿ ಮಾಡಿಸಿ ಅಲ್ಲಿಯೇ practice ಮಾಡುವುದಕ್ಕೆ ಪ್ರಾರಂಭಿಸಿದರೆ ನಮ್ಮ ರಾಜ್ಯಕ್ಕೆ ವೈದ್ಯರುಗಳ ಕೊರತೆ ಹೆಚ್ಚಾಗಬಹುದಲ್ಲವೇ? ಇಲ್ಲಿ ಒಂದು ವರ್ಷ ಕಡ್ಡಾಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಸರ್ವಿಸ್ ಮಾಡಬೇಕಾಗುತ್ತದೆ, ಇಡೀ ದೇಶದಲ್ಲಿ ಎಲ್ಲಿ ಬೇಕಾದರೂ ಸರ್ವಿಸ್ ಮಾಡಬಹುದು ಎಂದು ಹೊರಗಡೆ ಹೋದರೆ ಹೇಗೆ? ತಮಗೆ ಗೊತ್ತಿರುವ ಹಾಗೆ ಇಡೀ ದೇಶದಲ್ಲಿಯೇ ವೈದ್ಯರುಗಳ ಕೊರತೆ ಇದೆ. ಹಾಗಾಗಿ ಈ ಕಾನೂನನ್ನು ತಂದಿರುವುದರಿಂದ migration ಆಗುವ ಸಾಧ್ಯತೆ ಇದೆಯೇ ಎಂದು ಕೇಳಬಯಸುತ್ತೇನೆ.

**ಡಾ. ಶರಣಪ್ರಕಾಶ ಆರ್. ಪಾಟೀಲ್**:- ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಆ ಬಗ್ಗೆ clarify ಮಾಡುತ್ತೇನೆ. ಆ ರೀತಿಯ ಯಾವ ಸಮಸ್ಯೆಯೂ ಆಗುವುದಿಲ್ಲ. ಏಕೆಂದರೆ, ಪ್ರತಿ ವರ್ಷವೂ ನಮ್ಮ ರಾಜ್ಯದಲ್ಲಿ 8000ಕ್ಕಿಂತ ಹೆಚ್ಚು ವೈದ್ಯರು ಉತ್ತೀರ್ಣರಾಗುತ್ತಿದ್ದಾರೆ. ಅಷ್ಟು ಅವಶ್ಯಕತೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮಗಿಲ್ಲ. ಅವರನ್ನು ಕಡ್ಡಾಯವಾಗಿ ಮಾಡಿದರೆ problem of excess ಆಗುತ್ತದೆ. ಅವರನ್ನು ಎಲ್ಲಿ ಬಳಸಿಕೊಳ್ಳುವುದು ಎಂಬ ಪ್ರಶ್ನೆ ಉದ್ಭವವಾಗುತ್ತದೆ.

**ಸಭಾಪತಿಯವರು:-** ಸ್ವಲ್ಪ ಜನರು ಹೋಗಲಿ ಸ್ವಲ್ಪ ಜನರು ಇರಲಿ ಎಂದು ಹೇಳುತ್ತಾರೆ, ತೊಂದರೆಯೇನಿಲ್ಲ.

**ಡಾ. ಶರಣಪ್ರಕಾಶ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, problem of abundance ಆ ರೀತಿ ಆಗುತ್ತದೆ. So, this has been kept in mind.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ನಮಗೆ ವೈದ್ಯರುಗಳು ಜಾಸ್ತಿ ಬೇಕಿಲ್ಲ ಎಂದು ಹೇಳುತ್ತಾರೆ. Ratio ನೋಡಿದರೆ ಎಷ್ಟು ಜನರಿಗೆ ಎಷ್ಟು ವೈದ್ಯರಿದ್ದಾರೆ ಎಂದು ಗೊತ್ತಾಗುತ್ತದೆ. ನನಗನ್ನಿಸುವುದೇನೆಂದರೆ;

**ಸಭಾಪತಿಯವರು:-** ಮಾನ್ಯ ಉಗ್ರಪ್ಪರವರೆ, ಅದೆಲ್ಲಾ ಬಿಡಿ ಪರವಾಗಿಲ್ಲ. Through experience they have done it. ಬೇರೆ ಏನಾದರೂ ಸಮಸ್ಯೆ ಇದ್ದರೆ ಹೇಳಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, World Health Organisation (WHO) ಪ್ರಕಾರ ratio ಎಷ್ಟಿದೆ ಎನ್ನುವುದರ ಮೇಲೆ ಆರೂವರೆ ಕೋಟಿ ಜನಸಂಖ್ಯೆಗೆ ಎಷ್ಟು ಜನ ವೈದ್ಯರುಗಳು ಬೇಕು ಎನ್ನುವುದರ ಮೇಲೆ ತೀರ್ಮಾನವಾಗುತ್ತದೆ. ನಾನು ಹೇಳುವುದೇನೆಂದರೆ, rural service ಎಂದು ಹೇಳುತ್ತಾರೆ. Section 4 and Section 5 ರಲ್ಲಿ rural service ಗೆ apply ಆಗುವುದಿಲ್ಲ. It is only in Section 3. ಇದು ಮೊದಲನೆಯದು. ಎರಡನೆಯದಾಗಿ, length of Degree ಸ್ವಲ್ಪ ಒಂದು ವರ್ಷ ಜಾಸ್ತಿಯಾಗುತ್ತದೆ. ಕೊನೆಯಲ್ಲಿ one sentence ನಲ್ಲಿ ಹೇಗೆ anomalies ಇದೆ ಎನ್ನುವುದು ನನಗೆ ಗೊತ್ತಿಲ್ಲ. ಅವರು ಬಹಳ ಕಳಕಳಿಯಿರುವ ಮಂತ್ರಿಯವರು. Clause (2) of Section 5 reads as follows:

> *"(2) No university shall award super specialty degree to such candidates who are required to undergo but does not undergo compulsory service training posted under sub-section(1)."*

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾರು compulsory service training ನಲ್ಲಿ undergo ಆಗಿಲ್ಲವೋ, ಅವರಿಗೆ award ಮಾಡುವುದಕ್ಕೆ ಬರುವುದಿಲ್ಲ ಎಂದು Original Act ನ *section* ನಲ್ಲಿದೆ. ಆದರೆ reasoning ನಲ್ಲಿ ಏನು ಕೊಟ್ಟಿದ್ದಾರೆಂದರೆ, Clause(2) ರಲ್ಲಿ;

> *"(2) lift the embargo on award of degrees by the universities concerned to such candidates who have not undergone rural service."*

ಅದರ ಅರ್ಥವೆಂದರೆ, amended Sections ನಲ್ಲಿ ಇದರ ಬಗ್ಗೆ ಎಲ್ಲಿಯೂ ಹೇಳುತ್ತಿಲ್ಲ. ಎಲ್ಲೋ ಒಂದು ಕಡೆ, even if they have not undergone rural service, they will be entitled for Degree ಎನ್ನುವ ಅರ್ಥ ಇಲ್ಲಿ ಕಾಣುತ್ತಿದೆ. ಬಹುಶಃ ಈ anomaly ಅನ್ನು ತಾವು ಯಾವ ರೀತಿ ಸರಿಪಡಿಸುವಿರಿ ಎನ್ನುವುದನ್ನು ವಿವರಿಸಬೇಕೆಂದು ಕೇಳಬಯಸುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ಇನ್ನೊಂದು ಸಂದೇಹವಿದೆ. ತಾವು ಗ್ರಾಮಾಂತರ ಸೇವೆ ಮಾಡುವ ದೃಷ್ಟಿಯಿಂದ ಈ amendment ಅನ್ನು ತರುತ್ತಿದ್ದೀರಿ. ವೈದ್ಯರುಗಳು ಗ್ರಾಮಾಂತರ ಪ್ರದೇಶಗಳಿಗೆ ಏಕೆ ಹೋಗುತ್ತಿಲ್ಲ? ಅಲ್ಲಿ ಯಾವ ಸಮಸ್ಯೆ ಇದೆ? ಅಲ್ಲಿ ಸೌಲಭ್ಯಗಳನ್ನು ಕಲ್ಪಿಸದೇ, ಅಲ್ಲಿರುವ ತೊಂದರೆಗಳ ಬಗ್ಗೆ ತಾವು ಏನಾದರೂ ಆಲೋಚನೆ ಮಾಡಿದ್ದೀರಾ ಎಂದು ಕೇಳಬಯಸುತ್ತೇನೆ.

**ಸಭಾಪತಿಯವರು:-** ಮಾನ್ಯ ಗಣೇಶ್ ಕಾರ್ಣಿಕ್‌ರವರೆ, ಅದು ಅವರಿಗೆ ಸಂಬಂಧ ಪಡುವುದಿಲ್ಲ. ಸಮಾಜಕಲ್ಯಾಣ ಇಲಾಖೆಗೆ ಬರುತ್ತದೆ.

**ಡಾ. ಶರಣಪ್ರಕಾಶ ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪರವರು ಹೇಳಿದ ಹಾಗೆ rural service ಅನ್ನು prescribe ಮಾಡಿದ್ದೇವೆ. ಅದೇನೆಂದರೆ, ನಮ್ಮಲ್ಲಿರುವ ವ್ಯವಸ್ಥೆ ಏನಿದೆ ಆರೋಗ್ಯ ಇಲಾಖೆಯಲ್ಲಿ Primary Health Centres, Community Health Centres, ತಾಲ್ಲೂಕು ಆಸ್ಪತ್ರೆ, ಜಿಲ್ಲಾ ಆಸ್ಪತ್ರೆ ಇದೆ. ಈಗ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ only ಎಂ.ಬಿ.ಬಿ.ಎಸ್. ವೈದ್ಯರಿಗೆ sanctioned posts ಇದೆ. Apart from Urban Health

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

Centres, ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಗ್ರಾಮಾಂತರ ಪ್ರದೇಶಗಳಲ್ಲಿವೆ. ಈಗ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಕೂಡ Specialist posts sanctioned ಇದೆ. ಅದಕ್ಕೆ ಸ್ನಾತಕೋತ್ತರ ಪದವೀಧರರು ಅಲ್ಲಿಯೂ ಕೆಲಸ ಮಾಡುತ್ತಾರೆ. ಹಾಗಾಗಿ ಅದು ಅವರ rural service ಆಗುತ್ತದೆ. Rural service ಎಂದರೆ, ಎಲ್ಲಿ sanctioned post ಇದೆ, ಅಲ್ಲಿ post ಮಾಡುವುದರಿಂದ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿಯು ಕೂಡ ಅವರು ಕೆಲಸ ಮಾಡಬೇಕಾಗುತ್ತದೆ. Super Specialist ಗೆ ಜಿಲ್ಲಾ ಆಸ್ಪತ್ರೆಗೆ rural service ಆಗುವುದಿಲ್ಲ. ಏಕೆಂದರೆ, ಅವರಿಗೆ ಅಲ್ಲಿ ಬೇಕಾಗಿರುವ ವ್ಯವಸ್ಥೆಗಳಿಲ್ಲ ಎಂಬ ಕಾರಣಕ್ಕಾಗಿ ಅದನ್ನು ಜಿಲ್ಲಾ ಆಸ್ಪತ್ರೆಗಳಿಗೆ ಹಾಕಿದ್ದೇವೆ.

ಮಾನ್ಯ ಉಗ್ರಪ್ಪರವರು Doctors ratio ಬಗ್ಗೆ ಕೇಳಿದ್ದಾರೆ. ನಮ್ಮ ರಾಜ್ಯದಲ್ಲಿ WHO specification ಪ್ರಕಾರ 1:1000 ಇದೆ. ನಮ್ಮಲ್ಲಿ ಸರಾಸರಿ ಅಂದಾಜು 1:1700 ಇದೆ. ನಾವು ತಂದಿರುವ ತಿದ್ದುಪಡಿಯಿಂದ ಸುಮಾರು 3,500 ವೈದ್ಯರುಗಳು ಎಂ.ಬಿ.ಬಿ.ಎಸ್. ನಲ್ಲೇ ಸಿಗುತ್ತಾರೆ, apart from the Postgraduates. Nearly 2,000 Postgraduates plus 3,500 Undergraduates, it is nearly about 5500 Doctors, which is sufficient for the State. ಅದನ್ನು ಸೇರಿಸಿಕೊಂಡರೆ, it will be more than the requirement. ಅದಕ್ಕೆ ಈ amendment ಅನ್ನು ತಂದಿದ್ದೇವೆ. ಇದರಲ್ಲಿ ಏನಾದರೂ anomalies ಇದ್ದರೆ ನಿಯಮಾವಳಿಗಳಲ್ಲಿ ಯಾವರೀತಿ ಮಾಡಬೇಕೋ ಅದನ್ನು ಮಾಡಿಕೊಂಡಿದ್ದೇವೆ. ಆ ರೀತಿ ಏನಾದರೂ ಇದ್ದರೆ ಅದನ್ನು ಸರಿಪಡಿಸಿಕೊಳ್ಳುತ್ತೇವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

**"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."**

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.</u>

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ 2 ರಿಂದ 6 ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 6 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ಪೀಠಿಕೆ ಮತ್ತು ಶೀರ್ಷಿಕೆಗಳು, ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ. ಶರಣಪ್ರಕಾಶ ಆರ್. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೇ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ **2017ರ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ"** ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ **2017ರ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕವನ್ನು** ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು . . .

876/21-6-2017/12.30/ಡಿಎಸ್-ಕೆಎಸ್

(ಸಭಾಪತಿಯವರ ಉಪಸ್ಥಿತಿ)

**ಆ) ಕರ್ನಾಟಕ ರಾಜ್ಯ ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017 ರ ಕರ್ನಾಟಕ ರಾಜ್ಯ ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಇದೊಂದು ಸರಳ ತಿದ್ದುಪಡಿಯಾಗಿದೆ. ತಮಗೆ ಗೊತ್ತಿದೆ. ನಮ್ಮ ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳ ನಿವೃತ್ತಿ ವಯಸ್ಸು 67 ಇತ್ತು. ಈ ವಿಶ್ವವಿದ್ಯಾಲಯದಲ್ಲಿ ಮಾತ್ರ 65 ಇದೆ. ಹೀಗಾಗಿ ಎಲ್ಲಾ ವಿಶ್ವವಿದ್ಯಾಲಯದ ಕುಲಪತಿಗಳ ನಿವೃತ್ತಿ ವಯಸ್ಸನ್ನು 67 ವರ್ಷ ಮಾಡಬೇಕೆಂದು Karnataka Higher Education Council ನಲ್ಲಿ ತೀರ್ಮಾನ ತೆಗೆದುಕೊಂಡಿರುವುದರಿಂದ ಈಗ ಆ ನಿವೃತ್ತಿಯ ವಯಸ್ಸನ್ನು 65 ರ ಬದಲಾಗಿ 67 ಎನ್ನುವಂತಹ ಒಂದು ತಿದ್ದುಪಡಿಯನ್ನು ಮಾಡಿದ್ದೇವೆ. ಇದರ ಜೊತೆಗೆ ಮತ್ತೊಂದು ಸಣ್ಣ ತಿದ್ದುಪಡಿ ಇದೆ. (3)ನೇ ಉಪಪ್ರಕರಣದಲ್ಲಿ "ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು" ಎನ್ನುವ ಶಬ್ದ ಇದೆ. ಈಗ ಅದು Designation ಬದಲಾವಣೆಯಾಗಿದೆ. "ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳು ಇವರು" ಎಂದು ನಾವು ತಿದ್ದುಪಡಿ ಮಾಡಿಕೊಳ್ಳಬೇಕಾಗಿದೆ. ಈ ಎರಡು ತಿದ್ದುಪಡಿಗಳನ್ನು ಎಲ್ಲಾ ಮಾನ್ಯ ಸದಸ್ಯರ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ 67 ವರ್ಷ ಇರುವುದು ಸರಿ. ಇಲ್ಲಿ ಏಕೆ 65 ವರ್ಷ ಆಯಿತು ಎನ್ನುವ ಅನುಮಾನ. ಕಲಾವಿದರಿಗೆ ವಯೋಮಿತಿ ಇರುವುದಿಲ್ಲ. 67 ವರ್ಷದ ಬದಲಾಗಿ 70 ವರ್ಷ ಮಾಡಬಹುದಾಗಿತ್ತು. ಕಲಾವಿದರು, ಸಂಗೀತಗಾರರು ಚಿರಂತನವಾಗಿ ಸಂಗೀತ ಹಾಡುತ್ತಿರುತ್ತಾರೆ. ಹಾಗಾಗಿ ಕಲಾವಿದರಿಗೆ ವಯೋಮಿತಿ ಇರಬಾರದು. ಆದರೆ ಅವರ ಆರೋಗ್ಯ ಸರಿಯಿದೆಯೇ, ಇಲ್ಲವೇ ಎನ್ನುವ ಪರೀಕ್ಷೆ ಇರಬೇಕೆ ಹೊರತು ವಯೋಮಿತಿಯನ್ನು 70 ವರ್ಷಕ್ಕೆ ಮಾಡಬಹುದು. ಏಕೆಂದರೆ, ಕಲಾವಿದರು, ಸಂಗೀತಗಾರರು ಇರಬಹುದು ಮತ್ತೊಂದು ರೀತಿಯ ಕಲೆಯನ್ನು ರೂಢಿಸಿಕೊಂಡವರಿರಬಹುದು, ಇದೆಲ್ಲಾ ಇದೆ. ನಮಗೆ ಅಂತಹ ಕಲಾವಿದರು ಸಿಗುವುದೇ ಕಷ್ಟ. ಇತ್ತೀಚೆಗೆ ಈ ಕಲೆ ದೂರ ಹೋಗಿ ಬೇರೆ ಬೇರೆ ಕಲೆಗಳು ಬರುತ್ತಿವೆ. ಇವತ್ತು ಸಂಗೀತದಲ್ಲಿ ಆಧುನಿಕ ಸಂಗೀತಗಳು ಬರುತ್ತಿವೆ. ಈ ಶಾಸ್ತ್ರೀಯ ಸಂಗೀತ ಉತ್ತರಾಧಿಯಾಗಬಹುದು, ದಕ್ಷಿಣಾಧಿಯಾಗಬಹುದು, ಇಂಥವುಗಳು ಮರೆಮಾಚಿ ಹೋಗುತ್ತಿವೆ. ಇಂತಹ ಸಂದರ್ಭದಲ್ಲಿ ಬೇರೆ ವಿಶ್ವವಿದ್ಯಾಲಯಕ್ಕೆ ಇದನ್ನು ಹೋಲಿಕೆ ಮಾಡಬಾರದು. ಬೇರೆ ವಿಶ್ವವಿದ್ಯಾಲಯಕ್ಕೆ ಹೋಲಿಕೆ ಮಾಡದೆ ಇದಕ್ಕೆ 70 ವರ್ಷ ಮಾಡಿದರೆ ಒಳ್ಳೆಯದಾದೀತು ಎನ್ನುವುದು ನನ್ನ ಭಾವನೆ. ಮತ್ತೊಂದು ತಿದ್ದುಪಡಿ "ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು" ಇದು ರಾಜ್ಯದಾದ್ಯಂತ ಬದಲಾವಣೆಯಾಗಿದೆ. "ಪ್ರಧಾನ ನಿರ್ದೇಶಕರು" ಎನ್ನುವುದು ಸರಿಯಾಗಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ವಿಶ್ವವಿದ್ಯಾಲಯದಲ್ಲಿ ಕುಲಪತಿಗಳ ನಿವೃತ್ತಿಯ ವಯೋಮಿತಿಯನ್ನು 67 ವರ್ಷ ಎಂದು ಮಾಡಿದ್ದಾರೆ. ನಾನು ಪ್ರಾಮಾಣಿಕವಾಗಿ ಹೇಳಿಬಿಡುತ್ತೇನೆ. ನಮ್ಮ ರಾಜ್ಯದಲ್ಲಿ ಇಡೀ ರಾಜ್ಯದ ತುಂಬಾ ಎಷ್ಟು ಜನರಿಗೆ ಈ ವಿಶ್ವವಿದ್ಯಾಲಯದ ಸೌಲಭ್ಯ ಸಿಗುತ್ತಿದೆ? ಇದು ಕೇವಲ ಒಂದು area ದಲ್ಲಿ ಆಗಿದೆ. ಈ ವಿಶ್ವವಿದ್ಯಾಲಯ ಇದೆ ಎನ್ನುವುದೇ ಎಷ್ಟೋ ಜನರಿಗೆ ಗೊತ್ತಿಲ್ಲ. ಈ ವಿಶ್ವವಿದ್ಯಾಲಯ ಏಕೆ ಬೇಕು? ಬಹಳಷ್ಟು ನಿಷ್ಕಾಳಜಿಯಾಗಿದೆ ಎನ್ನುವುದನ್ನು ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆ ಇರಲಿ, ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಒಂದೇ ವಯಸ್ಸು ಇರುವುದು ಸರಿ. ಆದರೆ ಇವತ್ತಿನವರೆಗೂ ಸಂಗೀತ ವಿಶ್ವವಿದ್ಯಾಲಯಕ್ಕೆ ಗಂಗೂಬಾಯಿಯವರ ಹೆಸರು ಇದೆ. ಆದರೆ ಇದುವರೆಗೂ ಎಷ್ಟು ಜನ ಕಲಾವಿದರನ್ನು ಗುರುತು ಮಾಡಿದ್ದಾರೆ? ಆ ರೀತಿ ಏನೂ ಇಲ್ಲವೇ ಇಲ್ಲ. ಅಲ್ಲಿ ಎಲ್ಲಾ ವಿಶ್ವವಿದ್ಯಾಲಯ ಯಾವ ರೀತಿ ನಡೆಯುತ್ತಿದೆಯೋ ಅದೇ ರೀತಿ ಆ ವಿಶ್ವವಿದ್ಯಾನಿಲಯ ಸಹ ನಡೆಯುತ್ತಿದೆ. ಆದರೆ ಎಲ್ಲದಕ್ಕೂ ಒಂದೊಂದು ವಿಶ್ವವಿದ್ಯಾಲಯ ಮಾಡಿಬಿಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಬಸವರಾಜ ಹೊರಟ್ಟಿಯವರೆ, ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟ ಮತ್ತೊಂದು ವಿಧೇಯಕದ ಬಗ್ಗೆ ಚರ್ಚೆ ಬಂದಂತಹ ಸಂದರ್ಭದಲ್ಲಿ ತಾವು ಈ ವಿಚಾರವನ್ನು ಮಾತನಾಡಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಆ ವಿಧೇಯಕ ಚರ್ಚೆಗೆ ಬಂದ ಮೇಲೆ ನಾನು ಮಾತನಾಡುತ್ತೇನೆ. ಈಗ ಬೇಡ. ನಾನು ಸಂಗೀತ ವಿಶ್ವವಿದ್ಯಾಲಯದ ಬಗ್ಗೆ ಮಾತನಾಡುತ್ತಿದ್ದೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ನಿಮ್ಮ ವಿಚಾರವನ್ನು ನಾನು ಒಪ್ಪುತ್ತೇನೆ. ನಿಮ್ಮ ವಿಚಾರ ಸರಿಯಿಲ್ಲ ಎಂದು ನಾನು ಹೇಳುತ್ತಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಾನು ಸಂಗೀತ ವಿಶ್ವವಿದ್ಯಾಲಯ ಬಿಟ್ಟು ಬೇರೆ ಮಾತನಾಡುವುದಿಲ್ಲ. ಸಂಗೀತ ವಿಶ್ವವಿದ್ಯಾಲಯದ ಬಗ್ಗೆಯೇ ಮಾತನಾಡುತ್ತಿದ್ದೇನೆ. ನಾನು ಏನು ಹೇಳುತ್ತಿದ್ದೇನೆಂದರೆ, ಸಂಗೀತ ವಿಶ್ವವಿದ್ಯಾಲಯ ಬರೀ ಬೋರ್ಡ್ ಇರುವಂತಹ ವ್ಯವಸ್ಥೆ ಎಂದು ಬಹಳಷ್ಟು ಜನರು ಹೇಳುತ್ತಾರೆ. ಆ ವಿಶ್ವವಿದ್ಯಾಲಯದಲ್ಲಿ ಏನು ಮಾಡಿದ್ದಾರೆ ಎಂಬುದನ್ನು ಸರ್ಕಾರ ಹೇಳಲಿ? ಇವತ್ತು ಸಂಗೀತ ವಿಶ್ವವಿದ್ಯಾಲಯದಲ್ಲಿ ಎಷ್ಟು ಜನರು ಓದುತ್ತಿದ್ದಾರೆ? ಅಲ್ಲಿಂದ ಎಷ್ಟು ಜನ ಸಂಗೀತ ಕಲಾಕಾರರು ಬಂದಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರು ಹೇಳಲಿ. ವಿಧೇಯಕದ ತಿದ್ದುಪಡಿಗೆ ಒಪ್ಪಬಹುದು. ತಿದ್ದುಪಡಿಯಲ್ಲಿ ನಿವೃತ್ತಿ ವಯಸ್ಸಿನ ಬಗ್ಗೆ ಇದೆ. ಆದರೆ ಆ ವಿಶ್ವವಿದ್ಯಾಲಯ ಈ ವಿಶ್ವವಿದ್ಯಾಲಯ ಎಂದು ಹೇಳುವ ಹಾಗಿಲ್ಲ. ಕೆಲವು ಪ್ರತ್ಯೇಕವಾದ ವಿಶ್ವವಿದ್ಯಾಲಯಗಳನ್ನು ಮಾಡಿದ್ದಾರೆ. ಆ ಹಿನ್ನೆಲೆಯಲ್ಲಿ ಸಂಗೀತ ವಿಶ್ವವಿದ್ಯಾಲಯ, ಇವೆಲ್ಲಾ ಕೇವಲ ಕುಲಪತಿ ನೇಮಕಕ್ಕೆ ಮಾತ್ರ, ಕುಲಪತಿಗಳಿಗೆ ಸ್ಥಳ ಮಾಡಿಕೊಡುವುದಕ್ಕೆ ಈ ರೀತಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಸಚಿವರು ಹೆಚ್ಚು ಕಾಳಜಿ ವಹಿಸಬೇಕು. ಇಡೀ ರಾಜ್ಯದ ಜನತೆಗೆ ಸಂಗೀತ, ಕಲೆಯ ಬಗ್ಗೆ ತಿಳಿಯುವಂತಹ ವ್ಯವಸ್ಥೆಯನ್ನು ಮಾಡಬೇಕು. ರಾಜಕೀಯ ಶಿಫಾರಸ್ಸಿನಿಂದ ಕುಲಪತಿಗಳನ್ನು ನೇಮಕ ಮಾಡಬಾರದು. ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರನ್ನು ಕುಲಪತಿಯನ್ನಾಗಿ ನೇಮಕ ಮಾಡಬೇಕು. ಸಂಗೀತ ವಿಶ್ವವಿದ್ಯಾಲಯದ ಬಗ್ಗೆ ಮಾತ್ರ ಪ್ರಸ್ತಾಪಿಸುತ್ತಿದ್ದು, ಇದೊಂದು ಉತ್ತಮವಾದ ವಿಶ್ವವಿದ್ಯಾಲಯ ಆಗಲಿ ಎಂಬ ಉದ್ದೇಶದಿಂದ ಅದಕ್ಕೆ ಬೇಕಾದ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೆ, ನಾನು ಈ ವಿಧೇಯಕದ ಬಗ್ಗೆ ಮಾತನಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈ ವಿಧೇಯಕದಲ್ಲಿ ಹೆಚ್ಚಿನ ತಿದ್ದುಪಡಿಗಳೇನಿಲ್ಲ, ನಿವೃತ್ತಿ ವಯಸ್ಸನ್ನು 65 ವರ್ಷ ಇರುವುದನ್ನು 67 ವರ್ಷ ಎಂದು ಮಾಡಿದ್ದಾರೆ. ಅದರ ಬಗ್ಗೆಯೂ ಚರ್ಚೆ ಮಾಡಬೇಕೆಂದರೆ ಹೇಗೆ? ನನ್ನದೇನೂ ಅಭ್ಯಂತರವಿಲ್ಲ ಮಾತನಾಡಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಇವತ್ತು ಹೇಗಾದರೂ ನಾವು ವಿಶ್ವವಿದ್ಯಾಲಯ ಕಾಯ್ದೆ ತಿದ್ದುಪಡಿಯನ್ನು ತರುತ್ತಿದ್ದೇವೆ. ಆ ಸಂದರ್ಭದಲ್ಲಿ ಈ ಎಲ್ಲಾ ವಿಚಾರಗಳನ್ನು ಮಾನ್ಯ ಸದಸ್ಯರುಗಳು ಹೇಳಬಹುದು.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಈ ಹಿಂದಿನ ಅಧಿವೇಶನದಲ್ಲಿ ಸಂಸ್ಕೃತ ವಿಶ್ವವಿದ್ಯಾಲಯ ಕುಲಪತಿಗಳ ನಿವೃತ್ತಿ ವಯಸ್ಸು ಜಾಸ್ತಿ ಮಾಡಿದರು. ಮತ್ತೆ ಮೂರು ತಿಂಗಳು ಬೇಕೇ ಇದನ್ನು ವ್ಯವಸ್ಥೆ ಮಾಡುವುದಕ್ಕೆ? ಒಂದೇ ಸಲ ಏಕೆ ಮಾಡುವುದಿಲ್ಲ? ಈಗ ಮತ್ತೆ ಏಕೆ ವಿಧೇಯಕವನ್ನು ತರಬೇಕು? ಆಗಲೇ ತರಬಹುದಾಗಿತ್ತಲ್ಲವೆ? ಸಣ್ಣ ವಿಧೇಯಕ ಎಂದು ಹೇಳುತ್ತಿದ್ದಾರೆ. ನಾವು ಎಲ್ಲರಿಗೂ ಸೇರಿ ಒಂದು ವಿಧೇಯಕವನ್ನು ತರುತ್ತೇವೆ ಎಂದು ಮಾನ್ಯ ಸಚಿವರು ಒಂದು ವರ್ಷದ ಹಿಂದೆ ಈ ಸದನದಲ್ಲಿ ಹೇಳಿದ್ದಾರೆ. ಈಗ ಮತ್ತೆ ಕುಲಪತಿಗಳ ನಿವೃತ್ತಿಯ ವಯೋಮಿತಿಯನ್ನು 2 ವರ್ಷ ಜಾಸ್ತಿ ಮಾಡಿ 65 ರಿಂದ 67 ವರ್ಷ ಜಾಸ್ತಿ ಮಾಡಿರುವುದಕ್ಕೆ ಒಂದು ವಿಧೇಯಕ, ಯಾರದ್ದೋ designation ಬದಲಾವಣೆ ಮಾಡಿದ್ದಕ್ಕೆ ಒಂದು ವಿಧೇಯಕ. ಈ ರೀತಿಯಾದರೆ ಹೇಗೆ? ನಾವು ಇದರ ಬಗ್ಗೆ ಮಾತನಾಡಬಾರದು ಎಂದು ಹೇಳುತ್ತಾರೆ. ಈಗ ತಂದಿರುವಂತಹ ವಿಧೇಯಕದ ಇಂಗ್ಲಿಷ್ ಪ್ರತಿಯಲ್ಲಿಯೂ ಇದನ್ನು ಉಲ್ಲೇಖಿಸಿದ್ದಾರೆ. "ಕರ್ನಾಟಕ ರಾಜ್ಯ ಡಾ:ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017" ವಿಶ್ವವಿದ್ಯಾನಿಲಯದ regulation ನಲ್ಲಿ ಕೆಲವು ಕಡೆ ವಿಶ್ವವಿದ್ಯಾಲಯ ಎಂದು ಇದೆ, ಕೆಲವು ಕಡೆ ವಿಶ್ವವಿದ್ಯಾನಿಲಯ ಎಂದು ಇದೆ. ಈ ಸಣ್ಣ ಸಣ್ಣ ತಿದ್ದುಪಡಿಯನ್ನು ಒಟ್ಟಿಗೆ ಸಮಗ್ರವಾಗಿ ಆಲೋಚನೆ ಮಾಡಿ ಏಕೆ ತರುತ್ತಿಲ್ಲ? ಪ್ರತಿ ಸಲ ನಮಗೆ ಇದೇ ಕೆಲಸವೇ? ನಾನು ಇಲ್ಲಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ವಿಧೇಯಕದ ಬಗ್ಗೆ ಏಕೆ ಮಾತನಾಡುತ್ತೀರಿ ಕುಳಿತುಕೊಳ್ಳಿ ಎಂದು ಹೇಳುತ್ತಾರೆ.

ನಾನು ಹೇಳುತ್ತಿರುವುದೇನೆಂದರೆ, ಬೇರೆ ಏನೂ ಇಲ್ಲ. ದಯವಿಟ್ಟು ಸಮಗ್ರವಾಗಿ ಆಲೋಚನೆ ಮಾಡಿ. ವಿಶ್ವವಿದ್ಯಾನಿಲಯ ಅಥವಾ ವಿಶ್ವವಿದ್ಯಾಲಯ ಎಂಬುದನ್ನು ನಿರ್ಣಯ ಮಾಡಿ. ಕೆಲವು university ಗಳಿಗೆ ಆ ರೀತಿಯ ಹೆಸರು ಇದೆ, ಇನ್ನು ಕೆಲವು ಯೂನಿವರ್ಸಿಟಿಗೆ 'ವಿಶ್ವವಿದ್ಯಾನಿಲಯ'

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೆಸರು ಇದೆ. ಇಂಗ್ಲಿಷ್ Bill ನಲ್ಲಿ ಕನ್ನಡದಲ್ಲಿ ಯಾವ ರೀತಿ ಇದೆಯೋ ಅದೇ ರೀತಿ ಬರೆದಿದ್ದಾರೆ. ಕೆಲವು ಇಂಗ್ಲಿಷ್ Bill ನಲ್ಲಿ ಇಂಗ್ಲಿಷ್ ಹೆಸರನ್ನೇ translate ಮಾಡಿದ್ದಾರೆ. ಇದು ಸಣ್ಣ ಸಣ್ಣ ಸಂಗತಿಗಳು. ಯಾವ ಸಣ್ಣಪುಟ್ಟ ಸಂಗತಿಗಳಿದ್ದರೂ ಅವೆಲ್ಲಾ ಒಟ್ಟಿಗೆ ಆಗಬೇಕು, ಅದನ್ನು ಒಂದೇ ಸಲ ತೆಗೆದುಕೊಂಡು ಬಂದರೆ ಮತ್ತೆ ಇಲ್ಲಿ ಚರ್ಚೆ ಮಾಡುವ ಅವಶ್ಯಕತೆ ಇಲ್ಲ. ಹಾಗಾಗಿ ನನ್ನ ವಿನಂತಿ ಏನೆಂದರೆ, ಸಮಗ್ರ ಕಾಯ್ದೆ ತೆಗೆದುಕೊಂಡು ಬಂದು ಎಲ್ಲದ್ದಕ್ಕೂ ಒಂದು ತಿದ್ದುಪಡಿ ವಿಧೇಯಕ ತರುವುದು ಸೂಕ್ತ ಎಂದು ಕಾಣುತ್ತದೆ. ಪ್ರತಿಯೊಂದು ವಿಶ್ವವಿದ್ಯಾಲಯಕ್ಕೂ ಸಣ್ಣ ಸಣ್ಣ ತಿದ್ದುಪಡಿ ತರುವುದು ಸರಿಯಲ್ಲ. ಈಗ ಮತ್ತೊಂದು ವಿಧೇಯಕ ಬರುತ್ತಿದೆ ಎಂದು ಮಾನ್ಯ ಸಚಿವರೆ ಹೇಳುತ್ತಿದ್ದಾರೆ. ಹಾಗಾದರೆ ಈಗ ಈ ವಿಧೇಯಕವನ್ನು ತರುವ ಅಗತ್ಯವೇ ಇರಲಿಲ್ಲ. ಅದನ್ನು ತರುತ್ತೇವೆಂದ ಮೇಲೆ ಈ ವಿಧೇಯಕವನ್ನು ಏಕೆ ತರಬೇಕಾಗಿತ್ತು? ವಿಶ್ವವಿದ್ಯಾಲಯಗಳು ಬೇರೆ ಇರಬಹುದು, ಆದರೆ ಉನ್ನತ ಶಿಕ್ಷಣ ಇಲಾಖೆ ಒಂದೇ ಇದೆ. ಇಲಾಖೆಯವರು ಕುಳಿತುಕೊಂಡು ಸಮಗ್ರವಾಗಿ ಆಲೋಚನೆ ಮಾಡಿ ಈ ಹೆಸರುಗಳ ಬಗ್ಗೆ, designation ಗಳ ಬಗ್ಗೆ, ವಯೋಮಿತಿ ಬಗ್ಗೆ ಒಟ್ಟಿಗೆ ತರುವುದಕ್ಕೆ ಏಕೆ ಸಾಧ್ಯವಿಲ್ಲ? ಅದನ್ನು ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಬೇರೆಯವರಿಗೆ opportunities ಏಕೆ ಕಡಿಮೆ ಮಾಡುತ್ತಿದ್ದಾರೆ? ಸುಪ್ರೀಂ ಕೋರ್ಟ್‌ನ ನಿರ್ಣಯದ ಪ್ರಕಾರ Indian population ಗೆ 65 ವರ್ಷ life span ಎಂದು ಹೇಳಿದ್ದಾರೆ. ನಾವು ಇಲ್ಲಿ ನಿವೃತ್ತಿ ವಯಸ್ಸನ್ನು 60 ವರ್ಷ ಎಂದು ಸರ್ಕಾರಿ ನೌಕರರಿಗೆ ಮಾಡುತ್ತೇವೆ. ಉದಾಹರಣೆಗೆ, ಹಿಂದೂಸ್ತಾನಿ ಸಂಗೀತದಲ್ಲಿ tribal ಮಕ್ಕಳು ಇವತ್ತು Master Degree, Double Degree, Triple Degree ಮಾಡಿರುವಂಥವರು ಇದ್ದಾರೆ. ಈಗ ಏನಾಗುತ್ತಿದೆ ಎಂದರೆ, ಯಾರೋ ವ್ಯಕ್ತಿಯನ್ನು ಇಟ್ಟುಕೊಂಡು 65 ರಿಂದ 67, ಆಮೇಲೆ 70 ವರ್ಷಕ್ಕೆ ನಿವೃತ್ತಿಯ ವಯೋಮಿತಿಯನ್ನು ಹೆಚ್ಚಿಸುತ್ತಾ ಹೋಗುತ್ತದೆ. ಅಂದರೆ, ವಯಸ್ಸು ಆದಮೇಲೆ University Vice-Chancellor ಆಗಿ ಅದರ ಆಗುಹೋಗುಗಳನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯತೆ ಇದೆಯೇ? ನನಗನಿಸುವುದೇನೆಂದರೆ, ಯೂನಿವರ್ಸಿಟಿಯ ಆಡಳಿತವನ್ನು ಪರಿಣಾಮಕಾರಿಯಾಗಿ ನಡೆಸುವವರು ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಸದೃಢರಾಗಿರಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಈ ರೀತಿ if we go on

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

increasing the age limit ಎಂದರೆ, ಏನು ಸಂದೇಶ ಹೋಗುತ್ತದೆ? 25–30–40 ವರ್ಷಗಳ ಹಿಂದೆ ಅರ್ಹತೆಯುಳ್ಳ ಅಭ್ಯರ್ಥಿಗಳು ಬಹಳ ಕಡಿಮೆ ಇದ್ದರು ಆಗ ಆ ರೀತಿ ಆಗುತ್ತಿತ್ತು. ಈಗ ಇವತ್ತು ಪ್ರತಿ ಊರು, ಹಳ್ಳಿಗಳಲ್ಲಿ ಈ ರೀತಿಯ ಅರ್ಹತೆಯುಳ್ಳ ಅಭ್ಯರ್ಥಿಗಳು ಸಿಗುವಂತಹ ಸಂದರ್ಭದಲ್ಲಿ ಏಕೆ ಈ ರೀತಿ ಎರಡೆರಡು ವರ್ಷ ಜಾಸ್ತಿ ಮಾಡುತ್ತಿದ್ದಾರೆ? ಈ ರೀತಿಯ ತಿದ್ದುಪಡಿ ಮಾಡುವ ಮೂಲಕ ಅರ್ಹತೆಯುಳ್ಳ ಅಭ್ಯರ್ಥಿಗಳಿಗೆ ತೊಂದರೆಯಾಗುತ್ತಿದೆ. ಆಡಳಿತದ ಮೇಲೆ ಒಂದು ರೀತಿಯ ದುಷ್ಪರಿಣಾಮ ಆಗುವಂಥದ್ದು ಸಹ ಇದೆ. ಇದನ್ನು ಯಾವ ರೀತಿ ನಿರ್ವಹಣೆ ಮಾಡುತ್ತಾರೆಂದು ನಾನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

(ಮುಂದು)

(877) 21.06.2017/ 12.40/ ಕೆಹೆಚ್/ಎಂಡಿ

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಹಿರಿಯ ಸದಸ್ಯರಾದ ಸನ್ಮಾನ್ಯ ಶ್ರೀ ರಾಮಚಂದ್ರಗೌಡ ರವರು, ಹಿರಿಯರಾದಂತಹ ಶ್ರೀ ಬಸವರಾಜ ಹೊರಟ್ಟಿಯವರು, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಮತ್ತು ಶ್ರೀ ವಿ.ಎಸ್.ಉಗ್ರಪ್ಪನವರು, ಇವರೆಲ್ಲರೂ ಕೂಡ ವಯಸ್ಸನ್ನು ಏಕೆ ಹೆಚ್ಚು ಮಾಡುತ್ತೀರೆಂದು ಕೇಳುತ್ತಾರೆ. ವಯಸ್ಸನ್ನು 70 ವರ್ಷಕ್ಕೆ ಏಕೆ ಮಾಡಿದ್ದೀರೆಂದು ಸಹ ಕೇಳುತ್ತಾರೆ. ಮಾನ್ಯ ಸಭಾಪತಿಯವರೆ, ತಾವು ಕೂಡ ಉನ್ನತ ಶಿಕ್ಷಣ ಮಂತ್ರಿಗಳಾಗಿ ಕೆಲಸ ಮಾಡಿದಂತಹವರು.

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, It's a different issue.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಶ್ರೀ ರಾಮಚಂದ್ರಗೌಡರ ಸಲಹೆ ಸರಿಯಿಲ್ಲವೆಂದು ನಾನು ಹೇಳಲಿಲ್ಲ. ಶ್ರೀ ವಿ.ಎಸ್. ಉಗ್ರಪ್ಪನವರ ಸಲಹೆ ಸರಿಯಿಲ್ಲವೆಂದು ಸಹ ಹೇಳಲಿಲ್ಲ. ಏಕೆಂದರೆ ಅವರವರ ವಿಚಾರಗಳಿಗೆ ಮಹತ್ವ ಇದ್ದೇ ಇರುತ್ತದೆ. ಆದರೆ ನಿಯಮಾವಳಿಗಳನ್ನು ಮಾಡುವಂತಹ ಸಂದರ್ಭದಲ್ಲಿ ವಯೋಮಿತಿಯನ್ನು ಕೇವಲ ಸರ್ಕಾರವು ತೀರ್ಮಾನ ಮಾಡುವುದಿಲ್ಲ. ಇದಕ್ಕೆಲ್ಲ UGC (University Grant Commission) ಇದೆ. UGC norms ಪ್ರಕಾರ Vice Chancellor ವಯಸ್ಸು ಎಷ್ಟು ಇರಬೇಕೆಂದು ದೇಶದಾದ್ಯಂತ ಒಂದು ವಯಸ್ಸನ್ನು ನಿಗದಿ ಮಾಡಿದ್ದಾರೆ. ಆ ಹಿನ್ನಲೆಯಲ್ಲಿ ಹಿಂದೆ "ಅರವತ್ತೈದು ವರ್ಷ" ಇರುವುದನ್ನು, ಈಗ "ಅರವತ್ತೇಳು ವರ್ಷ" ಎಂದು ಮಾಡುತ್ತಿದ್ದೇವೆ. We have to follow certain norms. ವಿಶ್ವ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿದ್ಯಾನಿಲಯಗಳು UGC ನಿಯಮಾವಳಿಗಳ ಅಡಿಯಲ್ಲಿ ಕೆಲಸ ಮಾಡಬೇಕಾಗುತ್ತದೆ. ಇದನ್ನು ದೇಶದಾದ್ಯಂತ ಮಾಡಬೇಕಾಗಿರುವುದರಿಂದ, ಇವತ್ತಿನ ದಿವಸ ವಯಸ್ಸನ್ನು ಹೆಚ್ಚು ಮಾಡಬೇಕಾದ ಅನಿವಾರ್ಯತೆಯಿದೆ. ದಯವಿಟ್ಟು, ಈಗಾಗಲೇ ನಾನು ಹೇಳಿರುವಂತೆ ಅಕೌಂಟೆಂಟ್ ಜನರಲ್‌ನ designation ಬದಲಾವಣೆಯಾಗಿರುವುದರಿಂದ, ಅದನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ. ಮಾನ್ಯ ಸದಸ್ಯರುಗಳ ಸಲಹೆಗಳು ಏನಿವೆ? ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾನಿಲಯ ಎಂಬ ಪದಗಳಿಗೆ ಉತ್ತಮವಾದಂತಹ ಒಂದು ಸಲಹೆಯನ್ನು ಕೊಟ್ಟರು. I agree with you. ಕೆಲವು ಕಡೆಗಳಲ್ಲಿ ವಿಶ್ವವಿದ್ಯಾಲಯ ಎಂದು ಕರೆಯುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ವಿಶ್ವವಿದ್ಯಾನಿಲಯ ಎಂದು ಕರೆಯುತ್ತಾರೆ. ನಾವು ಸಮಗ್ರ ಕಾಯ್ದೆಯನ್ನು ತರುತ್ತೇವೆ. ಆ ಸಂದರ್ಭದಲ್ಲಿ ಇದನ್ನು ತಿದ್ದುಪಡಿ ಮಾಡಿಕೊಡುತ್ತೇನೆ. ಈ ವಿಧೇಯಕವನ್ನು ಎಲ್ಲ ಸದಸ್ಯರು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ರಾಮಚಂದ್ರಗೌಡ:-** ಮಾನ್ಯ ಸಭಾಪತಿಯವರೆ, ಈ ವಿಶ್ವವಿದ್ಯಾನಿಲಯಗಳು UGC ಅಡಿಯಲ್ಲಿ ಬರುತ್ತವೆಯೇ?

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಹೌದು. UGC ಅಡಿಯಲ್ಲಿ ಬರುತ್ತವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

> **"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017 ರ ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

<u>**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**</u>

<u>**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**</u>

<u>**ಖಂಡ 2 ಮತ್ತು 3**</u>

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

<u>**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**</u>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಖಂಡ 2 ಮತ್ತು 3 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು.)

**ಖಂಡ 1 ಇತ್ಯಾದಿ**

**ಸಭಾಪತಿಯವರು:– ಪ್ರಸ್ತಾವ ಏನೆಂದರೆ;**

**"ಮೊದನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:– ಪ್ರಸ್ತಾವ ಏನೆಂದರೆ;**

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017 ರ ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮಸೂದೆಗೆ ಒಪ್ಪಿಗೆ ನೀಡಲಾಯಿತು.**

**ಸಭಾಪತಿಯವರು:–** ನಾನು ಆಗಲೇ ಹೇಳಿದ ಹಾಗೆ ನಾಲ್ಕು ವಿಧೇಯಕಗಳ ಪಟ್ಟಿಯನ್ನು ಮಾಡಿ, ವಿಧೇಯಕಗಳ ಕಾಪಿಯನ್ನು ನೆನ್ನೆಯ ದಿವಸ Agenda Copy ಜೊತೆಯಲ್ಲಿ ಮಾನ್ಯ ಸದಸ್ಯರಿಗೆಲ್ಲರಿಗೂ ಕಳುಹಿಸಿದ್ದೇವೆ. ಇವತ್ತಿನ ದಿವಸ ಆ ವಿಧೇಯಕಗಳನ್ನು ಪರಿಗಣಿಸಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಎಲ್ಲರಿಗೂ ಸಹ ಕಳುಹಿಸಿಕೊಟ್ಟಿದ್ದೇವೆ. ಆ ಪಟ್ಟಿಯಲ್ಲಿ ಇಲ್ಲದೆಯಿರುವಂತಹ ಒಂದು ಸಣ್ಣ ವಿಧೇಯಕ ನೆನ್ನೆಯ ದಿವಸ ವಿಧಾನ ಸಭೆಯಿಂದ ಅನುಮೋದನೆಯಾಗಿ, ಇವತ್ತಿನ ದಿವಸ ಈ ಸದನಕ್ಕೆ ಬಂದಿದೆ. ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಒಂದು ವಿಧೇಯಕ ಬಹಳ ದೊಡ್ಡದೇನಲ್ಲ. ದಯಮಾಡಿ, ಇದನ್ನು ಸಭೆಯ ಮುಂದಿಟ್ಟು, ಸಭೆಯ ಅಭಿಪ್ರಾಯವನ್ನು ತಿಳಿಸಬೇಕು. ಸಾಧ್ಯವಾದರೆ ಅನುಮತಿಯನ್ನು ದೊರಕಿಸಿಕೊಡಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ. ಸಭೆಯ ಪರವಾಗಿ ಯಾರಾದರೂ ಹಿರಿಯರು ಮಾತನಾಡುವ ಹಾಗಿದ್ದರೆ ತಮ್ಮ ಅಭಿಪ್ರಾಯದ ಹಿನ್ನೆಲೆಯಲ್ಲಿ ನಾನು ಮುಂದಕ್ಕೆ ಹೋಗುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಇದರ ಬಗ್ಗೆ ತಾವು ಸಹ ಈ ಸದನದಲ್ಲಿ ಹೇಳಿದ್ದೀರಿ. ಯಾವುದೇ ವಿಧೇಯಕಗಳಿದ್ದರೂ ಸಹ ಅದು ಸಣ್ಣ ವಿಧೇಯಕ ಇರಲಿ, ದೊಡ್ಡ ವಿಧೇಯಕ ಇರಲಿ ನಮಗೆ ಮೊದಲೇ ಕೊಡಬೇಕೆಂದು ತಾವೇ ಹೇಳಿದ್ದೀರಿ. ಅನುಸೂಚಿತ ಜಾತಿಗಳ ಸಲುವಾಗಿ ಮಾನ್ಯ ಸಚಿವರಾದ ಶ್ರೀ ಆಂಜನೇಯರವರು ಈ ವಿಧೇಯಕವನ್ನು ಸದನದ ಮುಂದೆ ತಂದಿದ್ದಾರೆ. ನಾವು ಈ ವಿಧೇಯಕವನ್ನು ಓದಿ ಏನಾದರೂ ಹೇಳಬೇಕಲ್ಲವೇ?

**ಸಭಾಪತಿಯವರು:-** ಮಾನ್ಯ ಸಚಿವರು ಈ ವಿಧೇಯಕವನ್ನು ಮಾನ್ಯ ಸದಸ್ಯರುಗಳಿಗೆ ಕೊಟ್ಟಿಲ್ಲವೆಂದರೆ ಹೇಗೆ ಓದುತ್ತೀರಿ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಒಂದೇ ಬಾರಿಗೆ 20 ರಿಂದ 22 ವಿಧೇಯಕಗಳನ್ನು ಪಾಸ್ ಮಾಡಿದ್ದೀರಿ. ಈ ವಿಧೇಯಕಗಳನ್ನು ಏಕೆ ಮಾನ್ಯ ಸದಸ್ಯರಿಗೆಲ್ಲ ಮುಂಚಿತವಾಗಿ ಕೊಡುವುದಿಲ್ಲ? ಮಾನ್ಯ ಸಭಾಪತಿಯವರೆ, ನೀವೇ ಈ ಹಿಂದೆ ಈ ಮಾತನ್ನು ಹೇಳಿದ್ದೀರಿ. ಹಾಗಾದರೆ ವಿಧೇಯಕದ ಬಗ್ಗೆ ನಾವು ಏನು ಮಾತನಾಡುವುದೇ ಇಲ್ಲ. ಏಕೆಂದರೆ ವಿಧೇಯಕಗಳು ಬಂದಾಗ ನಾವೇನು ಮಾತನಾಡುವುದಕ್ಕೆ ಆಗುವುದಿಲ್ಲ. ಈಗ ವಿಧೇಯಕವನ್ನು ತಂದುಕೊಟ್ಟರೆ ನಾವು ಹೇಗೆ ಓದುವುದು? ಎಲ್ಲ ವಿಧೇಯಕಗಳು ತುಂಬಾ ದೊಡ್ಡ ವಿಧೇಯಕಗಳಾಗಿವೆ. ಮಾನ್ಯ ಎಚ್.ಆಂಜನೇಯ ರವರು ತಂದಿರುವ ವಿಧೇಯಕ ಮಾತ್ರ ತುಂಬಾ ಸಣ್ಣ ವಿಧೇಯಕ ಇರಬಹುದು. ಸಣ್ಣ ವಿಧೇಯಕ ಇರಲಿ, ದೊಡ್ಡ ವಿಧೇಯಕ ಇರಲಿ, ನೀವು ಮಂತ್ರಿಗಳು ದೊಡ್ಡ ದೊಡ್ಡ ಭಾಷಣಗಳನ್ನು ಮಾಡುತ್ತೀರಿ. ಈ ವಿಧೇಯಕವನ್ನು ಮೊದಲೇ ಕೊಡುವುದಕ್ಕೆ ಆಗುವುದಿಲ್ಲವೇ?

**ಶ್ರೀ ಎಚ್.ಆಂಜನೇಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಿಗೆ ಈಗ ವಿಧೇಯಕವನ್ನು ಒದಗಿಸಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಈಗ ವಿಧೇಯಕವನ್ನು ಕೊಟ್ಟರೆ ಹೇಗೆ? ಈ ವಿಧೇಯಕವನ್ನು ನಾಳೆ ತೆಗೆದುಕೊಳ್ಳಿ.

**ಸಭಾಪತಿಯವರು:–** ಮಾನ್ಯ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರೆ, ನೀವು ತಂದಿರುವಂತಹ ವಿಧೇಯಕವನ್ನು ಸದನ ನಾಳೆಯೂ ಮುಂದುವರೆದರೆ, ಈ ವಿಧೇಯಕವನ್ನು ನಾಳೆ ತೆಗೆದುಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಈ ವಿಧೇಯಕವನ್ನು ನಾವು ಓದಬೇಕು.

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಈ ವಿಧೇಯಕವನ್ನು ಓದಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಈ ವಿಧೇಯಕವನ್ನು ಓದದೇ ನಾವು ಸದನದಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ.

**ಸಭಾಪತಿಯವರು:–** ನಿಮಗೆ ಓದುವುದಕ್ಕೆ ಅವಕಾಶ ಕೊಟ್ಟಿರುವಂತಹ ಇನ್ನೊಂದು ವಿಧೇಯಕವಿದೆ. ನೆನ್ನೆಯ ರಾತ್ರಿ ಕಳುಹಿಸಿರುವಂತಹ ವಿಧೇಯಕದ ಬಗ್ಗೆ ಹೇಳುತ್ತಿದ್ದೇನೆ. ಉನ್ನತ ಶಿಕ್ಷಣ ಸಚಿವರು ಸದನದಲ್ಲಿದ್ದಾರೆಂದು ಭಾವಿಸಿ ನಾನು ಅವರಿಗೆ ಸಂಬಂಧಿಸಿದ ವಿಧೇಯಕವನ್ನು ಚರ್ಚೆಗೆ ತೆಗೆದುಕೊಂಡೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ವಿಧೇಯಕವನ್ನು ಯಾರು ಮಂಡಿಸಿದರೂ ನಡೆಯುತ್ತದೆಯೆ? ಸರ್ಕಾರವೆಂದರೆ ಈ ರೀತಿಯಲ್ಲಿ ಇದೆ. ಶ್ರೀ ಐವನ್ ಡಿ'ಸೋಜಾ ರವರೇ ನೀವೇ ಈ ವಿಧೇಯಕವನ್ನು ಓದಿ.

**ಸಭಾಪತಿಯವರು:–** ಶ್ರೀ ಐವನ್ ಡಿ'ಸೋಜಾ ರವರು ಓದುವ ಹಾಗೆ ಇಲ್ಲ. ಬೇರೆ ಮಂತ್ರಿಗಳ ಹತ್ತಿರ ಓದಿಸಬಹುದು. ಶ್ರೀ ಬಸವರಾಜ ರಾಯರೆಡ್ಡಿಯವರು ಈಗ ಸದನಕ್ಕೆ ಬಂದರು.

**ಇ) ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕ, 2017**

**<u>ಪರ್ಯಾಲೋಚನ ಪ್ರಸ್ತಾವ</u>**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ನಮ್ಮ ದೇಶದಲ್ಲಿಯೇ ಮೊಟ್ಟ ಮೊದಲನೆಯ ಬಾರಿಗೆ ಕರ್ನಾಟಕದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತನ್ನು ಸ್ಥಾಪನೆ ಮಾಡಿರುವುದು ತಮಗೆಲ್ಲ ಗೊತ್ತಿರುವ ವಿಚಾರ. ಈಗ ದೇಶದಲ್ಲಿ ಎಲ್ಲ ಕಡೆ, ಎಲ್ಲ ರಾಜ್ಯದಲ್ಲೂ ಕೂಡ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತನ್ನು ಸ್ಥಾಪನೆ ಮಾಡಲಾಗಿದೆ. ಹೀಗಾಗಿ ಕೆಲವು ನಿಯಮಾವಳಿಯಲ್ಲಿ ಸಣ್ಣ ತಿದ್ದುಪಡಿಯನ್ನು ತರಬೇಕಾಗಿದೆ. ತಮಗೆ ಗೊತ್ತಿರುವಂತೆ ಈ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಉನ್ನತ ಶಿಕ್ಷಣ ಇಲಾಖೆಯ ಸಚಿವರು ಅಧ್ಯಕ್ಷರಾಗಿರುತ್ತಾರೆ. ಆ ಪರಿಷತ್ತಿಗೆ ಶ್ರೀ ಎಸ್.ವಿ. ರಂಗನಾಥ್ ರವರು ಉಪಾಧ್ಯಕ್ಷರಾಗಿರುತ್ತಾರೆ. ಉಪಾಧ್ಯಕ್ಷರಾಗಿ ಅವರು ಇರಬಹುದು ಅಥವಾ ಬೇರೆ ಯಾರಾದರೂ ಇರಬಹುದು. ಈಗ ಪ್ರಸ್ತುತ ಶ್ರೀ ಎಸ್.ವಿ.ರಂಗನಾಥ್ ಅವರು former Chief Secretary ಇದ್ದಾರೆ. ಈಗ ಉಪಾಧ್ಯಕ್ಷರ ಸೇವಾ ಅವಧಿ UGC norms ಪ್ರಕಾರ 70 ವರ್ಷವಿರಬೇಕು. 70 ವರ್ಷ ಏಕೆ ಇರಬೇಕೆಂದರೆ, ನಾವು ಹೆಚ್ಚಾಗಿ former Vice Chancellors ಅವರನ್ನು ಸಹ ಈ ಉನ್ನತ ಶಿಕ್ಷಣ ಇಲಾಖೆಯ ಉಪಾಧ್ಯಕ್ಷರಾಗಿ ನೇಮಕ ಮಾಡುತ್ತೇವೆ. Vice Chancellor retirement age is 67. ಹೀಗಾಗಿ ಅಂಥವರನ್ನು ನೇಮಕ ಮಾಡುವಂತಹ ಸಂದರ್ಭದಲ್ಲಿ 70 ವರ್ಷ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ.

(ಮುಂದು)

878/21-06-2017/12-50/bkp-md

**ಶ್ರೀ ಬಸವರಾಜ ರಾಯರೆಡ್ಡಿ (ಮುಂದು. . )**

ಹೀಗಾಗಿ, ಈಗ ಇರುವಂತಹ 67 ವರ್ಷವನ್ನು 70 ವರ್ಷ ಎಂದು ಮಾಡಬೇಕಾಗಿದೆ. ಅದು ಒಂದು ವಿಷಯ. ಎರಡನೆಯದಾಗಿ, ಅಧ್ಯಕ್ಷರು ಮಂತ್ರಿಗಳಾಗಿರುವುದರಿಂದ ಕೆಲವು ಕಾರ್ಯಭಾರದ ಒತ್ತಡದ ಮೇರೆಗೆ ಈ ಉನ್ನತ ಶಿಕ್ಷಣ ಪರಿಷತ್ತಿನ ಸಭೆಯ ಅಧ್ಯಕ್ಷತೆಯನ್ನು ವಹಿಸಲಿಕ್ಕೆ ಆಗುವುದಿಲ್ಲ. ಆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂದರ್ಭದಲ್ಲಿ ನಮ್ಮ ಅನುಮತಿಯೊಂದಿಗೆ ಉಪಾಧ್ಯಕ್ಷರು ಅಧ್ಯಕ್ಷತೆಯನ್ನು ವಹಿಸಲಿಕ್ಕೆ ಆಕ್ಟ್‌ನಲ್ಲಿ ಅವಕಾಶವನ್ನು ಮಾಡಿಕೊಡಬೇಕಾಗಿದೆ. ಮತ್ತೆ, ಅಲ್ಲಿ ಒಬ್ಬರು Executive Director of the Karnataka Higher Education Council ಇರುತ್ತಾರೆ. ಅವರ ಸೇವಾ ಅವಧಿಯನ್ನು 65 ವರ್ಷಕ್ಕೆ ಮಾಡುತ್ತಿದ್ದೇವೆ. 5 ವರ್ಷ ಸೇವೆ ಅಥವಾ 65 ವರ್ಷ. ಇವೆರಡರಲ್ಲಿ ಯಾವುದು ಮೊದಲೋ ಅದನ್ನು ಅನ್ವಯ ಮಾಡಲಿಕ್ಕೆ ಇದು ಒಂದು ಸಣ್ಣ ತಿದ್ದುಪಡಿ ಇದೆ. ದಯಮಾಡಿ, ಮಾನ್ಯ ಎಲ್ಲಾ ಸದಸ್ಯರುಗಳು ಇದಕ್ಕೆ ಅನುಮೋದನೆಯನ್ನು ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಇದನ್ನು ಸ್ವಾಗತ ಮಾಡುತ್ತಿದ್ದೇನೆ. ಆದರೆ, ಪ್ರತಿಯೊಂದು ಸಮಯದಲ್ಲಿಯೂ ಸಹ ವಿಶ್ವವಿದ್ಯಾನಿಲಯದ ಉಪ ಕುಲಪತಿಗಳ ನೇಮಕಾತಿ ಇರಬಹುದು, ಅಥವಾ ಇಲ್ಲಿ ಉಪಾಧ್ಯಕ್ಷರನ್ನು ಆಯ್ಕೆ ಮಾಡುವಂತಹ ವಿಚಾರ ಇರಬಹುದು. ತಾವು ವಯಸ್ಸಿನ ಮಿತಿಯನ್ನು ಹೆಚ್ಚು ಮಾಡಿಕೊಳ್ಳುತ್ತಾ ಇದೇ ರೀತಿಯಲ್ಲಿ ಮುಂದೆ ಹೋದರೆ ಅದು ಯಾವುದೇ ಸಕಾರ ಇರಬಹುದು. Where the younger generation people will go ಎನ್ನತಕ್ಕಂತಹ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. Those who are eligible, those who can take the charge as Vice Chancellor, other Faculty etc ಅಂತಹವರಿಗೆ ಅವಕಾಶ ತಪ್ಪಿ ಹೋಗುತ್ತಿದೆಯಲ್ಲಾ ಎನ್ನುವಂತಹ ಭಾವನೆ ನಮ್ಮನ್ನು ಕಾಡುತ್ತಿದೆ. ದಯಮಾಡಿ, ಇದರ ಬಗ್ಗೆ ಮಾನ್ಯ ಸಚಿವರು clarify ಮಾಡಬೇಕು. 62 ವರ್ಷ ಇದ್ದಂತಹ ವಯೋಮಿತಿ ಕ್ರಮೇಣ 65 ವರ್ಷ, 67 ವರ್ಷ ಎಂದು ಮಾರ್ಪಾಟಾಗಿ ಇವತ್ತು 70 ವರ್ಷಕ್ಕೆ ಹೆಚ್ಚಿಸಲಾಗುತ್ತಿದೆ. There are so many young people who are deserving and eligible candidates who can take over the charge for such post. ದಯವಿಟ್ಟು ತಾವು ಇದರ ಬಗ್ಗೆ ಗಮನಹರಿಸಬೇಕು. ಇವತ್ತು ಇಡೀ ವಿಶ್ವ ಭಾರತದ ಕಡೆ ನೋಡುವಂತಹ ಸಂದರ್ಭದಲ್ಲಿ ಭಾರತದಲ್ಲಿ ವಿದ್ಯಾರ್ಹತೆಯನ್ನು ಹೊಂದಿದಂತಹ ಹಲವಾರು ಯುವಕರು ಇಂತಹ ಕೆಲಸ ಮಾಡಲಿಕ್ಕೆ ತಯಾರು ಇದ್ದಂತಹ ಸಮಯದಲ್ಲಿ ಅಂತಹವರಿಗೆ ಅವಕಾಶ ಕೊಡಬೇಕೆನ್ನುವುದು ನಮ್ಮೆಲ್ಲರ ವಿಚಾರವೆಂದು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

**ಶ್ರೀ ಬಸವರಾಜ ಎಸ್.ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಾನು ಸಹ ಇದೇ ವಿಚಾರವನ್ನು ಹೇಳಬೇಕೆಂದು ಇದ್ದೆ. ಈಗ ನೀವು ವೈಸ್‌ಚಾನ್ಸಲರ್ ರವರನ್ನು ನೇಮಕ ಮಾಡುತ್ತೀರಿ. 67 ವರ್ಷ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಯಸ್ಸಿಗೆ ಅವರನ್ನು ನೀವು ನಿವೃತ್ತಿ ಮಾಡುತ್ತೀರಿ. ಅವರು ಮತ್ತೆ ಏತಕ್ಕೆ ಬರಬೇಕು. ಅವರುಗಳು ಏನು ಮಾಡುತ್ತಾರೆ? ಒಂದು ಯುನಿರ್ಸಿಟಿ ಆದ ಮೇಲೆ ಮತ್ತೊಂದು ಯಾವುದೋ ಅಕಾಡೆಮಿಗೆ ಹೋಗುತ್ತಾರೆ. ಅವರವರೇ ಮಾಡಿಕೊಳ್ಳುತ್ತಾರೆ. ಈ ರಾಜ್ಯದಲ್ಲಿ ಬೇರೆ ಯಾರು ಸಹ ಇಲ್ಲವೇ? ಶ್ರೀಯುತ ಕವಟಗಿಮಠ ರವರು ಹೇಳಿದಂತೆ ನಾವು ಏನು ಹೇಳುತ್ತೇವೆಂದರೆ, ಈ ರೀತಿ ಮಾಡಲೇಬಾರದು. ಮಾಜಿ Vice Chancellor ಗಳನ್ನು ಇಲ್ಲಿ ತೆಗೆದುಕೊಳ್ಳಲೇ ಬಾರದು. As a Higher Education Minister you tell me honestly, ಎಷ್ಟು ಯುನಿರ್ವಸಿಟಿಗಳಲ್ಲಿ ಎಷ್ಟೋ Vice Chancellor ಗಳು ಅಕಾಡಮಿಕ್ ವಿಚಾರಗಳನ್ನು ನೋಡುತ್ತಾರೆ. ಕೇವಲ ಬಿಲ್ಡಿಂಗ್ ಕಟ್ಟಿಸುವುದು, ಇದನ್ನು ಮಾಡುವುದು ಅದನ್ನು ಮಾಡುವುದು ಮಾಡುತ್ತಾರೆ. ಅಂತಹವರನ್ನು ನೀವು ಮತ್ತೆ ಕಟ್ಟಲಿಕ್ಕೆ ಹೋಗುತ್ತೀರಿ. ಆದ್ದರಿಂದ, ನಾನು ಏನು ಹೇಳುತ್ತೇನೆಂದರೆ Ex Vice Chancellor ಗಳನ್ನು ತರಬಾರದು. ಏತಕ್ಕೆ ಇದನ್ನು ನೋಡಿಕೊಳ್ಳಲು ಬೇರೆ ಯಾರು ಇಲ್ಲವೇ? ಬೇಕಾದಷ್ಟು youngsters ಇದ್ದಾರೆ. ಅವರುಗಳು ಇಂತಹದ್ದರಲ್ಲಿ ಕೆಲಸ ಮಾಡುತ್ತಾರೆ. 70 ವರ್ಷ ವಯಸ್ಸಿನವರನ್ನು ಇಲ್ಲಿಗೆ ತಂದು ಏನು ಮಾಡುತ್ತೀರಿ. ಹೇಳಿ ನೋಡೋಣ. ಅವರನ್ನು ಕೈ ಹಿಡಿದುಕೊಂಡು ಬರಬೇಕು. ಲಿಫ್ಟ್ ವ್ಯವಸ್ಥೆ ಸರಿಯಿಲ್ಲದಿದ್ದರೆ, ಅವರುಗಳನ್ನು ಕೈ ಹಿಡಿದುಕೊಂಡೇ ಬರಬೇಕು. ಇದೇ ರೀತಿಯಲ್ಲಿ 75 ವರ್ಷ ವಯಸ್ಸಿನವರನ್ನೇ ಸಚಿವರನ್ನಾಗಿ ಮಾಡಬೇಕು, ನಿಮಗೆ ವಯಸ್ಸು ಕಡಿಮೆ ಇದೆ, 75 ವರ್ಷ ನಿಮಗೆ ಇದೆ. ನೀವೇ ಇಲ್ಲಿ ಮಾಡಿ. ಕಾನೂನು ಸಚಿವರಿದ್ದಾರೆ, ಇದು ತಪ್ಪು ಇದೆ.

ಆದ್ದರಿಂದ, ನಾನು ಹೇಳುವುದೇನೆಂದರೆ, Vice Chancellor ತರುವಂತಹ ಮಾತಿಗೆ ನಾನು ಈ ವಿಚಾರವನ್ನು ಹೇಳಿದೆ ಅಷ್ಟೆ. ಇಲ್ಲಿ ಒಬರಿಗೆ 65 ವರ್ಷ ಆಗಿರುವವರನ್ನು Executive Director ರನ್ನಾಗಿ ಮಾಡಲಾಗಿದೆ. ಅಲ್ಲಿ 70 ವರ್ಷಗಳು. ಇಲ್ಲಿ ಏನಾಗಿದೆ ಎಂದರೆ, ಯಾವುದೋ ಒಬ್ಬ ಅಧಿಕಾರಿಯನ್ನು ಹಿಡಿದುಕೊಂಡು ಬಂದು ಅವನ ವಯಸ್ಸನ್ನು ಹೆಚ್ಚು ಮಾಡಬೇಕಾದರೆ ಬದಲಾವಣೆ ಮಾಡಿಕೊಂಡು ಹೋಗುತ್ತಾರೆ. ಹಿಂದೆ, ಬೆಳಗಾಂಗೆ ಈ ರೀತಿಯಲ್ಲಿಯೇ ಮಾಡಿದ್ದೀರಿ. ಬೆಳಗಾವಿ ಜಿಲ್ಲೆಯಲ್ಲಿ ಮಾಡುವಾಗ ಇವರ ಸರ್ಕಾರವಿತ್ತು. ಆಗ ಇವರು ಆ Vice Chancellor ಅನ್ನು ನೋಡಬೇಕಾಗಿತ್ತು. ಹಾಗಾಗಿ, 67 ವರ್ಷ ವಯಸ್ಸಿನ ಮಿತಿ ಮಾಡಿದರು. ಇದಕ್ಕೆ ಏನು ಸರ್ಕಾರ ಎಂದು ಹೇಳುತ್ತಾರೆಯೇ? ಇದಕ್ಕೆ ಒಂದು ನೀತಿ ಬೇಕಲ್ಲವೇ? Ex Vice Chancellor ಅನ್ನು ನೀವು ಏತಕ್ಕೆ ತರುತ್ತೀರಿ? ಈ ರಾಜ್ಯದಲ್ಲಿ ಮತ್ತೆ ಯಾರು ಇಲ್ಲವೇ? ಆದ್ದರಿಂದ, ಈ ವಿಚಾರವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾನು ನನ್ನ ಸ್ಪಷ್ಟ ಅಭಿಪ್ರಾಯವನ್ನು ಇಲ್ಲಿ ಮಂಡಿಸುತ್ತೇನೆ. ಇಲ್ಲಿ Ex Vice Chancellor ರವರನ್ನು ತರಬಾರದು. Ex Vice Chancellor ವಿಷಯ ಸಾಕಾಗಿ ಹೋಗಿದೆ. ಪ್ರತಿ ದಿವಸವೂ ಇವರೇ ಹೇಳುತ್ತಾರೆ. ವಿಶ್ವವಿದ್ಯಾಲಯಗಳಲ್ಲಿ ಇರುವಷ್ಟು ಭ್ರಷ್ಟಾಚಾರ ಎಲ್ಲಿಯೂ ಇಲ್ಲವೆಂದು ಹೇಳುತ್ತಾರೆ. ಎಲ್ಲಾ ಕುಲಪತಿಗಳು ಅದನ್ನು ಮಾಡುತ್ತಾರೆಂದು ಇವರು ಹೇಳುತ್ತಾರೆ. ಮತ್ತೆ, ಅವರನ್ನೇ ಇಲ್ಲಿ ತರಲಿಕ್ಕೆ ಹೊರಟಿದ್ದಾರೆ. ಅದರ ಬಗ್ಗೆ ವಿವರವನ್ನು ಕೊಡುತ್ತೇನೆ. 2 ಕೋಟಿ ರೂಪಾಯಿಗಳು ಇದ್ದುದು, 18 ಕೋಟಿ ರೂಪಾಯಿಗಳಾಗಿದೆ. ನಿಮ್ಮ ಕಚೇರಿಯಲ್ಲಿಯೇ ನಾನು ನೋಡಿದ್ದೇನೆ. 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಅಲ್ಲಿ 220 ಕೋಟಿ ರೂಪಾಯಿಗಳಾಗಿದೆ. ಬರಿ ದುಡ್ಡು ತಿನ್ನುವವರೇ ಆಗಿದ್ದಾರೆ. ಇವತ್ತಿನ Vice Chancellor ಗಳನ್ನು ನೋಡಿದ್ದೇನೆ, ಹಿಂದಿನ ವೈಸ್ ಚಾನ್ಸಲರ್‌ಗಳಾದ ಶ್ರೀಯುತ ನಂಜುಂಡಪ್ಪನವರನ್ನು ನೋಡಿದ್ದೇನೆ, ಶ್ರೀಯುತ ಪಾವಟೇ ರವರನ್ನು ನೋಡಿದ್ದೇವೆ. ಆಗ ಬಹಳ ಒಳ್ಳೆಯ Vice Chancellors ಇದ್ದರು. ಈಗಿನ Vice Chancellors ಬಗ್ಗೆ ಹೇಳಬೇಕೆಂದರೆ, ಯಾರು ಇವರಿಗೆ ಇಡುತ್ತಾರೆ. . . ಅದು ಯಾವುದೇ ಸರ್ಕಾರ ಇರಬಹುದು, ನಿಮ್ಮ ಸರ್ಕಾರ ಒಂದೇ ಅಲ್ಲ. ಬರಿ ಶಿಫಾರಸ್ಸಿನ ಮೇಲೆ ಬರುತ್ತಾರೆ. ಅವರು ದುಡ್ಡು ಕೊಟ್ಟು ಬರುತ್ತಾರೆ. ಸರ್, ನಾನು open ಆಗಿ ಹೇಳಿಬಿಡುತ್ತೇನೆ. ಎಷ್ಟೆಷ್ಟು ವಯಸ್ಸಿನವರು ಎಷ್ಟೆಷ್ಟು ದುಡ್ಡನ್ನು ಕೊಟ್ಟು ಬಂದಿದ್ದಾರೆಂದು ಮಂತ್ರಿಗಳಿಗೆ ಗೊತ್ತಿದೆ. ದುಡ್ಡು ಕೊಟ್ಟು ಬಂದ Vice Chancellors ಕುಳಿತುಕೊಂಡು ಸರಿಯಾಗಿ ಕೆಲಸ ಮಾಡುತ್ತಾರೆಯೇ? ಅಕಾಡೆಮಿಕ್ ನೋಡುತ್ತಾರೆಯೇ?

**ಶ್ರೀ ಬಸವರಾಜ ರಾಯರೆಡ್ಡಿ:-** ನನಗೆ ದುಡ್ಡು ಕೊಟ್ಟಿಲ್ಲ ರೀ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ನಿಮಗೆ ಕೊಟ್ಟಿರಲಿಕ್ಕಿಲ್ಲ. ಈ ರೀತಿ ನಡೆಯುತ್ತಿರುವುದು ಜಗತ್ತಿಗೇ ಗೊತ್ತಿದೆ. ಎಲ್ಲಾ ಕಡೆ ಆಗುತ್ತಿವೆ. ಬಸವರಾಜ ರಾಯರೆಡ್ಡಿಗೆ ಹಣವನ್ನು ಕೊಟ್ಟಿಲ್ಲ ಬಿಡಿ.

**ಸಭಾಪತಿಯವರು:-** ಅವರು ಇನ್ನು ಮೊನ್ನೆ ಮೊನ್ನೆ ಬಂದಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಸರ್, ಅವರ ಬಗ್ಗೆ ನನಗೆ ಬಹಳ ವಿಶ್ವಾಸ ಇದೆ. ಅದಕ್ಕೆ ಯಾರೇ ಬಂದು ಹೇಳಿದರೂ ಕೇಳಬೇಡಿ. ಸಚಿವರಾದಂತಹವರು ಇದರ ಬಗ್ಗೆ ಅಧ್ಯಯನ ಮಾಡಿ ತೀರ್ಮಾನ ಮಾಡಬೇಕು ಬೇಕಾದರೆ ನಮ್ಮಂತಹವರನ್ನು ಕೇಳಬೇಕು. ಇವರು ನಮ್ಮನ್ನು ಏನೂ ಕೇಳುವುದಿಲ್ಲ. ಇವರು ಯಾರ್‍ಯಾರನ್ನೋ ಕೇಳಿಕೊಳ್ಳುತ್ತಾರೆ. ಇವರ ಜೊತೆ ಯಾರು ಇರುತ್ತಾರೆ, ಅವರನ್ನು ಕೇಳಿಕೊಂಡು ಅವರು ಏನು ಹೇಳುತ್ತಾರೋ ಅದನ್ನು ಇವರು ಬರೆದುಕೊಂಡು ಬರುತ್ತಾರೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ನೀವು ಅನುಭವ ಇದ್ದವರನ್ನು ಕೇಳಿ. Ex Vice Chancellor ಬರಬಾರದು ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಅಲ್ಲದೆ, ಈಗಿರುವ 65 ವರ್ಷ ವಯೋಮಿತಿಯನ್ನು 70 ವರ್ಷಕ್ಕೆ ಹೆಚ್ಚು ಮಾಡುವುದು ಬೇಡ. ಈ ರೀತಿ ಮಾಡುವುದರಿಂದ ಏನಾಗುತ್ತದೆ ಎಂದರೆ, ಅಲ್ಲಿ ಏನೂ ಕೆಲಸವಾಗುವುದಿಲ್ಲ. Higher Education Council ಇದೆ. ತಾವು ಸಚಿವರು ಆಗಿ ಪ್ರಮಾಣಿಕವಾಗಿ ಈ ಸದನದಲ್ಲಿ ಹೇಳಿ. ಏನಾದರೂ ಪ್ರಗತಿಯನ್ನು ತೋರಿಸಿದ್ದಾರೆಯೇ? ಏನಾದರೂ ಈ ರಾಜ್ಯದ ಕಾಲೇಜುಗಳಿಗೆ ಕೊಟ್ಟಿದ್ದಾರೆಯೇ? ನೀವು ಮತ್ತು ನಾವು ಇಲ್ಲಿ ಪ್ರಮಾಣಿಕವಾಗಿ ಮಾತನಾಡೋಣ. ನಮಗೆ ಯಾರ ಬಗ್ಗೆಯೂ ಹೇಳುವುದೇನೂ ಇಲ್ಲ. Higher Education Council ಕೆಲವರನ್ನು accommodate ಮಾಡುವುದಾಗಿದೆ. ದೇಶದಲ್ಲಿಯೇ ಇದು ಮೊದಲನೆಯದು ಎಂದು ಹೇಳುತ್ತಾರೆ. ಅದನ್ನು ಒಪ್ಪುತ್ತೇನೆ. ನೀವು ನಿಯಮಗಳನ್ನು ನೋಡಿ. Rules, theme ಬಹಳ ಇತ್ತು. But unfortunately, Higher Education ಎಂದರೆ, ಯಾರಿಗೂ ಸಹ ಅದರ ಕಲ್ಪನೆಯೇ ಇಲ್ಲ.

**ಶ್ರೀ ಕವಟಗಿಮಠ ಮಹಂತೇಶ್ ಮಲ್ಲಿಕಾರ್ಜುನ:-** ದಯವಿಟ್ಟು how it is functioning ಎನ್ನುವುದನ್ನು ವಿವರಿಸಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಸಭೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೀರಿ. ನಿಮಗೆ ಸಮಯ ಇರುವುದಿಲ್ಲ. ಯಾವುದೋ ಮಂತ್ರಿ ಇದಕ್ಕೆ ಚೇರ್ಮನ್ ಇರುತ್ತಾರೆ, ಅದನ್ನು ನಾನು ಒಪ್ಪುತ್ತೇನೆ. ನೀವು ಅಧ್ಯಕ್ಷರು ಇದ್ದಾಗ ನಿಮಗೆ ಎಷ್ಟು ಬಾರಿ ಅಜೆಂಡಾ ಕೊಡುತ್ತಾರೆನ್ನುವ ಬಗ್ಗೆ ಹೇಳಿ. ಇಷ್ಟು ವರ್ಷಗಳಾಗಿದೆ, ಅದರ ಪ್ರಗತಿಯ ಬಗ್ಗೆ ಈ ಸದನದಲ್ಲಿ ಹೇಳಿ. ಹೇಳಿ. ನಮಗೆ ತಿಳಿದಂತೆ ಅಲ್ಲಿ ಪ್ರಗತಿ ಏನಿಲ್ಲ. ಒಬ್ಬರಿಗೊಬ್ಬರು ಕಾಲು ಏಳೆಯುವುದು, ಬರಿ ಭ್ರಷ್ಟಾಚಾರ ಮಾಡುವುದು ಇಂತಹ ಕೆಲಸಗಳನ್ನೇ ಅಲ್ಲಿ ಮಾಡುವುದಾಗಿದೆ. ಇಂತಹ ಕೆಲಸ ಮಾಡಲಿಕ್ಕೆ ನೀವು 70 ವರ್ಷದವರನ್ನು ತೆಗೆದುಕೊಂಡು ಬರುತ್ತೀರಿ. ಹೇಗೆ ಕೆಲಸವಾಗುತ್ತದೆ? ಎಲ್ಲಾ University ಗಳು ಸತ್ಯ ನಾಶವಾಗಿವೆ. ಒಂದಾನೊಂದು ಕಾಲದಲ್ಲಿ ನಮ್ಮ University ಗಳೆಲ್ಲವೂ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದವು. ನಮ್ಮ ರಾಜ್ಯದ University ಗಳನ್ನು Model University ಎನ್ನುತ್ತಿದ್ದರು. ಈಗ ಆ ರೀತಿ ಇಲ್ಲ. ನಾನು ಈ ಬಗ್ಗೆ open ಆಗಿ ಹೇಳುತ್ತೇನೆ. University ಗಳೆಂದರೆ ಅಲ್ಲಿ ಏನೂ ನಡೆಯುವುದಿಲ್ಲ.

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮುಂದೆ ವಿಧೇಯಕ ಬರುತ್ತದೆ, ಆ ಸಂದಭದಲ್ಲಿ ಅದರ ಬಗ್ಗೆ ಹೇಳುತ್ತೇನೆ. University ಗೆ Syndicate Members ಮಾಡುತ್ತಾರೋ, ಆ Vice Chancellor ಆ ಕಡೆ ಮುಖ ಮಾಡುತ್ತಾರೆ, ಈ ಕಡೆ ಮುಖ ಮಾಡುತ್ತಾರೆ. ಅವರಿಗೇನು ಗೊತ್ತಿದೆ? ಅವರು ನಿವೃತ್ತಿ ಹೊಂದಿರುವವರೆ.. . . ಚುನಾವಣೆ ತೆಗೆದರು, ಎಲ್ಲವನ್ನು ಮಾಡಿದರು. ನಿಮ್ಮ ಸರ್ಕಾರ ಯಾವ್ಯಾವಾಗ ಬಂದಿದೆ. . . University ಗಳನ್ನು ಸಂಪೂರ್ಣ ರದ್ದು ಮಾಡಿರುವ ಬಗ್ಗೆ ಮುಂದಿನ ವಿಧೇಯಕ ಬಂದಾಗ ಹೇಳುತ್ತೇನೆ. ಆದ್ದರಿಂದ, ಈ ವಿಧೇಯಕದ ಬಗ್ಗೆ ನಮ್ಮ ವಿರೋಧ ಇದೆ. ವಯಸ್ಸನ್ನು 67 ಮಾಡಬಾರದು, 70 ಮಾಡಬಾರದು. 65 ವರ್ಷ ಇರಬೇಕು. ಎಲ್ಲದಕ್ಕೂ ಒಂದೇ ರೀತಿಯಲ್ಲಿ ಇರಬೇಕೆನ್ನುವ ಸ್ಪಷ್ಟವಾದ ಅಭಿಪ್ರಾಯವನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಇದಕ್ಕೆ ಮಂತ್ರಿಗಳು ಒಪ್ಪಿದರೆ ಒಳ್ಳೆಯದು. ಇಲ್ಲವೆಂದರೆ ನಾವು ಕಾನೂನು ಪ್ರಕಾರ ಮಾಡುತ್ತೇವೆ.

**ಶ್ರೀ ಭಾನುಪ್ರಕಾಶ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಖಂಡ 5 ರ 11ನೇ ಪ್ರಕರಣದಲ್ಲಿ 'ಕಾರ್ಯನಿರ್ವಾಹಕ ನಿರ್ದೇಶಕನಿಗೆ' ಎಂದು ಇರುವಂತದ್ದರಲ್ಲಿ ಯಾರು ಅಲ್ಲಿ ಬರಬೇಕೆಂದು ಹೇಳಿ, ಏನೋ ಒಂದು hidden agenda ಇಟ್ಟುಕೊಂಡು ಇಂತಿಂಥವರು ಬರಬೇಕೆಂದು ಇದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಕೊಡುವಷ್ಟು ಸಂಬಳವನ್ನು ಅವರಿಗೆ ಕೊಡುತ್ತಾರೆ. ಆತ ನಿವೃತ್ತ ಅಧಿಕಾರಿಯಾಗಿದ್ದಲ್ಲಿ ಅದಕ್ಕೆ ಒಂದು clause ಇದೆ. ಆತನ ನಿವೃತ್ತಿ ವೇತನ ಎಷ್ಟು ಬರುತ್ತಿದೆ, ಅದನ್ನು ಬಿಟ್ಟು ಉಳಿದುದನ್ನು ಭರ್ತಿ ಮಾಡಬೇಕು. ಸೇವಾನಿರತ ಅಧಿಕಾರಿಯನ್ನು ನೇಮಕ ಮಾಡಿಕೊಂಡರೆ ಅದೇ ಸಂಬಳವನ್ನು ಕೊಡಬೇಕೆಂದು ಮಾಡಿಕೊಳ್ಳಲಾಗಿದೆ.

ಮಾನ್ಯ ಸಭಾಪತಿಯವರೆ, ನಾನು ಕೇಳುವುದೇನೆಂದರೆ ಮತ ಚಲಾಯಿಸುವ ಅಧಿಕಾರವನ್ನು 21 ವರ್ಷಗಳಿಂದ 18 ವರ್ಷಗಳಿಗೆ ಈ ದೇಶದಲ್ಲಿ ಇಳಿಸಲಾಗಿದೆ. ಈ ದೇಶದ ಭವಿಷ್ಯವನ್ನು ನಿರ್ಧಾರ ಮಾಡುವಂತಹ voter ವಯಸ್ಸನ್ನು ಇಳಿಸಿ, ಈ ದೇಶದ ಭವಿಷ್ಯ ನಿರ್ಮಾಣ ಮಾಡಬೇಕೆಂದು ಒಂದು ಕಡೆ ಪ್ರಯತ್ನ ನಡೆದರೆ, ಇನ್ನೊಂದು ಕಡೆ ಈ ವಿಶ್ವವಿದ್ಯಾನಿಲಯವನ್ನು ನಡೆಸುವವರ ವಯಸ್ಸನ್ನು ಜಾಸ್ತಿ ಮಾಡುತ್ತಾ ಹೋದರೆ ಹೇಗೆ ಆಗುತ್ತದೆ? ಕೆಲವು ರಾಜಕೀಯ ಪಕ್ಷಗಳು ಇಷ್ಟು ವರ್ಷಗಳಿಗೆ ನಿವೃತ್ತಿಯಾಗಬೇಕೆಂದು ಹೇಳುವಂತಹ ಪ್ರಯತ್ನಗಳನ್ನು ಮಾಡುತ್ತಿವೆ. ಅದು ಎಷ್ಟು ಸಾಧು ಆಗುತ್ತದೋ ಇಲ್ಲವೋ, ಅದು ಬೇರೆ ವಿಚಾರ. ಆದರೆ, ಹಿರಿಯರ ಬಗ್ಗೆ ನಮಗೂ ಸಂಪೂರ್ಣ ಗೌರವ ಇದೆ. ಏಕೆ ನಿವೃತ್ತಿ ಮಾಡುತ್ತಾರೆ? ಎಷ್ಟೋ ವರ್ಷ ಸೇವೆ ಮಾಡಿದ ಮೇಲೆ ನಿವೃತ್ತಿ ಏತಕ್ಕೆ ಆಗಬೇಕೆಂದರೆ, ಮನೆಯಲ್ಲಿ, ಕುಟುಂಬದಲ್ಲಿ, ವ್ಯಾಪಾರದಲ್ಲಿ, ವ್ಯವಹಾರದಲ್ಲಿ, ಕಾರ್ಖಾನೆಯಲ್ಲಿ ಎಲ್ಲದರಲ್ಲೂ ನಿವೃತ್ತಿಯಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆ ಒಂದು ಅವಕಾಶವನ್ನು ಹೊಸ ಪೀಳಿಗೆಗೆ ಕೊಡಬೇಕೆನ್ನುವುದಾಗಿದೆ. ನಿವೃತ್ತಿ ಜೀವನವನ್ನು ಚೆನ್ನಾಗಿ ಮಾಡಲೆಂದು ಈ ಒಂದು ಅವಕಾಶವಿದೆ.

**ಶ್ರೀ ಹೆಚ್.ಆಂಜನೇಯ(ಸಮಾಜ ಕಲ್ಯಾಣ ಸಚಿವರು):-** ಮನೆಯಲ್ಲಿ ನಿವೃತ್ತಿಯಾಗುವುದಿಲ್ಲ.

**ಶ್ರೀ ಭಾನುಪ್ರಕಾಶ್:-** ಮನೆಯಲ್ಲಿ ನಿವೃತ್ತಿಯಾಗಲಿಕ್ಕೆ ಆಗುವುದಿಲ್ಲವೆಂದರೆ ದೊಡ್ಡ ಮಗ ಬಂದರೆ ನಿವೃತ್ತಿಗೊಳಿಸಿ ಒಗೆಯುತ್ತಾನೆ. ನಿಮಗೆ ಗೊತ್ತಿಲ್ಲ ಅಷ್ಟೆ. ಮನೆ ಕಡೆ ಹೋಗಿ ನೋಡಿ! ಇವತ್ತು ಬೆಳಿಗ್ಗೆ ಒಬ್ಬರು ನನಗೆ ಸಿಕ್ಕಿದ್ದರು. ಏನು ನೀವು ಮನೆ ಕಡೆ ಏನು ನೋಡುತ್ತೀರಾ ಎಂದವರಿಗೆ ನಾನು ಕೇಳಿದ್ದಕ್ಕೆ, ಇಲ್ಲ, ಇಲ್ಲ, ನಾನು ರಾಜಕೀಯಕ್ಕೆ ಬಂದ ಮೇಲೆ ಎಲ್ಲವನ್ನು ಅವರೇ ನೋಡಿಕೊಳ್ಳುತ್ತಾರೆ. ನಾನು ಹೋದಾಗ ಏನಾದರೂ ಹೇಳಿದರೆ ಸ್ವಲಮಟ್ಟಿಗೆ ತೆಗೆದುಕೊಳ್ಳುತ್ತಾರೆಂದು ಹೇಳಿದ್ದರು. ನಾನು ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ.

ಮಾನ್ಯ ಸಭಾಪತಿಯವರೆ, ನನ್ನ ವಿಷಯ ಏನೆಂದರೆ, ಈ ದೇಶದ ಭವಿಷ್ಯ, ಇಡೀ ಪ್ರಪಂಚದಲ್ಲಿ ನಮ್ಮ ದೇಶದ ಯುವಕರ ಸಂಖ್ಯೆ ಎಷ್ಟು ದೊಡ್ಡದಾಗುತ್ತದೆ ಎನ್ನುವುದನ್ನು ಎಲ್ಲರೂ ಗುರುತಿಸುತ್ತಿದ್ದಾರೆ. ಇಡೀ ಪ್ರಪಂಚದಲ್ಲಿ ನಮ್ಮದೇ ಯುವ ದೇಶವೆಂದು ಹೇಳುತ್ತಾರೆ. ಈ ಕಾರ್ಯನಿರ್ವಾಹಕ ಅಧಿಕಾರಿಯನ್ನು. . . Vice Chancellor ಮತ್ತೊಂದಕ್ಕೆ 60 ವರ್ಷ, 65 ವರ್ಷ ಇರಬೇಕು. ನಾನು ಅದರ ಬಗ್ಗೆ dispute ಮಾಡುವುದಿಲ್ಲ. ಆದರೆ, Executive Director ಬಗ್ಗೆ ಹೇಳುವುದಾದರೆ, ಎಲ್ಲಾ ಕಂಪನಿಗಳಲ್ಲಿ 30-35 ವರ್ಷ ವಯಸ್ಸಿನವರನ್ನು ಮಾಡುತ್ತಾರೆ. ಏಕೆಂದರೆ, ಕೆಲಸ ಮಾಡಲಿಕ್ಕೆ ಅವನಿಗೆ ತಾಕತ್ತು ಇದೆ ಎಂದು ಆ ರೀತಿಯಲ್ಲಿ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಈ ವಯಸ್ಸನ್ನು 70 ವರ್ಷ ಮಾಡಿ, 100 ವರ್ಷ ಮಾಡಿ. ನಿಮಗೆ ಯಾರೋ ಬೇಕೆಂದು ಹೇಳಿ, ಅವರನ್ನು ಕಣ್ಣು ಮುಂದೆ ಇಟ್ಟುಕೊಂಡು ಈ ರೀತಿಯ ವಯಸ್ಸನ್ನು ಮಾಡುವುದು ಯಾವ ರೀತಿ ನ್ಯಾಯ?

ಮಾನ್ಯ ಸಭಾಪತಿಯವರೆ, ಇದಕ್ಕೆ ನಮ್ಮ ವಿರೋಧವಿದೆ. ಏಕೆಂದರೆ, ಇವತ್ತು ಯುವ ದೇಶ. 18 ವರ್ಷದ voter ಗೆ ಈ ದೇಶದ ಭವಿಷ್ಯವನ್ನು ನಿರ್ಧಾರ ಮಾಡುವಂತಹ ಅಧಿಕಾರವನ್ನು ಕೊಡುತ್ತಿದ್ದೇವೆ ಎಂದ ಮೇಲೆ ಯುನಿವರ್ಸಿಟಿಗಳ ಭವಿಷ್ಯವನ್ನು ನಿರ್ಧಾರ ಮಾಡುವುದಕ್ಕೆ ವಯಸ್ಸನ್ನು 60 ವರ್ಷಗಳು, 65 ವರ್ಷಗಳು, 68 ವರ್ಷಗಳು ಎಂದು ಮಾಡುವ ಅವಶ್ಯಕತೆ ಇರುವುದಿಲ್ಲ. ಸರಿಯಾದಂತಹವರನ್ನು ಯಾವ ರೀತಿಯಲ್ಲಿ Executive Director ನ್ನು ಮಾಡಲಿಕ್ಕೆ ಅವಕಾಶ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇದೆಯೋ ಅ ವಯೋ ಮಿತಿಯಲ್ಲಿ ತರಬೇಕೆನ್ನುವಂತಹ ಆಗ್ರಹವನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತೇನೆ.

**ಮುಂದು. . .**

(879) 21.06.2017 SPR-AK 1.00 62

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಪ್ರಸ್ತುತ ವಿಧೇಯಕದ ತಿದ್ದುಪಡಿಯನ್ನು ಯಾರನ್ನೋ ಮನಸ್ಸಿನಲ್ಲಿಟ್ಟುಕೊಂಡು ತಂದಿದ್ದಾರೆ. ಹೌದು....

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ನಮ್ಮ ಸರ್ಕಾರ ಇನ್ನೇನು ಕೆಲವೇ ತಿಂಗಳುಗಳ ಕಾಲ ಅಧಿಕಾರದಲ್ಲಿರುತ್ತದೆ... ಯಾರು ನಿವೃತ್ತರಾಗುತ್ತಾರೋ .....

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, with due respect to the Hon. Minister, ಮಾನ್ಯ ಸಚಿವರ ಮೇಲೆ ನಮಗೆ ಪೂರ್ಣವಾದ ಗೌರವವಿದೆ. ಆದರೆ ಸರ್ಕಾರ ಯಾರನ್ನೋ ಮನಸ್ಸಿನಲ್ಲಿಟ್ಟುಕೊಂಡು ಅವರ ವಯಸ್ಸಿನ ಮಿತಿಯನ್ನು ನೋಡಿಕೊಂಡು ತಿದ್ದುಪಡಿಯನ್ನು ಮಾಡಲಿಕ್ಕೆ ಬಂದಿದ್ದಾರೆ ಎನ್ನುವುದು ಮೊದಲನೆಯ ಒಂದಂಶವಾಗಿದೆ. ಇನ್ನು ಎರಡನೆಯ ಅಂಶವೇನೆಂದರೆ, ಐದು ವರ್ಷಗಳ ಅವಧಿ ಏಕೆ ಬೇಕು? ತಿದ್ದುಪಡಿಯಲ್ಲಿ ಐದು ವರ್ಷ ಅಥವಾ ಎಪ್ಪತ್ತು ವರ್ಷ ಆಗುವುದರೊಳಗೆ ಎಂಬ ಅಂಶವನ್ನು ನೀವು ತಂದಿದ್ದೀರಿ. ಇದರಲ್ಲಿ ಐದು ವರ್ಷಗಳ ಅವಧಿ ಎನ್ನುವುದು ಏಕೆ ಬೇಕು? ವಿಶ್ವವಿದ್ಯಾಲಯದ ಉಪಕುಲಪತಿಗಳಿಗೆ ನಾಲ್ಕು ವರ್ಷಗಳ ಅವಧಿಯನ್ನು ನೀಡುತ್ತೀರಿ, ಆದರೆ, ಉನ್ನತ ಶಿಕ್ಷಣ ಪರಿಷತ್ತಿನ ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ಐದು ವರ್ಷಗಳ ಅವಧಿಯ ತಿದ್ದುಪಡಿಯನ್ನು ತರುವುದರಲ್ಲಿ ಯಾವ ಅರ್ಥವೂ ಇಲ್ಲ. ಐದು ವರ್ಷಗಳು ಎಂದರೆ, ಐದು ವಿಧಾನಸಭಾ ಸದಸ್ಯರ ಅಧಿಕಾರಾವಧಿ. ಒಬ್ಬ ಶಾಸಕರ ಅಧಿಕಾರಾವಧಿಯನ್ನು ನೀವು ಒಬ್ಬ ನಾಮನಿರ್ದೇಶಿತ ಅಧಿಕಾರಿಗೆ ಕೊಡುತ್ತೀರಿ ಎನ್ನುವುದಾದರೆ ಇದರಲ್ಲಿ ಯಾವುದಾದರೂ ಅರ್ಥವಿದೆಯೇ? ಇದರಲ್ಲಿ ಯಾವುದೇ ಅರ್ಥವಿಲ್ಲ. ಆದ್ದರಿಂದ ಪ್ರಸ್ತುತ ತಿದ್ದುಪಡಿ ವಿಧೇಯಕವನ್ನು ಸಂಪೂರ್ಣವಾಗಿ ಯೋಚನೆ ಮಾಡೋಣ. ಆದ್ದರಿಂದ ಇದನ್ನು ದಯಮಾಡಿ ಹಿಂಪಡೆಯಿರಿ. ನಿಜವಾಗಿಯೂ ಹೇಳುತ್ತೇನೆ, ಈ ತಿದ್ದುಪಡಿ ವಿಧೇಯಕ್ಕೆ ನಾವು ಯಾರೂ ಬೆಂಬಲವನ್ನು ಕೊಡುವುದಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಸರಿ ಆ ಮಾತು ಬೇರೆ. ಆದರೆ ...

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ರಾಮಚಂದ್ರಗೌಡ:–** ಮಾನ್ಯ ಸಭಾಪತಿಯವರೆ, ಪ್ರಸ್ತುತ ವಿಧೇಯಕವನ್ನು ಹಿಂಪಡೆಯಿರಿ. ನಂತರದಲ್ಲಿ ಉನ್ನತ ಶಿಕ್ಷಣ ಪರಿಷತ್ತಿನ ಅವಶ್ಯಕತೆ ಇದೆಯೇ ಅಥವಾ ಇಲ್ಲವೇ ಎನ್ನುವ ಅಂಶವು ಇವತ್ತಿನ ಪರಿಸ್ಥಿತಿಯಲ್ಲಿ ಅನುಮಾನಕ್ಕೆ ಎಡೆಮಾಡಿಕೊಡುತ್ತಿದೆ. ರಾಷ್ಟ್ರದಲ್ಲಿಯೇ ಮೊದಲನೆಯ ರಾಜ್ಯ ಉನ್ನತ ಶಿಕ್ಷಣ ಪರಿಷತ್ತನ್ನು ಪ್ರಾರಂಭಿಸುವುದಾಗಿ ಹೇಳುತ್ತಿದ್ದೀರಿ. ಇವತ್ತಿನ ದಿವಸ ವಿಶ್ವವಿದ್ಯಾಲಯಗಳು ಒಂದೊಂದಾಗಿ ಬೇರೆಬೇರೆಯಾಗಿ ಮಾರ್ಪಾಡಾಗುತ್ತಿವೆ. ಎಲ್ಲಾ ವಿಶ್ವವಿದ್ಯಾಲಯಗಳು ಸ್ವತಂತ್ರ ವಿಶ್ವವಿದ್ಯಾಲಯಗಳಾಗಿ ಮಾರ್ಪಾಡಾಗುತ್ತಿವೆ. ಇಂತಹ ಸಂದರ್ಭದಲ್ಲಿ ಉನ್ನತ ಶಿಕ್ಷಣ ಪರಿಷತ್ತಿನ ಅವಶ್ಯಕತೆಯಿದೆಯೇ ಎನ್ನುವ ಪ್ರಶ್ನೆ ಉದ್ಭವಿಸುತ್ತಿದೆ. ನಮ್ಮ ಸದನದ ಕಾನೂನು ಪಂಡಿತರು ಮಾತನಾಡುವಾಗ ಪರಿಷತ್ತಿನ ಅವಶ್ಯಕತೆ ಇದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಮಾತನಾಡುತ್ತಾರೆ. ಆದರೆ ನಾನು ಹೇಳುವುದೇನೆಂದರೆ, ಪರಿಷತ್ತಿನ ಅವಶ್ಯಕತೆಯಿಲ್ಲ ಹಾಗೂ ವಿಧೇಯಕ್ಕೆ ತಿದ್ದುಪಡಿ ಬೇಕಾಗಿಲ್ಲ. ಆದ್ದರಿಂದ ದಯವಿಟ್ಟು ಪ್ರಸ್ತುತ ವಿಧೇಯಕವನ್ನು ಹಿಂಪಡೆಯಬೇಕೆಂದು ನಾನು ಒತ್ತಾಯಿಸುತ್ತೇನೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ವಾಸ್ತವವಾಗಿ ವಿಶ್ವವಿದ್ಯಾಲಯಗಳು independent statutory body ಇವೆ. Why we need this amendment?

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಶ್ರೀಯುತ ರಾಮಚಂದ್ರಗೌಡರು ನಮ್ಮ ಕಾನೂನು ಪಂಡಿತರ ಹೆಸರನ್ನು ಸೂಚಿಸಿದ್ದಾರೆ. ಅವರು ಸೇವಾ ವಿಷಯಗಳ ಬಗ್ಗೆ practice ಮಾಡಲಿಲ್ಲ. ಆದರೆ, ಸಾಂವಿಧಾನಿಕ ವಿಷಯಗಳ ಬಗ್ಗೆ practice ಮಾಡಿದ್ದಾರೆ. ಹೀಗಾಗಿ ಅವರಿಗೆ ಬಹುಶ: ಸೇವಾ ವಿಷಯದಲ್ಲಿ ....

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 2010 ರ ಕರ್ನಾಟಕ ಅಧಿನಿಯಮ 26 ಕ್ಕೆ ಸರ್ಕಾರವು ಕೆಲವು ತಿದ್ದುಪಡಿಗಳನ್ನು ತಂದಿದ್ದಾರೆ. ಇದಕ್ಕೆ ಕೊಟ್ಟಿರುವಂತಹ ಕಾರಣಗಳು ಸಮರ್ಥನೀಯವಲ್ಲ. ಆದರೆ, ಎರಡು ಕಾರಣಗಳನ್ನು ಕೊಟ್ಟಿದ್ದಾರೆ. ಸರ್ಕಾರವು ತಿದ್ದುಪಡಿಗಾಗಿ ನೀಡಿರುವ ಉದ್ದೇಶ ಮತ್ತು ಕಾರಣಗಳು ಸಮರ್ಥನೀಯವಲ್ಲ. ಬಹಳ ಪ್ರಮುಖವಾಗಿ ಎರಡು ಸಮಿತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದು ಪರಿಷತ್ತು ಹಾಗೂ ಎರಡನೆಯದು ಕಾರ್ಯನಿರ್ವಾಹಕ ಸಮಿತಿ. ಉನ್ನತ ಶಿಕ್ಷಣ ಪರಿಷತ್ತಿನ ಮಾನ್ಯ ಸಚಿವರು ಅಧ್ಯಕ್ಷರಾಗಿರುತ್ತಾರೆ. ಕಾರ್ಯನಿರ್ವಾಹಕ ಸಮಿತಿಗೆ ಇರುವ ಉಪಾಧ್ಯಕ್ಷರೇ ಅಧ್ಯಕ್ಷರಾಗಿರುತ್ತಾರೆ ಎನ್ನುವ ಪ್ರಸ್ತಾವನೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಲ್ಲಿಸಿದ್ದಾರೆ. ತಿದ್ದುಪಡಿಯಲ್ಲಿ ವಯಸ್ಸಿನ ಏರಿಕೆಯನ್ನು ನೀಡಿದ್ದಾರೆ ; ಇಲ್ಲಿ ಬಹಳ ಪ್ರಮುಖವಾಗಿ ಹಾಲಿಯಿರುವ ಕಾಯ್ದೆಯಲ್ಲಿ 67 ವರ್ಷಗಳ ವಯಸ್ಸಿನವರೆಗೂ ಉಪಕುಲಪತಿಗಳು ನಿವೃತ್ತರಾಗುವುದಕ್ಕೆ ಅವಕಾಶವಿದೆ. ನಿವೃತ್ತಿಗೆ ಸೀಲಿಂಗ್ ಮೀತಿಯಿದ್ದರೂ ಅವರನ್ನೇ ನೇಮಕ ಮಾಡಬೇಕೆಂಬ ನಿಯಮವೇನಿಲ್ಲ. 58 ಹಾಗೂ 60 ವರ್ಷಗಳಿಗೆ ನಿವೃತ್ತರಾಗಿರುವಂತಹ ಉಪಕುಲಪತಿಗಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ರಾಮಚಂದ್ರಗೌಡ ರವರು ಪ್ರಸ್ತಾಪಿಸಿದಂತೆ ಬಹುಶ: ನಮಗೆ ಎಲ್ಲಿಯೋ ಒಂದು ಕಡೆ ಅನುಮಾನ ಬರುತ್ತದೆ. ಯಾವುದೋ ಒಂದು ಉದ್ದೇಶವನ್ನಿಟ್ಟುಕೊಂಡು ಈ ರೀತಿಯ ತಿದ್ದುಪಡಿಯನ್ನು ಸರ್ಕಾರವು ತರಲಿಕ್ಕೆ ಹೊರಟಿದೆ ಎನ್ನುವ ಅನುಮಾನವು ಖಂಡಿತವಾಗಿಯೂ ಬರುತ್ತದೆ. ಉನ್ನತ ಶಿಕ್ಷಣ ಪರಿಷತ್ತಿನ ರಚನೆಯಾಗಬೇಕಾದರೆ ಅದು ಪುನರ್ವಸತಿ ಕೇಂದ್ರವಾಗುವುದು ಬೇಡ. ಯಾರನ್ನೋ ಸರಿಹೊಂದಿಸಬೇಕು ಮತ್ತು 67 ವರ್ಷಗಳಾದ ಮೇಲೆ ಅವರನ್ನು ಇಲ್ಲಿಗೆ ತಂದು ಕೂರಿಸಬೇಕು ಎನ್ನುವ ... ಏಕೆಂದರೆ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರುಗಳ ನಿವೃತ್ತಿಗೆ ಒಂದು ವಯಸ್ಸಿನ ಮಿತಿಯಿದೆ. ಆದರೆ ಇದು ಅದನ್ನೂ ಮೀರಿ ಮುಂದೆ ಹೋಗುತ್ತಿದೆ. ಹೀಗಾಗಿ ಉನ್ನತ ಶಿಕ್ಷಣ ಪರಿಷತ್ತು ಎನ್ನುವಂತಹ ಉನ್ನತವಾದ ಸಂಸ್ಥೆಗೆ ನೀವು ನೇಮಕಾತಿಯನ್ನು ಮಾಡಬೇಕಾದರೆ ಸಮರ್ಥರು ಹಾಗೂ ಕ್ರಿಯಾಶೀಲರನ್ನು ನೇಮಕ ಮಾಡಬೇಕಾಗುತ್ತದೆ. ಮುಂದುವರೆದು ಅವರ ವಯಸ್ಸಿನ ದೃಷ್ಟಿಕೋನವನ್ನೂ ಸಹ ಗಮನಿಸಬೇಕಾಗುತ್ತದೆ. ದಯಮಾಡಿ ತಾವು ನೀಡಿರುವ ಸಮರ್ಥನೆಯನ್ನು ನಾವು ಒಪ್ಪುವುದಿಲ್ಲ. ಹೀಗಾಗಿ ಹಾಲಿ ಇರುವುದನ್ನೇ ಮುಂದುವರೆಸುವುದು ಒಳ್ಳೆಯದು ಎಂದು ಹೇಳುತ್ತಾ, ಬಹುತೇಕವಾಗಿ ಸರ್ಕಾರ ಈ ಬಗ್ಗೆ ಸಕಾರಣ ಹಾಗೂ ಸಮರ್ಥನೆಯನ್ನು ನೀಡದೇ ಇರುವುದರಿಂದ ಪ್ರಸ್ತುತ ತಂದಿರುವ ತಿದ್ದುಪಡಿ ವಿಧೇಯಕವನ್ನು ಹಿಂಪಡೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ವಿರೋಧ ಪಕ್ಷದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಶೈಕ್ಷಣಿಕ ಮಂಡಳಿ ಹಾಗೂ ಸಿಂಡಿಕೇಟ್‌ಗಳಿವೆ. ಇದಕ್ಕೆ ಮುಂದುವರೆದಂತೆ ಎಲ್ಲಾ ವಿಶ್ವವಿದ್ಯಾಲಯಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಕುಲಪತಿಗಳಿಗೆ ಸ್ವಾಯತ್ತತೆಯಿದೆ. ಉನ್ನತ ಶಿಕ್ಷಣ ಪರಿಷತ್ತನ್ನು ಜಾರಿಗೆ ತಂದಿರುವ ಉದ್ದೇಶವೆಂದರೆ, ನಮ್ಮ ವಿಶ್ವವಿದ್ಯಾಲಯಗಳು ಒಂದು ರೀತಿಯ ನಿಂತ ನೀರಿನಂತಾಗಬಾರದು. ಒಂದಿಷ್ಟು ಹೊಸ ವಿಚಾರಗಳು, ಚಿಂತನೆಗಳು, ಸ್ವಲ್ಪ ಆವಿಷ್ಕಾರ, ಸೃಜನಶೀಲತೆ ಹಾಗೂ ಹೊಸ ರಕ್ತ ಬರಬೇಕೆನ್ನುವ ಕಾರಣಕ್ಕಾಗಿ ಏನಾದರೂ ಆಲೋಚನೆಯನ್ನು ಮಾಡಲಿಕ್ಕಾಗುತ್ತದೆಯೇ ಎಂಬುದಕ್ಕೆ ಉನ್ನತ ಶಿಕ್ಷಣ ಪರಿಷತ್ತನ್ನು ತೆಗೆದುಕೊಂಡು ಬಂದಿರುವಂತಹದ್ದು. ಇದು ಪ್ರಾರಂಭವಾದ ಮೇಲೆ ಇಲ್ಲಿಯವರೆಗೆ ಆ ಪರಿಷತ್ತಿನಲ್ಲಿ ಹೊಸ ರಕ್ತ ಎಲ್ಲಿ ಬಂದಿದೆ? ಯಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯಗಳಲ್ಲಿ ಕುಲಪತಿಗಳಾಗಿ, ರಿಜಿಸ್ಟ್ರಾರ್‌ಗಳಾಗಿ ಕರ್ತವ್ಯ ನಿರ್ವಹಿಸಿದ್ದರೋ, ಅವರುಗಳು ಅಲ್ಲಿ ಮಾಡಬೇಕಾದ್ದನ್ನು ಹಾಗೂ ಮಾಡಬಾರದ್ದನ್ನು ಮಾಡಿದ್ದರೋ ಅಂತಹವರುಗಳನ್ನೇ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ನೇಮಕ ಮಾಡಲಾಗಿದೆ. ಇದರ ಜೊತೆಗೆ ಅಂತರ ವಿಶ್ವವಿದ್ಯಾಲಯಗಳ ಮಂಡಳಿ ಎಂಬ ಒಂದು ಸಂಸ್ಥೆಯಿದೆ. ಅಲ್ಲಿ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳು ಒಟ್ಟಾಗಿ ಮಾತನಾಡುತ್ತಾರೆ. ಒಟ್ಟು ಶಿಕ್ಷಣ ವ್ಯವಸ್ಥೆಯಲ್ಲಿ ಉನ್ನತ ಶಿಕ್ಷಣಕ್ಕೆ ಬದಲಾವಣೆಯನ್ನು ತರಬೇಕೆನ್ನುವ ಕಲ್ಪನೆ ಇದ್ದರೆ, ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಹೊಸ ರಕ್ತವನ್ನು ತರುವಂತಹ ಅವಶ್ಯಕತೆಯಿದೆ. ಬದಲಾಗುತ್ತಿರುವ ವ್ಯವಸ್ಥೆಗಳಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯು ಯಾವ ರೀತಿಯಲ್ಲಿ ಬದಲಾವಣೆಗೆ ಹೊಂದಿಕೊಳ್ಳಬೇಕು ಎನ್ನುವ ಸಲಹೆಗಳನ್ನು ನೀಡುವ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಪರಿಷತ್ತು ತನ್ನ ಕೆಲಸಗಳನ್ನು ನಿರ್ವಹಿಸಬೇಕು. ಆದರೆ ಉನ್ನತ ಶಿಕ್ಷಣ ಪರಿಷತ್ತು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಯಾರೂ ನಿವೃತ್ತರಾಗಿ ಹೊರಗೆ ಹೋಗಿದ್ದಾರೋ ಅಂತಹವರುಗಳನ್ನು ಕರೆದುಕೊಂಡು ಬಂದು ಉನ್ನತ ಶಿಕ್ಷಣ ಪರಿಷತ್ತಿಗೆ ನೇಮಕ ಮಾಡಲಾಗುತ್ತಿದೆ. ವಯಸ್ಸಿನ ಮೀತಿಯನ್ನು ಹೆಚ್ಚು-ಕಡಿಮೆ ಮಾಡುವುದು ಒಂದು ಸಣ್ಣ ವಿಷಯವಾಗಿದೆ. ಆದರೆ, ಇದಕ್ಕಿಂತಲೂ ಬಹಳ ಮುಖ್ಯವಾಗಿ ಆಗಬೇಕಾದ ಕೆಲಸವೇನೆಂದರೆ ವಿಶ್ವವಿದ್ಯಾಲಯಗಳಲ್ಲಿರುವಂತಹ ಜಡ್ಡುಕಟ್ಟಿದ ವಾತಾವರಣಕ್ಕೆ ಬದಲಾವಣೆಯನ್ನು ತೆಗೆದುಕೊಂಡು ಬಂದು ಇವತ್ತಿನ ಜಾಗತಿಕ ಬದಲಾವಣೆಗಳ ಕಡೆಗೆ ಅವು ಮುನ್ನಡೆಯಲು ಅನುಕೂಲವಾಗುವ ರೀತಿಯಲ್ಲಿ ಪಠ್ಯಕ್ರಮದಲ್ಲಿ ಬದಲಾವಣೆಗಳನ್ನು ತರಬೇಕು. ಈ ಕಾರಣಗಳಿಗಾಗಿ ಉನ್ನತ ಶಿಕ್ಷಣ ಪರಿಷತ್ತು ಕೆಲಸವನ್ನು ಮಾಡಬೇಕು. ಇವುಗಳನ್ನು ಬಿಟ್ಟು ವಿಶ್ವವಿದ್ಯಾಲಯಗಳಲ್ಲಿ ಯಾರು ನಿವೃತ್ತರಾಗುತ್ತಾರೆ ಅಂತಹವರುಗಳನ್ನು ಉನ್ನತ ಶಿಕ್ಷಣ ಪರಿಷತ್ತಿಗೆ ನೇಮಕ ಮಾಡಿದರೆ, ಮತ್ತೆ ಅದೇ ಹಳೆಯ ವಾತಾವರಣವು ಮುಂದುವರೆಯುತ್ತದೆ. ಉನ್ನತ ಶಿಕ್ಷಣ ಪರಿಷತ್ತು ಪ್ರಾರಂಭವಾದಾಗಿನಿಂದ ಇಲ್ಲಿಯವರೆ ಏನು ಕೆಲಸಗಳನ್ನು ಮಾಡಿದೆ? ಹೊಸ ರಕ್ತವನ್ನು ತರಲಿಕ್ಕೆ ಹೊಸ ಇನಿಷಿಯೇಟಿವ್‌ಗಾಗಿ ಯಾವ ಕೆಲಸಗಳನ್ನು ನಿರ್ವಹಿಸುತ್ತಿದೆ? ವಿಶ್ವವಿದ್ಯಾಲಯಗಳಲ್ಲಿ ಬದಲಾವಣೆಗಳನ್ನು ತರಲಿಕ್ಕೆ ಯಾವ ರೀತಿಯ ಕೆಲಸಗಳನ್ನು ಮಾಡುತ್ತಿದೆ? ಇಂತಹ ಅಂಶಗಳ ಬಗ್ಗೆ ಆಲೋಚನೆಯನ್ನು ಮಾಡದೇ ಇಲ್ಲಿಯ ಯಾರೋ ಒಬ್ಬ ಉಪಾಧ್ಯಕ್ಷರ ವಯಸ್ಸನ್ನು 67 ವರ್ಷಗಳಿಂದ 70 ವರ್ಷಕ್ಕೆ ಹೆಚ್ಚಳ ಮಾಡುತ್ತೇವೆ ಹಾಗೂ ಇನ್ನಾರಿಗೋ ಅವಕಾಶ ಕೊಡುವುದಕ್ಕಾಗಿ ಅವರ ಸಂಬಳವನ್ನು ಸರಿದೂಗಿಸುತ್ತೇವೆ ಎನ್ನುವಂತಹ ಕೆಲಸಗಳನ್ನು ಮಾಡುತ್ತಾ ಹೋದರೆ, ಉನ್ನತ ಶಿಕ್ಷಣ ಪರಿಷತ್ತನ್ನು ಪ್ರಾರಂಭಿಸಲು ಇರುವ ಮೂಲೋದ್ದೇಶವು ಖಂಡಿತವಾಗಿಯೂ ಈಡೇರುವುದಿಲ್ಲ ಎಂದು ನನಗನ್ನಿಸುತ್ತದೆ. ಹೀಗಾಗಿ ಪ್ರಸ್ತುತ ತಂದಿರುವ ವಿಧೇಯಕದಿಂದ ಈ ಅಂತಹ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳ ದೊಡ್ಡ ಬದಲಾವಣೆ ಆಗಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ದೊಡ್ಡ ಮನಸ್ಸು ಮಾಡಿ, ದಯಮಾಡಿ ಈ ವಿಧೇಯಕವನ್ನು ಹಿಂಪಡೆಯಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ನಾನೊಂದು ಸ್ಪಷ್ಟೀಕರಣವನ್ನು ಕೊಟ್ಟಿದ್ದೇ ಆದಲ್ಲಿ ನೀವುಗಳು ಮಾತನಾಡುವ ಅವಶ್ಯಕತೆ ಕಂಡು ಬರುವುದಿಲ್ಲ. ಪ್ರಸ್ತುತ ವಿಧೇಯಕದ ಬಗ್ಗೆ ನಾನು ಇನ್ನೂ ಹೆಚ್ಚಿನ ಸ್ಪಷ್ಟೀಕರಣವನ್ನು ಕೊಟ್ಟಿದ್ದರೆ ಮಾನ್ಯ ಸದಸ್ಯರುಗಳು ಇಷ್ಟು ಮಾತನಾಡುವ ಅವಕಾಶವಿರುತ್ತಿರಲಿಲ್ಲ. ಬಹುತೇಕವಾಗಿ ಸಂವಹನದಲ್ಲಿ ನನ್ನಿಂದ ಒಂದು ಸಣ್ಣ ತಪ್ಪಾಗಿದೆ ಎಂದು ನನಗನ್ನಿಸುತ್ತದೆ. It is categorically clear in the Act. ಪ್ರಸ್ತುತ ವಯೋಮಿತಿ 70 ವರ್ಷಗಳು ಎಂಬುದಾಗಿದೆ. ಪ್ರಸ್ತುತ ವಿಧೇಯಕದಲ್ಲಿ ವಯೋಮಿತಿಯನ್ನು 70 ವರ್ಷಗಳಿಗೆ ನಿಗದಿ ಮಾಡಲಾಗುತ್ತಿದೆ. ಇದಕ್ಕೆ ಮುಂದುವರೆದಂತೆ, "Provided that a person who has not attained the age of seventy years shall be eligible to be appointed as the Vice-Chairman" ಎಂಬ ಅಂಶವಿದ್ದಾಗ ಇನ್ನೂ ನೇಮಕಾತಿ ಮಾಡಬಹುದು. ನೇಮಕಾತಿಯನ್ನು ಮಾಡಬಾರದು ಎನ್ನುವ ಉದ್ದೇಶಕ್ಕಾಗಿಯೇ ವಯೋಮಿತಿಯನ್ನು 70 ವರ್ಷಗಳಿಗೆ ನಿಗದಿಪಡಿಸಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ಇದೇ ರೀತಿಯಾಗಿ ಕಾರ್ಯನಿರ್ವಾಹಕ ನಿರ್ದೇಶಕರ ವಯೋಮಿತಿಯನ್ನು 65 ವರ್ಷಗಳಿಗೆ ನಿಗದಿಪಡಿಸಬೇಕೆನ್ನುವುದು ನಮ್ಮ ಉದ್ದೇಶವಾಗಿದೆ. ವಯೋಮಿತಿಯನ್ನು ಹೆಚ್ಚಿಗೆ ಮಾಡುವ ಅವಕಾಶಗಳಿವೆ. ಹೀಗಾಗಿ ವಯೋಮಿತಿಯನ್ನು ನಿಗದಿಪಡಿಸಲಾಗುತ್ತಿದೆ.

**ಸಭಾಪತಿಯವರು:–** ಅಂದರೆ, ವಯೋಮಿತಿ ಇಲ್ಲದಿರುವುದಕ್ಕೆ ನೀವು 70 ವರ್ಷಗಳ ವಯೋಮಿತಿಯ higher cap ನ್ನು ನಿಗದಿಪಡಿಸುತ್ತೀದ್ದೀರಿ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, 70 ರಿಂದ 75 ವರ್ಷಗಳವರೆಗೆ ನೇಮಕ ಮಾಡುವುದಕ್ಕೆ ಇದರಲ್ಲಿ ಅವಕಾಶವಿದೆ.

**ಸಭಾಪತಿಯವರು:–** ಅಂದರೆ, ನೀವು ವಯೋಮಿತಿಯನ್ನು ಸೀಮಿತಗೊಳಿಸುತ್ತಿದ್ದೀರಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನೇಮಕಾತಿಗಾಗಿ ವಯೋಮಿತಿಯನ್ನು 70 ವರ್ಷಕ್ಕೆ ನಿಗದಿಪಡಿಸಲು ಅನುಮತಿಯನ್ನು ಕೊಡಿ ಎಂಬುದಾಗಿ ಮಾನ್ಯ ಸಚಿವರು ಕೇಳುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈ ಮೊದಲು ನೇಮಕಾತಿಗೆ ವಯೋಮಿತಿ 75 ವರ್ಷಗಳಿಗೆ ನಿಗದಿಯಾಗಿತ್ತು. ಆದರೆ ಈಗ 70 ವರ್ಷಗಳಿಗೆ ಅದನ್ನು ಸೀಮಿತಗೊಳಿಸುತ್ತಿದ್ದಾರೆ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ನೇಮಕಾತಿಯ ವಯೋಮಿತಿಯನ್ನು 70 ವರ್ಷಗಳಿಂದ 65 ವರ್ಷಗಳಿಗೆ ಸೀಮಿತಗೊಳಿಸುವುದಕ್ಕಾಗಿಯೇ ಪ್ರಸ್ತುತ ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ. ನಾನು ವಿಧೇಯಕವನ್ನು ವಿವರಿಸುವುದರಲ್ಲಿ ತಪ್ಪಾಗಿದೆ. ಇದು ನಾನು ಪ್ರಾರಂಭದಲ್ಲಿ ಮಾಡಿರುವ ತಪ್ಪು ಎಂಬುದನ್ನು ಒಪ್ಪಿಕೊಂಡಿದ್ದೇನೆ. ಪ್ರಸ್ತುತ ತಿದ್ದುಪಡಿ ವಿಧೇಯಕದಲ್ಲಿ ನೇಮಕಾತಿಯ ವಯೋಮಿತಿಯನ್ನು 70 ವರ್ಷಗಳಿಗೆ ಸೀಮಿತಗೊಳಿಸಿದ್ದನ್ನು 65 ವರ್ಷಗಳಿಗೆ ಸೀಮಿತಗೊಳಿಸುತ್ತಿದ್ದೇವೆ. ಮುಂದುವರೆದು ಯು.ಜಿ.ಸಿ. ನಾರ್ಮ್ಸ್‌ಗಳನ್ವಯ 70 ವರ್ಷಗಳ ವಯೋಮಿತಿಯನ್ನು...

**ಸಭಾಪತಿಯವರು:–** ಇಲ್ಲಿ ಪ್ರಸ್ತಾಪ ಮಾಡಲಾಗುತ್ತಿರುವ ವಯೋಮಿತಿಗಳು ಎರಡೂ ಬೇರೆ ಬೇರೆ ಅಂಶಗಳಾಗಿವೆ. ಅವುಗಳು ಒಂದೇ ಅಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, 70 ವರ್ಷಗಳ ನಂತರವೂ ಕಾರ್ಯ ನಿರ್ವಾಹಕ ನಿರ್ದೇಶಕರ ಹುದ್ದೆಗೆ ನೇಮಕಾತಿಯನ್ನು ಮಾಡಲಿಕ್ಕೆ ಕಾಯ್ದೆಯಲ್ಲಿ ಅವಕಾಶವಿದೆ. ಆದರೆ ಅದನ್ನು 65 ವರ್ಷಗಳಿಗೆ ಸೀಮಿತಗೊಳಿಸುತ್ತಿದ್ದೇವೆ. ಪ್ರಸ್ತುತ ಕಾಯ್ದೆಯನ್ವಯ 70 ವರ್ಷಗಳ ನಂತರವೂ ನೇಮಕಾತಿಯನ್ನು ಮಾಡಲಿಕ್ಕೆ ಅವಕಾಶವಿದೆ. ಆದರೆ ಯು.ಜಿ.ಸಿ.ಯ ನಾರ್ಮ್ಸ್‌ಗಳನ್ವಯ ಅದನ್ನು 70 ವರ್ಷಗಳಿಗೆ ಸೀಮಿತಗೊಳಿಸುತ್ತಿದ್ದೇವೆ. ಈ ಕಾರಣಗಳಿಂದಾಗಿ ದಯಮಾಡಿ ಪ್ರಸ್ತುತ ತಿದ್ದುಪಡಿ ವಿಧೇಯಕವನ್ನು ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, 65 ವರ್ಷಗಳಿಗೆ ವಯೋಮಿತಿಯನ್ನು ಸೀಮಿತಗೊಳಿಸುವುದಾಗಿ ಮಾನ್ಯ ಸಚಿವರು ತಿಳಿಸಿದ್ದಾರೆ. ಅವರ ವಾದವನ್ನು ನಾವು ಒಪ್ಪಿಕೊಳ್ಳೋಣ. 70 ವರ್ಷಗಳಿಗೆ ನೇಮಕಾತಿ ವಯೋಮಿತಿಯನ್ನು ಸೀಮಿತಗೊಳಿಸುತ್ತೇವೆ ಎಂಬುದಾಗಿ ಸಚಿವರು ಹೇಳುತ್ತಿದ್ದಾರೆ. ಆದರೆ, ನಿಯಮಾವಳಿಗಳ ಪ್ರಕಾರ ನೇಮಕಾತಿ ವಯೋಮಿತಿಯನ್ನು 65 ವರ್ಷಗಳಿಗೆ ಸೀಮಿತಗೊಳಿಸಬೇಕೆಂದು ನಾವು ಹೇಳುತ್ತಿದ್ದೇವೆ.

**(ಮುಂದು)**

**(880) 21.06.017 MSS-AK 1.10**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈಗ "The salaries and allowances payable to the Executive Director shall be the same as that of a Principal Secretary to the Government..." ಎಂದು ಕರಡು ತಿದ್ದುಪಡಿ ವಿಧೇಯಕದಲ್ಲಿದೆ. ಈಗ existing salary ಏನಿದೆ, ನೀವು ಎಷ್ಟು enhance ಮಾಡುತ್ತಿದ್ದೀರಿ ಎನ್ನುವಂತಹ ಮಾಹಿತಿ ಇದರಲ್ಲಿ ಇಲ್ಲ. ಪ್ರಧಾನ ಕಾರ್ಯದರ್ಶಿಗಳ ವೇತನಕ್ಕೆ ಸಮನಾದ ವೇತನವನ್ನು ಕೊಡಬೇಕೆಂದು ಹೇಳುತ್ತಿದ್ದೀರಿ. ಮತ್ತೆ financial commitment ಯಾವುದೂ ಕೂಡ ಇಲ್ಲ ಎನ್ನುವಂಥದ್ದನ್ನೂ ಕೂಡ ಹೇಳಿದ್ದೀರಿ. ವೇತನದ ವಿಚಾರದಲ್ಲಿ ಸ್ವಲ್ಪ ಅನುಮಾನ ಇದೆ. ಮತ್ತೆ 5 ವರ್ಷಗಳ ಅವಧಿಯನ್ನು ನಿಗದಿ ಮಾಡಲಾಗಿದೆ. ಬೋರ್ಡ್ ಮತ್ತು ಕಾರ್ಪೊರೇಷನ್‌ಗಳಲ್ಲಿ ಅಧ್ಯಕ್ಷರನ್ನು ನೇಮಕ ಮಾಡಬೇಕಾದರೆ ಅವರ ಅಧಿಕಾರದ ಅವಧಿಯನ್ನು 3 ವರ್ಷಗಳಿಗೆ ನಿಗದಿಪಡಿಸಲಾಗುತ್ತದೆ. ಈಗ ಇವರಿಗೆ ಐದು ವರ್ಷಗಳ extension ಏಕೆ ಕೊಡುತ್ತೀರಿ. ಹಾಗಾದರೆ ಮಾನ್ಯ ರಾಮಚಂದ್ರಗೌಡರು ಹೇಳಿದ ಹಾಗೆ ಯಾವುದೇ ಒಬ್ಬ ನಿರ್ದಿಷ್ಟ ವ್ಯಕ್ತಿಗೆ ಅಲ್ಲಿಯೇ 5 ವರ್ಷಗಳಿರಬೇಕು ಎನ್ನುವಂತಹ ಉದ್ದೇಶ ಇರತಕ್ಕಂಥದ್ದು ಕಾಣುತ್ತಿದೆ. ಆದುದರಿಂದ ನನಗೆ ಅನುಮಾನ ಇರುವಂತಹ ಅವರ ಸಂಬಳದ ಬಗ್ಗೆ ಸ್ಪಷ್ಟನೆಯನ್ನು ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಮಂತ್ರಿಗಳು ಸದನದ ಹೊರಗಡೆ ಮತ್ತು ಸದನದ ಒಳಗಡೆ ಮಾಡಿರುವಂತಹ ಹೇಳಿಕೆಯನ್ನು ನೋಡಿದರೆ ಒಂದಕ್ಕೊಂದು ತಾಳೆಯೇ ಆಗುವುದಿಲ್ಲ. ಬಹುಶಃ ಬಿಲ್ ಅನ್ನು ಡ್ರಾಫ್ಟ್ ಮಾಡಬೇಕಾದರೆ there is no application of mind ಎನ್ನುವಂಥದ್ದು ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಒರಿಜಿನಲ್ ಆ್ಯಕ್ಟ್‌ನ ಸೆಕ್ಷನ್ 7 ನಲ್ಲಿ ಏನು ಹೇಳಿದ್ದಾರೆಂದರೆ, "Provided that a person who has not attained the age of seventy years shall be eligible to be appointed as the Vice-Chairman." ಅದೇ ರೀತಿಯಲ್ಲಿ Executive Director ಗೆ ಏನು ಹೇಳಿದ್ದಾರೆಂದರೆ, "Provided that a person who has not attained the age of sixty five years shall be eligible to be appointed as the Executive Director."

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:–** 65 ವರ್ಷಗಳಿಗೆ ಸೀಮಿತಗೊಳಿಸಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, 65 ವರ್ಷ ದಾಟಿದವರಿಗೆ ಇಲ್ಲವೆಂದು ಸ್ಪಷ್ಟವಾಗಿದೆ. ಅದರೂ ಕೂಡ ಈ ತಿದ್ದುಪಡಿ ವಿಧೇಯಕವನ್ನು ತೆಗೆದುಕೊಂಡು ಬಂದಿದ್ದಾರೆ. ಅಂದರೆ ಇದು ಅಳಿಯ ಅಲ್ಲ, ಮಗಳ ಗಂಡ ಎನ್ನುವಂತಹ ರೀತಿಯಲ್ಲಿದೆ.

**ಸಭಾಪತಿಯವರು:–** ಮಾನ್ಯ ವಿ.ಎಸ್.ಉಗ್ರಪ್ಪನವರೆ ಇಂತಹ ತಿದ್ದುಪಡಿ ಬೇಡವಾಗಿತ್ತು ಎಂದು ತಾವು ಹೇಳುತ್ತೀರಾ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಇಂತಹ ತಿದ್ದುಪಡಿ ವಿಧೇಯಕ ಬೇಕಾಗಿಯೇ ಇರಲಿಲ್ಲ. Why is it required? As it is ಇದೆ. 70 ವರ್ಷದ ಮೇಲೆ ಇರುವವರಿಗೆ ಅವಕಾಶವಿಲ್ಲ, ಮತ್ತೊಂದು ಹುದ್ದೆಯಲ್ಲಿ 65 ವರ್ಷಗಳ ಮೇಲ್ಪಟ್ಟವರಿಗೆ ಅವಕಾಶವಿಲ್ಲವೆಂದು Parent Act ನಲ್ಲಿದೆ. So it is mandatory. ಹಾಗಾಗಿ ಇಲ್ಲಿ 'shall' ಎಂದು ಇದೆ. ಅಂದರೆ ಅದು mandatory ಎಂದು ಹೇಳಿದ್ದಾರೆ. ಬಹುಶಃ ಇದನ್ನು ಏನಾದರು ಗಣನೆಗೆ ತೆಗೆದುಕೊಂಡರೆ, ಈ ರೀತಿ ತಂದಿರತಕ್ಕಂಥ ತಿದ್ದುಪಡಿಯನ್ನು ಸರ್ಕಾರ ಹಿಂದಕ್ಕೆ ಪಡೆದುಕೊಂಡರೂ ಕೂಡ 65 ವರ್ಷ, 70 ವರ್ಷ ಎಂದು ಇರುವಂಥದ್ದರಲ್ಲಿ ಯಾವುದೇ ಬದಲಾವಣೆಗಳಾಗುವುದಿಲ್ಲ. ಎರಡನೆಯದಾಗಿ ನನಗೆ ಅರ್ಥವಾಗದೇ ಇರುವಂಥದ್ದು ಎಂದರೆ, ಮಾನ್ಯ ಸಚಿವರು ವಿವರಣೆಯನ್ನು ಕೊಡಬೇಕಾದರೆ ವೈಸ್-ಛಾನ್ಸಲರ್ಸ್ 67 ವರ್ಷಗಳು ಎಂದು ತಿಳಿಸಿದ್ದಾರೆ. ಆದರೆ ಮತ್ತೊಬ್ಬರಿಗೆ 70 ವರ್ಷಗಳು. ಹೊರಗಡೆ ಮಾನ್ಯ ಸಚಿವರು majority of the Vice-Chancellors ಸರಿ ಇಲ್ಲವೆಂದು ಹೇಳುತ್ತಾರೆ. ಆ ಪದವನ್ನು ಬಳಸಲೇಬೇಕಾಗುತ್ತದೆ.

**Mr. CHAIRMAN:** What are you ending for?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಆದರೆ ಮಾನ್ಯ ಉನ್ನತ ಶಿಕ್ಷಣ ಸಚಿವರು ಅವರಿಗೆ accommodate ಮಾಡಬೇಕೆಂದು ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ. Higher Education Council, retired people ಗೆ accommodate ಮಾಡುವಂಥದ್ದು ಆಗಬೇಕೇ? ಮತ್ತೆ ಇವರ ವೇತನದ ಬಗ್ಗೆ ಹೇಳುವುದಾದರೆ, ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿಯವರು ಒಳ್ಳೆಯ ಸ್ನೇಹಿತರು. ಆದರೆ ಅವರಿಗೆ ತಮಾಷೆಯಾಗಿ ನಾವು ರಾಯಲ್ ರೆಡ್ಡಿ ಎಂದು ಹೇಳುತ್ತೇವೆ. ಸ್ನೇಹಿತರು ಆದರೂ ಕೂಡ ಅವರಿಗೆ ಕೆಲವೊಂದು ಬಾರಿ

ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗೈಡ್ ಮಾಡಬೇಕಾಗುತ್ತದೆ. ನಿಜವಾದ ಸ್ನೇಹಿತನಾದವನಿಗೆ ತಪ್ಪು ಮಾಡಿದಾಗ ತಪ್ಪನ್ನು ಹೇಳುವಂತಹ ಜವಾಬ್ದಾರಿ ಸಹ ಇರುತ್ತದೆ. ವಿಧೇಯಕಗಳು ಬಂದಾಗ ಆಡಳಿತ ಪಕ್ಷದ ಸದಸ್ಯರು, ವಿರೋಧ ಪಕ್ಷದ ಸದಸ್ಯರುಗಳು ಎನ್ನುವಂಥದ್ದು ಬರುವುದಿಲ್ಲ. ವ್ಯವಸ್ಥೆಯಲ್ಲಿರತಕ್ಕಂತಹ ಬದಲಾವಣೆ ತರತಕ್ಕಂತಹ ಸಂದರ್ಭದಲ್ಲಿ ಮುಕ್ತ ಮನಸ್ಸಿನಿಂದ ಚರ್ಚೆ ಮಾಡಬೇಕಾಗುತ್ತದೆ. ಸೆಕ್ಷನ್ 11 ನಲ್ಲಿ ವೇತನದ ಬಗ್ಗೆ ಹೇಳುವಾಗ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಮನಾಗಿ ಎಂದು ಹೇಳಿದ್ದಾರೆ. ಎಲ್ಲಿಯೋ 'salaries' ಎಂದು ಯಾವುದಕ್ಕೆ ಹೇಳುತ್ತಾರೆಂದರೆ ಯಾರು Principal Secretary to the Government... Executive Directors ಮಾಡುವಂಥವರನ್ನು ನಿವೃತ್ತಿಯಾದಂತಹ ಸರ್ಕಾರದ ಮುಖ್ಯ ಕಾರ್ಯದರ್ಶಿಗಳನ್ನು ಮಾಡಬೇಕೆಂದು ಯಾವುದೋ ಅಧಿಕಾರಿಗಳು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಗೈಡ್ ಮಾಡಿರುತ್ತಾರೆ. ಆದುದರಿಂದ ಮಾನ್ಯ ಸಚಿವರು ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದಾರೆ. ಒಂದು ಕಡೆ ವೈಸ್-ಛಾನ್ಸಲರ್, ಇನ್ನೊಂದು ಕಡೆ ನಿವೃತ್ತಿ ಹೊಂದಿದಂತಹ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳಿಗೆ ಇಲ್ಲಿ rehabilitate ಮಾಡುವುದಕ್ಕಾಗುತ್ತದೆಯೇ? ನನಗನ್ನಿಸುವುದು ನಾವು ಈಗ 21ನೇ ಶತಮಾನದಲ್ಲಿದ್ದೇವೆ. ಮಲ್ಟಿ-ನ್ಯಾಷನಲ್ ಕಂಪನಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ನೋಡಿ, ಅವರೆಲ್ಲರೂ 30 ವರ್ಷಗಳಿಂದ 40 ವರ್ಷಗಳ ಒಳಗಡೆ ಇರುವವರೇ ಆಗಿರುತ್ತಾರೆ. ಹೊಸ ಹೊಸ ಅನ್ವೇಷಣೆಯನ್ನು ಮಾಡತಕ್ಕಂತಹ ಇಡೀ ವಿಶ್ವದಲ್ಲಿಯೇ ಹೆಸರನ್ನು ಮಾಡಿರುವಂತಹ ಇಂಡಿಯನ್ಸ್ ಆನೇಕ ಜನ ಇದ್ದಾರೆ. ಅವರೆಲ್ಲರೂ ಯಾವ ವಯಸ್ಸಿನವರಾಗಿದ್ದಾರೆ? ನಾವು ಮತ್ತು ಉನ್ನತ ಶಿಕ್ಷಣ ಸಚಿವರಾದ ಶ್ರೀ ರಾಯರೆಡ್ಡಿಯವರು 60 ವರ್ಷದವರಾಗಿದ್ದೇವೆ. ಬಹುಶಃ ಈ ವಯಸ್ಸಿನಲ್ಲಿರತಕ್ಕಂಥವರನ್ನು ತಂದು ಚಾಲನೆ ನೀಡುತ್ತಾರೆಂದರೆ ನನಗೆ ಅರ್ಥವಾಗುತ್ತಿಲ್ಲ.

**ಸಭಾಪತಿಯವರು:-** ಅದೆಲ್ಲಾ ಬೇಡ, ಈಗ ಸರ್ಕಾರ ಏನು ಮಾಡಬೇಕೆಂದು ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಇದನ್ನು ನೋಡಿದರೆ ನಿವೃತ್ತಿಯಾಗಿರುವಂತಹ ಪ್ರಾಸಂಗಿಕವಾಗಿ, what is the retirement age of the Supreme Court and High Court judges ಎಂದು ಸಹಾ ಯೋಚನೆ ಮಾಡಬೇಕು. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಧೀಶರು 65 ವರ್ಷಗಳ ನಂತರ ನಿವೃತ್ತಿಯಾಗುತ್ತಾರೆ. ಇಲ್ಲಿ ಏನಾಗಿದೆ ಎಂದರೆ, ನಿವೃತ್ತಿಯಾಗಿರುವವರಿಗೆ ಮತ್ತೆ ಎಲ್ಲಿಯೋ ಅವಕಾಶವನ್ನು ಮಾಡುವಂತಹ ಪ್ರವೃತ್ತಿಯನ್ನು ಬಿಡಬೇಕು. ಬಹುಶಃ ಇದಕ್ಕೆ ಎಲ್ಲಿಯೋ ಒಂದು ಕಡೆ ಹೊಸ ಕಾಯಕಲ್ಪ ಕೂಡ ಮಾಡಬೇಕೆಂದು ಇದ್ದರೆ ಯಾರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

young and energetic ಇದ್ದಾರೆ, ಅವರಿಗೆ ಅವಕಾಶ ಮಾಡುವಂತಹ ದಿಕ್ಕಿನಲ್ಲಿ ಸರ್ಕಾರ ಚಿಂತನೆ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ವೃದ್ಧಾಶ್ರಮಕ್ಕೆ ಕಳುಹಿಸುವವರನ್ನು ಸರ್ಕಾರದವರು Higher Education Council ಗೆ ತೆಗೆದುಕೊಳ್ಳುತ್ತಿದ್ದಾರೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಸದಸ್ಯರುಗಳು ಯುವಕರನ್ನು ಆ ಜಾಗಕ್ಕೆ ತೆಗೆದುಕೊಂಡು ಬಂದರೆ ಒಳ್ಳೆಯದಾಗುತ್ತದೆಂದು ಅವರವರ ವಿಚಾರದಲ್ಲಿ ಹೇಳಿದ್ದಾರೆ. ತಮಗೆ ಗೊತ್ತಿರುವಂತೆ ವಿಶ್ವವಿದ್ಯಾನಿಲಯಗಳಲ್ಲಿ University Grants Commission Higher Education Council ಗೆ ಏನೇನು ಮಾಡಬೇಕೆಂದು ಒಂದು ನಿಯಮಾವಳಿಯನ್ನು ರೂಪಿಸಿದೆ. Vice-Chancellor ರವರ ವಯೋಮಿತಿ up to 70 years ಇದೆ. ನಾವು ಇಲ್ಲಿ 67 ವರ್ಷಗಳ ವರೆಗೆ ಮಾತ್ರ ಅವಕಾಶವನ್ನು ಮಾಡಿದ್ದೇವೆ. As per the UGC norms 70 ವರ್ಷದ ವರೆಗಿನವರನ್ನು Vice-Chancellor ಆಗಿ ನೇಮಕ ಮಾಡಬೇಕೆಂದು ಅವಕಾಶ ಇದೆ. ಆ ರೀತಿ UGC guidelines ಇದೆ. ಆದರೆ ನಮ್ಮ ರಾಜ್ಯದಲ್ಲಿ 67 ವರ್ಷಗಳ ವರೆಗೆ ಎಂದು ಮಾತ್ರ ಮಾಡಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಹಾಗಾದರೆ 65 ವರ್ಷ ಎಂದು ಮಾಡಿಬಿಡಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಆಮೇಲೆ Higher Education Council ಗೆ ಅಧ್ಯಕ್ಷರಾಗಿ ಕೆಲಸ ಮಾಡಬೇಕು. ಅಲ್ಲಿ ತಕ್ಷಣ ಯಾರೋ youngsters ಅನ್ನು ತಂದು ಕೆಲಸ ಮಾಡಿ ಎಂದು ಕುಳ್ಳಿರಿಸುವುದಕ್ಕಾಗುವುದಿಲ್ಲ. ಕೆಲವು ಅನುಭವ ಇರುವಂಥವರು, ಶಿಕ್ಷಣ ತಜ್ಞರು, ಬೇರೆ ಬೇರೆ ವಿಚಾರಗಳು ಗೊತ್ತಿರುವವರು ಬರಬೇಕಾಗುತ್ತದೆ. ಅಂದರೆ ಅದರ ಅರ್ಥ youngsters ಗೆ ಗೊತ್ತಿಲ್ಲವೆಂದಲ್ಲ, ಅವರು ಬೇರೆ ಬೇರೆ ಶಿಕ್ಷಣ; ಆಡಳಿತ ವಿಚಾರದಲ್ಲಿ ಸೇವೆ ಮಾಡಿ ನಿವೃತ್ತಿಯಾದವರು ನಮ್ಮನ್ನು ನೇಮಕ ಮಾಡಿ ಎಂದು ಬರುವವರನ್ನು ನಾವು ಮಾಡುತ್ತಿಲ್ಲ. Sri S.V. Ranganath, the former Chief Secretary to the

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

Government of Karnataka; you know his integrity, sincerity and all. ಅವರು ಬೇಡ ಎಂದರೆ ನಾಳೆ ಬೆಳಿಗ್ಗೆಯೇ ಮನೆಗೆ ಹೋಗುತ್ತಾರೆ. ಆದರೆ ಕೆಲಸ ಮಾಡುವಂತಹ ಒಳ್ಳೆಯ ಅನುಭವಸ್ಥರು, ಒಳ್ಳೆಯ0 ಆಡಳಿತಗಾರರು ಬೇಕಾಗುತ್ತದೆ. ಅವರ್‍ಯಾರೂ ನಮ್ಮ ಮುಂದೆ ಅರ್ಜಿ ಇಟ್ಟುಕೊಂಡು ನಿಂತಿಲ್ಲ. ನನಗೆ ಗೊತ್ತಿರುವಂತಹ ಯಾರೊಬ್ಬರಾದರು Executive Director ಮಾಡಿ ಎಂದು ಬಂದಿದ್ದಾರೆಯೇ ಎಂದು ದಯವಿಟ್ಟು ಹೇಳಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ನಮ್ಮ ಹತ್ತಿರ ನಿಮಗೆ ಹೇಳಿ ಎಂದು ಬಂದಿದ್ದಾರೆ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ನಮ್ಮ ಹತ್ತಿರ ಯಾರೂ ಕೂಡ ಬಂದಿಲ್ಲ. ಆದರೆ ವಿರೋಧ ಪಕ್ಷದವರ ಕಡೆ ಬಂದಿರಬಹುದು. ಯಾರೂ ನನ್ನನ್ನು ಮಾಡಿ ಎಂದು ಅರ್ಜಿ ಇಟ್ಟುಕೊಂಡು ಬರುತ್ತಾರೆ ಅವರ್‍ಯಾರು ನನ್ನ ಪ್ರಕಾರ ಅರ್ಹರಲ್ಲ ನಾವು ಒಳ್ಳೆಯ ಅನುಭವ ಇರುವಂಥವರನ್ನು ಹುಡುಕಿಕೊಂಡು ಬರಬೇಕು. ಶ್ರೀ ಎಸ್.ವಿ.ರಂಗನಾಥ್‌ರಂಥವರು ಬಿಟ್ಟು ಹೋಗಿ ಎಂದರೆ ನಾಳೆಯೇ ಬಿಟ್ಟು ಹೋಗುತ್ತಾರೆ. ಅವರಿಗೇನು ಇಲ್ಲಿ ಆಗಬೇಕಾಗಿಲ್ಲ. **(ಗೊಂದಲ)** ಈಗ ಶ್ರೀ ಕಸ್ತೂರಿ ರಂಗನ್‌ರವರು ಇದ್ದಾರೆ ಅವರು ಜ್ಞಾನ ಆಯೋಗದ ಅಧ್ಯಕ್ಷರಾಗಿದ್ದಾರೆ. ಅವರು ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿ ಎಂದು ಬಂದಿದ್ದರಾ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ನಾನು ಎಸ್.ವಿ.ರಂಗನಾಥ್‌ರವರ ಬಗ್ಗೆ ಮಾತನಾಡುವುದಿಲ್ಲ. ಆದರೆ ಅದಕ್ಕಿಂತಲೂ ಹಿಂದೆ ಏನಾಗಿತ್ತೆಂದರೆ, ಉನ್ನತ ಶಿಕ್ಷಣ ಕೌನ್ಸಿಲ್‌ನಲ್ಲಿ ಇದ್ದವರನ್ನು ನಾವೆಲ್ಲರೂ ತೆಗೆಯಿರಿ ಎಂದಾಗ ತೆಗೆದಿಲ್ಲವೇ?

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಇಲ್ಲಿ ಬಂದಿರುವಂಥವರೆಲ್ಲರೂ ಪಂಡಿತರಿದ್ದಾರೆ. ಹೀಗಾಗಿ ನಾವು ತೆಗೆದುಕೊಂಡು ಬಂದಿರುವಂತಹ ತಿದ್ದುಪಡಿ ವಿಧೇಯಕದಲ್ಲಿ ಯಾವುದೇ ಸಮಸ್ಯೆಗಳಿಲ್ಲ. ಆಮೇಲೆ ಅವರ ವೇತನದ ಬಗ್ಗೆ ಕೇಳಿದ್ದಾರೆ. ಹಾಲಿ ಇರುವಂತಹ ಕಾಯ್ದೆಯಲ್ಲಿ ಈಗ ಉದಾಹರಣೆಗೆ ಅಲ್ಲಿ 'Principal Secretary', 'Executive Director' ಎಂದು ಹಾಕಿಕೊಳ್ಳುವುದಕ್ಕೆ ಅವಕಾಶ ಇದೆ. ಅವರಿಗೆ ವೇತನವನ್ನು ಕೊಡಬೇಕಲ್ಲವೇ? ಪ್ರೊಫೆಸರ್ಸ್ ಇದ್ದಾರೆ. 30–35 ವರ್ಷಗಳ ಸರ್ವೀಸ್ ಆದಂತಹ ಪ್ರೊಫೆಸರ್ಸ್ ಅನ್ನು ಅಲ್ಲಿ ನೇಮಕ ಮಾಡುತ್ತಾರೆ. ಅವರ ವೇತನ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ವೇತನಕ್ಕೆ ಸಮಾನವಾಗಿರುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಈಗ ಅವರ ವೇತನ ಎಷ್ಟು ಇದೆ. ನೇಮಕಗೊಂಡಾಗ ಅವರಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಯ ವೇತನದಷ್ಟು ಎಂದು ಹೇಳಿದ್ದಾರೆ. ಆಮೇಲೆ ಕರಡು ತಿದ್ದುಪಡಿ ವಿಧೇಯಕದಲ್ಲಿ "There is no extra expenditure involved..." ಎಂದು ಹೇಳಿದ್ದೀರಿ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, the salary of the Principal Secretary to the State Government is around Rs.2 lakhs.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಆಗ ವೇತನ ಬದಲಾವಣೆಯಾಗುತ್ತದೆಯಲ್ಲವೆ? ಮತ್ತೆ financial commitment ಇಲ್ಲ ಎಂದು ತಾವು ಹೇಳಿದ್ದೀರಿ.

**Sri BASAVARAJ RAYAREDDI:** Now as per the Service Rules...

**(ಗೊಂದಲ)**

**. . . ಮುಂದು**

(881) 21.06.2017 01.20 SV-RN

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಇದು ಹೇಗಾಗಿದೆಯೆಂದರೆ, ನೌಕರರಿಗೆ ಮೊದಲು ನಿವೃತ್ತಿ ವಯಸ್ಸು 55 ವರ್ಷ ಎಂದು ಇತ್ತು. ನಂತರ 58, 60, 62, 65, 67, 70 ಹೀಗಾಯಿತು. ಅಲ್ಲಿ ಕುಳಿತಿರುವವರು ಹೇಗೆ ಹೇಳುತ್ತಾರೆಯೋ ಹಾಗೆ ಕೇಳುವಂತಹದ್ದು. 55 ವರ್ಷವಿದ್ದಾಗ ಈ ರಾಜ್ಯ ನಡೆಯುತ್ತಿರಲಿಲ್ಲವೆ? 58ಕ್ಕೆ ಯಾರೋ ಅಧಿಕಾರಿಗಳು ಶಿಫಾರಸ್ಸು ಮಾಡಿದರು ಎಂದು ಸರ್ಕಾರ ನಿವೃತ್ತಿ ವಯಸ್ಸನ್ನು 58ಕ್ಕೆ ಏರಿಸಿತು. 60 ಎಂದಾಗ 60 ಮಾಡಲಾಯಿತು. ಈಗ 62, 65, 67, 70 ಎಂದು ಹೆಚ್ಚಿಸುವುದರ ಬದಲು ಒಂದೇ ಬಾರಿ ಸಾಯುವವರೆವಿಗೂ ಎಂದು ಮಾಡಿ ಬಿಡಲಿ. ಸಾಯುವವರೆವಿಗೂ ಎಂದು ಮಾಡಿಬಿಟ್ಟರೆ ಆಗ ಸರಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೋಗುತ್ತದೆ. ಅದರಲ್ಲಿ ಯಾವುದೇ ಬದಲಾವಣೆಯೂ ಬೇಡ. ಈಗ ಶಿಕ್ಷಣ ಇಲಾಖೆಯಲ್ಲಿ ಪ್ರಿನ್ಸಿಪಾಲರ ಬಗ್ಗೆ.....

**ಶ್ರೀ ಬಿ.ಜೆ.ಪುಟ್ಟಸ್ವಾಮಿ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದು precedent ಆದರೆ ಎಲ್ಲದಕ್ಕೂ apply ಆಗುತ್ತದೆ ಎಂದು ಹೆಚ್ಚಿಸುತ್ತಾ ಇರುವುದು.

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ಮಾನ್ಯ ಸಭಾಪತಿಯವರೆ, ಹಾಗಾದರೆ ರಾಜಕಾರಣಿಗಳೂ ಸಹ 60 ವರ್ಷಕ್ಕೆ ನಿವೃತ್ತಿ ಹೊಂದುವಂತೆ ಮಾಡಬಹುದಲ್ಲವೆ? ಎಲ್ಲಾ ಎಂ.ಎಲ್.ಎ., ಎಂ.ಎಲ್.ಸಿ., ಎಂ.ಪಿ.ಗಳೂ 60 ವರ್ಷಕ್ಕೆ ನಿವೃತ್ತರಾಗಲಿ.

**ಶ್ರೀ ಸೋಮಣ್ಣ ಮ.ಬೇವಿನಮರದ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ದಯಮಾಡಿ ಅದನ್ನು ತರಲಿ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:-** ಮಾನ್ಯ ಸಭಾಪತಿಯವರೆ, ಅಧಿಕಾರಿಗಳು, ಶಾಸಕರು ಒಂದೇ ಮಾಡುತ್ತಾರೆಯೇ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಪುಟ್ಟಸ್ವಾಮಿಯವರೆ, ಚರ್ಚೆ ಬೇರೆಡೆಗೆ ಹೋಗುವುದು ಬೇಡ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಕೆಲವು ಹುದ್ದೆಗಳನ್ನು ಅನುಭವದ ಮೇಲೆ ಭರ್ತಿ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರ ವಿಚಾರವನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಶಿಕ್ಷಣ ತಜ್ಞರು, ಅನುಭವಸ್ಥರು, ಆಡಳಿತ ತಿಳಿದಿರುವಂತಹವರನ್ನು ಮಾಡಬೇಕಾಗುತ್ತದೆ. ಏಕೆ ನಾನು ಈ ಮಾತನ್ನು ಹೇಳಿದೆನೆಂದರೆ ಮಾನ್ಯ ಉಗ್ರಪ್ಪನವರು ಹೇಳಿದಂತೆ ಮಾಡುವುದಾದರೆ ಎಲ್ಲಾ ಎಂ.ಎಲ್.ಎ., ಎಂ.ಎಲ್.ಸಿ.ಗಳಿಗೂ ವಯಸ್ಸನ್ನು ನಿಗದಿಪಡಿಸಬೇಕಾಗುತ್ತದೆ.

**ಶ್ರೀ ರಾಮಚಂದ್ರಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, that Chairman is only a Presiding Officer, ಅಲ್ಲಿ ಅನುಭವ ಎಂದೇನೂ ಇರುವುದಿಲ್ಲ. ಸಮಿತಿಯ ಸದಸ್ಯರಿಗೆ ಅನುಭವ ಇರಬೇಕು. Youngsters ಇರಬೇಕು. ಸುಮ್ಮನೆ ವಯಸ್ಸನ್ನು ತೆಗೆದುಕೊಂಡು ಮಾಡುವ ಬದಲು ಜೀವನ ಪರ್ಯಂತ ಎಂದು ಮಾಡಿಬಿಡಲಿ. ಜೀವನ ಪರ್ಯಂತ ಸದಸ್ಯರು, ಅಧ್ಯಕ್ಷರು ಅವರೇ ಎಂದು ಮಾಡಿ ಬಿಡಲಿ. 70 ವರ್ಷದ ಮಿತಿ ಏಕೆ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ನಾನು ಈಗ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ. ಗೌರವಾನ್ವಿತ ಸದಸ್ಯರ ಭಾವನೆಗಳನ್ನು ತಾವು note down ಮಾಡಿಕೊಂಡಿರುತ್ತೀರಿ. ಅದಕ್ಕೆ ತಾವೇನು ಉತ್ತರ ಕೊಡುತ್ತೀರೋ, ಸಮಜಾಯಿಷಿ ಕೊಡುತ್ತೀರೋ ಕೊಡಿ. ನಂತರ ಮುಂದೆ ಏನು ಮಾಡಬೇಕೆಂಬುದನ್ನು ನೋಡೋಣ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಅವರು ವಯಸ್ಸಿನ ವಿಚಾರವನ್ನು ಹೇಳಿದ್ದಾರೆ. ಕೆಲವೊಂದು ಹುದ್ದೆಗಳಿಗೆ ನಾವು ಅವರ ವಯಸ್ಸಿನ ಹಿರಿತನ, ಅನುಭವ, ಅವರ ಕಾರ್ಯವೈಖರಿ ಇವೆಲ್ಲವುಗಳನ್ನೂ ನೋಡಬೇಕಾಗುತ್ತದೆ. ಹೀಗಾಗಿ Vice Chairman of the Higher Education Council ಹುದ್ದೆಗೆ ಆಡಳಿತದಲ್ಲಿ ಅನುಭವ ಇರುವಂತಹವರೂ ಶಿಕ್ಷಣ ತಜ್ಞರಾಗಿರುವವರೂ ಬೇಕಾಗುತ್ತದೆ. ಅದಕ್ಕಾಗಿಯೇ ಯು.ಜಿ.ಸಿ. ನಿವೃತ್ತಿಗೆ 70 ವರ್ಷಗಳನ್ನು ನಿಗದಿ ಮಾಡಿದೆ. ಹಾಗಾದರೆ ನಾವು ಇನ್ನು ಮೇಲೆ ಯು.ಜಿ.ಸಿ.ಗೆ ಹೇಳಬೇಕು. We have to tell the University Grant Commission to make it 60. We can make it through resolution also.

ಮಾನ್ಯ ಸಭಾಪತಿಯವರೆ, ನನ್ನದೇನೂ ಅಭ್ಯಂತರ ಇರುವುದಿಲ್ಲ. ನಾವು ಕೇಂದ್ರ ಸರ್ಕಾರದ ಸೂಚನೆಗಳನ್ನು ಪಾಲನೆ ಮಾಡುವುದಿಲ್ಲ. UGC norms ಪ್ರಕಾರ ಬಂದರೆ ನಮ್ಮ ವಿಶ್ವವಿದ್ಯಾಲಯಗಳು ಯಾವುವೂ recognition ಆಗುವುದಿಲ್ಲ. ಮಾನ್ಯ ಸದಸ್ಯರ ಭಾವನೆಗಳಿಗೆ ನನ್ನ ಯಾವುದೇ ವಿರೋಧ ಇರುವುದಿಲ್ಲ. But we have to follow the certain norms set by the UGC. UGC guidelines ಬೇಡವೆಂದರೆ ಎಲ್ಲಾ ವಿಶ್ವವಿದ್ಯಾಲಯಗಳು ಮುಚ್ಚಲ್ಪಡುತ್ತವೆ. 70 ವಯಸ್ಸಿನವರೆವಿಗೂ ಉಪ ಕುಲಪತಿಗಳನ್ನು ನೇಮಕ ಮಾಡಲು ಅವಕಾಶವಿದೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 70 ವರ್ಷದವರೆವಿಗೂ ಉಪ ಕುಲಪತಿಗಳನ್ನು ನೇಮಕ ಮಾಡಬಹುದೆಂದು ಮಾನ್ಯ ಸಚಿವರು ಹೇಳಿದರು. ಈಗ ನಮ್ಮಲ್ಲಿ 67 ಮಾಡಿದ್ದಾರಲ್ಲವೆ?

**ಶ್ರೀ ಬಸವರಾಜ ರಾಯರೆಡ್ಡಿ:–** ಹೌದು ಮಾನ್ಯ ಸಭಾಪತಿಯವರೆ, ಮಾಡಿದ್ದೇವೆ. 70 ವರ್ಷಗಳವರೆಗೆ ಮಾಡಬಹುದು. ನಮ್ಮ ಸರ್ಕಾರ 67ಕ್ಕೆ ಕಟ್ ಆಫ್ ಮಾಡಿದೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅದಕ್ಕೆ UGC norms ಅಡ್ಡ ಬರುವುದಿಲ್ಲವೆ? 67 ಮಾಡುವ ಬದಲು 65 ಮಾಡುವುದಕ್ಕೆ ಸಾಧ್ಯವಿಲ್ಲವೆ?

**ಶ್ರೀ ಬಸವರಾಜ ರಾಯರೆಡ್ಡಿ:–** ಮಾಡಬಹುದು ಮಾನ್ಯ ಸಭಾಪತಿಯವರೆ, ಮಾಡಬಾರದೆಂದು ನಾನು ಹೇಳುವುದಿಲ್ಲ. ಆದರೆ ಪ್ರೊಫೆಸರ್‌ಗಳ ಅನುಭವ ಇನ್ನೂ ಹೆಚ್ಚಿರಲಿ ಎನ್ನುವ ದೃಷ್ಟಿಕೋನದಿಂದ ಈ ರೀತಿ ಮಾಡಲಾಗಿದೆ. ಹಾಗಾದರೆ ಒಬ್ಬರು 40, ಇನ್ನೊಬ್ಬರು 50, ಮತ್ತೊಬ್ಬರು 60 ಎಂದು ಹೇಳುತ್ತಾರೆ. ಇದನ್ನೆಲ್ಲಾ ಕೇಳುವುದಕ್ಕಾಗುತ್ತದೆಯೇ? ಸರ್ಕಾರ 67 ಎಂದು ತೀರ್ಮಾನ ಮಾಡಿದೆ. ಒಬ್ಬೊಬ್ಬರು ಒಂದೊಂದು ವಯಸ್ಸನ್ನು ಹೇಳುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸರ್ಕಾರಿ ನೌಕರರಂತೆ ಮಾಡಿ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಒಬ್ಬೊಬ್ಬ ಮಂತ್ರಿಗಳು ಬಂದಾಗಲೂ ಇದೇ ರೀತಿಯ ಕಥೆಗಳು. ಬಹುಶಃ ಇವರು ಯಾರನ್ನೋ ಮಾಡಬೇಕೆಂದು ಮನಸ್ಸಿನಲ್ಲಿಟ್ಟುಕೊಂಡು ಅಥವಾ ಯಾವುದೋ ಒತ್ತಡ ಇವರ ಮೇಲಿರುವುದರಿಂದ ಅದನ್ನು relaxation ಮಾಡಿ ನೇಮಕ ಮಾಡುತ್ತಾರೆ. ಇದನ್ನು 'ವೃದ್ಧರ ಉನ್ನತ ಶಿಕ್ಷಣ ಪರಿಷತ್' ಎಂದು ಮಾಡುವುದಕ್ಕೆ ಹೇಳಿ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಈ ತರಹ ನಾನು ಖಾಲಿ ಬಿದ್ದರೂ ಮಾಡುವುದಿಲ್ಲ. ನನ್ನ ಬಳಿ ಯಾರೂ ಬಂದಿಲ್ಲ; ನಾನು ಯಾರನ್ನೂ ಮಾತನಾಡಿಸುವುದಿಲ್ಲ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಇವರು 67 ವರ್ಷದವರನ್ನು ಏಕೆ ನೇಮಕ ಮಾಡುತ್ತಿದ್ದಾರೆ?

**Sri BASAVARAJ RAYAREDDY:-** Please, take back that word. Higher Education Council ಅನ್ನು ಮುಚ್ಚಿದರೂ ಪರವಾಗಿಲ್ಲ, ನನಗೇನು ವೈಯಕ್ತಿಕ ತೊಂದರೆ ಇರುವುದಿಲ್ಲ. ಆದರೆ ಅನವಶ್ಯಕವಾಗಿ ನನ್ನ ಮೇಲೆ blame ಮಾಡಬೇಡಿ. ಯಾವುದೇ ಅಭ್ಯರ್ಥಿಯನ್ನು ನಾನು ಮನಸ್ಸಿನಲ್ಲಿಟ್ಟುಕೊಂಡಿಲ್ಲ. ಯಾರೂ ನನ್ನ ಹತ್ತಿರ ಬರುವುದಿಲ್ಲ. ನಾನು ಮಾಡುವುದೂ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸಭಾಪತಿಯವರೆ, ಈಗ ಸಭೆಯ ಗಮನಕ್ಕೆ ಒಂದು ಗಂಭೀರವಾದಂತಹ ವಿಷಯವನ್ನು ತರುತ್ತಿದ್ದೇನೆ. ಇದು ನಮ್ಮ Rules of Procedure ನಡೆದು ಬಂದಿರುವ ಹಾದಿ....

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೆ, ನನ್ನದೊಂದು ಮನವಿ. ಈ ವಯಸ್ಸಿನ ಬಗ್ಗೆ ಮಾತನಾಡುವಾಗ ಹಾಗೂ Higher Education Council ಬಗ್ಗೆ ಮಾತನಾಡುವಾಗ ಹಿರಿಯರನ್ನು ಅಥವಾ ವಯಸ್ಸು ಹೆಚ್ಚಿಗೆ ಆದವರನ್ನು ಏಕೆ ಪರಿಶೀಲನೆ ಮಾಡಬೇಕು; ಅವರನ್ನೇಕೆ ಹೆಚ್ಚು ಪರಿಗಣಿಸಬೇಕು; ಯುವಕರನ್ನು ತರಬಹುದಲ್ಲವೆ ಎನ್ನುವಂತಹ ರೀತಿಯಲ್ಲಿ, ಎಲ್ಲರಿಗೂ ಮನವರಿಕೆಯಾಗುವ ರೀತಿಯಲ್ಲಿ ಮಾನ್ಯ ಸದಸ್ಯರ ಮಾತುಗಳಿದ್ದವು. ಆದರೆ ಒಂದು ಅಂಶವನ್ನು ಗಮನಿಸಬೇಕು. ಬಹಳಷ್ಟು ಜನ ವಿಶ್ವವಿದ್ಯಾಲಯದೊಳಗೆ ತಮ್ಮದೇ ಆದಂತಹ ಪಾತ್ರವನ್ನು ವಹಿಸಿದವರು, ಸಿಂಡಿಕೇಟ್ ಸದಸ್ಯರು, Academic Council represent ಮಾಡಿದವರು, ಪ್ರಾಧ್ಯಾಪಕರಿದ್ದವರೂ ಇದ್ದಾರೆ. ನಮ್ಮ ಶಿಕ್ಷಣ ವ್ಯವಸ್ಥೆಯೊಳಗೆ youngsters cannot become professors. ಈಗ ಐ.ಐ.ಎಂ., ಐ.ಐ.ಟಿಯಲ್ಲಿ 32–35 ವರ್ಷ ವಯೋಮಾನದವರೆಲ್ಲಾ ಪ್ರಾಧ್ಯಾಪಕರಾಗಿರುತ್ತಾರೆ. But in our traditional universities, ನಮ್ಮ ಕಾಲೇಜುಗಳಲ್ಲಿದ್ದ ಉಪನ್ಯಾಸಕರು ವಿಶ್ವವಿದ್ಯಾಲಯದೊಳಗೆ ಹೋಗಬೇಕೆಂದರೆ ಅವರು ಪಿ.ಯು. ಕಾಲೇಜಿನಲ್ಲಿ ಆಗಲಿ, ಡಿಗ್ರಿ ಕಾಲೇಜಿನಲ್ಲಿ ಆಗಲಿ 10 ವರ್ಷ ಬೋಧಿಸಿರಬೇಕು. ನನ್ನ ಮಾತಿಗೆ ಶ್ರೀ ಎಸ್.ವ್ಹಿ. ಸಂಕನೂರ ಅವರು ಸಹಮತಿಸುತ್ತಾರೆಂದು ಭಾವಿಸುತ್ತೇನೆ. ಅಲ್ಲಿ 10 ವರ್ಷ ಕೆಲಸ ಮಾಡಿದ ಮೇಲೆ ಅವನಿಗೆ ರೀಡರ್ ಹುದ್ದೆ ದೊರೆಯುತ್ತದೆ. Compulsory promotions of professorship ಅದರಲ್ಲಿ ಡಾಕ್ಟರೇಟ್ ಮಾಡಿ ಮೂರು – ನಾಲ್ಕು ಮಂದಿಗೆ ಏನು ಗೈಡ್ ಮಾಡಬೇಕೊ ಮಾಡಿ ನಂತರ ಡಾಕ್ಟರೇಟ್ ಅನ್ನು ಪ್ರೊಡ್ಯೂಸ್ ಮಾಡಿದ ಮೇಲೆ, there he gets opportunity of the professors. ಅಷ್ಟರೊಳಗೆ ಅವನ ವಯಸ್ಸೆಷ್ಟಾಗಿರುತ್ತದೆಂದು ಲೆಕ್ಕ ಹಾಕಬಹುದು. ಅದಾದ ಮೇಲೆ ಅವನಿಗೆ ಅವಕಾಶ ಸಿಕ್ಕರೆ ಉಪಕುಲಪತಿ ಆಗುತ್ತಾನೆ. ಇಲ್ಲ ಎಂದರೆ ಇಲ್ಲ. ಅದಕ್ಕಾಗಿ ನಮ್ಮ traditional universities ನಲ್ಲಿ ವಯಸ್ಸು ಬಹಳಷ್ಟು ಆದ ಮೇಲೆಯೇ ಅವನು ಪ್ರೊಫೆಸರ್ ಆಗುವುದು. ಮಾನ್ಯ ಉಗ್ರಪ್ಪನವರು ಅವರು ಸಾಯುವ ತನಕ ಇರುವ ಹಾಗೆ ಮಾಡಿ ಎಂಬ ಒಂದು ಮಾತನ್ನು ಹೇಳಿದರು. Professor

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

of emeritus ಅಥವಾ permanent professors, in many of the foreign universities they continued to be professors as long as they want. There is nothing like retirement. ಅವುಗಳನ್ನು ತಾವು ಗಮನದಲ್ಲಿಟ್ಟುಕೊಂಡು ಈ educational institution committees, educational institutions etc., ಆ ವಯಸ್ಸನ್ನು ತಾವು ಗಮನಿಸಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ವಿಚಾರಗಳನ್ನು ವಿಸ್ತಾರವಾಗಿ ಹೇಳಿದ್ದಾರೆ. ಮಾನ್ಯ ಸದಸ್ಯರ ವಿಚಾರಗಳು, ಭಾವನೆಗಳನ್ನು ನಾನು ಗೌರವಿಸುತ್ತೇನೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ಯುವಕರು ಬರಬೇಕು ಎನ್ನುವ ಮಾತಿನ ಬಗ್ಗೆ ನನ್ನ ಅಭ್ಯಂತರವೇನೂ ಇಲ್ಲ. ಆದರೆ ಮಾನ್ಯ ಪುಟ್ಟಣ್ಣನವರು ನಾನು ಯಾರನ್ನೋ ಮನಸ್ಸಿನಲ್ಲಿಟ್ಟುಕೊಂಡು ಈ ರೀತಿ ಮಾಡಿದ್ದೇನೆ ಎಂದು ನನ್ನ ಮೇಲೆ ಆಪಾದನೆ ಮಾಡಿದ್ದು, ನನಗೆ ಸ್ವಲ್ಪ ಬೇಜಾರಾಯಿತು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ಹಾಗಾದರೆ ಇದನ್ನು ವಾಪಸ್ ತೆಗೆದುಕೊಳ್ಳಲಿ.

(....ಮುಂದು)

(882)/21-06-2017/1-30/RC-RN

(ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಸವರಾಜ್ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):-** ನಾನು ಯಾರಿಗೂ ವೈಯಕ್ತಿಕವಾಗಿ ಸಹಾಯ ಮಾಡುವುದಿಲ್ಲ. ಅದರಿಂದ ನಮಗೆ ಏನು ಪ್ರಯೋಜನವಿಲ್ಲ. ಯಾರಿಗೆ ಮೆರಿಟ್ ಇರುತ್ತದೆ ಅವರು ಬರುತ್ತಾರೆ. ಇಂಥವರನ್ನೇ ನೇಮಕ ಮಾಡಬೇಕೆಂದು ನನಗೆ ವೈಯಕ್ತಿಕವಾಗಿ ಯಾವುದೇ ಅಜೆಂಡಾ ಇಲ್ಲ. ಆದುದರಿಂದ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಿದೆ, ಬೇಕಾದರೆ ನಾನು ಇರುವವರೆಗೂ ಯಾರನ್ನೂ ನೇಮಕ ಮಾಡುವುದಿಲ್ಲವೆಂದು ಹೇಳಿದೆ. ಇನ್ನೇನು ಹೇಳಲಿ? ನಾನು ಯಾರಿಗೂ ಸಹಾಯ ಮಾಡುವುದಿಲ್ಲ. ಅವರಿಗೆ ಸಹಾಯ ಮಾಡಿದರೆ ನನಗೇನು ಸಿಗುತ್ತದೆ? ಯಾರಿಗೆ ಮೆರಿಟ್ ಇರುತ್ತದೆಯೋ ಅವರು ಬರಲಿ. ಉನ್ನತ ಶಿಕ್ಷಣ ಸರಿಯಾಗಲಿ. ದಯಮಾಡಿ ಮಾನ್ಯ ಸದಸ್ಯರು ತಮ್ಮ ಮನಸ್ಸಿನಲ್ಲಿರುವಂತಹ ಭಾವನೆಯನ್ನು ತೆಗೆದುಹಾಕಿ. ಈ ಹುದ್ದೆಗೆ ನಮ್ಮ ಸಂಬಂಧಿಕರು ಬರಬೇಕೆಂಬ intention ಏನು ನನಗಿಲ್ಲ, ಅಥವಾ ನನಗೆ ಗೊತ್ತಿರುವಂಥವರು ಯಾರೂ ಇಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗೇನು ನೀವು ಕಲ್ಪನೆ ಮಾಡಿಕೊಂಡಿದ್ದೀರಿ ಆ ರೀತಿ ಮಾಡುವಂಥವರು ನಿಮ್ಮ ಬೆಂಗಳೂರಿನಲ್ಲಿ ಇರುವಂಥ ಜನರು, ಹಳ್ಳಿಯಲ್ಲಿರುವಂಥವರು ಹೇಗೆ ಬರುತ್ತಾರೆ? ದಯಮಾಡಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿಗೆ ಅನುಭವಸ್ಥರು, ಶಿಕ್ಷಣ ತಜ್ಞರು ಬರಬೇಕಾಗಿದೆ. ಈ ವಿಷಯದ ಬಗ್ಗೆ ನನಗಿಂತಲೂ ನಿಮಗೆ ಹೆಚ್ಚು ತಿಳಿದಿದೆ. ಆದುದರಿಂದ ತಾವೇನು ಯುವಕರನ್ನು ತೆಗೆದುಕೊಳ್ಳಬೇಕೆಂಬ ಸಲಹೆ ಕೊಟ್ಟಿದ್ದೀರಿ ಅಂತಹ ಸಂದರ್ಭ ಬಂದರೆ ಅಂಥದ್ದನ್ನು ಪರಿಗಣಿಸಲಾಗುವುದು. ಆದುದರಿಂದ ಈ ವಿಧೇಯಕಕ್ಕೆ ಒಪ್ಪಿಗೆ ಕೊಟ್ಟು ಅನುಮೋದಿಸಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ಸಚಿವರೆ, ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ. ಈ ದಿವಸ ಸದನ ಒಂದು ಗಂಭೀರವಾದಂತಹ ವಿಷಯದ ಬಗ್ಗೆ ತೀರ್ಮಾನ ಮಾಡಬೇಕಾಗಿದೆ. ಬಹಳ ದಿವಸದ ಹಿಂದೆ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಹಿರಿಯರೆಲ್ಲರೂ ಸೇರಿ ಹಲವಾರು ವಿಷಯಗಳನ್ನು ಬಹಳ ಗಂಭೀರವಾಗಿ ಚರ್ಚೆ ಮಾಡಿದ್ದೇವೆ. ಕಳೆದ ಸುಮಾರು ನಾಲ್ಕೈದು ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಗಳಲ್ಲಿ ಪದೇ ಪದೇ ನಾನು ಹೇಳುತ್ತಾ ಬಂದಿದ್ದೇನೆ. ಆ ಸಭೆಯಲ್ಲಿ ಮಾನ್ಯ ಬಸವರಾಜ ಹೊರಟ್ಟಿಯವರು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಭಾ ನಾಯಕರು ಸರ್ಕಾರದ ಮುಖ್ಯ ಸಚೇತಕರು ಇರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಸಹ ಆ ಸಭೆಯಲ್ಲಿ ಹಾಜರಿರುತ್ತಾರೆ. ಆ ಸಭೆಯಲ್ಲಿ ಕೆಲವು ತೀರ್ಮಾನಗಳನ್ನು ನಾವು ಮಾಡುತ್ತೇವೆ. ಯಾವುದೇ ವಿಧೇಯಕಗಳನ್ನು ನಮ್ಮ ಸದಸ್ಯರಿಗೆ ಮುಂಚೆಯೇ ಕೊಟ್ಟರೆ ಅವರು ಅದು ಸರಿ ಇದೆಯೇ, ತಪ್ಪಿದೆಯೇ ಅಥವಾ ಅಮೆಂಡ್‌ಮೆಂಟ್ ಮಾಡುವುದಕ್ಕೆ ಅವಕಾಶ ಕೊಡಬೇಕೆ ಬೇಡವೆ ಎಂದು ಸ್ಟಡೀ ಮಾಡಿಕೊಂಡು ಬರುತ್ತಾರೆ ಎಂಬ ಕಾರಣಕ್ಕಾಗಿ ವಿಧೇಯಕಗಳನ್ನು ಮುಂಚೆಯೇ ಕೊಡಬೇಕು ಎಂದು ಈ ಅಧಿವೇಶನ ಪ್ರಾರಂಭದ ದಿವಸ ಹೇಳಿದ್ದೂ ಸಹ ನನಗೆ ನೆನಪಿದೆ. ಆ ದಿವಸ ನಡೆದಂತಹ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಆದಂತಹ ತೀರ್ಮಾನವನ್ನು ಸಭೆಯ ಮುಂದೆ ಹೇಳಿದ್ದು ನನಗೆ ನೆನಪಿದೆ. ಆದರೆ ಯಾವ ಕಾರಣಕ್ಕೆ ಎಂದು ಗೊತ್ತಿಲ್ಲ, ಸಿಸ್ಟಂ ಬಗ್ಗೆ ನಾನು ಕಾಮೆಂಟ್ ಮಾಡುವುದಕ್ಕೆ ಹೋಗುವುದಿಲ್ಲ, ಸರ್ಕಾರದಿಂದ ವಿಧೇಯಕಗಳು ಕೊನೆಯ ದಿವಸ ಬರುವುದಕ್ಕೆ ಪ್ರಾರಂಭವಾಗಿ ಅದು ಎಲ್ಲಿಗೋ ಬಂದು ನಿಂತಿದೆ. ಈ ವಿಷಯವನ್ನು ಈಗ ಮತ್ತೊಮ್ಮೆ ಪ್ರಸ್ತಾವನೆ ಮಾಡುವುದಕ್ಕೆ ನನ್ನ ಮುಂದೆ ಒಂದು ಬಲವಾದ ಕಾರಣ ಇದೆ. ಯಾವುದೇ ವಿಧೇಯಕಗಳು ಬಂದಾಗ ಅದಕ್ಕೆ ಅಮೆಂಡ್‌ಮೆಂಟ್ ಕೊಡುವವರು ಅದಕ್ಕೆ proper formನಲ್ಲಿ ಕೊಡಬೇಕು. ಇಲ್ಲವೆಂದರೆ, ಅದು ತಾಂತ್ರಿಕವಾಗಿ ಒಪ್ಪಿಗೆ ಆಗುವುದಿಲ್ಲ. ಆದರೆ ನಾವು ಅವರಿಗೆ proper formನಲ್ಲಿ ಕೊಡುವುದಕ್ಕೆ ಸಮಯವನ್ನೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದಿಲ್ಲ. ದಿಢೀರ್ ಎಂದು ರಾತ್ರಿ ವಿಧೇಯಕಗಳನ್ನು ಕೊಟ್ಟು ಅದರ ಬಗ್ಗೆ ಚರ್ಚೆ ಮಾಡಿ ಎಂದು ಹೇಳುತ್ತೇವೆ.

ಈಗ ಹಿರಿಯ ಸದಸ್ಯರಾಗಿರುವಂತಹ ಮಾನ್ಯ ಬಸವರಾಜ ಹೊರಟ್ಟಿಯವರು ಚರ್ಚೆ ಆಗುತ್ತಿರುವಂತಹ ಈ ಒಂದು ವಿಧೇಯಕಕ್ಕೆ ಒಂದು ಅಮೆಂಡ್‌ಮೆಂಟ್ ಕಳುಹಿಸಿದ್ದಾರೆ. I feel it is not in the proper form, but it is a good issue. ಈಗ ನನ್ನ ಮುಂದೆ ಇರುವಂತಹದ್ದು proper form ನಲ್ಲಿ ಅಮೆಂಡ್‌ಮೆಂಟ್ ಕೊಡುವುದಕ್ಕೆ ಆಗದೆ ಇರುವುದರಿಂದ ಅದನ್ನು ಅಲೋ ಮಾಡಬೇಕೆಂದರೆ ನಾನು ಸದನದ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕು ಅಥವಾ ಈ ವಿಧೇಯಕವನ್ನು ಮತಕ್ಕೆ ಹಾಕಬೇಕಾಗುತ್ತದೆ. ಸಾಮಾನ್ಯವಾಗಿ ಮತಕ್ಕೆ ಹಾಕುತ್ತೇವೆ. ಅಂದರೆ vote ಹಾಕುತ್ತೇವೆ. ಸಾಮಾನ್ಯವಾಗಿ voice voting ನಲ್ಲಿ ತೀರ್ಮಾನ ಮಾಡುತ್ತೇವೆ. ಈ ವಿಧೇಯಕ ಬೇಡ ಎನ್ನುವುದಾದರೆ voice vote ನಲ್ಲಿ reject ಮಾಡುವುದಕ್ಕೆ ಬರುವುದಿಲ್ಲ. Voting ಆಗಿಯೇ reject ಆಗಬೇಕು. ಇಂತಹ ಗಂಭೀರವಾದಂತಹ ವಿಷಯಗಳ ಬಗ್ಗೆ ಚರ್ಚೆ ಮಾಡುವಾಗ ನಾವೆಲ್ಲರೂ ಸೀರಿಯಸ್ ಆಗಿ ಅದರ ಬಗ್ಗೆ ಗಮನಿಸಬೇಕೆಂದು ನಾನು ತಮ್ಮೆಲ್ಲರ ಗಮನವನ್ನು ಸೆಳೆಯುತ್ತಿದ್ದೇನೆ. ಈಗ ಮಾನ್ಯ ಸಚಿವರು ಸಾಕಷ್ಟು ವಿವರಣೆಯನ್ನು ಕೊಟ್ಟರು. ನಾನು ಆ ಕಡೆ ಈ ಕಡೆ ಎರಡೂ ಕಡೆ ಎಂದು ಹೇಳುವುದಿಲ್ಲ. ಇದರಲ್ಲಿ ವಿರೋಧ ಪಕ್ಷ, ಆಡಳಿತ ಪಕ್ಷ ಎಂದು ಇಲ್ಲ. ಈ ವಿಷಯದ ಬಗ್ಗೆ ಮಾನ್ಯ ಉಗ್ರಪ್ಪನವರು ಚೆನ್ನಾಗಿ ಹೇಳಿದರು. ವಿಷಯದ ಬಗ್ಗೆ ತುಂಬಾ ಚೆನ್ನಾಗಿ ಚರ್ಚೆ ಆಯಿತು. ಈಗ ಮಾನ್ಯ ಸಚಿವರು ಕಡೆ ಗಳಿಗೆಯಲ್ಲಿ ದಯಮಾಡಿ ಈ ವಿಧೇಯಕವನ್ನು ಪಾಸ್ ಮಾಡಿಕೊಡಿ ಎಂದು ಕೇಳಿದರು. ನನಗಿರುವ ಮಾರ್ಗ ಮಾನ್ಯ ಬಸವರಾಜ ಹೊರಟ್ಟಿಯವರೆ, ತಾವು ಕಳುಹಿಸಿರುವಂತಹ ಅಮೆಂಡ್‌ಮೆಂಟ್ proper formನಲ್ಲಿ ಇಲ್ಲದೆ ಹೋದರೂ ಸಹ ಸಭೆ ಒಪ್ಪಿದರೆ ನಾನು ಅದನ್ನು ತೆಗೆದುಕೊಳ್ಳುತ್ತೇನೆ. ಇಲ್ಲದೆ ಹೋದರೆ ನಿಮ್ಮ ಅಮೆಂಡ್‌ಮೆಂಟ್ ಅನ್ನು ತಾಂತ್ರಿಕ ಕಾರಣಕ್ಕಾಗಿ ನಾನು consider ಮಾಡುವುದಕ್ಕೆ ಬರುವುದಿಲ್ಲ. ಹಾಗಾದರೆ ನಿಮಗೆ ಯಾವ ದಾರಿ ಇದೆ? ನಿಮ್ಮ ಅಮೆಂಡ್‌ಮೆಂಟ್ ಅನ್ನು ಸಭೆಯ ಮುಂದೆ ಇಡುವುದಕ್ಕೆ ಸಭಾಪತಿಯವರು ಒಪ್ಪುತ್ತಿಲ್ಲವೆಂದರೆ ಈ ವಿಧೇಯಕವನ್ನು ತಾವು ಒಪ್ಪುವುದಿಲ್ಲವೆಂದು ಹೇಳಬೇಕಾಗುತ್ತದೆ. ಅಥವಾ ಒಪ್ಪಿದರೆ ಸಮಸ್ಯೆ ಇಲ್ಲ. ಒಪ್ಪುವುದು ಬಿಡುವುದು ಸದನಕ್ಕೆ ಬಿಟ್ಟಿದ್ದು. ಈಗ ನನ್ನ ದೃಷ್ಟಿಕೋನದಲ್ಲಿ ಇರುವುದು ಇಷ್ಟು ಮಾತ್ರ. ಏಕೆಂದರೆ ಇದು ಬಹಳ ಕ್ಲಿಷ್ಟವಾಗಿರುವಂತಹ ಸಮಸ್ಯೆ. ಅವರದು ಒಂದು amendment allow ಮಾಡಿ, ಬೇರೆ ಯಾರೋ ಕೈ ಎತ್ತಿದ್ದಾರೆ, ನನಗೆ ಗೊತ್ತಿಲ್ಲ ಅವರು ಏಕೆ ಕೈ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎತ್ತಿದ್ದಾರೆಂದು. ಅವರಿಗೆ ನಾನು ಅವಕಾಶ ಕೊಡಲಿಲ್ಲ. ಅವರದು ಅಮೆಂಡ್‌ಮೆಂಟ್ ಮಾಡಿದರೆ ಅವರಿಗೆ ಏಕೆ ಕೊಡುತ್ತೀರಿ? ಒಬ್ಬರಿಗೆ ಕೊಡುತ್ತೀರಿ ಇನ್ನೊಬ್ಬರಿಗೆ ಏಕೆ ಕೊಡುವುದಿಲ್ಲವೆಂದು ಕೇಳುತ್ತಾರೆ. ಈ ಎಲ್ಲಾ ಸಮಸ್ಯೆಗಳು ನನ್ನ ಮುಂದಿವೆ. ಹಾಗಾಗಿ ಮಾನ್ಯ ಬಸವರಾಜ ಹೊರಟ್ಟಿಯವರು ಈ ಅಮೆಂಡ್‌ಮೆಂಟ್ ಅನ್ನು ಏನು ಮಾಡಬೇಕೆಂದು ಎರಡು ನಿಮಿಷದಲ್ಲಿ ತಮ್ಮ ಅಭಿಪ್ರಾಯವನ್ನು ಹೇಳಿದರೆ ಒಳ್ಳೆಯದು. ನಾನು ಹೇಳಿರುವಂತಹ ವಿಷಯಗಳ ಹಿನ್ನಲೆಯಲ್ಲಿ ಇದು ವಿಷಯದ ಪ್ರಾಧಾನ್ಯತೆ ಬಗ್ಗೆ ಮಾತನಾಡುತ್ತಿಲ್ಲ. Procedural points ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಈ ಸದನದಲ್ಲಿ ಬಹಳಷ್ಟು ವರ್ಷಗಳು ಕೆಲಸ ಮಾಡಿರುವಂತಹ ಮಾನ್ಯ ಹೆಚ್.ಕೆ.ಪಾಟೀಲ್, ಮಾನ್ಯ ಟಿ.ಬಿ.ಜಯಚಂದ್ರವರು ಇದ್ದಾರೆ. ಅದೇ ರೀತಿ ಬಹಳ ಹಿರಿಯರು ಅಂದರೆ, ಸರಿಸುಮಾರು ನಲವತ್ತೈದು ವರ್ಷಗಳಿಂದ ಎರಡೂ ಸದನದಲ್ಲಿ ಕೆಲಸ ಮಾಡಿರುವಂತಹ ಶ್ರೀ ಕಾಗೋಡು ತಿಮ್ಮಪ್ಪನವರು ಇದ್ದಾರೆ. ಅದೇ ರೀತಿ ಮಾನ್ಯ ಬಸವರಾಜ ಹೊರಟ್ಟಿಯವರು ಅತ್ಯಂತ ಹಿರಿಯ ಸದಸ್ಯರಿದ್ದಾರೆ. ತಮ್ಮ ಅಭಿಪ್ರಾಯವನ್ನು ಎರಡು ಮಾತುಗಳಲ್ಲಿ ಹೇಳಿದರೆ ನನಗೆ ಮಾರ್ಗ ಸಿಗುತ್ತದೆ. ಇಲ್ಲವೆಂದರೆ I go by rules. ರೂಲ್ಸ್ ಪ್ರಕಾರ ಹೋದರೆ ಕೆಲವರಿಗೆ ಇರಿಸು-ಮುರಿಸು ಆಗಬಹುದು. ಅದು ಸರ್ಕಾರಕ್ಕಾದರು ಆಗಬಹುದು ಅಥವಾ ಸದಸ್ಯರಿಗಾದರು ಆಗಬಹುದು. ಅದರ ಬಗ್ಗೆ ನಾನೇನು ಹೇಳುವುದಕ್ಕೆ ಆಗುವುದಿಲ್ಲ. ದಯವಿಟ್ಟು ಮಾನ್ಯ ಬಸವರಾಜ ಹೊರಟ್ಟಿಯವರು ತಾಂತ್ರಿಕ ಪ್ರಶ್ನೆ ಬಗ್ಗೆ ಏನು ಹೇಳಬೇಕೋ ಹೇಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಈಗ Rule.88 says; " **Notice of amendment:-** *(1)If notice of an amendment to a clause or schedule of the Bill has not been given one clear day before the day on which the Bill is to be considered, any member may object to the moving of the amendment and such objection shall prevail unless the Chairman allows the amendment to be moved.*" ಎಂದು ಇದೆ. ಇದರ ಪ್ರಕಾರ ನಾನು ಕೊಟ್ಟಿದ್ದೇನೆ. ಮಾನ್ಯ ಸಚಿವರು ಯುಜಿಸಿ ನಾರ್ಮ್ಸ್ ಪ್ರಕಾರ 70 ವರ್ಷ ಇದೆ ಎಂದು ಹೇಳಿದರು. ನಾನು 67 ಮಾಡಿ ಎಂದು ಹೇಳಿದೆ. ನಾನು ನಿಯಮದ ಪ್ರಕಾರ ಕೊಟ್ಟಿದ್ದೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಬಸವರಾಜ ಹೊರಟ್ಟಿಯವರೆ, ನಿವೃತ್ತಿಯ ವಯೋಮಿತಿ 67 ವರ್ಷ 70 ವರ್ಷ ಎನ್ನುವಂತಹ ವಿಷಯದ ಬಗ್ಗೆ ಅಲ್ಲ. ಇಲ್ಲಿ ನಿಯಮ ಏನು ಹೇಳುತ್ತದೆ ನೋಡಿ. ಇಂಗ್ಲೀಷಿನಲ್ಲಿ ಓದುತ್ತೇನೆ. ಬೇಕೆಂದರೆ ಕನ್ನಡ ಓದುತ್ತೇನೆ. "**Notice of amendment:-** *(1)If notice of an amendment to a clause or schedule of the Bill has not been given one clear day before the day on which the Bill is to be considered, any member may object to the moving of the amendment...."* '*moving of the amendment*' ಗೆ ಇಲ್ಲಿ ಜಾಗ ಇಲ್ಲ. ಒಂದು ದಿವಸ ಮುಂಚೆಯೇ ಕೊಡಬೇಕಾಗಿತ್ತು. ಆದರೆ ನೀವು ಒಂದು ದಿವಸದ ಮುಂಚೆ ವಿಧೇಯಕವನ್ನೇ ಕೊಟ್ಟಿಲ್ಲ. ಇದು ಈಗಿರುವಂತಹ ಸಮಸ್ಯೆ. ನೀವು ಮೂರು ದಿವಸದ ಮುಂಚೆ ವಿಧೇಯಕವನ್ನು ಕೊಟ್ಟಿದ್ದರೆ, ಅಮೆಂಡ್‌ಮೆಂಟ್‌ಗೆ ಒಂದು ದಿವಸ ಮುಂಚೆಯೇ ಕೊಡಬೇಕಾಗಿತ್ತು ಎಂದು ಹೇಳಿದ್ದರೆ ಅರ್ಥ ಇರುತ್ತಿತ್ತು. ರೂಲ್ ನಂ.88ರಲ್ಲಿ ಈ ರೀತಿ ಹೇಳುತ್ತದೆ. ಇದು ನಾವೇ ಮಾಡಿಕೊಂಡಿರುವಂತಹ ಕಾನೂನು. ನಾವೇ ಮಾಡಿಕೊಂಡಿರುವಂತಹ rules and procedures. ಒಂದು ದಿವಸದ ಮುಂಚೆ ಅಮೆಂಡ್‌ಮೆಂಟ್ ಕೊಡಬೇಕಾಗಿತ್ತು. ಏಕೆ ಕೊಡಬೇಕು ಎಂದರೆ ಆ ಅಮೆಂಡ್‌ಮೆಂಟ್ ಅನ್ನು ನಾನು ಸರ್ಕಾರಕ್ಕೆ ಕಳುಹಿಸಬೇಕು, ಸಂಬಂಧಪಟ್ಟಂತಹ ಸಚಿವರಿಗೆ ಕಳುಹಿಸಬೇಕು ಅವರು ಆ ಅಮೆಂಡ್‌ಮೆಂಟನ್ನು ಒಪ್ಪುತ್ತಾರೋ, ಬಿಡುತ್ತಾರೋ, ಬೇಡವೆಂದು ಹೇಳುತ್ತಾರೋ ಅದು ಅವರ ವಿವೇಚನೆಗೆ ಬಿಟ್ಟಿದ್ದು. ಈಗಿರುವ ಕಾರಣಕ್ಕಾಗಿ ಈಗ ಕಳುಹಿಸುತ್ತಿರುವಂತಹ ವಿಷಯ ಬಹಳ ಗಂಭೀರವಾದಂತಹ ವಿಷಯವಾದರೂ ಸಹ ತಾಂತ್ರಿಕ ಕಾರಣಗಳಿಂದಾಗಿ ನಾನು ಇದನ್ನು ಬೇಡವೆಂದು ಹೇಳಬೇಕಾಗುತ್ತದೆ. ಆದರೆ ಕೇವಲ ಅವರ ತಾಂತ್ರಿಕ ಸಮಸ್ಯೆ ಅಲ್ಲ. ಅವರು ಒಂದು ದಿವಸ ಮುಂಚೆ ಕೊಡುವುದಕ್ಕೆ ನೀವು ಅವರಿಗೆ ಒಂದು ದಿವಸದ ಮುಂಚೆ ವಿಧೇಯಕವನ್ನೇ ಕೊಟ್ಟಿಲ್ಲವಲ್ಲ. ಈ ರೀತಿ ಇರುವಾಗ ಅವರು ಅಮೆಂಡ್‌ಮೆಂಟ್ ಎಲ್ಲಿಂದ ತರುತ್ತಾರೆ? ಇದು ಎಲ್ಲಾ ಸದಸ್ಯರಿಗೂ ಸಮಸ್ಯೆ ಇದೆ. ಈಗೇನು ಮಾಡುತ್ತೀರಿ? ಈಗ ಉಳಿದಿರುವುದು ಈ ವಿಧೇಯಕವನ್ನು ಒಪ್ಪಿಕೊಳ್ಳುವುದು ಅಥವಾ ಬೇಡ ಎನ್ನುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸಧ್ಯಕ್ಕೆ ಈ ವಿಧೇಯಕವನ್ನು ಪೆಂಡಿಂಗ್ ಇಡಿ. ಕುಳಿತು ಚರ್ಚೆ ಮಾಡಿ ಆನಂತರ ತೆಗೆದುಕೊಳ್ಳೋಣ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಈ ವಿಧೇಯಕವನ್ನು withdraw ಮಾಡುವುದಕ್ಕೂ ಅಭ್ಯಂತರವಿಲ್ಲ, pending ಇಡುವುದಕ್ಕೂ ಅಭ್ಯಂತರವಿಲ್ಲ. ಪಾಸ್ ಮಾಡುವುದಕ್ಕೂ ಅಭ್ಯಂತರವಿಲ್ಲ. ನಾನೇನು ಈ ವಿಧೇಯಕವನ್ನು ಪ್ರತಿಷ್ಠೆ ಮೇಲೆ ತಂದಿಲ್ಲ.

**ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೆ, ಇದು ಯಾವುದೇ ಪ್ರತಿಷ್ಠೆಯ ಕೆಲಸವಲ್ಲ, ಸರ್ಕಾರದ ಸದುದ್ದೇಶವನ್ನು ನಿಮ್ಮ ಮುಂದೆ ಇಡುತ್ತೇವೆ. ನೀವು ಪಾಸ್ ಮಾಡಿಕೊಟ್ಟರೆ ಅದು ಕಾನೂನು ಆಗುತ್ತದೆ, ಅದು ಸದನದ ವಿವೇಚನೆಗೆ ಬಿಟ್ಟಿದ್ದು. ಸನ್ಮಾನ್ಯ ಸಭಾಪತಿಯವರು ನಮ್ಮ ಮುಂದೆ ಇಟ್ಟಿರುವಂತಹ ಪ್ರಶ್ನೆ ಏನೆಂದರೆ, Rule.88 of Rules of Procedure ಏನಿದೆ ಅದನ್ನು ಮಾನ್ಯ ಬಸವರಾಜ ಹೊರಟ್ಟಿಯಂಥ ಅನುಭವಸ್ಥ ಶಾಸಕರು ಅಮೆಂಡ್‌ಮೆಂಟ್ ಕಳುಹಿಸಿದ್ದಾರೆ.

(ಮುಂದು)

**(883) 21.06.2017 KG.VK 1.40**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಚ್.ಕೆ.ಪಾಟೀಲ್ (ಮುಂದು...)**

ಮಾನ್ಯ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ ಅವರಂತಹ ಅನುಭವಿ ಶಾಸಕರು ತಿದ್ದುಪಡಿಯನ್ನು ಕಳುಹಿಸಿದ್ದಾರೆ. ಆ ತಿದ್ದುಪಡಿಯನ್ನು ಕೈಬಿಡುವುದು ತಾಂತ್ರಿಕವಾಗಿ ಮಾಡಬೇಕಾಗುತ್ತದೆ. ಅದನ್ನು ಹಾಗೆ ಮಾಡುವುದು ನನಗೆ ಸರಿ ಅನಿಸುವುದಿಲ್ಲ. ಅದನ್ನು ಸದನದ ಮುಂದೆ ಇಡಬೇಕಾಗುತ್ತದೆ. ಅದರ ಮೇಲೆ ಮತದಾನ ಆಗಬೇಕಾಗುತ್ತದೆ. ಈ ಎಲ್ಲಾ ಪ್ರಕ್ರಿಯೆಗಳು ನಡೆಯಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸನ್ಮಾನ್ಯ ಕೆ.ಎಸ್.ಈಶ್ವರಪ್ಪನವರು ಒಂದು ಸಲಹೆಯನ್ನು ಮಾಡಿದ್ದಾರೆ. ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರು ಇಂತಹ ಸಂದರ್ಭದಲ್ಲಿ ಹಾಗೂ ತಾಂತ್ರಿಕ ತೊಂದರೆಯ ಹಿನ್ನೆಲೆಯಲ್ಲಿ ವಿಧೇಯಕವನ್ನು ಪಾಸ್ ಮಾಡುವುದಕ್ಕೆ ಒತ್ತಾಯ ಮಾಡಬೇಡಿ. ಮುಂದಿನ ಸಭೆಯಲ್ಲಿ ಮತ್ತೆ ಏನಾದರೂ ತಿದ್ದುಪಡಿ ಇದ್ದರೆ, ಅದಕ್ಕೆ ಅವಕಾಶ ಮಾಡಿಕೊಡಬಹುದು.

**ಸಭಾಪತಿಯವರು:-** ಮಾನ್ಯ ಸಚಿವರು ಇದಕ್ಕೆ ಉತ್ತರ ಹೇಳಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಹೇಳಿದ್ದೇನೆ. ಮಾನ್ಯ ಸಚಿವರು ಮೊದಲು ಅವರ opinion ಹೇಳಲಿ. ಆ ಮೇಲೆ ನಾನು ಹೇಳುತ್ತೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ನಾನು ಹೇಳಿದ್ದೇನೆಂದರೆ, ಮಾನ್ಯ ಸದಸ್ಯರು ಹೇಳುತ್ತಿರುವುದು Vice Chancellor ವಿಚಾರ. ಇದರಲ್ಲಿ Vice Chancellor ವಿಚಾರ ಇಲ್ಲ. ಈಗ existing ಕಾಯಿದೆಯಲ್ಲಿ 70 ವರ್ಷಕ್ಕೆ ಇದೆ. ಅದನ್ನು 70 ರಿಂದ 75 ವರ್ಷಕ್ಕೆ ಮಾಡುವಂತಹ ಅವಕಾಶಗಳು ಸಹ ಇವೆ. ಅದು ಬೇಕಾಗಿಲ್ಲ. 70 ವರ್ಷಕ್ಕೆ cut off ಮಾಡಬೇಕೆಂಬುದು ನನ್ನ ಉದ್ದೇಶ. ನಮಗೆ ಇದನ್ನು withdraw ಮಾಡುವುದರಿಂದ ಯಾವುದೇ ತೊಂದರೆ ಇಲ್ಲ. ನಾವು ಹೆಚ್ಚು ಮಾಡುವುದಕ್ಕೆ ಹೋಗುತ್ತಿಲ್ಲ. ನಾವು Cut off ಮಾಡುವುದಕ್ಕೆ ಹೊರಟಿದ್ದೇವೆ. ಈಗ 70 ವರ್ಷಕ್ಕೆ ಉಳಿಯುತ್ತದೆ. ಮಾನ್ಯ ಸಭಾಪತಿಯವರೆ, ಈಗ ಸದನದಲ್ಲಿರುವ ಎಲ್ಲಾ ಹಿರಿಯರ ಸದಸ್ಯರು ಇದಕ್ಕೆ ಅನುಮತಿ ಕೊಡಬೇಕೆಂದು ಮನವಿ ಮಾಡುತ್ತೇನೆ. ಏಕೆಂದರೆ, ವಿಧೇಯಕವನ್ನು ತಂದಿದ್ದೇನೆ. ನಾನು ಸದನಕ್ಕೆ request ಮಾಡುತ್ತೇನೆ. ಈಗಾಗಲೇ ಕೆಳಮನೆಯಲ್ಲಿ ಈ ವಿಧೇಯಕ ಪಾಸ್ ಆಗಿದೆ. ದಯಮಾಡಿ, ಇದನ್ನು ಅನುಮೋದನೆ ಮಾಡಿ ಕೊಡಿ ಎಂದು ಮನವಿ ಮಾಡುತ್ತೇನೆ. ಇದರಿಂದ ಸರ್ಕಾರಕ್ಕೆ ಆಗಲೀ ಅಥವಾ ಸಮಾಜಕ್ಕೆ ಆಗಲೀ ಯಾವುದೇ ನಷ್ಟವಿಲ್ಲ. ಅಲ್ಲದೇ ಯಾವುದೇ ಸಮಸ್ಯೆಗಳು ಸಹ ಇಲ್ಲ. Financial implication ಇಲ್ಲ. ಇದು routine ಆಡಳಿತ ನಡೆಸುವಂತಹ ವಿಚಾರಗಳು. ಇದು ತಮಗೂ ಗೊತ್ತಿದೆ. ಹಾಗಾಗಿ, ಇದಕ್ಕೆ ಅನುಮತಿ ಕೊಡಬೇಕೆಂದು ಕಳಕಳಿಯ ಮನವಿ ಮಾಡುತ್ತೇನೆ. ಸದನ ಇದನ್ನು ಪರಿಗಣಿಸಲು ಬರುವುದಿಲ್ಲವೆಂದರೆ, ತಾವು ಇದನ್ನು pending ಇಡುತ್ತೇವೆ ಎಂದರೆ ಇಡಬಹುದು. ಇಲ್ಲ withdraw ಮಾಡಿ ಎಂದರೆ, ಮಾಡುತ್ತೇನೆ. ನಮಗೆ ಇದರಿಂದ ಏನು ತೊಂದರೆ ಇಲ್ಲ.

**ಸಭಾಪತಿಯವರು:-** ಮಾನ್ಯ ಸಚಿವರೆ, ಅದು ಸದನಕ್ಕೆ ಬಿಟ್ಟ ವಿಚಾರ. ನಾನು ಏನು ಹೇಳುವುದಿಲ್ಲ. It is the decision of the House.

**ಶ್ರೀ ಐವನ್ ಡಿ'ಸೋಜಾ (ಸರ್ಕಾರಿ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಏನು ತಿದ್ದುಪಡಿಯನ್ನು ಕಳುಹಿಸಿದ್ದಾರೆ, ಎಂಬುದು ನಮಗೆ ಗೊತ್ತಿಲ್ಲ. ಅವರು ಏನು ಬರೆದಿದ್ದಾರೆ, ಅವರು ಯಾವ ವಿಚಾರಗಳನ್ನು ಕೇಳಿದ್ದಾರೆ, ಅವರಿಗೆ ಬೇಕಾದಂತಹ ತಿದ್ದುಪಡಿಗಳು ಏನು ಎಂಬುದು ನಮ್ಮ ಸದಸ್ಯರಿಗೆ ಬೇಕೆ ಅಥವಾ ಬೇಡವೆ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಮಾನ್ಯ ಮುಖ್ಯ ಸಚೇತಕರೆ, ಒಂದು ನಿಮಿಷ ದಯವಿಟ್ಟು ಕುಳಿತುಕೊಳ್ಳಿ. ಅವರು ಮಾತಿನಲ್ಲಿ ಹೇಳಿದ್ದಾರೆ. ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕಳುಹಿಸಿರುವಂತಹ ತಿದ್ದುಪಡಿಯನ್ನು ಪದಶಃ ನನ್ನ ಎದುರಿಗೆ ಬರೆದುಕೊಟ್ಟಿದ್ದಾರೆ. ನಾನು ಅದನ್ನು ಓದಿಲ್ಲ. ಕಾರಣವೆಂದರೆ, ನಾನು ಅದನ್ನು ಓದಿದರೆ, it becomes the document of the House. ನನಗೆ ತಾಂತ್ರಿಕ ಸಮಸ್ಯೆಗಳು ಬರುತ್ತವೆ. ನಾನು ಅದಕ್ಕಾಗಿ ಕೇಳುತ್ತಿದ್ದೇನೆ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ನಾನು ಮಾತನಾಡಿ ಮುಗಿಸಿ ಬಿಡುತ್ತೇನೆ. ಅವರು ಒಂದು ತಿದ್ದುಪಡಿಯನ್ನು ಬರೆದುಕೊಟ್ಟ ಕೂಡಲೇ ಅದು ತಮಗೆ ಮತ್ತು ಮಾನ್ಯ ಸದಸ್ಯರ ಜೊತೆಗೆ communication ಆಯಿತು. But, what about the other Members?

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅದು ನನ್ನ right. It is my fundamental right. ಹಾಗಾದರೆ, ಅದನ್ನು Vote ಗೆ ಹಾಕಿ.

(ಗೊಂದಲ)

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಅದು ಅವರಿಗೆ ಗೊತ್ತು. ನಮ್ಮ ಸಮಸ್ಯೆ ಏನು? As a Member what I have to do?

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, It is the fundamental right of the Member. According to my rights I have given the Notice.

(ಗೊಂದಲ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಹಿರಿಯ ಸದಸ್ಯರಿದ್ದಾರೆ. I have all the rights to know about that Notice. ನಮಗೂ ಅದರ ಪ್ರತಿಯನ್ನು ಕೊಡಿ...

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಹೌದು. ಅದಕ್ಕೆ ನಾನು ಹೇಳುತ್ತಿದ್ದೇನೆ. ಅವರ ತರಹ ನನಗೆ ಮಾತನಾಡುವುದಕ್ಕೆ ಆಗುವುದಿಲ್ಲ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಮುಖ್ಯ ಸಚೇತಕರೆ, ನಾನು ಹೇಳುವುದನ್ನು ಮೊದಲು ಕೇಳಿ. ಮಾನ್ಯ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರೆ, ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ. ನಾನು ಸದನಕ್ಕೆ ಇದನ್ನು clear ಮಾಡಬೇಕು. ಇಲ್ಲಿ ಸಮಸ್ಯೆ ಬಂದಿರುವುದು 60, 65, 70, 75 ಮತ್ತು 80 ಎನ್ನುವುದಲ್ಲ. ನಾನು ಎತ್ತಿರುವುದು ತಾಂತ್ರಿಕ ಸಮಸ್ಯೆ. ಈ ರೀತಿ ತಿದ್ದುಪಡಿ ಅವರು ಕೊಟ್ಟಿರುವುದನ್ನು ನಾನು outright to ನಿಮಯ 88ರ ಪ್ರಕಾರ reject ಮಾಡಬೇಕಾಗುತ್ತದೆ. ಆದರೆ, ಅವರಿಗೆ ತಿದ್ದುಪಡಿಯನ್ನು move ಮಾಡುವುದಕ್ಕೆ ಸರ್ಕಾರ ಅಥವಾ ನಾನು ಅಂದರೆ, ಸಭಾಪತಿಯವರ ಸ್ಥಾನದಲ್ಲಿ ಕುಳಿತಿರುವವರು ಅದಕ್ಕೆ ಅವಕಾಶವನ್ನು ಕೊಡಲಿಲ್ಲ. ಕಾರಣವೆಂದರೆ, ನಿನ್ನೆ ರಾತ್ರಿ ಅದನ್ನು ಕೊಟ್ಟಿದ್ದಾರೆ. ಒಂದು ದಿವಸ ಮುಂಚೆ amendment ಅನ್ನು ಹೇಗೆ move ಮಾಡುತ್ತಾರೆ. I cannot allow this amendment, whether it is right or wrong. ನಾನು ತಾಂತ್ರಿಕವಾಗಿ ಅದನ್ನು ಮಾಡುತ್ತಿಲ್ಲ. ನಾನು ಅದಕ್ಕಾಗಿ ಅವರಿಗೆ ಕೇಳಿದ್ದು, ಈ ತಿದ್ದುಪಡಿ ಎಷ್ಟೇ ಸದುದ್ದೇಶದಿಂದ ಕೊಟ್ಟಿದ್ದರೂ ಸಹ, I cannot place it before the House. Once, I place it before the House it means that I have accepted to move this amendment. ನಾನು objection raise ಮಾಡುತ್ತಿರುವುದು ಏನೆಂದರೆ, ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರ ಈ ತಿದ್ದುಪಡಿಯನ್ನು ತಾಂತ್ರಿಕವಾಗಿ ಸದನದ ಮುಂದೆ ಇಡುವುದಕ್ಕೆ ಬರುವುದಿಲ್ಲ. ಆ ರೀತಿ ನಾನು ತೀರ್ಮ ಕೊಡಬೇಕೆ ಅಥವಾ ರೂಲಿಂಗ್ ಕೊಡಬೇಕೆ? ಅದಕ್ಕೆ ಮುಂಚೆ ತಾವು ಯೋಚನೆ ಮಾಡಿ ಎಂದು ಸದನದ ಮುಂದೆ ಇಟ್ಟಿದ್ದೇನೆ. ವಿಷಯದ ಬಗ್ಗೆ ಅಲ್ಲ. ಅದು ತಾಂತ್ರಿಕವಾಗಿ ಇರುವ ಪ್ರಶ್ನೆ. ಅದಕ್ಕಾಗಿ ಯಾರಾದರೂ ಹಿರಿಯರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಾರೆಂದು ಅವರ ಹೆಸರುಗಳನ್ನು ಸಹ ಹೇಳಿದೆ. ಮಾನ್ಯ ಎಚ್.ಕೆ.ಪಾಟೀಲ್‌ರವರು, ಮಾನ್ಯ ಕಾಗೋಡು ತಿಮ್ಮಪ್ಪನವರು, ಕಾನೂನು ಮಂತ್ರಿಗಳಾದ ಶ್ರೀ ಟಿ.ಬಿ.ಜಯಚಂದ್ರರವರು ಇದರ ಬಗ್ಗೆ ಬೆಳಕು ಚೆಲ್ಲಬಹುದೆಂದು ಹೇಳಿದೆ.

**ಶ್ರೀ ಎಂ.ಆರ್.ಸೀತಾರಾಮ್ (ಯೋಜನೆ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಒಂದು ಸಲಹೆಯನ್ನು ಕೊಡುತ್ತೇನೆ. ನಮ್ಮ ಮಾನ್ಯ ಸಚಿವರು ನಮ್ಮದು ಪತ್ರಿಷ್ಠೆ ಇಲ್ಲವೆಂದು ಹೇಳಿದ್ದಾರೆ. ಅದಕ್ಕೆ ಈ ವಿಧೇಯಕವನ್ನು pending ಇಡಿ. ಮಾನ್ಯ ಸದಸ್ಯರಾದ ಬಸವರಾಜ ಹೊರಟ್ಟಿಯವರಿಗೆ ಮತ್ತು ತಮಗೂ ತಾಂತ್ರಿಕವಾಗಿ ಇರಿಸು ಮುರಿಸು ಆಗಬಾರದು. ಅವರು withdraw ಮಾಡಿಕೊಳ್ಳಲಿ. ಇದನ್ನು pending ಇಡಿ.

**ಸಭಾಪತಿಯವರು:-** ಮಾನ್ಯ ಸಚಿವರೆ, ಅವರು ಅದನ್ನು ಹಿಂಪಡೆದುಕೊಂಡರೆ ಇದು ಹೋಗಿಬಿಡುತ್ತದೆ. It automatically goes.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ..

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೆ, ಈಗಾಗಲೇ ಈ ವಿಧೇಯಕ ಕೆಳಮನೆಯಲ್ಲಿ ಪಾಸ್ ಆಗಿದೆ. ಇಲ್ಲಿಯೂ ಇದನ್ನು ಪಾಸ್ ಮಾಡಿಕೊಡಿ. ಇದಕ್ಕೆ ಅಭ್ಯಂತರ ಇಲ್ಲವೆಂದು ಮನವಿ ಮಾಡಿದ್ದೇನೆ. convince ಮಾಡಿದ್ದೇನೆ. ಇದರಲ್ಲಿ ಯಾವುದೇ ಸಮಸ್ಯೆ ಇಲ್ಲ. ನಮಗೆ 70 ವರ್ಷಕ್ಕೆ ಸಮಸ್ಯೆ ಇಲ್ಲ. ಇದನ್ನು ಬಾಕಿ ಇಟ್ಟರೂ ಸಹ, 65 ವರ್ಷಕ್ಕೆ ಸಮಸ್ಯೆ ಇಲ್ಲ. ನಾವು in fact cut off ಮಾಡುತ್ತಿದ್ದೇವೆ. ಇಲ್ಲಿ 70ರ ಮೇಲೆ ಮಾಡುವುದಕ್ಕೂ ಅವಕಾಶ ಇದೆ. 65ರ ಮೇಲೆ ಮಾಡುವುದಕ್ಕೂ ಅವಕಾಶ ಇದೆ. We want to seal it. ದಯಮಾಡಿ, ಇದನ್ನು ಸದನ ಒಪ್ಪಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನಿಯಮ 88 ರ ಪ್ರಕಾರ ನಮಗೆ ಮೊದಲೇ ಕೊಡಬೇಕು. ಈಗ ನಾವು ತಿದ್ದುಪಡಿ ಕೊಟ್ಟಿದ್ದೇವೆ. ಮಾನ್ಯ ಸಚಿವರು withdraw ಮಾಡಿಕೊಳ್ಳುವುದಕ್ಕೆ ತಯಾರಿದ್ದಾರೆ ಹಾಗೂ pending ಇಡುವುದಕ್ಕೂ ತಯಾರಿದ್ದಾರೆ. ಅದಕ್ಕೆ ಇದನ್ನು pending ಇಟ್ಟುಬಿಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಮಾನ್ಯ ಸದಸ್ಯರೆ, ಮಾನ್ಯ ಸಚಿವರು ಇದಕ್ಕೆ ಒಪ್ಪಬೇಕು ಅಷ್ಟೇ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ಮತ್ತೆ ನಾನು ಏನು ಮಾಡಲಿ? ನಾವು ಇದರಿಂದ ಸಾಧನೆ ಮಾಡಬೇಕಾಗಿದ್ದು ಏನಿಲ್ಲ. ನನ್ನ ಅಭ್ಯಂತರ ಇಲ್ಲವೆಂದು ನಾನು ಏಕೆ ಹೇಳಿದೆ ಎಂದರೆ, ದಯಮಾಡಿ ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಳ್ಳಬೇಡಿ ಎಂದು ಹೇಳಿದೆ.

(ಗೊಂದಲ)

**ಸಭಾಪತಿಯವರು:–** ಮಾನ್ಯ ಸಚಿವರೆ, ಮಾನ್ಯ ಸದಸ್ಯರು pending ಇಡಿ ಎಂದು ಹೇಳಿಬಿಟ್ಟಿದ್ದಾರೆ. ಇದಕ್ಕೆ ನಿಮ್ಮ ಅಭಿಪ್ರಾಯ ಹೇಳಿ. ಇಲ್ಲ, vote ಗೆ ಹಾಕಿಸಿ ಎಂದರೆ, ನಾನು vote ಗೆ ಹಾಕಿಸುತ್ತೇನೆ.

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, ನಾನು ಇನ್ನು ಪೂರ್ತಿ ಮುಗಿಸಿಲ್ಲ. ಇದನ್ನು Pending ಇಡುವುದಕ್ಕೆ ನನ್ನ ಅಭ್ಯಂತರ ಇಲ್ಲ. ಇದನ್ನು ಏಕೆ ಹೇಳಿದೆ ಎಂದರೆ, ಇದರಲ್ಲಿ ನಮ್ಮ ಯಾವುದೇ ವೈಯಕ್ತಿಕ ವಿಚಾರಗಳು ಇಲ್ಲ. ಕೆಳಮನೆಯಲ್ಲಿ ಇದಕ್ಕೆ ಒಪ್ಪಿಗೆ ನೀಡಿದ್ದಾರೆ. ಅದಕ್ಕೆ ದಯಮಾಡಿ ನಮ್ಮ ಹಿರಿಯ ಸದಸ್ಯರೆಲ್ಲರೂ ಒಪ್ಪಿಗೆ ಕೊಟ್ಟರೆ ಒಳ್ಳೆಯದು ಎನ್ನುವಂತಹ ಮನವಿಯನ್ನು ಮತ್ತೊಂದು ಬಾರಿ appeal ಮಾಡುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಈ ವಿಧೇಯಕವನ್ನು ಪಾಸ್ ಮಾಡುವುದರಿಂದ ಅಥವಾ reject ಮಾಡುವುದರಿಂದ age alter ಆಗುವುದಿಲ್ಲ. ಯಾವುದೇ ಕಾರಣಕ್ಕೂ 65 ಇರುತ್ತೆ, 70 ಇರುತ್ತೆ. ಅವರು unnecessary age ಅನ್ನು ತಂದಿದ್ದಾರೆ. ಹಾಗಾಗಿ, ಹಳೆಯದೆ ಉಳಿಯುವುದರಿಂದ ಈ ವಿಧೇಯಕವನ್ನು ಪಾಸ್ ಮಾಡುವುದಕ್ಕೆ ನನ್ನ ಅಭ್ಯಂತರ ಇಲ್ಲ. ಬಹುಶಃ ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಸಹ ಇದಕ್ಕೆ ಒಪ್ಪುತ್ತಾರೆ ಎಂದು ಭಾವಿಸುತ್ತೇನೆ.

**ಸಭಾಪತಿಯವರು:–** ಹಾಗಾದರೆ, ನನಗೆ ಈಗ ಉಳಿದಿರುವುದು ಒಂದೇ ದಾರಿ. ಸದನದ ಮತ ತೆಗೆದುಕೊಳ್ಳಬೇಕಾಗುತ್ತದೆ. ನಾನು ಮತ ತೆಗೆದುಕೊಳ್ಳುವಾಗ ಇದನ್ನು pending ಇಡಬೇಕೇ ಅಥವಾ ಬೇಡವೇ ಎಂದು ಮತ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. Whether this bill could be accepted or rejected ಅಷ್ಟೇ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಏನು move ಮಾಡಿದ್ದಾರೆ, ಅದರ ಮೇಲೆ ಅವರು decision ಹೇಳಲಿ. ಈಗ ಏನಾಗಿದೆ ಎಂದರೆ, ಮಾನ್ಯ ಸಚಿವರು ಸರಿಯಾಗಿ ಮೊದಲೆ clarity ಕೊಡಲಿಲ್ಲ. ಮೊದಲು 70 ರೊಳಗೆ ಇದೆ ಎಂದು ಹೇಳಿದ್ದರೆ, ಈ ಸಮಸ್ಯೆ ಬರುತ್ತಿರಲಿಲ್ಲ. ಮೊದಲು 70 ರೊಳಗೆ ಇಲ್ಲವೆಂದು ಹೇಳಿದ್ದಕ್ಕೆ ಈ ಸಮಸ್ಯೆ ಹುಟ್ಟಿಕೊಂಡಿದೆ. clarification ನಲ್ಲಿ 70 ರೊಳಗಿದೆ ಎಂದು ಹೇಳಿದ್ದಾರೆ. ಹಾಗಾಗಿ, ಇದನ್ನು pending ಇಟ್ಟರೂ ಉಪಯೋಗ ಇಲ್ಲ. withdraw ಮಾಡಿದರೂ ಉಪಯೋಗ ಇಲ್ಲ. 70 ರೊಳಗೆ ಇರುವುದು ಇದ್ದೇ ಇರುತ್ತದೆ. ಈಗ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಅದರ ಬಗ್ಗೆ ತೀರ್ಮಾನ ತೆಗೆದುಕೊಂಡು ಅವರು ಏನು ಬೇಕಾದರೂ ಮಾಡಲಿ.

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ತಮ್ಮ ಅಭಿಪ್ರಾಯ ಹೇಳಿದರೆ ನಾನು ಮುಂದಕ್ಕೆ ಹೋಗುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಅದರ ಅವಶ್ಯಕತೆ ಇಲ್ಲವೆಂದು ಹೇಳಿದ್ದಾರೆ. ಮತ್ತೆ ಏಕೆ ಅದನ್ನು ಸದನಕ್ಕೆ ತರಬೇಕಿತ್ತು. ನಾವು ತಿದ್ದುಪಡಿಗೆ stick-on ಆಗುತ್ತೇವೆ. ತಾವು ಏನು ತೀರ್ಮಾನ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ನಾನು ತಿದ್ದುಪಡಿಯನ್ನು ಹಿಂಪಡೆಯುವುದಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರೆ, ನನಗೆ ಇರುವುದು ಒಂದೇ ಮಾರ್ಗ. ನಾನು ಮುಂದಕ್ಕೆ ಹೋಗುತ್ತೇನೆ. ತಾವು voice vote ಒಳಗೆ ಇದನ್ನು ಒಪ್ಪುವುದಾದರೆ, ಒಪ್ಪಬಹುದು. Voice vote ನಲ್ಲಿ ಒಪ್ಪುವುದಿಲ್ಲವೆಂದರೆ, I will go for the voting. And in that voting, this bill may be accepted or may be rejected. It is the discretion of the House.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಈಗ ಹೊಸ ಹೊಸ ಸಂಪ್ರದಾಯಗಳನ್ನು ಇಲ್ಲಿ ತರುವುದು ಬೇಡ. ಇಲ್ಲಿ ದೊಡ್ಡ ಸಮಸ್ಯೆಯನ್ನು ಉಂಟು ಮಾಡಿದ್ದು ಮಾನ್ಯ ಸಚಿವರಾದ ಶ್ರೀ ಬಸವರಾಜ ರಾಯರೆಡ್ಡಿರವರು. ವಿಧೇಯಕ ಇರುವಂತಹ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಂದರ್ಭದಲ್ಲಿಯೇ 70 ವರ್ಷ ಎಂದು ಇದೆ. ಮಾನ್ಯ ಸಚಿವರು ಮತ್ತೆ ತಪ್ಪಾಯಿತು ಎಂದು ಒಪ್ಪಿಕೊಂಡು ಮತ್ತೆ ಇನ್ನೊಂದು ತಪ್ಪು ಮಾಡುವುದಕ್ಕೆ ಹೋಗಬಾರದು.

(ಗೊಂದಲ)

**ಶ್ರೀ ಬಸವರಾಜ ರಾಯರೆಡ್ಡಿ:–** ಮಾನ್ಯ ಸಭಾಪತಿಯವರೆ, 70 ರಿಂದ ಮೇಲೆ ಮಾಡುವುದಕ್ಕೂ ಸಹ ಅವಕಾಶ ಇದೆ ಎಂದು ನಾನು ಹೇಳಿದೆ.

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ದಯವಿಟ್ಟು ಹೊಸ ಹೊಸ ಸಂಪ್ರದಾಯಗಳನ್ನು ಸದನಕ್ಕೆ ತರುವುದು ಬೇಡ. ಪ್ರತಿ ಬಾರಿ ವಿಧೇಯಕಗಳಿಗೆ ನಾವು voting ಗೆ ಹಾಕುವಂತಹ ಪರಿಸ್ಥಿತಿಯನ್ನು ಏಕೆ ತರಬೇಕು? ಇದೊಂದು ವ್ಯವಸ್ಥೆಯೆ? ಸರ್ಕಾರ ಯೋಚನೆ ಮಾಡಿ ಅಧಿಕಾರಿಗಳ ಜೊತೆಗೆ ಕುಳಿತುಕೊಂಡು ಚರ್ಚೆ ಮಾಡಿಕೊಂಡು ವಿಧೇಯಕವನ್ನು ತರಬೇಕು. ನಾವು ವಿರೋಧಪಕ್ಷದವರಾಗಿ ಸ್ವಾಭಾವಿಕವಾಗಿ ನಮ್ಮ ಸಲಹೆಗಳನ್ನು ಕೊಡುತ್ತೇವೆ. ಇದನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಹೋದರೆ ಹೇಗೆ ಆಗುತ್ತದೆ? ಈಗ ಆಗಿದ್ದು ಆಗಿದೆ. ಇದರಿಂದ ವ್ಯತ್ಯಾಸಗಳಾಗುವುದಿಲ್ಲವೆಂದು ಸರ್ಕಾರವೆ ಹೇಳುತ್ತಿದೆ. ನಾವು ತಪ್ಪು ಮಾಡಿಕೊಂಡಿದ್ದೇವೆಂದು official ಆಗಿ ಅವರು ಒಪ್ಪಿಕೊಂಡಿದ್ದಾರೆ. ಹಾಗಾಗಿ, ಏನು ವ್ಯತ್ಯಾಸಗಳು ಆಗದೆ ಇರುವುದರಿಂದ ಈ ವಿಧೇಯಕವನ್ನು ಪಾಸ್ ಮಾಡಿ ಕೊಡುವುದಕ್ಕೆ ನನ್ನ ಅಭ್ಯಂತರ ಇರುವುದಿಲ್ಲ.

(ಮುಂದು...)

(884) 1:50 21-06-2017 CS.VK

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.”

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

<u>ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು</u>

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಖಂಡ 2 ರಿಂದ 7ರವರೆಗೆ**

**ಸಭಾಪತಿಯವರು:–** "ಖಂಡ 2ರಿಂದ 7ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 7ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಬಸವರಾಜ ರಾಯರೆಡ್ಡಿ(ಉನ್ನತ ಶಿಕ್ಷಣ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಈಗ ಸಭೆಯ ಮುಂದೆ ಇದೇ ರೀತಿಯ ಮತ್ತೊಂದು ಗಂಭೀರವಾದ ವಿಚಾರ ಬಂದಿದೆ. ನಿನ್ನೆ ರಾತ್ರಿ ನಾಲ್ಕು ವಿಧೇಯಕಗಳನ್ನು ನಮ್ಮ ಕಚೇರಿಯಿಂದ ಕಳುಹಿಸಿಕೊಡಲಾಗಿತ್ತು. ಈಗ ಆ ನಾಲ್ಕು ವಿಧೇಯಕಗಳು ಮಂಡನೆ ಆಗಿ, ಸಭೆ ತನ್ನ ವಿವೇಚನೆಯಿಂದ ನಾಲ್ಕು ವಿಧೇಯಕಗಳನ್ನು ಪಾಸ್ ಮಾಡಿಕೊಟ್ಟಿದೆ. ನಿನ್ನೆ ರಾತ್ರಿ ನಾಲ್ಕು ವಿಧೇಯಕಗಳನ್ನು ಮಾತ್ರ ಕೊಡಲಾಗಿತ್ತು. ಇನ್ನುಳಿದ ವಿಧೇಯಕಗಳು ನಿನ್ನೆ ಮಧ್ಯಾಹ್ನ ಅಥವಾ ಸಾಯಂಕಾಲದ ಮೇಲೆ ಕೆಳಮನೆಯಲ್ಲಿ ಪಾಸ್ ಆಗಿ ಬಂದಿವೆ. ಅದರಲ್ಲಿ ಕೆಲವನ್ನು ಸರ್ಕಾರ ಬಹಳ ಸಣ್ಣ ವಿಚಾರ ಇರುವುದರಿಂದ ಅದನ್ನು ತೆಗೆದುಕೊಳ್ಳಬೇಕೆಂದು ನನಗೆ ಸರ್ಕಾರದ ಕಡೆಯಿಂದ ಬೇಡಿಕೆಗಳು ಬರುತ್ತಿವೆ. ಪ್ರಮುಖವಾಗಿ ಸಮಾಜಕಲ್ಯಾಣ ಸಚಿವರಾದ ಮಾನ್ಯ ಹೆಚ್.ಆಂಜನೇಯರವರು ತಮ್ಮ ಬಿಲ್ ಬಹಳ ಸಿಂಪಲ್ ಆಗಿದ್ದು, ಅದರಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಇದನ್ನು ಸಭೆಯ ಒಪ್ಪಿಗೆಗೆ ತರಬೇಕೆಂದು ನಮ್ಮ ಕಾರ್ಯದರ್ಶಿಯವರ ಮೂಲಕ ಹೇಳಿ ಕಳುಹಿಸಿದ್ದಾರೆ. ಈ ತಿದ್ದುಪಡಿ ವಿಧೇಯಕವನ್ನು ಮಂಡಿಸುವುದಕ್ಕೆ ಸಭೆ ಒಪ್ಪಿದರೆ ಮಾತ್ರ ನಾನು ಸಚಿವರಿಗೆ ವಿಧೇಯಕ ಮಂಡಿಸಲು ಅವಕಾಶ ನೀಡುತ್ತೇನೆ. ಅದರ ಬಗ್ಗೆ ತಾವು ಮಾತನಾಡಿ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಗಳೇ, ತಾವೇ ನಿನ್ನೆಯ ದಿವಸ ಯಾವುದೇ ವಿಧೇಯಕ ಆದರೂ ಸಹ 3 ದಿವಸಗಳಿಗೆ ಮುಂಚಿತವಾಗಿ ಸದನದಲ್ಲಿ ಮಂಡನೆ ಆಗಬೇಕು ಎಂದು ಹೇಳಿದಿರಿ. ಆದರೆ ಇವತ್ತು ತರಾತುರಿಯಲ್ಲಿ ವಿಧೇಯಕ ಮಂಡಿಸಿದರೆ ಏನೂ ಗೊತ್ತಿಲ್ಲದೇ, ಅದರ ಬಗ್ಗೆ ತಿಳುವಳಿಕೆ ಇಲ್ಲದೆ ನಾವು ಹೇಗೆ ಪಾಸ್ ಮಾಡುವುದು? ಆದುದರಿಂದ ನಿನ್ನೆ ದಿವಸ ತಾವು ಕೈಗೊಂಡ ನಿರ್ಧಾರದಂತೆ ಆದರೆ ಸೂಕ್ತ ಎಂದು ನನಗನಿಸುತ್ತದೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಗಳೇ, ಈ ವಿಧೇಯಕವನ್ನು ಚರ್ಚೆ ಇಲ್ಲದೆ ಪಾಸ್ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೇ, ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಆಂಜನೇಯರವರು ತಂದಿರತಕ್ಕ ವಿಧೇಯಕ. . .

**Mr. CHAIRMAN:-** Don’t go to the merit of the bill.

**ಶ್ರೀ ಕೆ.ಎಸ್.ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):–** ನಾನು ಬಿಲ್ ನ merit ಬಗ್ಗೆ ಹೇಳುವುದಿಲ್ಲ. ಇಲ್ಲಿ ಬಂದಿರುವ ಪ್ರಶ್ನೆ ಏನೆಂದರೆ, ಕರ್ನಾಟಕ ವಿಶ್ವವಿದ್ಯಾನಿಲಯಗಳ ವಿಧೇಯಕ ಕೂಡ

“ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವುದರಿಂದ ಅದರ ಬಗ್ಗೆ ವಿಧಾನಸಭೆಯಲ್ಲಿ ಸಾಕಷ್ಟು ಚರ್ಚೆ ಆಗಿ ಪಾಸ್ ಆಗಿದೆ. ಅಲ್ಲಿ ಚರ್ಚೆ ಆಗಿರುವ ಹಿನ್ನೆಲೆಯಲ್ಲಿ ಇಲ್ಲಿಯೂ ಸಹ ಸಾಕಷ್ಟು ಚರ್ಚೆ ಆಗಬೇಕೆನ್ನುವುದರ ಬಗ್ಗೆ ಯಾವುದೇ ಅನುಮಾನ ಇಲ್ಲ. ಆದರೆ ಚರ್ಚೆ ಮಾಡುವುದಕ್ಕೆ ನಾವು ಬಿಲ್ ಅನ್ನು ಓದಿಯೇ ಇಲ್ಲ.

**ಸಭಾಪತಿಯವರು:-** ಇಲ್ಲಿ ಆಂಜನೇಯರವರು ಒಂದು ಬಿಲ್ ತಂದಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ( ವಿರೋಧ ಪಕ್ಷದ ನಾಯಕರು):-** ಇದನ್ನು ಪಾಸ್ ಮಾಡುತ್ತಿದ್ದ ಹಾಗೆ ಮತ್ತೊಂದು ಬಿಲ್ ಬರುತ್ತದೆ. ಒಂದು ತೆಗೆದುಕೊಂಡು ಮತ್ತೊಂದನ್ನು ಬಿಟ್ಟರೆ ಒಂದು ವಿಧೇಯಕಕ್ಕೆ ಅನುಮತಿ ನೀಡಿದರೂ ಮತ್ತೊಂದಕ್ಕೆ ಅನುಮತಿ ನೀಡಲಿಲ್ಲ ಎನ್ನುವ ಪ್ರಶ್ನೆ ಬರುತ್ತದೆ. ಈಗ ಮಾನ್ಯ ಸಮಾಜಕಲ್ಯಾಣ ಸಚಿವರಾದ ಆಂಜನೇಯರವರು ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಯ ವಿಧೇಯಕವನ್ನು ತಂದಿದ್ದಾರೆ. ಆದರೆ ಕರ್ನಾಟಕ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಚರ್ಚೆ ಇಲ್ಲದೇ ಪಾಸ್ ಮಾಡುವುದಕ್ಕೆ ನಾವು ಯಾವುದೇ ರೀತಿಯಲ್ಲಿಯೂ ಅವಕಾಶ ನೀಡುವುದಿಲ್ಲ. ಮಾನ್ಯ ಆಂಜನೇಯರವರು ತಂದಿರುವ ವಿಧೇಯಕವನ್ನು ಸಹ ನಾವು ಓದಿಲ್ಲ, ಆದರೆ ಅವರು ಇದೊಂದು ಸಣ್ಣ ವಿಧೇಯಕ ಎಂದು ಹೇಳುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯಗಳ ವಿಧೇಯಕವನ್ನು ಮಂಡಿಸುವುದಿಲ್ಲವೆಂದು ಸರ್ಕಾರ ಒಪ್ಪಿಕೊಂಡರೆ, ಮತ್ತು ತಾವು ಆ ವಿಧೇಯಕವನ್ನು ಟೇಬಲ್ ಮಾಡದಿದ್ದರೆ ನಾವು ಈ ವಿಧೇಯಕವನ್ನು ಒಪ್ಪಿಕೊಳ್ಳಬಹುದು. ಈ ನಿರ್ಧಾರವನ್ನು ನಾನು ಸರ್ಕಾರಕ್ಕೆ ಬಿಡುತ್ತೇನೆ. ಆದರೆ ಇಲ್ಲ ಕರ್ನಾಟಕ ವಿಶ್ವವಿದ್ಯಾನಿಲಯಗಳ ವಿಧೇಯಕ ತರುತ್ತೇವೆಂದರೆ, ನಾವು ಯಾವುದೇ ವಿಧೇಯಕಕ್ಕೂ ಇಲ್ಲಿ ಮಂಡನೆಗೆ ಅವಕಾಶ ನೀಡುವುದಿಲ್ಲ.

**ಸಭಾಪತಿಯವರು:-** ತಾವು ಬಹಳ ಒಳ್ಳೆಯ ವಿಚಾರವನ್ನು ಪ್ರಸ್ತಾಪಿಸಿದ್ದೀರಿ. ನಾನು ಈ ಮೊದಲೇ ಹೇಳಿದ್ದೇನೆ. My stand is quite clear. ನಾನು ಗೌರವಾನ್ವಿತ ಸಭಾನಾಯಕರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ನಮಗೆ ಚರ್ಚೆಗೆ ಸಾಕಷ್ಟು ಸಮಯ ನೀಡದಿದ್ದರೆ ವಿಧೇಯಕಗಳನ್ನು ಜಾರಿ ಮಾಡುವುದಕ್ಕೆ ಆಗುವುದಿಲ್ಲ, ಅದರಲ್ಲಿಯೂ ಅಧಿವೇಶನದ ಕಡೆಯ ದಿವಸ ವಿಧೇಯಕ ತಂದಲ್ಲಿ ಸದಸ್ಯರನ್ನು ಒಪ್ಪಿಸುವುದಕ್ಕೆ ಆಗುವುದಿಲ್ಲ ಎಂದು ಪದೇ ಪದೇ ಹೇಳಿದ್ದೇನೆ. ನಾವು ಎಲ್ಲದಕ್ಕೂ ನಿಯಮಾವಳಿಗಳ ಪುಸ್ತಕವನ್ನು ಉಲ್ಲೇಖಿಸುತ್ತೇವೆ. ಈ ಪುಸ್ತಕದಲ್ಲಿಯೇ ವಿಧೇಯಕಗಳನ್ನು ಎಷ್ಟು ದಿವಸಗಳಿಗೆ ಮುಂಚಿತವಾಗಿ ಮಂಡಿಸಬೇಕೆನ್ನುವುದಿದೆ. ತಿದ್ದುಪಡಿಗಳನ್ನೇ ಒಂದು ದಿವಸಕ್ಕೆ ಮುಂಚಿತವಾಗಿ ಮಾನ್ಯ ಸದಸ್ಯರುಗಳು ನೀಡಬೇಕಾಗುತ್ತದೆ. ಈಗ ವಿಧೇಯಕವನ್ನು ಪ್ರಿಂಟ್ ಮಾಡಿ ತಂದಲ್ಲಿ, ಹೊರಟ್ಟಿಯವರಾಗಲೀ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರಾಗಲಿ, ಮಾನ್ಯ ಉಗ್ರಪ್ಪನವರು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗೂ ಮತ್ತಿತರ ಗೌರವಾನ್ವಿತ ಸದಸ್ಯರಾಗಲೀ ಯಾವ ತಿದ್ದುಪಡಿಯನ್ನು ನೀಡಲಿಕ್ಕೆ ಅವಕಾಶವಾಗುತ್ತದೆ? ಸದನಕ್ಕೆ ಒಂದು ದಿವಸ ಮುಂಚಿತವಾಗಿ ಸದಸ್ಯರು ತಿದ್ದುಪಡಿಗಳನ್ನು ನೀಡಬೇಕು, ಆದರೆ ಇಲ್ಲಿ ಸರ್ಕಾರ ವಿಧೇಯಕವನ್ನೇ ಒಂದು ದಿವಸಕ್ಕೆ ಮುಂಚಿತವಾಗಿ ನೀಡಿಲ್ಲ. ಹಾಗಾಗಿ ಇವೆಲ್ಲ ಸಮಸ್ಯೆಗಳಿವೆ. ನಿನ್ನೆಯ ದಿವಸ ಕೊಟ್ಟಂತಹ ಬಿಲ್‌ಗೆ ಸ್ವಲ್ಪ ಸಮಯಾವಕಾಶ ಇದ್ದುದರಿಂದ ಇವತ್ತು ವಿಧೇಯಕಗಳನ್ನು ಮಂಡಿಸುವುದಕ್ಕೆ ಅವಕಾಶ ನೀಡಿದೆನು. ಆದರೆ ಈಗ ಇನ್ನೂ ಕೆಲವು ವಿಧೇಯಕಗಳು ಕೆಳಮನೆಯಿಂದ ಬಂದಿವೆ. ಇದರಲ್ಲಿ ಒಂದು ತೆಗೆದುಕೊಂಡು ಮತ್ತೊಂದು ತೆಗೆದುಕೊಳ್ಳುವುದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಬೇರೆ ಯಾವುದೇ ಬಿಲ್ ತೆಗೆದುಕೊಳ್ಳದಿದ್ದರೆ ಈ ವಿಧೇಯಕ ತೆಗೆದುಕೊಳ್ಳಬಹುದು ಎನ್ನುವುದು ಏಕೋ ನನಗೆ ಸರಿ ಕಾಣುತ್ತಿಲ್ಲ. ಇಷ್ಟರ ಮೇಲೆ ಸಭೆಯ ಅಭಿಪ್ರಾಯದಂತೆ ನಾನು ನಡೆದುಕೊಳ್ಳಬೇಕಾಗುತ್ತದೆ. ನನಗೆ ನೀವೆಲ್ಲರೂ ತಮ್ಮ ರೂಲಿಂಗ್ ಅನ್ನು ಕೊಡಿ ಎಂದರೆ, ಸಭಾಪತಿಯಾಗಿ ನಾನು ಈ ರೀತಿ ಸಮಯಾವಕಾಶ ಇಲ್ಲದೆ ವಿಧೇಯಕಗಳನ್ನು ತೆಗೆದುಕೊಳ್ಳುವುದು ಬಹಳ ಕಷ್ಟ. ಇದನ್ನು ಸಭೆಯ ಗಮನಕ್ಕೆ ತಂದು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಇದು ಬಹಳ ಗಂಭೀರವಾದ ವಿಚಾರ. ಪದೇ ಪದೇ ಅದೇ ಮಾತುಗಳು ಬರಬಾರದೆನ್ನುವ ಕಾರಣಕ್ಕೆ ಈ ಮಾತುಗಳನ್ನು ನಾನು ಹೇಳುತ್ತಿದ್ದೇನೆ. ಇದರ ಮೇಲೆ ಸಭೆಯ ಅಭಿಪ್ರಾಯದ ಜೊತೆಗೆ ನಾನು ಇರುತ್ತೇನೆ.

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-** ಮಾನ್ಯ ಸಭಾಪತಿಗಳೆ, ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆ ನಡೆದಂತಹ ಸಂದರ್ಭದಲ್ಲಿ ತಾವು ಮುಂಚಿತವಾಗಿಯೇ ವಿಧೇಯಕಗಳನ್ನು ಸದನದಲ್ಲಿ ಮಂಡಿಸಬೇಕೆಂದು ಸೂಚಿಸಿರುವುದು ನಿಜ. ಇದನ್ನು ನಾನು ಒಪ್ಪುತ್ತೇನೆ. ನಿನ್ನೆಯ ದಿವಸ ಕೆಳಮನೆಯಲ್ಲಿ ಪಾಸ್ ಆದಂತಹ ವಿಧೇಯಕಗಳು ಇವತ್ತು ಈ ಸದನದಲ್ಲಿ ಅಧಿಕೃತವಾಗಿ ಮಂಡನೆ ಆಗಿವೆ. ವಿರೋಧ ಪಕ್ಷದಲ್ಲಿರುವವರು ಕೂಡ ಆಡಳಿತ ನಡೆಸಿರುವವರು, ಅವರಿಗೂ ಸಹ ನಮ್ಮ ಹಾಗೆಯೇ ಅನುಭವ ಆಗಿರುತ್ತದೆ. ಅನೇಕ ವಿಚಾರಗಳು ತುರ್ತಾಗಿ ಬರುತ್ತವೆ, ಹೇಗೆ ತುರ್ತು ಎಂದು ಹೇಳಿದರೆ ಒಮ್ಮೊಮ್ಮೆ ಭಾರತ ಸರ್ಕಾರದ ಪಾಲಿಸಿಗಳಲ್ಲಿ ಬದಲಾವಣೆ ಆದಂತಹ ಸಂದರ್ಭದಲ್ಲಿ ಸದನ ನಡೆಯತಕ್ಕ ಸಂದರ್ಭದಲ್ಲಿ ಅನಿವಾರ್ಯವಾಗಿ ಪಾಲಿಸಿಗೆ ಮನ್ನಣೆಯನ್ನು ಪಡೆಯಬೇಕಾದರೆ ಶಾಸನದ ಮುಖೇನ ಮಾಡಬೇಕಾಗುತ್ತದೆ. ಆ ಕಾರಣದಿಂದ ನಾನು ಆಕಸ್ಮಿಕವಾಗಿ ವಿಧೇಯಕಗಳನ್ನು ಮಂಡನೆ ಮಾಡಬೇಕಾಗುತ್ತದೆ.

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(885):2.00:21-06-2017:ಎಂವಿ:ಬಿಎನ್ಎಸ್**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಟಿ.ಬಿ.ಜಯಚಂದ್ರ (ಮುಂದು...):-**

ಆ ಕಾರಣಕ್ಕೋಸ್ಕರ ನಾವು sudden ಆಗಿ ಮಂಡನೆ ಮಾಡಬೇಕಾಗುತ್ತದೆ. ಬಹುಶ: Social Welfare Department's Bill ಈಗ ಬಂದಿರುವುದು ಅದೇ ಕಾರಣಕ್ಕೋಸ್ಕರ. ಈಗ 'plan' ಮತ್ತು 'non-plan' ಎನ್ನುವಂಥದ್ದನ್ನು ತೆಗೆದು ಹಾಕಿದ ಹಿನ್ನೆಲೆಯಲ್ಲಿ, ಇವತ್ತಿನ ದಿವಸ ಅದಕ್ಕೆ suitable amendment ಏನು ಮಾಡಬೇಕು ಎಂಬುದರ ಬಗ್ಗೆ ಬಂದಿದೆ. ಈ ರೀತಿಯಾಗಿ ಸಣ್ಣಪುಟ್ಟ Bills ಗಳು ಇರುತ್ತವೆ. ನಾವು 'consequential amendments' ಎಂದು ಕರೆಯಬಹುದು. ಆ ತರಹ ಒಂದು ಹೊಸ ಚಿಂತನೆಯನ್ನು ಇಟ್ಟುಕೊಂಡಿರುವಂಥದ್ದು, ಯಾವ ಮಸೂದೆ ಸಾರ್ವಜನಿಕವಾಗಿ ಚರ್ಚೆ ಆಗಬಹುದು ಮತ್ತು ಸಾರ್ವಜನಿಕವಾಗಿ ಹೆಚ್ಚು ಉಪಯೋಗವಾಗುತ್ತದೆ ಎನ್ನುವಂಥದ್ದನ್ನು ನೋಡಿ ಅನುಮೋದನೆ ಮಾಡಬೇಕಾಗುತ್ತದೆ. ದಯಮಾಡಿ ಮಾನ್ಯ ಸಭಾಪತಿಯವರೆ, ನಮ್ಮದು ಕೆಳಮನೆ ನಿಮ್ಮದು ಮೇಲ್ಮನೆ. ಈ ಮೇಲ್ಮನೆ ಎಂದು ಹೇಳಿದಾಗ, ನಾವು ಕಾನೂನನ್ನು ಸುಲಲಿತವಾಗಿ ನಡೆಸುವುದಕ್ಕೆ, ವಿಧೇಯಕ ಪಾಸ್ ಆಗುವುದಕ್ಕೆ, ದೊಡ್ಡತನವನ್ನು ತೋರಿಸಬೇಕಾಗುತ್ತದೆ. ಇವತ್ತಿನ ದಿವಸ ಕಾನೂನಿನಲ್ಲಿ amendments ಕೊಡಬೇಕಾದರೆ, ಒಂದು ದಿವಸ ಬೇಗ ಕೊಡಬೇಕು, ಅವತ್ತಿನ ದಿವಸದ agenda ದಲ್ಲಿ ಮಂಡನೆ ಬಗ್ಗೆ ಇರಬೇಕು ಎನ್ನುವಂಥದ್ದರ ಬಗ್ಗೆ ನನ್ನ ಆಕ್ಷೇಪವಿಲ್ಲ. ನಾವು ನಿಯಮಾವಳಿಗಳನ್ನು ಸಂವಿಧಾನಾತ್ಮಕವಾದ ಚೌಕಟ್ಟಿನ ಒಳಗೆ ಮಾಡಿರುತ್ತೇವೆ. ಆದರೆ, ಸರ್ಕಾರಕ್ಕೆ ಅನಿವಾರ್ಯವಾಗುತ್ತದೆ, ಅಂತಹ ಸಂದರ್ಭದಲ್ಲಿ ಸಭೆಯು ಅದನ್ನು ಗಮನಿಸಬೇಕಾಗುತ್ತದೆ.

ಈಗ ಒಂದು ಉದಾಹರಣೆಗೆ agenda ಪ್ರಕಾರ ತೆಗೆದುಕೊಳ್ಳುವುದಾದರೆ, National Law School, ಇದಕ್ಕೆ ಸಂಬಂಧಿಸಿದಂತೆ ಒಂದು amendment ಅನ್ನು ತಂದಿದ್ದೇವೆ. ಏನೆಂದರೆ ನಮ್ಮಲ್ಲಿ National Law School ಇದೆ. ಇಡೀ ದೇಶದಲ್ಲಿ ಅತ್ಯಂತ ಪ್ರತಿಷ್ಠಿತವಾಗಿರುವಂತಹ ಸಂಸ್ಥೆಯಾಗಿರುವ National Law School of India ಇರುವುದು ಬೆಂಗಳೂರಿನಲ್ಲಿ, ಅದಕ್ಕೆ Convocation ಆಗಬೇಕು ಎಂದು ಹೇಳಿದರೆ, ಇಡೀ ದೇಶಾದ್ಯಂತ 30 ರಿಂದ 40 ಜನ ನ್ಯಾಯಾಧೀಶರು ಬರುತ್ತಾರೆ. ಅದಕ್ಕೆ Chief Justice of India ರವರು Patron ಆಗಿರುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈ ಎಲ್ಲಾ ಸಂದರ್ಭಗಳಲ್ಲಿ ಮೊನ್ನೆ Scholarship ಕೊಟ್ಟರು. ಆ Scholarship ಕೊಟ್ಟಂತಹ ಸಂದರ್ಭದಲ್ಲಿ, ನಮ್ಮ ಕರ್ನಾಟಕದ ವಿದ್ಯಾರ್ಥಿಗಳಿಗೆ ಎಷ್ಟು ಜನಕ್ಕೆ Scholarship ಸಿಕ್ಕಿದೆ ಎಂದು ನೋಡಿದಾಗ. ಕರ್ನಾಟಕದ ಒಬ್ಬ ವಿದ್ಯಾರ್ಥಿಗೂ Scholarship ಸಿಕ್ಕಿರುವುದಿಲ್ಲ. ಎಲ್ಲಾ ಬೇರೆ ಬೇರೆ ರಾಜ್ಯದ ಮಕ್ಕಳಿಗೆ ಸಿಕ್ಕಿರುತ್ತದೆ. ಹಾಗಾಗಿ ಇದಕ್ಕೆ ಕಾನೂನಿನಲ್ಲಿ ಏಕೆ ಬದಲಾವಣೆ ತರಬಾರದು ಎನ್ನುವಂಥ ಯೋಚನೆಯನ್ನು ಕೆಲವೇ ದಿವಸಗಳಲ್ಲಿ ಮಾಡಿ, ಕರ್ನಾಟಕದಲ್ಲಿ ಓದಿರುವಂತಹ ಮಕ್ಕಳಿಗೆ ಮತ್ತು ಕರ್ನಾಟಕದಲ್ಲಿ ಹುಟ್ಟಿ ಬೆಳೆದಿರುವಂತಹವರಿಗೆ ಶೇಕಡ 50ರಷ್ಟು ಸೀಟ್‌ಗಳನ್ನು ಇಡಬೇಕೆಂದು ಒಂದು ತೀರ್ಮಾನವನ್ನು ಮಾಡಿದ್ದೇವೆ. ಆಗ ನಾವು ಅನಿವಾರ್ಯವಾಗಿ ಸದನದ ಮುಂದೆ ಬರಬೇಕಾಗುತ್ತದೆ ಮತ್ತು ವಿವರಣೆಯನ್ನು ಕೊಡಬೇಕಾಗುತ್ತದೆ. ಬಹುಶಃ ಮಸೂದೆಯ ಹಿನ್ನೆಲೆಯಲ್ಲಿ ಇರುವಂಥದ್ದು ಏನು ಎನ್ನುವಂಥದ್ದನ್ನು ಈ ಸಭೆಯು ಗಮನಿಸಬೇಕು, ಅರ್ಥಮಾಡಿಕೊಳ್ಳಬೇಕು ಮತ್ತು ರಾಜ್ಯದ ಜನರ ದೃಷ್ಟಿಯಿಂದ, ಏಕೆಂದರೆ ಇನ್ನು ಮುಂದೆ Scholarship ಕೊಡಬೇಕಾದರೆ ಮತ್ತೇ ಏನೋ ಒಂದನ್ನು ಕೊಡಬೇಕಾದರೆ, ಈ ಮಸೂದೆ ತಿದ್ದುಪಡಿಯಾದರೆ, ಅದು ಹೆಚ್ಚು ಸಹಾಯವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಕೆಲವೇ ದಿನಗಳ ಹಿಂದೆ ಈ ವಿಚಾರ ಪ್ರಸ್ತಾಪವಾಗಿತ್ತು. ಅದನ್ನು ನಾವು ನಿವೃತ್ತ ನ್ಯಾಯಧೀಶರುಗಳ ಹತ್ತಿರ ಚರ್ಚೆ ಮಾಡಿ, ಕಾನೂನಿನಲ್ಲಿ ಬದಲಾವಣೆ ತರುವಂಥದ್ದು ಅನಿವಾರ್ಯ ಎನ್ನುವಂಥದ್ದನ್ನು ಮನಗಂಡು ಇವತ್ತಿನ ದಿವಸ ಅದನ್ನು ತಂದಿದ್ದೇವೆ.

**ಸಭಾಪತಿಯವರು:–** ಆ ತರಹದ್ದು ಒಂದು Bill ಇದೆ ಎಂದು.

**ಶ್ರೀ ಟಿ.ಬಿ.ಜಯಚಂದ್ರ:–** ಮಾನ್ಯ ಸಭಾಪತಿಯವರೆ, ಇದು ನಮ್ಮ National Law School of India ದ್ದು. ಈಗ ಸಂದರ್ಭಗಳು ಹೇಗೆ ಬರುತ್ತವೆ ಎಂಬುದಕ್ಕೋಸ್ಕರ ಹೇಳಿರುವುದು. ಈಗ ಮಾನ್ಯ ಸದಸ್ಯರಾದಂತಹ ಶ್ರೀ ಬಸವರಾಜ ಹೊರಟ್ಟಿಯವರು ಬಹುಶ: you are a Champion. (ಗೊಂದಲ) ಅದಕ್ಕೆ ನಾನು ಹೇಳಿದ್ದು, ಇಂತಹವುಗಳೆಲ್ಲಾ ಪ್ರಗತಿಪರವಾಗಿರುವಂತಹ, ಜನಪರವಾಗಿರುವಂತಹ, ಬೇಕಾಗಿರುವಂತಹ ಮಸೂದೆಗಳು. ನಿಜ ಅದನ್ನು ನಾನು ಒಪ್ಪುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾವುಗಳೆಲ್ಲಾ ಪ್ರಗತಿಪರವಾಗಿ ಇದ್ದೇವೆ. ಆದರೆ, ನೀವು ಪ್ರಗತಿಪರವಾಗಿಲ್ಲ, ನೀವೆಲ್ಲರೂ ಪ್ರಗತಿಪರರಾಗಿ ಎಂದು ಹೇಳುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಟಿ.ಬಿ.ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಬರೀ ನಿಯಮಾವಳಿಗಳೆ ಅಲ್ಲ, ಆ ನಿಯಮಾವಳಿಗಳನ್ನು ತಿದ್ದುಪಡಿ ಮಾಡುವಂತಹ ವಿಶೇಷ ಅಧಿಕಾರ ಪೀಠಕ್ಕೂ ಇದೆ. ತಾವೆಲ್ಲರೂ ಮನಸ್ಸು ಮಾಡಿ, ಒಲಿಸುವುದಕ್ಕೂ ಅವಕಾಶವಿದೆ. ಆದುದರಿಂದ ನಾವು ನಿಮ್ಮನ್ನು ಕೋರುತ್ತೇವೆ.

**ಶ್ರೀ ಬಿ.ಜೆ.ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೆ, ಆದುದರಿಂದ ಅವರು ಹೇಳಿರುವುದನ್ನು ಒಪ್ಪಿಕೊಳ್ಳೋಣ. ಆದರೆ, ಮೊದಲು ಏನಿತ್ತೆಂದರೆ, Legislative Assembly ಮುಗಿದ ಮೇಲೆ Legislative Council ಅನ್ನು one or two days late ಆಗಿ adjourn ಮಾಡುತ್ತಿದ್ದರು. ನೀವೇ ಕೇಳಿ ಅಲ್ಲೇ ಕುಳಿತಿದ್ದಾರೆ, ಈಗ ನೀವು ಏನು ಅದೇ ದಿನವೇ adjourn ಮಾಡಬೇಕು ಅನ್ನುತ್ತೀರಿ. ಅದಕ್ಕೆ ಈ problem ಬರುತ್ತದೆ. ಆದುದರಿಂದ ಈ ಸದನವನ್ನು two days extend ಮಾಡಿ.

**ಸಭಾಪತಿಯವರು:-** ಆಯಿತು, ಈಗ ಗೌರವಾನ್ವಿತ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು, ಅನಿವಾರ್ಯತೆಗಳನ್ನು ಸಭೆಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅವರ Bill ಇನ್ನೂ ನನ್ನ ಬಳಿ ಬಂದಿಲ್ಲ, ಅಂದರೆ ಅದರ ಬಗ್ಗೆ ಹೇಳಲಿಲ್ಲ. ಮಾನ್ಯ ಸಚಿವರಾದಂತಹ ಶ್ರೀ ಹೆಚ್.ಆಂಜನೇಯರವರು move ಮಾಡುವುದಕ್ಕೆ ಪ್ರಯತ್ನ ಮಾಡುತ್ತಿರುವಂತಹ Bill ಬಗ್ಗೆ, ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಈಗ ಅದು ಒಂದು Bill ಅನ್ನು ಮಾತ್ರ ತೆಗೆದುಕೊಳ್ಳಬಹುದು ಎಂದು ಹೇಳಿ ಸಭೆಯ ಹಿರಿಯರೆಲ್ಲ ನನಗೆ ಕೊಟ್ಟರೆ ಹೌದು; ಇಲ್ಲ, ಸ್ವಾಮಿ ಹಾಗೆ ಆಗುವುದಿಲ್ಲವೆಂದರೆ ಇಲ್ಲ ಅಷ್ಟೇ, simple ಇದೆ. ಅದಕ್ಕೆ ಅವರು ತಮ್ಮ ಅನಿವಾರ್ಯತೆ ಏನು, ಕಾನೂನು ಮಂತ್ರಿಗಳದ್ದು ಒಂದು Bill ಇದೆ ಎಂದು ಹೇಳಿದರು. ಆ ಎರಡು Bills ಮಾತ್ರ ಅಥವಾ ಅವರು ಕಳುಹಿಸಿರುವಂತಹ ಮೂರರಿಂದ ಐದು Bills ಇವೆ. ಅಷ್ಟು ಮಾಡು ಎಂದರೆ ನನ್ನದೇನೂ ಅಭ್ಯಂತರವಿಲ್ಲ. ಸಭೆ ಏನು ಹೇಳುತ್ತದೆಯೋ ಅದರಂತೆ ಮಾಡೋಣ.

**ಶ್ರೀ ಬಸವರಾಜ ರಾಯರೆಡ್ಡಿ (ಉನ್ನತ ಶಿಕ್ಷಣ):-** ಮಾನ್ಯ ಸಭಾಪತಿಯವರೆ, ಕರ್ನಾಟಕ ವಿಶ್ವವಿದ್ಯಾಲಯಗಳ ತಿದ್ದುಪಡಿಗಳ ಕಾಯ್ದೆಯೂ ಸಹ ಇದೆ. ಅದನ್ನು ಕೂಡ ತಾವು consider ಮಾಡಿ ಎಂದು ಕೇಳುತ್ತೇನೆ.

**ಸಭಾಪತಿಯವರು:-** ಅದು ಸಭೆಗೆ ಬಿಟ್ಟಿರುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈಗ ಅವರಿಗೆ ಸಂಬಂಧಪಟ್ಟಿರುವುದನ್ನು ಅವರು ಹೇಳಿದರು. ಇವರದ್ದು ಒಂದನ್ನು ಹೇಳುತ್ತಿದ್ದಾರೆ. ಈಗ ಅವರಿಗೆ ಗೊತ್ತಿರುತ್ತದೆ, ಎಲ್ಲಾ ಯಾವ Bill ಏನು ಎಂಬುದನ್ನು ಅವರು ಹೇಳಿಬಿಟ್ಟರು. ನಮಗೇನೂ ಗೊತ್ತಿಲ್ಲವಲ್ಲ, ನಾವು ಹೇಗೆ ಹೇಳುವುದು, ಇದು ಸುಮಾರು 70 ಪುಟ ಇದೆ. ಅವರು ಹೇಳುತ್ತಾರೆ, ಮಾಡಬೇಕೆಂದು. ಇದನ್ನು ಹೇಗೆ ಮಾಡುವುದಕ್ಕೆ ಆಗುತ್ತದೆ. Important and urgent ಎಂದು ಹೇಳುತ್ತೀರಾ ಅದನ್ನು ಮಾಡಿ, ಅದು ಒಂದು ತರಹ. ನೀವು ಇಷ್ಟು ದೊಡ್ಡ–ದೊಡ್ಡವುಗಳನ್ನು ತಂದುಬಿಟ್ಟು, ನೀವು ಈಗಲೇ ಮಾಡಿ ಎಂದರೆ ಅದು ಹೇಗೆ ಆಗುತ್ತದೆ? ಈಗ ಅವರು ಒಂದನ್ನು ಹೇಳಿದ್ದಾರೆ, ಬೆಂಗಳೂರಿನಲ್ಲಿರುವ National Law School ನಲ್ಲಿ ಕರ್ನಾಟಕದಲ್ಲಿ ಓದಿರುವಂತಹ ಮಕ್ಕಳಿಗೆ ಮತ್ತು ಕರ್ನಾಟಕದಲ್ಲಿ ಹುಟ್ಟಿ ಬೆಳೆದಿರುವಂತಹವರಿಗೆ ಶೇಕಡ 50ರಷ್ಟು ಸೀಟ್ಸ್ ಇಡಬೇಕೆಂದು, ಈ ತರಹದವುಗಳು ಸರಿ. ಆದರೆ, ಇವೆಲ್ಲವೂ ಕೂಡ ಏನೂ ಚರ್ಚೆ ಆಗದೆಯೇ, ಏನನ್ನೂ ನಮಗೆ ಕೊಡದೆ, Dark Room ನಲ್ಲಿ ಇಟ್ಟು ಬಿಟ್ಟು, approval ಮಾಡಿ ಎಂದರೆ ಮಾಡುವುದಕ್ಕೆ ಆಗುತ್ತದೆಯೇ? ಇದು ಸರಿ ಇದೆಯೇ ಮತ್ತು ನ್ಯಾಯಯುತವಾಗಿದೆಯೇ. ಹೋಗಲಿ ಇದು ಸರಿ ಅನಿಸುತ್ತದೆಯೇ? ನಿಮ್ಮ ಆತ್ಮಸಾಕ್ಷಿ ಒಪ್ಪುತ್ತದೆಯೇ? (ಗೊಂದಲ) ತಾವು ದಯಮಾಡಿ ಇದನ್ನು ಹೇಳಬೇಕು. ಇದಕ್ಕೆ ನಿಮ್ಮ ಆತ್ಮಸಾಕ್ಷಿ ಒಪ್ಪುತ್ತದೆಯೇ? ಇದು 70 ಪುಟವಿದೆ. ಇದನ್ನು ಹೇಗೆ ಓದುವುದು. ನಮಗೆ ಏನು ಗೊತ್ತಿದೆ. ಈಗ ಹಳೆಯ 2000 Act ನಮ್ಮ ಹತ್ತಿರ ಇಲ್ಲ. ಯಾವುದಕ್ಕೆ ಏನೇನು ಸೇರಿಸಿದ್ದಾರೆ ಎಂದು ನಮಗೆ ಗೊತ್ತಿಲ್ಲ. ಏಕೆಂದರೆ ನಾವೆಲ್ಲಾ ಕೂಡ Academic Council, Senate and Syndicate ಇವುಗಳಲ್ಲಿ ಪ್ರತಿನಿಧಿಸಿರುವವರು. ನಾವು ವಿದ್ಯಾರ್ಥಿ ಚಳುವಳಿಗಳಿಂದ ಮೇಲೆ ಬಂದಿರುವವರು. ಅದರಲ್ಲಿ ಏನೇನೂ effect ಆಗಿದೆ ಎಂದು ನಾವು ಓದಬೇಕಲ್ಲವೆ?

**ಸಭಾಪತಿಯವರು:–** ಮಾನ್ಯ ಸದಸ್ಯರಾದಂತಹ ಶ್ರೀ ಪುಟ್ಟಣ್ಣನವರೆ ಅದರ ಬಗ್ಗೆ ಚರ್ಚೆ ಬೇಡ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಇದನ್ನು ನೀವು ತೆಗೆದುಕೊಳ್ಳುವುದಿಲ್ಲವೆಂದರೆ, ಉಳಿದಿರುವ ಬಗ್ಗೆ ನಮ್ಮ ವಿರೋಧಪಕ್ಷದ ನಾಯಕರು ಮತ್ತು ಶ್ರೀ ಬಸವರಾಜ ಎಸ್. ಹೊರಟ್ಟಿ ಯವರ ಬಳಿ ಕೇಳಿ.

**ಸಭಾಪತಿಯವರು:–** ಈಗ ವಿರೋಧಪಕ್ಷದ ನಾಯಕರು ತಮ್ಮ ಅಭಿಪ್ರಾಯವನ್ನು ಹೇಳಿದರು. ಅದು ಒಂದನ್ನು ಬಿಟ್ಟು ಬೇಕಾದರೆ ಬೇರೆಯದನ್ನು ನೋಡೋಣವೆಂದರು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾವು ಕಾನೂನು ಮಂತ್ರಿಗಳ ಬಗ್ಗೆ ವಿಚಾರ ಮಾಡೋಣ. ಈಗ ರೂಲ್ 88 ಪ್ರಕಾರ... ನೀವು ರೂಲ್ ಮಾತನಾಡಬೇಡಿ ಎಂದು ಹೇಳಿದ್ದೀರಿ, ನಾನು ಅದನ್ನು ಒಪ್ಪುತ್ತೇನೆ. ಇದು 72 ಪುಟವಿದೆ, ಈ ಹಿಂದೆ ಒಂದಾನೊಂದು ಕಾಲದಲ್ಲಿ ಮಾನ್ಯ ಸಭಾನಾಯಕರಾದಂತಹ ಡಾ.ಜಿ.ಪರಮೇಶ್ವರ್‌ರವರು ಉನ್ನತ ಶಿಕ್ಷಣ ಮಂತ್ರಿಗಳಿದ್ದಾಗ, ಅವರ ವಿನಂತಿಯ ಮೇರೆಗೆ ಅದು ಅನುಮೋದನೆಯಾಯಿತು. ಅದು ಇದೇ ತರಹವಾಯಿತು, ಅಸೆಂಬ್ಲಿಯಲ್ಲಿ ಅನುಮೋದನೆಯಾಗಿದೆ, ಅವರೆಲ್ಲಾ ಚರ್ಚೆ ಮಾಡಿದ್ದಾರೆ, ನೀವು ಅನುಮೋದನೆ ಮಾಡದಿದ್ದರೆ, ಅಸಹ್ಯ ಎನಿಸುತ್ತದೆ, ಅವಮಾನವಾಗುತ್ತದೆ ಎನ್ನುವಂತಹ ಮಾತು ರೆಕಾರ್ಡ್‌ನಲ್ಲಿದೆ, ಬಿಟ್ಟಿದ್ದೇವೆ. ಈಗ ಏನಾಯಿತು Syndicate ಹೋಯಿತು, Senate ಹೋಯಿತು, ಇವತ್ತಿನ ದಿವಸ ವಿಶ್ವವಿದ್ಯಾಲಯಗಳು ಹೇಗೆ ನಡೆದಿವೆ?

**ಸಭಾಪತಿಯವರು:-** ಅದರ ಬಗ್ಗೆ ಚರ್ಚೆ ಬೇಡ. Don't go to the details. ಈಗ ನಾನು ಏನು ಮಾಡಬೇಕು. ಇದನ್ನು ತೆಗೆದುಕೊಳ್ಳಬೇಕೋ, ಅದನ್ನು Bill ಬಂದಾಗ ನೋಡೋಣ. ಆ Bill ಬಗ್ಗೆ ಈಗ ಚರ್ಚೆ ಬೇಡ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಇದು ಇಷ್ಟು ದೊಡ್ಡ Bill. ದಯಮಾಡಿ ಈ Bill ಅನ್ನು ಇವತ್ತು ಮಂಡನೆ ಮಾಡುವುದಕ್ಕೆ ತಾವು ಅನುಮತಿ ಕೊಡಬಾರದು. ಚರ್ಚೆ ಮಾಡುತ್ತೇವೆ, ಮುಂದೆ ಸಮಯ ಕೊಡುತ್ತೇವೆ ಮಾಡಿಕೊಂಡು ಬರಲಿ. ಈ Bill ಅನ್ನು ಇವತ್ತಿನ ದಿವಸ ಅನುಮೋದನೆ ಮಾಡುವುದಕ್ಕೆ ಒಪ್ಪಿಕೊಳ್ಳುವುದಿಲ್ಲ.

**ಶ್ರೀ ಬಸವರಾಜ ರಾಯರೆಡ್ಡಿ:-** ಮಾನ್ಯ ಸಭಾಪತಿಯವರೇ, Bill ಅನ್ನು ಮಂಡನೆ ಮಾಡಲೇಬೇಕಲ್ಲವೆ, ಅದನ್ನು ಮಂಡನೆ ಮಾಡಿದ ಮೇಲೆ ಚರ್ಚೆಗೆ ಬರುತ್ತದೆ ಎಂದು ನಾನು ಹೇಳಿರುವುದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನೀವು ಅವರನ್ನು ಕೇಳಿಕೊಳ್ಳಿ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಮಂಡನೆ ಏಕೆ ಮಾಡಬೇಕು. ಚರ್ಚೆಗೆ ಅವಕಾಶ ಕೊಟ್ಟರೆ ತಾನೆ ಚರ್ಚೆ ಮಾಡುವುದು.

**ಸಭಾಪತಿಯವರು:-** ಈಗ ಸಭೆಯ ಮುಂದೆ ಇರುವುದು ತಾಂತ್ರಿಕ ಪ್ರಶ್ನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈಗ ನಾನು ಅದೇ ವಿಷಯಕ್ಕೆ ಬರುತ್ತೇನೆ. ಮಾನ್ಯ ಕಾನೂನು ಸಚಿವರು, ಇತ್ತೀಚೆಗೆ ಎಲ್ಲಾ ಮಂತ್ರಿಗಳು ಉಪನ್ಯಾಸ ಕಲಿತುಬಿಟ್ಟಿದ್ದಾರೆ. ಬರೇ ಉಪನ್ಯಾಸ. ಆದರೆ, ಅದನ್ನು ಪಾಲಿಸುವವರು ಯಾರು ಇಲ್ಲ. ಅಧಿವೇಶನ ಎಲ್ಲಿಂದ ಎಲ್ಲಿಯವರೆವಿಗೆ ನಡೆಯಬೇಕೆಂದು ನೀವು ಸಚಿವ ಸಂಪುಟದಲ್ಲೇ ತೀರ್ಮಾನ ಮಾಡಿರುತ್ತೀರಾ? ಇಷ್ಟೊಂದು ವಿಧೇಯಕಗಳು ಯಾವ್ಯಾವು ಬರಬೇಕೆಂದು ನಿಮ್ಮ ಇಲಾಖೆಯ ಅಧಿಕಾರಿಗಳಿಗೆ ಗೊತ್ತಿರುತ್ತದೆ. ಯಾವುದೋ ಒಂದು ಅಂದಾಗ ಸರಿ ಅನ್ನೋಣ. ನೀವು ಅಷ್ಟನ್ನೂ ಕೊನೆಯ ದಿವಸ ತರುವುದಾದರೆ, ನಿಮ್ಮ ಸರ್ಕಾರದ ಮಂತ್ರಿಗಳ ಮತ್ತು ಅಧಿಕಾರಿಗಳ ಕೆಲಸವೇನು? Last minute ನಲ್ಲಿ ನೀವು ಕೊಡುತ್ತಿದ್ದ ಹಾಗೆಯೇ... ನಾವುಗಳೇನು ಗುಲಾಮರೆ, ನೀವು ಹೇಳಿದ ಹಾಗೆ ಬಿಟ್ಟು ಕೊಡುವುದಕ್ಕೆ, ಅದನ್ನು ಚರ್ಚೆ ಮಾಡುವುದೇ ಬೇಡವೆ? ಎಲ್ಲಿ ಚರ್ಚೆ ಮಾಡುವುದು, ಅದಕ್ಕೋಸ್ಕರ ನಾನು ಹೇಳುತ್ತಿರುವುದು ಈಗ ಸರ್ಕಾರಕ್ಕೆ ಆಸಕ್ತಿ ಇದ್ದರೆ, ಸಣ್ಣ-ಸಣ್ಣ Bills ಅದು-ಇದು ಎಂದು ಹೇಳುತ್ತಿದ್ದಾರೆ. ಉಳಿದಿರುವ Bills ಚರ್ಚೆಗೆ ನಾವು ತಯಾರಿದ್ದೇವೆ. ಯಾವಾಗ ಅಂದರೆ, conditional support, ಇದು ಏನು ಈ 'ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017' ಇದೆಯಲ್ಲಾ, ಅದನ್ನು table ಮಾಡುವುದಿಲ್ಲವೆಂದು ಸರ್ಕಾರ ಒಪ್ಪಿಕೊಂಡರೆ. ನಾವು ಉಳಿದ Bills ನ ಚರ್ಚೆಗೆ ಸಿದ್ಧರಿದ್ದೇವೆ. ಇಲ್ಲವೆಂದರೆ ಯಾವ Bill ಗೂ ಕೂಡ ನಾವು ಅವಕಾಶ ಕೊಡುವುದಿಲ್ಲ. Business Advisory Committee ನಲ್ಲಿ ಏನು ತೀರ್ಮಾನವಾಗಿದೆ, ಆ ಪ್ರಕಾರ ನೀವು ಹೇಳಿರುವುದು ಸರಿಯಿದೆ. ನಾವು ಒಂದನ್ನು ಓದಿಲ್ಲ, ಓದದೇ ಇರುವಂತಹ ಸಣ್ಣ-ಸಣ್ಣ Bill ಬಗ್ಗೆ ಸಂಬಂಧಪಟ್ಟಂತಹ ಮಂತ್ರಿಗಳು ಮತ್ತು ಅಧಿಕಾರಿಗಳು ಹೇಳಿದಾಗ ಸ್ವಲ್ಪ ಹೆಚ್ಚು-ಕಡಿಮೆ ನಾವು study ಮಾಡಿಕೊಂಡು, ಹೌದು, ಅಲ್ಲವೆಂದು. ಈ ಒಂದು Bill ಅನ್ನು ನೋಡಿದ್ದೀರಾ, ಇದರ ಬಗ್ಗೆ ಎಷ್ಟೆಲ್ಲಾ ಚರ್ಚೆಯಾಯಿತು. ಕೊನೆಗೆ ಅವರು ತಪ್ಪನ್ನು ಒಪ್ಪಿಕೊಂಡರು ನಂತರ ಏನೋ ಆಯಿತ್ತು, ವಿರೋಧಪಕ್ಷದವರ ಕರ್ತವ್ಯವಿದೆ, ಅದಕ್ಕೆ ಬೆಂಬಲ ಕೊಟ್ಟು ಅದನ್ನು ಅನುಮೋದನೆ ಮಾಡಿದ್ದೇವೆ. ನಾವು ಎಲ್ಲಾ Bill ಗಳನ್ನು ಅನುಮೋದನೆ ಮಾಡುವುದಕ್ಕೆ ಇರುವುದೆ? ಅದಕ್ಕೋಸ್ಕರ ನಾನು ಹೇಳುತ್ತಿರುವುದು, ಮಾನ್ಯ ಕಾನೂನು ಸಚಿವರೆ, ತಾವು ಸಂಸದೀಯ ವ್ಯವಹಾರಗಳ ಸಚಿವರು ಸಹ ಇದ್ದೀರಿ. ಇನ್ನು ಎಂದೂ ಕೂಡ ಈ ರೀತಿ ಆಗಬಾರದು. ಇಲ್ಲವಾದರೆ ಪ್ರತಿ Bill ಗೂ ಕೂಡ ನೀವು table ಮಾಡಿಲ್ಲ, ಹಿಂದಿನ ದಿನ ಕೊಟ್ಟಿಲ್ಲ, ನಾವು ಓದಿಕೊಂಡು ಬಂದಿಲ್ಲ, ಅನುಮೋದನೆ ಮಾಡುವುದಿಲ್ಲವೆನ್ನುವಂತಹ ಸ್ಥಿತಿ ಬರುತ್ತದೆ. ಈಗ ಒಂದು condition ಮೇಲೆ ನಾವು ಸ್ಪಷ್ಟವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳುತ್ತಿದ್ದೇವೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಶ್ವವಿದ್ಯಾನಿಲಯಗಳ ಬಗ್ಗೆ ಏನು ವಿಧೇಯಕವನ್ನು ತಂದಿದ್ದಾರೆ, ಅದನ್ನು table ಮಾಡುವುದಿಲ್ಲವೆಂದು ಒಪ್ಪಿಕೊಂಡರೆ, ಉಳಿದಿರುವಂತಹ Bills ಬಗ್ಗೆ ನಾವು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ.

**(ಮುಂದು...)**

(886) 21.06.2017 02.10 LL-BNS

**ಸಭಾಪತಿಯವರ ಉಪಸ್ಥಿತಿ**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಒಂದು ಬಾರಿ ಇದೇ ಸದನದಲ್ಲಿ 22 ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕಗಳನ್ನು ತಂದರು. ಆ ಸಮಯದಲ್ಲಿ 'Baldwin' ಅನ್ನುವ ಕಾಲೇಜು ಇರಲೇ ಇಲ್ಲ. ಅದಕ್ಕೂ ಸಹ ನಾವು ಅನುಮತಿ ಕೊಟ್ಟಿದ್ದೇವೆ. ಉನ್ನತ ಶಿಕ್ಷಣ ಮಂತ್ರಿಯಾಗಿದ್ದಂತಹ ಶ್ರೀ ಸಿ.ಟಿ.ರವಿಯವರು ಸದರಿ ವಿಧೇಯಕವನ್ನು ಅವಸರವಸರವಾಗಿ ತಂದರು. ಅದಕ್ಕೆ ಜನರು ಯಾವ ರೀತಿ ಮಾತನಾಡಿದರು? ಮಾಧ್ಯಮದಲ್ಲಿ ಯಾವ ರೀತಿ ವರದಿ ಬಂದಿತ್ತು..?

**ಸಭಾಪತಿಯವರು:-** ಸದರಿ ಬಿಲ್ ಅನ್ನು ಓದಿದ್ದು ಯಾರು?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಪುನಃ ಇದೇ ರೀತಿಯಾಗುತ್ತಿದೆ. ಶಿಕ್ಷಣದ ಬಗ್ಗೆ ವಿಧೇಯಕ ಬಂದಾಗ ನಾವು ಏನು ಹೇಳುತ್ತೇವೆಯೆಂದರೆ, ಶ್ರೀ ಬಸವರಾಜ ರಾಯರೆಡ್ಡಿಯವರ ಬಗ್ಗೆ ನಮಗೆ ಯಾವುದೇ ವಿರೋಧವಿಲ್ಲ. ಅವರ ಬಗ್ಗೆ ಯಾವುದೇ ದೂರು ಇಲ್ಲ. ಕಾನೂನು ಮಂತ್ರಿಗಳು ಹೇಳಿದ್ದನ್ನು ನಾನು ಒಪ್ಪುತ್ತೇನೆ. ವಿಧಾನ ಸಭೆಗೂ ಮತ್ತು ವಿಧಾನ ಪರಿಷತ್ತಿಗೂ ಯಾವುದೇ ಅಂತರ ಇಲ್ಲ. ಅಲ್ಲಿ ನಮಗಿಂತಲೂ ಹೆಚ್ಚು ಪರಿಣಿತ ಸದಸ್ಯರಿದ್ದಾರೆ. ಅವರು ಏನು ಮಾಡುತ್ತಾರೆ ಅದನ್ನು ನಾವು ಒಪ್ಪುತ್ತೇವೆ. ಆದರೆ, ಅವತ್ತಿನ ದಿವಸ 22 ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕಗಳನ್ನು ಮಂಡನೆ ಮಾಡಿದ್ದರಿಂದ ರಾಜ್ಯದ ತುಂಬಾ ಹಣ ಲೂಟಿ ಮಾಡುತ್ತಿದ್ದಾರೆ ಎನ್ನುವಂತಹ ಅಭಿಪ್ರಾಯ ವ್ಯಕ್ತವಾಗಿತ್ತು. ನಾವು ಹೈದರಾಬಾದ್‌ಗೆ ಭೇಟಿ ನೀಡಿದಂತಹ ಸಂದರ್ಭದಲ್ಲಿ ಅಲ್ಲಿ ಕೇಳಿದರು, "How have you passed those 22 Bills." ಅದರಲ್ಲಿ ಸರ್! ಒಂದು ವಿಧೇಯಕ ಮುದ್ರಣ ಸಹ ಆಗಿರಲಿಲ್ಲ. ಇದೇ ರೀತಿ ಗದ್ದಲ ಮಾಡಿ ವಿಧೇಯಕಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪಾಸ್ ಮಾಡುತ್ತಾರೆ. ಎಲ್ಲಾ ಸರ್ಕಾರಗಳ ವಿಚಾರವನ್ನು ನಾನು ಹೇಳುತ್ತಿದ್ದೇನೆ. ನಾನು ಕೂಡ ಕಾನೂನು ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಈ ರೀತಿಯ ವಿಧೇಯಕಗಳು ಬಂದಾಗ ಒಂದೊಂದು ಬಾರಿ ನಮಗೆ ಅರ್ಥವಾಗುತ್ತದೆ. ಕಾನೂನು ವಿಶ್ವವಿದ್ಯಾಲಯ ವಿಧೇಯಕವನ್ನು ತರುತ್ತೇವೆಂದು ಹೇಳುತ್ತಾರೆ, ಅದು ನಮಗೆ ಅರ್ಥವಾಗುತ್ತದೆ. ಅದನ್ನು ಮಾಡಲಿ. ಆದರೆ, 72 ಪುಟಗಳ ವಿಧೇಯಕವನ್ನು ನಾವು ಶ್ರೀ ಹೆಚ್.ಕೆ. ಪಾಟೀಲ್‌ರವರು ಸೇರಿಕೊಂಡು....

**ಸಭಾಪತಿಯವರು:–** ತಾವು ವಿಧೇಯಕದ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ನಾನು 4–4 ಬಾರಿ ಸಿಂಡಿಕೇಟ್ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಇಂದು ವಿಶ್ವವಿದ್ಯಾಲಯಗಳಲ್ಲಿ ಸತ್ವಾ ನಾಶವಾಗುತ್ತಿವೆ. ಆ ಹಿನ್ನೆಲೆಯಲ್ಲಿ ನಾವು ಈ ವಿಧೇಯಕವನ್ನು ಓದಬೇಕು. ಓದದೆಯೇ ನಮಗೆ ಏನು ಮಾಡುವುದಕ್ಕಾಗುವುದಿಲ್ಲ. ದಯಮಾಡಿ, ಈ ವಿಧೇಯಕವನ್ನು ಮಂಡನೆ ಮಾಡಬಾರದೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಸಲಹೆ ಕೊಟ್ಟಿದ್ದಾರೆ. ಅದೇನೆಂದರೆ, ಈ ವಿಧೇಯಕ ಸ್ವಲ್ಪ ದೊಡ್ಡದಿದೆ. ನಾವು ಇದನ್ನು ಗಂಭೀರವಾಗಿ ಪರಿಗಣನೆ ಮಾಡಬೇಕು. ಆ ವಿಧೇಯಕದ ಹಿನ್ನೆಲೆಯಲ್ಲಿ, ಅದೊಂದು ವಿಧೇಯಕವನ್ನಾದರೂ ಇಂದು ನಾವು ಮಂಡನೆ ಮಾಡುವುದಕ್ಕೆ ಮುಂದಾಗುವುದಿಲ್ಲವೆಂದು ಸರ್ಕಾರ ಮಾತು ಕೊಟ್ಟಲ್ಲಿ, ಉಳಿದ ವಿಧೇಯಕಗಳ ಬಗ್ಗೆ, ಅವುಗಳು ಸಣ್ಣದಾಗಿವೆಯೆಂದು; ಕೆಲವು ಅವಶ್ಯಕತೆಯಿದೆಯೆಂದು ಶ್ರೀ ಹೆಚ್.ಆಂಜನೇಯರವರು ಮತ್ತು ಕಾನೂನು ಮಂತ್ರಿಗಳು ಹೇಳಿದರು. ಇನ್ನು ಬೇರೆ ವಿಧೇಯಕಗಳ ಬಗ್ಗೆ ನನಗೆ ಗೊತ್ತಿಲ್ಲ. ಅದಕ್ಕೆ ನಾವು ಅವಕಾಶ ಕೊಡುವುದು, ಇಲ್ಲದೇ ಹೋದರೆ ಕಾರ್ಯಕಲಾಪಗಳ ಸಲಹಾ ಸಮಿತಿಯ ತೀರ್ಮಾನದಂತೆ ಯಾವುದೇ ವಿಧೇಯಕಗಳನ್ನು ನಾವು ಮಂಡಿಸುವುದಿಲ್ಲ. **(ಗೊಂದಲ)** ತಾವು ನನಗೆ ಒತ್ತಾಯ ಮಾಡಿದರೆ... **(ಗೊಂದಲ)** ದಯಮಾಡಿ ಒಂದು ನಿಮಿಷ ಕುಳಿತುಕೊಳ್ಳಿ... ಅವರು ಹೇಳದೆ ಹೋದರೆ, my Ruling... ನಾನು ಏನು ruling ಕೊಡುತ್ತೇನೆಂದು ಈಗಾಗಲೇ ತಮ್ಮ ಗಮನಕ್ಕೆ ಬಂದಿರಬಹುದು. ಇನ್ನೂ Ruling ಕೊಟ್ಟಿರುವುದಿಲ್ಲ. ಆದರೆ, ನಾನು Ruling ಕೊಡುವವನಿದ್ದೇನೆ. ನಾನು Ruling ಕೊಡುವುದಕ್ಕೆ ಮುಂಚೆ ಸರ್ಕಾರ ಏನಾದರೂ ಈ ರೀತಿಯ ಮಾತನ್ನು ಹೇಳಿದರೆ ನಾನು ಅದನ್ನು ಗಮನಿಸಬಹುದು. ಇಲ್ಲವಾದರೆ, ಸರ್ಕಾರ ನಾವು ಎಲ್ಲಾ ವಿಧೇಯಕಗಳನ್ನು ಮಂಡನೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕೆಂದು ಹೇಳಿದರೆ, I am ready to give my Ruling. Don't force me to give that Ruling.

**ಶ್ರೀ ಭಾನುಪ್ರಕಾಶ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ಮಾನ್ಯ ಹೊರಟ್ಟಿಯವರು ಕೊಟ್ಟಂತಹ ತಿದ್ದುಪಡಿಗೆ ಕಾನೂನು ಬದ್ಧವಾಗಿ explanation ನೀಡಿದ್ದೀರಿ. ಆದಾದ ನಂತರ, ಸದನ ತೀರ್ಮಾನ ತೆಗೆದುಕೊಂಡಿತ್ತು. ಆಗ ತಾವು ಏನೂ Ruling ಕೊಡಲಿಲ್ಲ.

**ಸಭಾಪತಿಯವರು:-** ಹೌದು, ಕೊಡಲಿಲ್ಲ.

**ಶ್ರೀ ಭಾನುಪ್ರಕಾಶ:-** ಮಾನ್ಯ ಸಭಾಪತಿಯವರೆ, ಆದರೆ, ದಾಖಲೆಯಲ್ಲಿ ತಾವು ಎಲ್ಲವನ್ನೂ ಓದಿರುವುದು ದಾಖಲೆಯಾಗಿದೆ. ಈ ದಾಖಲೆಯಲ್ಲಿ ತಾವು ಎಲ್ಲದನ್ನೂ ಹೇಳಿದ ನಂತರ ಸದನವು ಒಪ್ಪಿಗೆ ನೀಡಿತು. ನಮ್ಮ ಒಳ್ಳೆಯತನದ ಅಥವಾ ಸರ್ಕಾರದ ಜೊತೆ ಸಹಕಾರ ಕೊಡಬೇಕೆಂದು ಹೇಳಿ, ಹೀಗೆ ನಡೆದರೆ, ಇದು ಪೀಠದಿಂದ ತೀರ್ಮಾನ ಆಗದೇ ಇದ್ದರೆ ಸಮಸ್ಯೆ ಬಗೆಹರಿಯುವುದಿಲ್ಲ. ಇದು ಕಟ್ಟೆ ಪಂಚಾಯತಿಕೆ ಅಲ್ಲ. ಇದು ಒಂದು ಸಂವಿಧಾನಾತ್ಮಕವಾದಂತಹ ಶಾಸನ ಸಭೆ. ಹಾಗಾಗಿ, "ಎ ಭೀ ಸಚ್, ವೋಭೀ ಬರಾಬರ್" ನಡೆಯುವುದಿಲ್ಲ. ಇಲ್ಲ, ಹೀಗೆ ಎಂದು ಕಡ್ಡಿ ತುಂಡಾಗುವ ರೀತಿ ತೀರ್ಮಾನವಾಗಬೇಕು. ಈಗ ನೋಡಿ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2017, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್(ತಿದ್ದುಪಡಿ) ವಿಧೇಯಕ, 2017 ಮತ್ತು ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್(ಅರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2017 ವಿಧೇಯಕಗಳು ಬಂದಿವೆ. (**ಗೊಂದಲ**) ನಾನು ಹೇಳುವುದು... ಈಗ ನಮ್ಮ ವಾದವನ್ನು ಆಲಿಸಿ... ಏಕೆಂದರೆ, ಈ ವಿಧೇಯಕ ಈಗ ಆಗುವುದಿಲ್ಲ. ಈಗ ನ್ಯಾಯವಾಗಿ ಹೇಳುವುದಾದರೆ ನಮ್ಮ ಹಕ್ಕಿಗೆ ಚ್ಯುತಿ ಬಂದಿದೆ. ಏಕೆಂದರೆ, amendment ಗೆ move ಮಾಡುವುದಕ್ಕೆ ತಮಗೆ ಅವಕಾಶ ಸಿಗದೇ ಇರುವಂತಹ ರೀತಿಯಲ್ಲಿ ತಾವು ಪೀಠದಿಂದ allow ಮಾಡಿಬಿಟ್ಟಿರಿ.., ಅವರು explain ಮಾಡಿದರು.., ನಾವು ಹೊಂದಿಕೊಂಡೆವು. ಎಲ್ಲಾದಕ್ಕೂ ಪ್ರತಿಪಕ್ಷಗಳನ್ನೇ ಈ ರೀತಿ ಬಲಿ ಮಾಡುವುದು ಒಳ್ಳೆಯದಲ್ಲ. ದಯಮಾಡಿ, ಈ ರೀತಿಯ ವಿಧೇಯಕಗಳು ಬಂದಾಗ ತಲೆಯೇನೂ ಹೋಗುವುದಿಲ್ಲ. ತಲೆ ಹೋಗುವಂತಹ ಆರ್ಥಿಕ ವಿಧೇಯಕಗಳಾಗಿದ್ದರೆ ನಾವು ಒಪ್ಪಿಗೆ ಕೊಟ್ಟೇ ಕೊಡುತ್ತಿದ್ದೆವು. ಈ ಎಲ್ಲಾ ವಿಧೇಯಕಗಳನ್ನು ಚರ್ಚೆ ಮಾಡಿ ತೆಗೆದುಕೊಳ್ಳಬೇಕು. ಇದು ಜನ ವಿರೋಧಿ ಸಹ ಆಗುವುದಿಲ್ಲ. ದಯಮಾಡಿ ಮುಂದಕ್ಕೆ ಹಾಕಿ, ಏನೂ ಸಮಸ್ಯೆಯಾಗುವುದಿಲ್ಲ. ಹಾಗಾಗಿ, ಪೀಠದಿಂದ ತೀರ್ಮಾನವನ್ನೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡಬೇಕು. ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ತೀರ್ಮಾನ ಏನಾಗಿದೆಯೋ, ಅದರ ಪ್ರಕಾರ ನಡೆದುಕೊಳ್ಳದೇ ಇದ್ದರೆ ಅದಕ್ಕೂ ತೊಂದರೆ. ಮಾನ್ಯ ಕಾನೂನು ಸಚಿವರು, "ಕೆಲವು ಸಮಯದಲ್ಲಿ ಕೆಲವೊಂದು ವಿಧೇಯಕಗಳು ಬಹಳ ತುರ್ತು ಇರುತ್ತದೆ. ಅದನ್ನು ಮಾಡಲೇಬೇಕಾಗುತ್ತದೆ. ತಾವು ಕೂಡ ಸರ್ಕಾರದ ಒಂದು ಭಾಗ," ಎಂದು ಹೇಳಿದರು. ಖಂಡಿತವಾಗಿಯೂ ಆ ರೀತಿಯ urgency ಬಂದಂತಹ ಸಂದರ್ಭದಲ್ಲಿ ನಾವು ಸರ್ಕಾರದ ಜೊತೆಯಲ್ಲಿದ್ದೇವೆ. ಆದರೆ, ಈಗ ಆ ರೀತಿಯ urgency ಸಂದರ್ಭವಿಲ್ಲ. ನಮಗೆ convince ಆಗುತ್ತಿಲ್ಲ. ನಮಗೆ ದಯವಿಟ್ಟು ಅವಕಾಶ ಕೊಡಿ. ಯಾವ ವಿಧೇಯಕಗಳನ್ನೂ move ಮಾಡಬೇಡಿ.

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, Rule 88, Rule 82 and Rule 78 ಇವುಗಳನ್ನು ತಾವು ಗಮನಿಸಬೇಕು.

**ಸಭಾಪತಿಯವರು:-** ಅದು ನನಗೆ ಗೊತ್ತಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ತಾವು ನೋಡಿ. ಈ ಎಲ್ಲಾ ನಿಯಮಗಳನ್ನು...

**ಸಭಾಪತಿಯವರು:-** ಕ್ಲಿಯರ್ ಇದೆ. ನಾನು ಕೂಡ ಪುಸ್ತಕ ತೋರಿಸಿಯೇ ಹೇಳಿದೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಈ ಎಲ್ಲಾ ನಿಯಮಗಳನ್ನು ಬಿಟ್ಟು...

**ಶ್ರೀ ಕೆ.ಎಸ್. ಈಶ್ವರಪ್ಪ(ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ನಾವುಗಳು ನಮ್ಮ ಅಭಿಪ್ರಾಯವನ್ನು ಹೇಳಿದ್ದೇವೆ. ಅದಕ್ಕೆ ಸರ್ಕಾರದ ಅಭಿಪ್ರಾಯ ಹೇಳಲಿ. ಇಲ್ಲವಾದರೆ ತಾವು ತಮ್ಮ Ruling ಕೊಡಿ.

**ಸಭಾಪತಿಯವರು:-** ಸರ್ಕಾರ ಏನು ಅಭಿಪ್ರಾಯ ಕೊಡುತ್ತದೆಯೋ, ಅದನ್ನು ನೋಡಿಕೊಂಡು ನಂತರ ನಾನು Ruling ಕೊಡುತ್ತೇನೆಂದು ಹೇಳಿದೆನು. ಸರ್ಕಾರವೇ ಹೇಳಲಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಮಾತನಾಡುತ್ತಿದ್ದಾರೆ. ಅಷ್ಟರಲ್ಲಿ ನಾನು ಮಾತನಾಡುತ್ತೇನೆ.

**ಸಭಾಪತಿಯವರು:–** ಬೇಡ, ಬೇಡ. ಸಾಕು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಈ ಸದನದಲ್ಲಿಯೂ ಕೂಡ ಸರ್ಕಾರ ಮಲಗಿಕೊಂಡಿದೆಯೇ?

**ಸಭಾಪತಿಯವರು:–** ನೋಡೋಣ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸರ್ಕಾರ, ಸರ್ಕಾರ, ಸರ್ಕಾರ ಎಂದು ಕೂಗಬೇಕಾಗಿದೆ... ಇಂತಹ ಪರಿಸ್ಥಿತಿ ಈ ಸರ್ಕಾರಕ್ಕೆ ಏತಕ್ಕೆ ಬಂತು?

**ಸಭಾಪತಿಯವರು:–** ಹೇಳುತ್ತಾರೆ, ತಡ ಮಾಡಿ.

**ಶ್ರೀ ವಿ.ಎಸ್. ಉಗ್ರಪ್ಪ(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ...

**ಸಭಾಪತಿಯವರು:–** ಸರ್ಕಾರದಿಂದ ಉತ್ತರ ನೀಡಿದ ನಂತರ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನೊಬ್ಬ ಈ ಸದನದ ಸದಸ್ಯನಾಗಿ ನನ್ನ...

**ಸಭಾಪತಿಯವರು:–** ತಮಗೂ ಅವಕಾಶ ಕೊಡುತ್ತೇನೆ. ಪ್ರತಿ ಬಾರಿ ಅವಕಾಶ ಕೊಟ್ಟಿದ್ದೇನೆ. ನೀವು ಸದಸ್ಯನಾಗಿದ್ದೇನೆಂದು ಕೇಳುವುದೇ ಬೇಡ. ಅದು ನನಗೆ ಗೊತ್ತಿದೆ.

**ಶ್ರೀ ಟಿ.ಬಿ. ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ಈಶ್ವರಪ್ಪನವರ ಜೊತೆಗೆ ಮಾನ್ಯ ಹೊರಟ್ಟಿಯವರು ಧ್ವನಿಗೂಡಿಸಿದಾಗ ನಾವು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಯಾವುದೇ ಮಸೂದೆ ತರಬೇಕಾದರೂ ಕೂಡ ನಾವು ವಿವೇಚನೆ ಮಾಡಿ ಜನರ ಪರವಾಗಿರತಕ್ಕಂತಹ ಮತ್ತು ರಾಜ್ಯಕ್ಕೆ ಒಳ್ಳೆಯದಾಗತಕ್ಕಂತಹ ದೃಷ್ಟಿಯಲ್ಲಿ ನಾವು ಕಾನೂನು ತರುತ್ತೇವೆ. ಆದರೆ, ಮೇಲ್ಮನೆ ಸದಸ್ಯರೆಂದು ಹೇಳಿದರೆ ಅತ್ಯಂತ ಎತ್ತರದ ಸ್ಥಾನದಲ್ಲಿರತಕ್ಕಂತಹ ತಾವುಗಳು ಸಲಹೆಗಳನ್ನು ನೀಡಬೇಕು. **(ಗೊಂದಲ)** ಶಾಸನಗಳನ್ನು ಮಾಡುವುದರಲ್ಲಿ ಸಹಕಾರ ನೀಡಬೇಕು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸರ್ಕಾರ ಮೇಲ್ಮನೆ ಸದಸ್ಯರನ್ನು ಮುಗಿಸುವುದಕ್ಕೆ ಹೊರಟಿದೆ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಯವರೆ, ಇಲ್ಲ, ಇಲ್ಲ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಪೀಠಿಕೆ ಹಾಕುವುದನ್ನು ನೋಡಿದರೆ ಏನು ಮಾಡುತ್ತಿದ್ದಾರೆಂದು ನಮಗೆ ಗೊತ್ತಾಗುತ್ತಿದೆ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಯವರೆ, ಈಗ...

**ಶ್ರೀ ಎಸ್.ನಾಗರಾಜ್(ಸಂದೇಶ್ ನಾಗರಾಜ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈಗಾಗಲೇ ಅದರ ಬಗ್ಗೆ ಮಾತನಾಡಿದ್ದಾರೆ. ದಯವಿಟ್ಟು, ಈಗ ಅವರ ಅಭಿಪ್ರಾಯ ಏನೆಂದು ಹೇಳಲಿ.

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸಚಿವರು ಉತ್ತರ ಹೇಳುತ್ತಾರೆ.

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಯವರೆ, ಈಗ ನಾವು ಕಾರ್ಯಕಲಾಪ ಪಟ್ಟಿ ರೀತ್ಯಾ ಹೋಗೋಣ. ಏಕೆಂದರೆ, ವಿಧೇಯಕ ಮಂಡನೆಯಾಗಲಿ. ವಿಧೇಯಕ ಮಂಡನೆಯಾದರೆ ಜನರಿಗೆ ಗೊತ್ತಾಗುವುದು. ಈಗ ಬರುತ್ತಿರತಕ್ಕಂತಹ ವಿಧೇಯಕ ಜನರಿಗೆ ಅಥವಾ ಮಾಧ್ಯಮಗಳಿಗೆ....

**(ಗೊಂದಲ)**

**ಶ್ರೀ ಟಿ.ಎ. ಶರವಣ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಯಾವ ವಿಧೇಯಕಗಳ ಮಂಡನೆಯೂ ಈಗ ಬೇಡ. ಮೊದಲು ಚರ್ಚೆಯಾಗಲಿ ಆ ನಂತರ ಅದನ್ನು ನೋಡೋಣ.

**(ಗೊಂದಲ)**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈಗ... **(ಗೊಂದಲ)** ಮಾನ್ಯ ಟಿ.ಬಿ. ಜಯಚಂದ್ರರವರೆ, ಈಗ, ಮತ್ತೆ 2 ಗಂಟೆ 15 ನಿಮಿಷ ಆಯಿತು. ಇನ್ನು ವಿಳಂಬವಾಗುವುದು ಬೇಡ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೆ, ಸದನದ ಸಂಪ್ರದಾಯವನ್ನು ಪಾಲನೆ ಮಾಡಲಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಉಳಿದ ವಿಧೇಯಕಗಳನ್ನು ಮಂಡನೆ ಮಾಡಿಕೊಳ್ಳುತ್ತಾರೋ ಅಥವಾ ಇಲ್ಲವೋ ಅಷ್ಟೇ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017, ಈ ವಿಧೇಯಕವನ್ನು ಯಾವುದೇ ಕಾರಣಕ್ಕೂ ಕೂಡ ಮಂಡನೆ ಮಾಡುವುದಕ್ಕೆ ನಾವು ಕೊಡುವುದಿಲ್ಲ. **(ಗೊಂದಲ)** ಸರ್ಕಾರಕ್ಕೆ ಉಳಿದ ವಿಧೇಯಕಗಳನ್ನು ಮಂಡನೆ ಮಾಡಿಕೊಳ್ಳಬೇಕೆಂಬ ಆಸಕ್ತಿಯಿದ್ದರೆ ನಾವು ಅವಕಾಶ ಕೊಡುತ್ತೇವೆ. ಇಲ್ಲವಾದರೆ, ಎಲ್ಲಾ ವಿಧೇಯಕಗಳನ್ನು ಮಂಡನೆ ಮಾಡುವುದಕ್ಕೆ ಬಿಡುವುದಿಲ್ಲ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ(ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು):-** ಮಾನ್ಯ ಸಭಾಪತಿಯವರೆ, ಆಯಿತು. ಈಗ, ಮೊದಲನೆಯದಾಗಿ ಭಾರತ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯ, ಎರಡನೆಯದಾಗಿ ಶ್ರೀ ಹೆಚ್. ಆಂಜನೇಯರವರು ತಂದಿರತಕ್ಕಂತಹ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ(ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕ, 2017, ಮೂರನೆಯದಾಗಿ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2017 ಕೂಡ ದೊಡ್ಡ ವಿಧೇಯಕವಲ್ಲ. ರೋರಿಕ್ ಮತ್ತು ದೇವಿಕರಾಣಿ ರೋರಿಕ್ ಎಸ್ಟೇಟ್(ಅರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2017ಕ್ಕೆ ಸಂಬಂಧಿಸಿದಂತೆ ಒಂದು simple amendment ಇದೆ. **(ಗೊಂದಲ)** ಒಂದು ಮೂರು-ನಾಲ್ಕು...

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಭಾನುಪ್ರಕಾಶ:–** ಮಾನ್ಯ ಸಭಾಪತಿಯವರೆ, ವಿಧಾನ ಮಂಡಲದಲ್ಲಿ ತೀರ್ಮಾನವಾಗಿರುವುದರಿಂದ ಎಲ್ಲಾ ವಿಧೇಯಕಗಳು ಕೂಡ simple. ನಾವು ಕತ್ತಲೆಯಲ್ಲಿರಬೇಕು ಅಷ್ಟೇ. ವಿಧಾನ ಮಂಡಲದಲ್ಲಿ ತೀರ್ಮಾನವಾಗಿ ಹೋಗಿದೆ.

**(ಗೊಂದಲ)**

**ಶ್ರೀ ಟಿ.ಬಿ. ಜಯಚಂದ್ರ:–** ಮಾನ್ಯ ಸಭಾಪತಿಯವರೆ, ಇಲ್ಲ. ಆ ಭಾವನೆ ನಮಗೆ ಇಲ್ಲ. (**ಗೊಂದಲ**) ಆಯಿತು. ಆ ವಿಧೇಯಕವನ್ನು ಬಾಕಿಯಿಟ್ಟು ಬೇರೆ ವಿಧೇಯಕಗಳನ್ನು ತಾವು ತರಬಹುದು.

**ಸಭಾಪತಿಯವರು:–** ಹಾಗಾದರೆ ನಾನು ನನ್ನ ಅಂತಿಮ ಮಾತನ್ನು ಹೇಳುತ್ತಿದ್ದೇನೆ. ನಮ್ಮ ಸದನದಲ್ಲಿ ಯಾವತ್ತೂ ಈ ರೀತಿ ಪುನರಾವರ್ತನೆ ಆಗುವುದು ಬೇಡ ಎನ್ನುವಂತಹ ಪೀಠಿಕೆಯನ್ನು ಹಾಕಿ ಮತ್ತು ಪ್ರತಿ ಬಾರಿ ಕಾರ್ಯಕಲಾಪಗಳ ಸಲಹಾ ಸಮಿತಿಯೊಳಗೆ ನಾವು ಕೇವಲ ಮಾತನಾಡುವುದಾಗುತ್ತದೆ, ಅದರಿಂದ ಏನೂ ಉಪಯೋಗವಾಗುತ್ತಿಲ್ಲ. ಇದನ್ನು ಸರ್ಕಾರದ, ಯಾರ ಯಾರ ಸರ್ಕಾರವಿರುತ್ತದೆ ಅದು ಗೊತ್ತಿಲ್ಲ. ನಾನು ಸಭಾಪತಿಯಾದ ನಂತರ 4 ಜನ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ. ಇದು 4ನೆಯ ಸರ್ಕಾರ. ಹಾಗಾಗಿ ಸರ್ಕಾರ ನಡೆಸತಕ್ಕಂತಹವರು, ಸಚಿವರುಗಳು, ಅಧಿಕಾರಿಗಳು... ಇದರಲ್ಲಿ ಅಧಿಕಾರಿಗಳ ಪಾತ್ರ ಬಹಳ ದೊಡ್ಡದಿರುತ್ತದೆ. ಅಧಿಕಾರಿಗಳಿಗೆ ನಾನು ನೇರವಾಗಿ ಸೂಚನೆ ಕೊಡುತ್ತೇನೆ, 2 ದಿವಸ ಅಥವಾ 3 ದಿವಸ ಮುಂಚೆ ಇರುವಾಗಲೇ ವಿಧೇಯಕಗಳು ಬರುವಂತಹ ವ್ಯವಸ್ಥೆಯಾಗಬೇಕು, except the Finance Bill and Money Bill. Money Bill, Finance Bill, ಅದಕ್ಕೆ ಯಾವುದೇ ಬಂಧನ ಹಾಕುವುದಕ್ಕೆ ಬರುವುದಿಲ್ಲ. ಅದನ್ನು ಯಾವಾಗಲೂ ಕಡೆಯ ನಿಮಿಷದಲ್ಲಿಯೇ ತರುವುದು, ಪದ್ಧತಿ. ಅದನ್ನು ಬಿಟ್ಟು ನಾನು ಹೇಳುವುದು ಬಾಕಿ ಯಾವುದೇ ವಿಧೇಯಕಗಳು ಈ ರೀತಿ ಮಂಡನೆ ಆಗಬಾರದು. ಈಗ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಆದಂತಹ ತೀರ್ಮಾನದ ವಿರುದ್ಧವಾಗಿ ಅಥವಾ ಅದರಲ್ಲಿ ಒಂದು ಸಣ್ಣ ತಿದ್ದುಪಡಿ ರೀತಿ ಮಾಡಿ, ಇವತ್ತಿನ ದಿವಸ ಪಟ್ಟಿಯನ್ನು ನಮಗೆ ಏನು ಈಗಾಗಲೇ ಕೊಟ್ಟು ಹೆಚ್ಚುವರಿ ಕಾರ್ಯಕಲಾಪವೆಂದು ನಾನು ಹಾಕಿಸಿದ್ದೇನೆ. ಅದರಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ, 2017, ಈ ವಿಧೇಯಕವನ್ನು ಬಿಟ್ಟು, ಅದನ್ನು ಇವತ್ತಿನ ಸದನದಲ್ಲಿ ತೆಗೆದುಕೊಳ್ಳುವುದಿಲ್ಲ. ಉಳಿದ ವಿಧೇಯಕಗಳನ್ನು ನಾವು ಪರಿಶೀಲನೆ ಮಾಡಿ ಚರ್ಚೆ ಮಾಡಿ, ಸಭೆ ಒಪ್ಪಿದರೆ ಒಪ್ಪಿಗೆ, ಸಭೆ reject ಮಾಡಿದರೆ ಏನಾಗುತ್ತದೆಯೆಂದು ನಾನು ಈಗಲೇ Ruling ಕೊಡುವುದಕ್ಕೆ ಬರುವುದಿಲ್ಲ. ಈ ಅವಕಾಶಗಳನ್ನು ಕೊಡುತ್ತೇನೆ. ಹಾಗಾಗಿ ಅದನ್ನು ಮಧ್ಯಾಹ್ನದ ನಂತರ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ತೆಗೆದುಕೊಳ್ಳೋಣ. ಈಗ ಸಮಯ 2 ಗಂಟೆ 15 ನಿಮಿಷ. 3 ಗಂಟೆ 45 ನಿಮಿಷಗಳವರೆಗೆ ಊಟಕ್ಕಾಗಿ ಹೋಗಬೇಕು. ಅಂದರೆ, ಸಮಯಕ್ಕೆ ಸರಿಯಾಗಿ ಸಭೆ ಪ್ರಾರಂಭ ಮಾಡೋಣ. ವಿಧೇಯಕಗಳನ್ನು ನಾವು ಮಂಡನೆ ಮಾಡಬೇಕಾಗುತ್ತದೆ.

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳ ಉತ್ತರ ಕೂಡ ಇದೆ. ಅದಕೋಸ್ಕರ...

**ಸಭಾಪತಿಯವರು:-** ಅದು ಬೇರೆ ಇದೆ. ಅದಕೋಸ್ಕರ ಎಷ್ಟು ಹೊತ್ತಿಗೆ ಶುರು ಮಾಡೋಣ? ತಾವೇ ಹೇಳಿ. 3 ಗಂಟೆ 30 ನಿಮಿಷಕ್ಕೆ ಪ್ರಾರಂಭ ಮಾಡೋಣವೆ?

**ಶ್ರೀ ಟಿ.ಬಿ. ಜಯಚಂದ್ರ:-** ಮಾನ್ಯ ಸಭಾಪತಿಯವರೆ, ಕೇವಲ 10 ನಿಮಿಷಗಳ ಕಾಲ ಕುಳಿತರೆ ಎಲ್ಲಾ ವಿಧೇಯಕಗಳು ಮುಗಿದು ಹೋಗುತ್ತವೆ.

**ಸಭಾಪತಿಯವರು:-** ಈಗಲೇ..? ಹಾಗೆ ಆಗುವುದಿಲ್ಲ. ನಾನು ಊಟಕ್ಕೆ ಹೋಗಬೇಕಲ್ಲವೇ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಊಟ ಮಾಡಿ ಬಂದಿದ್ದಾರೆ.

**ಸಭಾಪತಿಯವರು:-** ನಾನು ಇನ್ನೂ ಊಟ ಮಾಡಿರುವುದಿಲ್ಲ. ಹಾಗಾಗಿ ಸದನವನ್ನು ಮಧ್ಯಾಹ್ನ 3 ಗಂಟೆ 30 ನಿಮಿಷಗಳವರೆಗೆ ಮುಂದೂಡಿದ್ದೇನೆ.

(887)/21-6-2017/3-30/ಎಲ್ಎನ್/ಕೆಎಸ್(ಎಸ್‌ಪಿ)

**(ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 2ಗಂಟೆ 19 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನ: ಮಧ್ಯಾಹ್ನ 3 ಗಂಟೆ 39 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಉಪಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**8.ಪ್ರಕಟಣೆ**

**ಉಪಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು "

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 104ರ ಮೇರೆಗೆ ವಿಧಾನಸಭೆಯು ದಿನಾಂಕ:21–6–2017ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತ್ತೆಂದು, ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ"

5) ಕರ್ನಾಟಕ ಧನ ವಿನಿಯೋಗ (ಸಂಖ್ಯೆ:2) ವಿಧೇಯಕ, 2017

6) ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2017

7) ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2017

(ಮುಂದು)

(888) 21.06.2017 / YL (KS) SP /3.40

(ಉಪ ಸಭಾಪತಿಯವರ ಉಪಸ್ಥಿತಿ)

**9. ಶಾಸನ ರಚನೆ**

**<u>ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು</u>**

**ಅ) <u>ಭಾರತ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017</u>**

***<u>ಪರ್ಯಾಲೋಚನಾ ಪ್ರಸ್ತಾವ</u>***

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 2017ರ ಭಾರತ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**<u>ಪ್ರಸ್ತಾವವನ್ನು ಮಂಡಿಸಲಾಯಿತು</u>**

**ಶ್ರೀ ಟಿ.ಬಿ.ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಇಲಾಖೆ):–** ಮಾನ್ಯ ಸಭಾಪತಿಯವರೆ, ಈಗಾಗಲೇ ವಾಸ್ತವಿಕವಾಗಿ ಮಾತನಾಡುವಂತ ಸಂದರ್ಭದಲ್ಲಿ ಸದನದ ಮುಂದೆ ವಿವರಣೆಯನ್ನು ಕೊಟ್ಟಿದ್ದೇನೆ. ನಮ್ಮಲ್ಲಿ, ದೇಶದ ಮಟ್ಟದಲ್ಲಿ National Law School of India Act,1986 ಎನ್ನತಕ್ಕಂಥದನ್ನು ತರುವುದರ ಮುಖೇನ ಎಲ್ಲಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯದಲ್ಲಿಯೂ ಸಹ National Law Schools and standards prescribe ಮಾಡಿ, ಆ standard ಪ್ರಕಾರ ಇವತ್ತು National Law School ಮಾಡಬೇಕೆಂಬ ಉದ್ದೇಶವನ್ನು ಹೊಂದಿದಂತಹ ಒಂದು ಕಾಯ್ದೆ ಇದಾಗಿದೆ. ಆ ಹಿನ್ನೆಲೆಯಲ್ಲಿ ಸ್ಥಾಪಿತವಾಗಿರತಕ್ಕಂಥ ನಮ್ಮ ಬೆಂಗಳೂರಿನ National Law School ಅತ್ಯಂತ ಪ್ರತಿಷ್ಠಿತ ಸಂಸ್ಥೆಯಾಗಿದೆ. ಬಹುಶ: ಇಡೀ ದೇಶದಲ್ಲಿ National Law School of India ಬೆಂಗಳೂರಿನಲ್ಲಿ ಏನಿದೆ. ಇದು ರಾಷ್ಟ್ರ ಮಟ್ಟದಲ್ಲಿ ಒಂದು ಪ್ರಖ್ಯಾತಿಯನ್ನು ಪಡೆದಿದೆ ಮತ್ತು National Law School of India University ನಲ್ಲಿ ವ್ಯಾಸಂಗ ಮಾಡತಕ್ಕಂಥ ಯಾವುದೇ ವಿದ್ಯಾರ್ಥಿಗಳಾಗಲಿ Under Graduates or Post Graduates ಆದರೂ ಕೂಡ ಅವರಿಗೆ ರಾಷ್ಟ್ರ ಮಟ್ಟದಲ್ಲಿ ಅತ್ಯುತ್ತಮವಾದ ಬೇಡಿಕೆ ಇರುವುದನ್ನು ನಾವೆಲ್ಲರೂ ಗಮನಿಸಿದ್ದೇವೆ. ಸದರಿ ವಿದ್ಯಾಲಯದಲ್ಲಿ seat ಗೋಸ್ಕರ ಒಂದು ಹೋರಾಟವನ್ನೇ ಮಾಡಬೇಕಾಗುತ್ತದೆ. ಎಷ್ಟೇ merit ಇದ್ದರೂ ಸಹ ಸದರಿ ವಿದ್ಯಾಲಯದಲ್ಲಿ ತುಂಬಾ ಜನರಿಗೆ seat ಸಿಗುವುದಕ್ಕೆ ಅವಕಾಶವಿರುವುದಿಲ್ಲ. ಈ ವಿದ್ಯಾಲಯದಲ್ಲಿ pass ಆಗಿ ಬಂದಿರತಕ್ಕಂಥವರಿಗೆ ಒಂದಲ್ಲ ಒಂದು ರೀತಿಯಲ್ಲಿ ಉದ್ಯೋಗದಲ್ಲಿಯಾಗಲಿ, ಸಂಶೋಧನೆಯಲ್ಲಿಯಾಗಲಿ ಅಥವಾ ಬೇರೆ ಬೇರೆ ವಿಚಾರಗಳಲ್ಲಿಯಾಗಲಿ rehabilitate ಆಗಿರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಮೊನ್ನೆ ದಿವಸ ನಾನು scholarship ನೋಡುತ್ತಿದೆ. ರಾಷ್ಟ್ರೀಯ ಕಾನೂನು ವಿದ್ಯಾಲಯದಲ್ಲಿ ಸಾಕಷ್ಟು scholarship ಬರುತ್ತದೆ. ಯಾರಾದರೂ ಕರ್ನಾಟಕದ ಮಕ್ಕಳಿಗೆ scholarship ಸಿಕ್ಕಿದೆಯೇ ಎಂದು ನೋಡಿದಾಗ ಒಬ್ಬರಿಗೂ ಸಹÀ scholarship ಸಿಕ್ಕಿರಲಿಲ್ಲ. ಹಾಗಾಗಿ ನಮ್ಮ ಕರ್ನಾಟಕದ ಮಕ್ಕಳಿಗೆ ಈ ಅವಕಾಶ ದೊರೆಯಬೇಕಾದರೆ ಏನು ಮಾಡಬೇಕೆನ್ನುವುದರ ಬಗ್ಗೆ ಚಿಂತನೆ ಮಾಡಿ, ಮುಖ್ಯಮಂತ್ರಿಗಳ ಜೊತೆ ಚರ್ಚೆಯನ್ನು ನಡೆಸಿ, ನಮ್ಮಲ್ಲಿರತಕ್ಕಂಥ reservation ಅನ್ನು ಹೆಚ್ಚಾಗಿ ಕರ್ನಾಟಕದ ಮಕ್ಕಳಿಗೆ ಅವಕಾಶ ನೀಡುವಂತಹ ನಿಟ್ಟಿನಲ್ಲಿ ಮಾಡಬೇಕೆನ್ನುವ ಕಾರಣಕೋಸ್ಕರ ಕೆಳಮನೆಯಲ್ಲಿ ಒಂದು ವಿಧೇಯಕವನ್ನು ಮಂಡನೆ ಮಾಡಿ, ಶೇಕಡ ಐವತ್ತಕ್ಕಿಂತ ಕಡಿಮೆಯಲ್ಲದಷ್ಟು ಸೀಟುಗಳನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ ಕೊಡತಕ್ಕಂಥ ವಿಶೇಷವಾದ ಕಾಯ್ದೆಯನ್ನು ತಿದ್ದುಪಡಿ ಮಾಡುವಂತಹ ಕೆಲಸವನ್ನು ಮಾಡಿದ್ದೇವೆ. ಬೇರೆ ಬೇರೆ ರಾಜ್ಯಗಳಲ್ಲಿಯೂ ಸಹ ಈ ರೀತಿಯಾಗಿ National Law Schools ಇದೆ. ಅಲ್ಲಿಯೂ ಸಹ ಶೇಕಡ 7% ರಿಂದ 50% ವರೆಗೂ ಮಾಡಿದ್ದಾರೆ. ನಾವು ಸಾರಾಸಗಟಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇಕಡ 50% ನಿಗದಿ ಮಾಡಿದ್ದೇವೆ. ಇದೊಂದು ಪ್ರಗತಿಪರವಾಗಿರುವಂಥದ್ದಾಗಿದೆ. ಇದಕ್ಕೆ ನಮ್ಮಲ್ಲಿರುವ ಅವಕಾಶ ಎಷ್ಟೆಂದರೆ 80 seats Under Graduate ಗೆ ಇರುತ್ತದೆ. ಕರ್ನಾಟಕದ ಮಕ್ಕಳಿಗೆ 40 ಸೀಟುಗಳ ಅವಕಾಶ ಸಿಗುತ್ತದೆ. ಸ್ನಾತಕೋತ್ತರ ಪದವಿಯಲ್ಲಿ 50 ಸೀಟುಗಳ ಅವಕಾಶವಿರುತ್ತದೆ. ಅಲ್ಲಿಯೂ ಸಹ ಇವತ್ತು ಕರ್ನಾಟಕದ ಮಕ್ಕಳಿಗೆ ಹೆಚ್ಚು ಅವಕಾಶ ಸಿಗುತ್ತದೆ. ಇದೊಂದು ಸಣ್ಣ ಕಾಯ್ದೆಯಾಗಿದೆ. ಇದನ್ನು ತಿದ್ದುಪಡಿ ಮಾಡಿ, ಇದಕ್ಕೆ ದಯಮಾಡಿ ಒಪ್ಪಿಗೆ ನೀಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ 2017ನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ ಇನ್ನು ಹೆಚ್ಚು ಅವಕಾಶವನ್ನು ಕಲ್ಪಿಸಬೇಕೆಂದು ಮಾನ್ಯ ಸಚಿವರು ಏನು ತಂದಿದ್ದಾರೆ, ಅದನ್ನು ನಾನು ಮುಕ್ತಮನಸ್ಸಿನಿಂದ ಸ್ವಾಗತ ಮಾಡುತ್ತೇನೆ. ಈ ವಿಧೇಯಕದಲ್ಲಿ ಒಂದು ಸಣ್ಣ print mistake ಇದೆ. ವಿಧೇಯಕದ ಮೊದಲ ಪುಟದ ವಿವರಣೆ:(ಬಿ) ರಲ್ಲಿ ವಿದ್ಯಾರ್ಥಿಯು ಅರ್ಹತಾ ಪರೀಕ್ಷೆಯ ಹಿಂದಿನ ಏಳು ವರ್ಷಗಳಿಗೆ.....ಇಲ್ಲಿ **'ಏಳು'** ಎಂಬುದರ ಬದಲಾಗಿ **'ಐಳು'** ಎಂದು ತಪ್ಪಾಗಿ ನಮೂದಾಗಿದೆ. ಇದನ್ನು ಸರಿಪಡಿಸಿಕೊಳ್ಳಬೇಕು. ಎರಡನೆಯದಾಗಿ ನೇರವಾಗಿ ಈ ವಿಧೇಯಕಕ್ಕೆ ಸಂಬಂಧಿಸಿರುವುದಿಲ್ಲ. ಬೆಳಿಗ್ಗೆ ನಾವು ಸದನದಲ್ಲಿ ಚರ್ಚೆ ಮಾಡಬೇಕಾದರೆ, ಕರ್ನಾಟಕದ ವಿದ್ಯಾರ್ಥಿಗಳು ಏನು ಎಂದು define ಮಾಡಬೇಕಾದರೆ ವೈದ್ಯಕೀಯ ಕಾಲೇಜುಗಳಲ್ಲಿರತಕ್ಕಂಥ ವ್ಯಾಖ್ಯಾನವೇ ಬೇರೆ ಇದೆ. ಆದರೆ ಈ ತಿದ್ದುಪಡಿ ವಿಧೇಯಕದಲ್ಲಿ ***"ವಿದ್ಯಾರ್ಥಿಯು ಅರ್ಹತಾ ಪರೀಕ್ಷೆಯ ಹಿಂದಿನ ಏಳು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗಾಗಿ ಕರ್ನಾಟಕ ರಾಜ್ಯದಲ್ಲಿರುವ ಮಾನ್ಯತೆ ಪಡೆದ ಯಾವುದಾದರೂ ಒಂದು ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿರಬೇಕು."*** ಎಂದಿದೆ. ರಾಜ್ಯದಲ್ಲಿ ಈ ರೀತಿಯ ಕಾನೂನುಗಳನ್ನು ತರಬೇಕಾದರೆ, ಕರ್ನಾಟಕ ವಿದ್ಯಾರ್ಥಿಗಳೆಂದು ಏನು ಕಾನೂನು ಮಾಡಿಕೊಂಡಿದ್ದಾರೆ, ಅದು ಎಲ್ಲರಿಗೂ ಸಮಾನವಾಗಿ ಅನ್ವಯಿಸಬೇಕು. ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳಿಗೆ ಬೇರೆ ಕಾನೂನು. . . ಅವರು ಕರ್ನಾಟಕದಲ್ಲಿ ವಿದ್ಯಾಭ್ಯಾಸ ಮಾಡಿದರೆ ಸಾಕು ಎಂದಿದೆ. ಆ ರೀತಿಯ ಸಂಗತಿಯನ್ನು ಸ್ವಲ್ಪ ವಿಮರ್ಶೆ ಮಾಡಿಕೊಂಡು, ಎಲ್ಲರಿಗೂ ಅನ್ವಯವಾಗುವಂತೆ ಮಾಡಬೇಕು. ನೇರವಾಗಿ ನಾನು ವಿಧೇಯಕದ ಬಗ್ಗೆ ಮಾತನಾಡುವುದಕ್ಕೆ ಬರುವುದಿಲ್ಲ. ಆದರೆ, ಇದನ್ನು ತಿದ್ದಿಕೊಳ್ಳುವುದು ಒಳ್ಳೆಯದೆನ್ನಿಸುತ್ತದೆ. ಅದರ ಜೊತೆಗೆ ಮಾನ್ಯ ಸಚಿವರು ಉಲ್ಲೇಖ ಮಾಡಿರುವಂತೆ ಬೇರೆ ರಾಜ್ಯಗಳಲ್ಲಿ ರಾಷ್ಟ್ರೀಯ ಕಾನೂನು ವಿದ್ಯಾಲಯಗಳು ಏನಿದೆ. ಇದರ ಬಗ್ಗೆ ಬೇರೆ ರಾಜ್ಯಗಳಲ್ಲಿ ಯಾವ ಕಾನೂನು ಇದೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಏಕೆಂದರೆ ನಾಳೆ ದಿವಸ ಯಾರೂ ಪ್ರಶ್ನೆಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬಾರದಲ್ಲವೇ? ಏಕೆಂದರೆ, ಶೇಕಡ 15%, 30%, 50%, 75% ಗಳೆಂದು ಒಂದೊಂದು ಕಡೆಯು ಬೇರೆ ಬೇರೆ ರೀತಿಯಲ್ಲಿದೆ. ರಾಷ್ಟ್ರೀಯ ಮಟ್ಟದಲ್ಲಿ ಈಗಾಗಲೇ ಜಾರಿಗೆ ಬಂದಿರುವುದರಿಂದ ಇದಕ್ಕೇನಾದರೂ ಒಂದು ಮಾನದಂಡವಿರಬೇಕಲ್ಲವೇ? ಹಾಗಾಗಿ ಇದನ್ನು ವಿಮರ್ಶೆ ಮಾಡಿಕೊಂಡು, ನಾಳೆ ದಿವಸ ಯಾರು ಪ್ರಶ್ನೆ ಮಾಡದ ರೀತಿಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಸ್ವಲ್ಪ ಮಾಹಿತಿ ನೀಡಿದರೆ ಚೆನ್ನಾಗಿರುತ್ತದೆ. ಒಟ್ಟಿನಲ್ಲಿ ನಮ್ಮ ಕರ್ನಾಟಕ ವಿದ್ಯಾರ್ಥಿಗಳಿಗೆ ಲಾಭವಾಗುವ ದೃಷ್ಟಿಯಲ್ಲಿ ಮಾನ್ಯ ಸಚಿವರು ಏನು ಕಾನೂನು ತಂದಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೆ, ಈ ವಿಧೇಯಕವು ಅತ್ಯಂತ ಪ್ರಮುಖವಾಗಿ ರಾಜ್ಯದ ಮಕ್ಕಳ ಪರವಾಗಿರತಕ್ಕಂಥ ವಿಧೇಯಕವಾಗಿದೆ. ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತಿದ್ದೇನೆ. 1986 ರಲ್ಲಿ ಇಡೀ ದೇಶದಲ್ಲಿ ಪ್ರಪ್ರಥಮವಾಗಿ national Level ನಲ್ಲಿ ಕಾನೂನು ವಿದ್ಯಾಲಯವನ್ನು ಬೆಂಗಳೂರಿನಲ್ಲಿ ಪ್ರಾರಂಭ ಮಾಡಲಾಗಿತ್ತು. ಇಡೀ ರಾಷ್ಟ್ರದಲ್ಲಿ ಅತ್ಯಂತ ಬೇಡಿಕೆ ಇರತಕ್ಕಂಥ Law School of India ಯಾವುದಾದರೂ ಇದ್ದರೆ ಅದು ಬೆಂಗಳೂರಿನಲ್ಲಿರತಕ್ಕಂಥ ರಾಷ್ಟ್ರೀಯ ಕಾನೂನು ವಿದ್ಯಾಲಯ. ಈ ವಿದ್ಯಾಲಯದಲ್ಲಿ ಯಾರ್ಯಾರು ಪದವಿಯನ್ನು ಹೊಂದುತ್ತಿದ್ದಾರೆ, ಅಂಥವರಿಗೆ ಅನೇಕ field ಗಳಾದ industry, judiciary, banking, multi-national company ಇವುಗಳಲ್ಲಿ ಸಾಕಷ್ಟು ಅವಕಾಶವಿದೆ. ಆದರೆ, ಅನೇಕ ಸಂದರ್ಭದಲ್ಲಿ ನಾನು ಸಹ ನೋಡಿದ್ದೇನೆ. ನಮ್ಮ ಮಕ್ಕಳು ಕಾನೂನು ವಿದ್ಯಾಭ್ಯಾಸ ಮಾಡಿರತಕ್ಕಂಥ ಹಿನ್ನೆಲೆಯಲ್ಲಿ ಕರ್ನಾಟಕದವರಿಗೆ ಬಹಳ ಕಡಿಮೆ ಮಟ್ಟದಲ್ಲಿ ಸೀಟು ಲಭ್ಯವಾಗುತ್ತಿದ್ದು, ರಾಷ್ಟ್ರದ ಬೇರೆ ಬೇರೆ ರಾಜ್ಯಗಳ ವಿದ್ಯಾರ್ಥಿಗಳಿಗೆ ಹೆಚ್ಚು ಸಂಖ್ಯೆಯಲ್ಲಿ ಸೀಟು ಸಿಗುತ್ತಿದೆ. ಅದರ ಹಿನ್ನೆಲೆಯಲ್ಲಿ ಈ ವಿಧೇಯಕದ Reasoning's ನಲ್ಲಿ ಈ ರೀತಿ ತಿಳಿಸಲಾಗಿದೆ; "It is considered necessary to amend the National Law School of India Act 1986, to reserve not less than thirty percent of seats for resident students of Karnataka" ಎನ್ನುವುದರ ಹಿನ್ನೆಲೆಯಲ್ಲಿ ಶೇಕಡ 50%. ಅಂದರೆ, ಇರತಕ್ಕಂಥ ಒಟ್ಟಾರೆ ಸೀಟುಗಳ ಪೈಕಿ ಶೇಕಡ 50% ಸೀಟು ಕರ್ನಾಟಕದವರಿಗೆ ಕೊಡತಕ್ಕಂಥದ್ದು ಏನಿದೆ. ಇದರ ಬಗ್ಗೆ ನನಗೆ ತಿಳಿದಿರುವಂತೆ ಬಹಳ ಸೂಕ್ತವಾಗಿರತಕ್ಕಂಥದ್ದು ಶೇಕಡ 50% ಕೊಡುವಂಥದ್ದಾಗಿದೆ.

ಎರಡನೆಯದಾಗಿ 'Explanation' ನಲ್ಲಿ ಕೊಟ್ಟಿರತಕ್ಕಂಥದ್ದು; Clause (i) 'Resident student of Karnataka' ಬಗ್ಗೆ ಇದೆ. ಆದರೆ, Ordinary resident

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವಂತಹದ್ದನ್ನು Representation of People Act, 1950 (RP Act) ಇಲ್ಲಿ ಒಂದು definition ಇದೆ. ಏಕೆಂದರೆ, ಯಾರೇ voter ಆಗಬೇಕಾದರೆ ಯಾರು Ordinary resident ಎನ್ನುವಂತಹದ್ದನ್ನು there is a definition and that has been considered by the various High Courts and the Supreme Court. ಇಲ್ಲಿ reasoning ನಲ್ಲಿ 10 ವರ್ಷಗಳಿಗೆ ವಿದ್ಯಾರ್ಥಿ ಅಥವಾ ಯಾರಾದರೂ ಪೋಷಕರು ಇರಬೇಕೆನ್ನುವುದು ಇದೆ. ಬಹುಶ: Clause (ii) ನಲ್ಲಿ 7 ವರ್ಷ ವಿದ್ಯಾಭ್ಯಾಸ ಮಾಡಿರಬೇಕೆಂದು ಏನಿದೆ, ಇದು ಒಂದು Clause ಆಗಿದ್ದರೆ ಸಾಕು. ಪೋಷಕರು ಅಥವಾ ಸಾಮಾನ್ಯವಾಗಿ, ಇದರ ಹಿನ್ನೆಲೆಯಲ್ಲಿ ವಿದ್ಯಾಭ್ಯಾಸ ಮಾಡಿರತಕ್ಕಂಥ ಪ್ರೈಮರಿ, 1ನೇ ತರಗತಿಯಿಂದ 10ನೇ ತರಗತಿಯವರೆಗೂ ಅಥವಾ 7ನೇ ತರಗತಿಯವರೆಗೂ ಅಥವಾ 5ನೇ ತರಗತಿಯಿಂದ 12ನೇ ತರಗತಿಯವರೆಗೂ ಇರತಕ್ಕಂಥ ಹಿನ್ನೆಲೆ ಇದೆ. ನನಗೆ ಇದರಲ್ಲಿರತಕ್ಕಂಥ ಸಮಸ್ಯೆಯೆನೆಂದರೆ, ಗಡಿನಾಡು ಕನ್ನಡಿಗರ, ಹೊರನಾಡು ಕನ್ನಡಿಗರ ಬಗ್ಗೆ. ಅವರು ಸಹ ಕನ್ನಡದ ಮಕ್ಕಳೇ.

**(ಮುಂದು) . . .**

(889) 21-06-2017 (03-50) BSD-MD

**ಶ್ರೀ ವಿ.ಎಸ್. ಉಗ್ರಪ್ಪ (ಮುಂದು)**

ಹೊರನಾಡು ಮತ್ತು ಗಡಿನಾಡಿನವರೂ ಕನ್ನಡದ ಮಕ್ಕಳಾಗಿದ್ದು, ಅವರಿಗೆ ಯಾವ ರೀತಿ ಇಲ್ಲಿ accommodate ಮಾಡಲು ಸರ್ಕಾರ ಯೋಚನೆ ಮಾಡುತ್ತದೆ? ಬಹುಶಃ ಈ ಕಾನೂನಿನಲ್ಲಿ ಅವರಿಗೂ ಮೀಸಲಾತಿಯನ್ನು ಒದಗಿಸಬೇಕು. ಏಕೆಂದರೆ ultimately, ನಮ್ಮ ರಾಜ್ಯದ ಮಾತೃಭಾಷೆಯಾಗಿರುವ ಕನ್ನಡ ಭಾಷೆಯ ಕನ್ನಡದ ಮಕ್ಕಳು ಬೇರೆ ಬೇರೆ ಕಡೆ ಬೇರೆ ಬೇರೆ ಕಾರಣಗಳಿಂದ ಇದ್ದು, ಅವರನ್ನು ಯಾವ ರೀತಿ ಪ್ರತಿಷ್ಠಿತ National Law School of India ನಲ್ಲಿ entertain ಮಾಡಲು ಈ ಕಾನೂನಿನಲ್ಲಿ ಬದಲಾವಣೆ ತರಲು ಸರ್ಕಾರ ಬಯಸಿದೆ ಎಂಬ ಮಾಹಿತಿ ನೀಡಬೇಕೆಂದು ಬಯಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಬಹುಶಃ National Law School of India ನಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಶೇಕಡ 50ರಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸೀಟುಗಳನ್ನು ಕೊಡಬೇಕೆಂಬ ತಿದ್ದುಪಡಿ ವಿಧೇಯಕವನ್ನು ಮಾನ್ಯ ಸಚಿವರು ತಂದಿದ್ದು, ಬಹುಶಃ ಇದೊಂದು ಮಕ್ಕಳ ಪರವಾದ ತೀರ್ಮಾನವಾಗಿದ್ದು, ಇದನ್ನು ನಾನು ಮುಕ್ತ ಕಂಠದಿಂದ ಶ್ಲಾಘನೆ ಮಾಡುತ್ತೇನೆ. ಈ ತಿದ್ದುಪಡಿಯನ್ನು ನಾವು ಮಂಜೂರು ಮಾಡುವ ಮೂಲಕ ಕರ್ನಾಟಕ ರಾಜ್ಯದ ಮಕ್ಕಳಿಗೆ ನ್ಯಾಯವನ್ನು ದೊರಕಿಸಿಕೊಟ್ಟಂತೆ ಆಗುತ್ತದೆಂದು ನಾನಂತೂ ಭಾವಿಸಿಕೊಂಡಿದ್ದೇನೆ.

ನಾನು ವಿದ್ಯಾರ್ಥಿ ಜೀವನದಲ್ಲಿ ಡಿಗ್ರಿ ಮುಗಿಸಿ ಕಾನೂನು ಕಾಲೇಜಿಗೆ ಸೇರಬೇಕಾದ ಪರಿಸ್ಥಿತಿಯಲ್ಲಿ ಇದೇ ಕಾಲೇಜಿಗೆ ಆಕಾಂಕ್ಷಿಯಾಗಿ ಅರ್ಜಿಯನ್ನು ಹಾಕಿದ್ದೆನು. ನನಗೆ 13 ಸಾವಿರ ರ್‍ಯಾಂಕ್ ಬಂದಿದ್ದು, First best 80 students will be selected to the National Law School of India. ನನಗೆ ಬೇರೆ ಕಾಲೇಜಿನಲ್ಲಿ ಸೀಟು ಸಿಕ್ಕಿತ್ತು. ಆದರೆ ಇಡೀ ರಾಷ್ಟ್ರದಲ್ಲಿ the first selection from 1 to 100 ಒಳಗಿನ ಎಲ್ಲಾ ವಿದ್ಯಾರ್ಥಿಗಳು ದೇಶದ ಯಾವ ಭಾಗದಲ್ಲಿದ್ದರೂ their first selection is for this National Law School. ಮೊನ್ನೆ ನನ್ನ ಮಗಳಿಗೆ PCMB ಯಲ್ಲಿ 92% ಇದ್ದರೂ ನಾನು ಕಾನೂನು ಕಾಲೇಜಿಗೆ ಸೇರಿಸಬೇಕೆಂದು ಪರೀಕ್ಷೆಗೆ appear ಆಗಲು ಹೇಳಿದ್ದೆನು. ಆಗಲೂ ಸಹ ನನ್ನ ಮಗಳು ಅಲ್ಲಿ ಸೀಟು ಪಡೆಯಲು ಸಾಧ್ಯವಾಗಲಿಲ್ಲ. ಬಹುಶಃ ಈ ತಿದ್ದುಪಡಿಯನ್ನು 2 ವರ್ಷಗಳ ಹಿಂದೆ ಮಾನ್ಯ ಸಚಿವರು ತಂದಿದ್ದರೆ ನನ್ನ ಮಗಳಿಗೂ ಕಾನೂನು ಅಧ್ಯಯನ ಮಾಡಲು ಅವಕಾಶ ಸಿಗುತ್ತಿತ್ತು ಎಂದು ಹೇಳುವುದಕ್ಕೆ ಬಯಸುತ್ತೇನೆ. ಹಾಗಾಗಿ ಇದೊಂದು ಅತ್ಯಂತ ಪ್ರತಿಷ್ಠಿತ ಸಂಸ್ಥೆಯಾಗಿದ್ದು, ಅಲ್ಲಿ ಕಲಿತ ಎಲ್ಲರಿಗೂ 100 percent placement ಆಗಿದೆ. ಜೊತೆಯಲ್ಲಿ ಕರ್ನಾಟಕದ ವಿದ್ಯಾರ್ಥಿಗಳಿಗೆ ಎಂದು ಹೇಳುವಾಗ ಇದರಲ್ಲಿ Post Graduation ಬಗ್ಗೆ ಪ್ರಸ್ತಾಪವಿಲ್ಲ. ಇದರಲ್ಲಿ Under Graduation ಬಗ್ಗೆ ಪ್ರಸ್ತಾಪವಿದ್ದು, Post Graduation ಗೂ 50% ಸೀಟು in that University ಎಂದು ಹೇಳದಿದ್ದರೆ ಅವರಿಗೆ ಪುನಃ ambiguity ಆಗದೇ ಒಳ್ಳೆಯದಾಗುತ್ತಿತ್ತು ಎಂದು ನನ್ನ ಭಾವನೆ. ಮಾನ್ಯ ಉಗ್ರಪ್ಪನವರು ಹೇಳಿದಂತೆ ಗಡಿನಾಡಿನ ಕನ್ನಡಿಗರಿಗೂ ಒಂದು ಕಡೆ some percentage of seats reserve ಇಡುವ ಅವಶ್ಯಕತೆ ಇದೆ ಎಂದು ಹೇಳಿ, ಈ ಕಾಯ್ದೆ ತಂದಿದ್ದರಿಂದ ಕರ್ನಾಟಕ ರಾಜ್ಯದ ಮಕ್ಕಳಿಗೆ ಇದೊಂದು ದೊಡ್ಡ ಅವಕಾಶ. ಎಲ್ಲಾ ಭಾಗ್ಯಗಳ ಜೊತೆಯಲ್ಲಿ ಇದೊಂದು ಭಾಗ್ಯವಾಯಿತು ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ರಾಮಚಂದ್ರಗೌಡ (ಪದವೀಧರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, "Better late than never." ಈಗಲಾದರೂ ಗಮನಹರಿಸಿ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ ವಿಧೇಯಕವನ್ನು ತರುವಾಗ ರಾಜ್ಯದ ಮಕ್ಕಳ ಬಗ್ಗೆ ಕೆಲವರು ಅಭಿಪ್ರಾಯಿಸಿದಂತೆ ಗಡಿನಾಡು ಮಕ್ಕಳಿಗೂ ಅನುಕೂಲವಾಗುವಂತೆ ಕಾನೂನು ತಂದಿದ್ದು, ಇದೇ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಒಂದು diploma course ಇದ್ದು, ಅಲ್ಲಿ 75 ಸೀಟುಗಳಿದ್ದು, ಒಬ್ಬರೂ ಆಯ್ಕೆಯಾಗುವುದಿಲ್ಲ. ಬಹಳ ಜನರಿಗೆ ಅಲ್ಲಿ diploma course ಇದೆ ಎಂದು ಗೊತ್ತಿಲ್ಲ. ಹೀಗಾಗಿ ಅಲ್ಲಿ ಕೂಡ ತಂದರೆ ಒಳ್ಳೆಯದಾಗುತ್ತದೆ. ಏಕೆಂದರೆ Radiology ಬೇರೆ ಬೇರೆ Para Medical Course ಗಳೆಲ್ಲವೂ ಇದ್ದು, ಇದಕ್ಕೊಂದು ತಿದ್ದುಪಡಿಯನ್ನು ಮಾನ್ಯ ಆರೋಗ್ಯ ಮಂತ್ರಿಗಳು ಅಥವಾ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ವಿಧೇಯಕವನ್ನು ತಂದರೆ ಬಹಳಷ್ಟು ಕರ್ನಾಟಕದ ಮಕ್ಕಳಿಗೆ ಅನುಕೂಲವಾಗುತ್ತದೆ. ಈಗ ಬಿಲ್ ತರಲು ಆಗದಿದ್ದರೆ ಒಂದು ordinance ಮಾಡಿದರೆ ಒಳ್ಳೆಯದು. ಈಗ ಪರೀಕ್ಷೆ ನಡೆಯುತ್ತಿದೆ.

**ಶ್ರೀ ಕೆ. ಗೋವಿಂದರಾಜ್:–** ಅದು Central Government ಗೆ ಸಂಬಂಧಿಸಿದ್ದು ಎನಿಸುತ್ತದೆ.

**ಶ್ರೀ ರಾಮಚಂದ್ರಗೌಡ:–** ಇದು ಸಹ Central Government ದ್ದೆ ಆಗಿದೆ.

**Sri. K.GOVINDARAJ:-** No, this belongs to both Central and State Government.

**ಶ್ರೀ ರಾಮಚಂದ್ರಗೌಡ:–** ಇದು ನಮ್ಮದೇನೂ ಅಲ್ಲ. ಎರಡು ಅವರ ಕಡೆಯಿಂದ ನಡೆಯುತ್ತಿದ್ದು, ಇದಕ್ಕೆ ಮಾಡಿದಂತೆ ಅದಕ್ಕೂ ಮಾಡಿದರೆ ಅನುಕೂಲವಾಗುತ್ತದೆ. ಬಹಳ ಒಳ್ಳೆಯ ಕಾನೂನು ತಂದಿದ್ದು, ನಾನು ಇದನ್ನು ಸ್ವಾಗತ ಮಾಡುತ್ತೇನೆ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 1986ರ ಭಾರತ ರಾಷ್ಟ್ರೀಯ ಕಾನೂನು ಅಧಿನಿಯಮಕ್ಕೆ ತಿದ್ದುಪಡಿಯನ್ನು ಮಾನ್ಯ ಕಾನೂನು ಸಚಿವರು ತಂದಿದ್ದು, ನನಗೆ ಬಹಳ ಹೆಮ್ಮೆ ಎನಿಸುತ್ತದೆ. ಮಾನ್ಯ ಕಾನೂನು ಸಚಿವರು ವೃತ್ತಿಯಲ್ಲಿ ವಕೀಲರಾಗಿರುವುದು ಹೆಮ್ಮೆಯ ವಿಚಾರವಾಗಿದೆ. ಸುಮಾರು 30 ವರ್ಷಗಳ ತರುವಾಯ ಶೇಕಡ 50ಕ್ಕೆ ಕಡಿಮೆ ಇಲ್ಲದಂತಹ ಸ್ಥಾನಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕರ್ನಾಟಕದ ವಾಸಿಗಳಿಗೆ ಕೊಡಬೇಕೆಂಬ ತಿದ್ದುಪಡಿಯನ್ನು ತಂದಿದ್ದಾರೆ. ಇಡೀ ಭಾರತ ದೇಶದಲ್ಲಿ "The National Law School of India ಒಂದು ಪ್ರತಿಷ್ಠಿತ ಕಾಲೇಜಿನಲ್ಲಿ ಬಹಳಷ್ಟು ಮಕ್ಕಳು ಕಾನೂನು ಓದಲು ಹೋದರೆ ಬೇರೆ ಬೇರೆ ಕಾರಣಗಳು ಹಾಗೂ ವ್ಯವಸ್ಥೆಯ ದೃಷ್ಟಿಯಿಂದ ಅವಕಾಶಗಳು ಸಿಗುತ್ತಿರಲಿಲ್ಲ. ನಮ್ಮ ರಾಜ್ಯದ ಬಹುತೇಕ ವಿದ್ಯಾರ್ಥಿಗಳಿಗೆ ಅಲ್ಲಿ ಅವಕಾಶ ಸಿಗುತ್ತಿರಲಿಲ್ಲ. ಇನ್ನೊಂದು ಪ್ರಮುಖವಾದ ವಿಚಾರವೆಂದರೆ, National Law School ನಲ್ಲಿ study ಮಾಡಿದವರಿಗೆ placement ಅಂದರೆ professional college ಗಳಲ್ಲಿ campus selection ಎಂದು ಏನು ಕರೆಯುತ್ತೇವೆ, ಆ ರೀತಿ ಆಯ್ಕೆಯಾದವರು companies ಮತ್ತು ಬೇರೆ ಬೇರೆ ಕಡೆ ಉದ್ಯೋಗವಕಾಶಗಳು ಬಹಳಷ್ಟು ಇವೆ. ಬಹಳಷ್ಟು ಜನ ವಕೀಲ ವೃತ್ತಿ ಎಂದರೆ ಮೂಗು ಮುರಿಯುತ್ತಾರೆ. ಅದರೆ ಈ ಕಾಲೇಜಿನಲ್ಲಿ law degree ಪಡೆದುಕೊಂಡು ಹೊರಗೆ ಬರುವವರಿಗೆ ಕಂಪನಿಗಳು voluntary ಆಗಿ ಕರೆದು ಕೆಲಸ ಕೊಡುವ ಅವಕಾಶ ಇದೆ. ಅಂತಹ ಸಂಸ್ಥೆಗೆ ನೆಲ, ಸೌಲಭ್ಯಗಳನ್ನು ಕೊಟ್ಟಿದ್ದರೂ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತಿರಲಿಲ್ಲ. ಬಹುತೇಕ ನಿಧಾನವಾದರೂ ಮಾನ್ಯ ಸಚಿವರು ತಿದ್ದುಪಡಿ ತರಲು ಮುಂದಾಗಿದ್ದು, ನಾನು ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಈ ವಿಧೇಯಕದ 2(3)(ii) ನಲ್ಲಿ ಒಂದು ನಿಯಮದ ಬಗ್ಗೆ ಸ್ವಲ್ಪ ಅನುಮಾನವಿದೆ. ಅದೇನೆಂದರೆ "ವಿದ್ಯಾರ್ಥಿಯು ಅರ್ಹತಾ ಪರೀಕ್ಷೆಯ ಹಿಂದಿನ ಏಳು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗಾಗಿ ಕರ್ನಾಟಕ ರಾಜ್ಯದಲ್ಲಿರುವ ಮಾನ್ಯತೆ ಪಡೆದ ಯಾವುದಾದರೂ ಒಂದು ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿರಬೇಕು" ಎಂದು ಇದೆ. ನಮ್ಮ ರಾಜ್ಯದಲ್ಲಿ 7 ವರ್ಷ ಓದಿರಬೇಕು ಎಂದು ಹೇಳಿ, 2(3)(i)ರಲ್ಲಿ " ಅರ್ಹತಾ ಪರೀಕ್ಷೆಯ ಹಿಂದಿನ ಹತ್ತು ವರ್ಷಗಳಿಗೆ ಕಡಿಮೆಯಿಲ್ಲದ ಅವಧಿಯವರೆಗೆ ವಿದ್ಯಾರ್ಥಿ ಅಥವಾ ಆತನ ತಂದೆ ಅಥವಾ ತಾಯಿ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರಬೇಕು; ಮತ್ತು" ಎಂದು ಸೇರಿಸಿದ್ದಾರೆ. ಹಾಗಾಗಿ 10 ವರ್ಷ ಎಂದು ಹೇಳಿದ ಮೇಲೆ ಪ್ರಾಥಮಿಕ ಶಾಲೆಯಿಂದಲೇ ವ್ಯಾಸಂಗ ಮಾಡಬೇಕಾಗುತ್ತದೆ. 7 ವರ್ಷ ಎಂದರೆ PUC ಆದಮೇಲೆ ಎಲ್‌ಎಲ್‌ಬಿ ಗೆ ಹೋಗುವುದಾಗಿದೆ. ಹಾಗಾಗಿ 6 ನೇ ತರಗತಿಯಿಂದ ಓದಿದವರಿಗೆ ಅವಕಾಶ ಸಿಗುತ್ತದೆ. ಪ್ರೈಮರಿಯವರಿಗೆ ಸಿಗುವುದಿಲ್ಲ ಎಂಬ ಭಾವನೆ ಇದೆ. 10 ವರ್ಷ ತಂದೆ-ತಾಯಿ ಹಾಗೂ candidate ಇರಬೇಕು ಎಂದಿರುವುದರಿಂದ ಅದನ್ನೂ ಸಹ 10 ಮಾಡಿದರೆ..... ಇಲ್ಲಿ 10 ವರ್ಷ ಓದಿರಬೇಕು ಎಂಬ ಅಂಶವನ್ನು ಹಾಕಿದರೆ ನಮ್ಮ ರಾಜ್ಯದವರಿಗೆ ಅವಕಾಶ ಸಿಗುತ್ತದೆ ಎಂದು ನನ್ನ ಕಳಕಳಿ. ಬೇರೆಯವರಿಗೆ ಕಡಿಮೆಯಾದರೂ ನಮ್ಮ ರಾಜ್ಯದವರಿಗೆ ಕಡಿಮೆಯಾಗಬಾರದು. 50% ಕ್ಕಿಂತ

ಕಡಿಮೆಯಿಲ್ಲದಂತೆ ತಿದ್ದುಪಡಿ ತಂದಿದ್ದು, ಆ ಕಾರಣಕ್ಕೋಸ್ಕರ 2(3)(ii) ನಲ್ಲಿ ಸಹ 10 ವರ್ಷ ಎಂದು ಮಾಡಿದರೆ ಒಳ್ಳೆಯದು ಎಂದು ನನ್ನ ಭಾವನೆ. ಮಾನ್ಯ ಕಾನೂನು ಸಚಿವರು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ನಾನು ಈ ಬಿಲ್ ತಂದಿರುವುದಕ್ಕೆ ಮಾನ್ಯ ಕಾನೂನು ಸಚಿವರನ್ನು ಅಭಿನಂದಿಸುತ್ತೇನೆ ಹಾಗೂ ಇದೊಂದು ಒಳ್ಳೆಯ ಪ್ರಯತ್ನ. ಇದನ್ನು ಸ್ವಾಗತ ಮಾಡುತ್ತಾ, ನಾನು ಹೆಚ್ಚು ಮಾತನಾಡುವುದಿಲ್ಲ. ಒಂದು ವಿಷಯ ಏನೆಂದರೆ, ಕಾನೂನು ವಿಶ್ವವಿದ್ಯಾಲಯವನ್ನು ಮಾಡಿದ್ದಾರೆ, ಇಲ್ಲಿ ಪ್ರಯತ್ನ ಮಾಡಿದಂತೆ ಕನಿಷ್ಠವಾಗಿ ನಮ್ಮ ಕಾನೂನು ವಿಶ್ವವಿದ್ಯಾಲಯದ ಕಾನೂನು ಕಾಲೇಜುಗಳು ಇವೆ, ಈಗ ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜು ಇದೆ. ಅವನ್ನೂ ಸಹ ಈ ಮಟ್ಟಕ್ಕೆ upgrade ಮಾಡಲು ಏಕೆ ಪ್ರಯತ್ನ ಮಾಡಬಾರದು? ಒಂದು ನಾಲ್ಕಾರು ಕಾಲೇಜುಗಳನ್ನು ಮಾಡಲು ಏಕೆ ಪ್ರಯತ್ನ ಮಾಡಬಾರದು? ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇತ್ತೀಚೆಗೆ ಕೋರ್ಟುಗಳಲ್ಲಿ ಜಡ್ಜ್‌ಗಳು ವಕೀಲರು ಸರಿಯಾಗಿ ಓದಿಕೊಂಡು ಬರುವುದಿಲ್ಲ, ಜಡ್ಜ್‌ಗಳ ಅರ್ಹತಾ ಪರೀಕ್ಷೆಯಲ್ಲಿ ಸರಿಯಾಗಿ qualify ಆಗುತ್ತಿಲ್ಲ ಎಂಬ ಹೇಳಿಕೆಗಳನ್ನು ನೋಡಿದ್ದೇವೆ. ಇದನ್ನು open court ನಲ್ಲಿ ನೋಡಿದ್ದೇವೆ. ಇದು ಒಳ್ಳೆಯ ಪ್ರಯತ್ನವಾಗಿದ್ದು, ಇದನ್ನು ಮಾಡಿದ್ದಾರೆ, ಇದೇ ರೀತಿ ಕರ್ನಾಟಕದಲ್ಲಿ 10 ಕಾಲೇಜುಗಳನ್ನು ಆಯ್ಕೆ ಮಾಡಿ, ಅವುಗಳನ್ನು upgrade ಮಾಡಿ, ಒಳ್ಳೆಯ ಮಕ್ಕಳನ್ನು ತೆಗೆದುಕೊಳ್ಳಲು ಈ ರೀತಿ ಏಕೆ ಮಾಡುವುದಿಲ್ಲ? ಅದಕ್ಕೆ ತಾವು ಪ್ರಯತ್ನ ಮಾಡಿ, ಈ ವರ್ಷ ಅಲ್ಲದಿದ್ದರೂ ಮುಂದಿನ ವರ್ಷದಿಂದಾದರೂ ಮಾಡಿ ಎಂದು ಹೇಳಿ, ಈ ಬಿಲ್ ಅನ್ನು ಸ್ವಾಗತ ಮಾಡುತ್ತೇನೆ.

(ಮುಂದು)

**(890) 21-06-2017 SK-MD 4.00**

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಟಿ.ಬಿ. ಜಯಚಂದ್ರ :–** ಮಾನ್ಯ ಸಭಾಪತಿಯವರೇ, ತಂದಿರುವಂತಹ ತಿದ್ದುಪಡಿಗೆ ಮಾನ್ಯ ಸದಸ್ಯರೆಲ್ಲರೂ ಕೂಡ ಸ್ವಾಗತವನ್ನು ಮಾಡಿದ್ದಾರೆಂದು ನಾನು ಭಾವಿಸುತ್ತೇನೆ. ಈ ಸಂದರ್ಭದಲ್ಲಿ ಅನೇಕ ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರುಗಳಾದ ಉಗ್ರಪ್ಪನವರು, ಐವನ್ ಡಿ'ಸೋಜಾರವರು ಮತ್ತು ರಾಮಚಂದ್ರಗೌಡರು ಗಡಿನಾಡ ಕನ್ನಡಿಗರಿಗೂ ಕೂಡ ಅವಕಾಶ ಸಿಗಬೇಕು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎನ್ನುವಂತಹ ಒಂದು ಒಳ್ಳೆಯ ಚಿಂತನೆ ಮತ್ತು ಸಲಹೆಯನ್ನು ನೀಡಿರುತ್ತಾರೆ. ಇವತ್ತು ಗಡಿನಾಡ ಕನ್ನಡಿಗರು ಏನಿದ್ದಾರೆ ಅವರಿಗೂ ಕೂಡ ಅವಕಾಶ ಸಿಗುವಂತಹ ರೀತಿಯಲ್ಲಿ ನಾವು ವಿಶೇಷವಾದ ಒಂದು ಕಾಯಿದೆ ಅಥವಾ ಕಾನೂನನ್ನು ತರಬೇಕಾಗುತ್ತದೆ ಮತ್ತು ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ. ಆದರೆ ಮೂಲಭೂತವಾಗಿ ಎಲ್ಲೋ ಒಂದು ಕಡೆ ಇಂತಹ ಸಂದರ್ಭದಲ್ಲಿ ಧ್ವನಿಗೂಡಿಸುವಂತಹವರು ಬಹಳ ಕಡಿಮೆ. ಇವತ್ತು ಈ ರೀತಿಯಾಗಿ ಗಡಿನಾಡ ಕನ್ನಡಿಗರ ಬಗ್ಗೆ ಚಿಂತನೆಯಾಗಬೇಕು. ಅದೇ ರೀತಿಯಾಗಿ ಏನು ಮಾತನಾಡಿದಂತಹವರು ಮತ್ತು ಸಲಹೆ ಕೊಟ್ಟವರೆಲ್ಲರೂ ಕೂಡ ಇದಕ್ಕೆ ವಿಶೇಷವಾದ ಚಿಂತನೆಯನ್ನು ಮಾಡುವುದಾದರೆ, ಅದನ್ನು ಕೂಡ ತರುವುದಕ್ಕೆ ನಾವು ತಯಾರಿದ್ದೇವೆ. ಇದು ಯಾವ ರೂಪದಲ್ಲಿರಬೇಕು ಮತ್ತು ಯಾವ ರೀತಿಯಲ್ಲಿರಬೇಕು ಎನ್ನುವುದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ನಾವು ಈಗ ಶೇಕಡ 50 ರಷ್ಟು ಇರುವವರಿಗೂ ಕೂಡ reservation ಮಾಡಿದ್ದೇವೆ. ನಾನು ಪ್ರಾರಂಭದ ದಿನದಿಂದಲೇ ಇದಕ್ಕೆ ತಿದ್ದುಪಡಿ ತರಬೇಕೆಂದು ಚಿಂತನೆ ಮಾಡಿದ್ದೆನು. ಆದರೆ ಬಹಳಷ್ಟು ಜನ ಇಡೀ ದೇಶದಲ್ಲಿ ಇದೊಂದು ಪ್ರತಿಷ್ಠಿತವಾದಂತಹ ಕಾಲೇಜು. ಇಲ್ಲಿ reservation ತರಬೇಡಿ ಎನ್ನುವಂತಹ ಸಲಹೆ ಕೊಟ್ಟಂತಹವರಿದ್ದಾರೆ. ಹಾಗಾಗಿ ಒಂದು ವರ್ಷ ಪ್ರಾರಂಭ ಮಾಡಲಿಲ್ಲ, ಮತ್ತೆ ಎರಡನೇ ವರ್ಷದಲ್ಲಿ ಚಿಂತನೆ ಮಾಡಿದಾಗ ಶೇಕಡ 10, ಶೇಕಡ 5 ಈ ರೀತಿಯಾಗಿ ಕೊನೆಗೆ ಶೇಕಡ 50 ಕ್ಕೆ ಬಂದು ನಿಂತಿದೆ. ನಾವು ಶೇಕಡ 50 ಕೊಟ್ಟಿರುವುದು backlog cover ಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗ ಅದರಲ್ಲಿ "resident student of Karnataka" ಎಂದು ಹೇಳಬೇಕಾದಾಗ ಮಾನದಂಡಗಳೇನು? 10 ವರ್ಷ ವಾಸ ಮಾಡುತ್ತಿರಬೇಕು ಮತ್ತು ***"ವಿದ್ಯಾರ್ಥಿಯು ಅರ್ಹತಾ ಪರೀಕ್ಷೆಯ ಹಿಂದಿನ ಏಳು ವರ್ಷಗಳಿಗೆ ಕಡಿಮೆ ಇಲ್ಲದ ಅವಧಿಗಾಗಿ ಕರ್ನಾಟಕ ರಾಜ್ಯದಲ್ಲಿರುವ ಮಾನ್ಯತೆ ಪಡೆದ ಯಾವುದಾದರೂ ಒಂದು ಶೈಕ್ಷಣಿಕ ಸಂಸ್ಥೆಗಳಲ್ಲಿ ವಿದ್ಯಾಭ್ಯಾಸ ಮಾಡಿರಬೇಕು."*** ಏಳು ವರ್ಷವೆಂದರೆ, ಈಗ ನಾವೆಲ್ಲಾ ಲೆಕ್ಕವನ್ನು 6ನೇ ತರಗತಿಯಿಂದ ತೆಗೆದುಕೊಳ್ಳುತ್ತೇವೆ. ಅಲ್ಲಿ 7 ವರ್ಷವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಮಾತ್ರವಲ್ಲದೆ 10 ಮತ್ತು 7 ವರ್ಷ ಎನ್ನುವುದಕ್ಕಿಂತ ಹೆಚ್ಚಾಗಿ ಇದರ competition ಹೇಗೆ ಇರುತ್ತದೆ ಎಂದು ಹೇಳಿದರೆ ಶೇಕಡ 99, 98 ಅಂಕಗಳಿರುವರಿಗೂ ಸ್ಥಾನ ಸಿಗದೇ ಇರುವಂತಹ ಪರಿಸ್ಥಿತಿ ಇರುತ್ತದೆ. ನಮ್ಮಲ್ಲಿ ಸೀಟ್ ಇರುವುದೇ 80. All India Competition ನಲ್ಲಿ ಸ್ವಲ್ಪ reservation ಬರುವುದರಿಂದ ಕರ್ನಾಟಕದ ಮಕ್ಕಳಿಗೆ ಸಹಾಯವಾಗುತ್ತದೆ. ನಾವು ನಮ್ಮ ಸರ್ಕಾರದ ಪರವಾಗಿ ವಕೀಲರುಗಳನ್ನು ಹೈಕೋರ್ಟ್‌ನಲ್ಲಿ ಮತ್ತು ಬೇರೆ ಬೇರೆ ಕೋರ್ಟ್‌ಗಳಲ್ಲಿ ನೇಮಕ ಮಾಡುತ್ತೇವೆ. ಕೋರ್ಟ್‌ನಲ್ಲಿ ಮಾಡಬೇಕಾದಾಗ ನಮಗೆ ಮೊದಲೇ ಮಾನದಂಡಗಳೇನೆಂದರೆ, ಯಾರೋಬ್ಬರು ತಮ್ಮ ಮಾಹಿತಿಯನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಾಗ, ನಾನು ಮೊದಲು ನೋಡುವುದೇನೆಂದರೆ, is he a student of National Law School of India? ಅವರು ಅಲ್ಲಿನ ವಿದ್ಯಾರ್ಥಿ ಆಗಿದ್ದರೆ ನಾವು ಕಣ್ಣು ಮುಚ್ಚಿಕೊಂಡು ಒಪ್ಪಿಗೆ ಕೊಡಬಹುದು ಮತ್ತು ಬಾರ್ ಕೌನ್ಸಿಲ್‌ನಲ್ಲಿ ಕೂಡ ಅವರಿಗೊಂದು ವಿಶೇಷವಾದಂತಹ ಮಾನ್ಯತೆ ಇದೆ. ನಮ್ಮ ಬಹಳಷ್ಟು ವಕೀಲರು law practice ಮಾಡುತ್ತಿರುವವರಿದ್ದಾರೆ. ಈಗ ನಮ್ಮ Additional Advocate General ಆಗಿರುವವರು National Law School of India student. ಅವರನ್ನು ನಾವು appointment ಮಾಡಿದ್ದೇವೆ. ಹಾಗಾಗಿ quality of argument in legal profession ಹೆಚ್ಚು ಮಹತ್ವ ಬರುವಂತಹದ್ದಾಗಿದೆ.

ಮಾನ್ಯ ಪುಟ್ಟಣ್ಣನವರು ಒಂದು ಒಳ್ಳೆಯ ಸಲಹೆಯನ್ನು ನೀಡಿದ್ದಾರೆ. ಇವತ್ತು National Law School of India is a brand. ಆ brand ಗೆ ಸರಿಸಮಾನವಾಗಿರುವಂತಹ ರೀತಿಯಲ್ಲಿ ಕಾನೂನು ಕಾಲೇಜುಗಳನ್ನು ತರಬೇಕು ಎನ್ನುವಂಥ ಒಂದು ಚಿಂತನೆ ಮಾಡಿದ್ದು, ನಮ್ಮಲ್ಲಿ ಸುಮಾರು 95 ಕಾಲೇಜುಗಳು ಬರುತ್ತವೆ. University Law College, Bangalore ಇವೆಲ್ಲಾ ಕೆಲವು ಬಿಟ್ಟರೆ, 96 ಕಾಲೇಜುಗಳು ಬರುತ್ತವೆ. ಆ ಕಾಲೇಜುಗಳನ್ನು ತರಬೇಕಾದಾಗ ನಿಜ, ನಾನು ಒಪ್ಪುತ್ತೇನೆ. ಅದಕ್ಕೆ ನಾವೆಲ್ಲರೂ ಸರ್ಕಾರದಿಂದ ಪ್ರೋತ್ಸಾಹ ಮಾಡಬೇಕೆನ್ನುವ ಕಾರಣಕ್ಕೋಸ್ಕರ 19 ಕಾಲೇಜುಗಳನ್ನು Grant-in-aid ಕೂಡ ಮಾಡಿದ್ದೇವೆ. ಈಗ legal education ಗೆ ಹೆಚ್ಚು ಮಹತ್ವ ಕೊಡಬೇಕು ಎನ್ನುವ ಕಾರಣಕ್ಕೋಸ್ಕರ 19 ಕಾಲೇಜುಗಳನ್ನು ಮಾಡಿದ್ದೇವೆ. ಧಾರವಾಡ ವಿಶ್ವವಿದ್ಯಾಲಯ ಬಹಳಷ್ಟು ಚೆನ್ನಾಗಿ ಬಂದಿದೆ. ಅಲ್ಲಿ ಕೂಡ ನಮ್ಮ ವಿಶ್ವವಿದ್ಯಾಲಯಕ್ಕೆ NAAC (National Assessment and Accreditation Council) accreditation ಪ್ರಕಾರ 'A' Grade ಬಂದಿದೆ. ಬಹುಶಃ 'A' Grade ಬಂದಿರುವಂತಹ ವಿಶ್ವವಿದ್ಯಾಲಯ ಇಡೀ ದೇಶಲ್ಲಿಯೇ ಯಾವುದು ಇಲ್ಲ, ನಮ್ಮ ವಿಶ್ವವಿದ್ಯಾಲಯ ಮಾತ್ರ. ನಾವು ಕೊಟ್ಟಂತಹ infrastructure ಇರಬಹುದು, ಹಾಸ್ಟೆಲ್‌ಗಳ ಸೌಲಭ್ಯಗಳಿರಬಹುದು ಮತ್ತು ಎಲ್ಲಾದೂ ಇರಬಹುದು. ವಿದ್ಯಾರ್ಥಿಗಳ discipline ಮತ್ತು ಎಲ್ಲಾದನ್ನು ನೋಡಿ, accreditation ಬಂದಿದೆ. ಈಗ ನಮಗೆ National Law School of India ಗೆ ಯಾವ ರೀತಿ competition ಇದೆಯೋ ಧಾರವಾಡ ವಿಶ್ವವಿದ್ಯಾನಿಲಯಕ್ಕೂ ಅದೇ ರೀತಿಯಾಗಿದೆ ಮತ್ತು ಕೆಎಲ್‌ಇ ಸಂಸ್ಥೆಯವರು ಕೂಡ ಖಾಸಗಿಯಲ್ಲಿ ಮಾಡಿದ್ದಾರೆ. ಅವರಿಗೂ ಕೂಡ ಅಷ್ಟೇ competition ಇದೆ. ಪ್ರತಿಷ್ಠಿತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಸ್ಥೆಯಿಂದ ಬರತಕ್ಕಂಥವರೆಲ್ಲಾರೂ ಕೂಡ ಈ Christ College ಒಂದು ಇದೆ. ಇವತ್ತು ಬೆಳಿಗ್ಗೆ ಸುಮಾರು 8-10 ಜನ ವಿದ್ಯಾರ್ಥಿಗಳು ನಾವು ಅಸೆಂಬ್ಲಿ ನೋಡಬೇಕು, ಪಾಸ್ ಕೊಡಿಸಿ ಎಂದು ನನ್ನ ಹತ್ತಿರ ಬಂದಿದ್ದರು. ನೀವೆಲ್ಲಾ ಯಾರು ಎಂದು ಪ್ರಶ್ನಿಸಿದಾಗ, ಅವರು ನಾವೆಲ್ಲಾ Christ College ಮತ್ತು National Law School of India ನಲ್ಲಿ ಪಾಸಾಗಿದ್ದೇವೆ ಎಂದು ಹೇಳಿದರು. ನಿಮ್ಮ results ಯಾವಾಗ ಬಂತು ಎಂದು ಕೇಳಿದಾಗ, ಮೊನ್ನೆ results ಬಂತು, ಈಗಾಗಲೇ ನಮಗೆ ಸರ್ಟಿಫಿಕೇಟ್ ಸಿಕ್ಕಿದೆ ಎಂದು ಅವರು ಹೇಳಿದರು. ನೀವು ಯಾರ್‍ಯಾರು law practice ಮಾಡುತ್ತಿದ್ದೀರಿ ಎಂದು ನಾನು ಕೇಳಿದಾಗ, ನಾವು ಯಾರು law practice ಮಾಡುತ್ತಿಲ್ಲ, ನಮ್ಮೆಲ್ಲರಿಗೂ appointment order ಬಂದಿದೆ ಎಂದು ಹೇಳಿದರು. ಅವರು ಅಷ್ಟು ಬೇಗ ನೇಮಕಗೊಂಡಿದ್ದಾರೆ.

Corporate Sectors ಎಷ್ಟು ಸಂಬಳ ಕೊಡುತ್ತಾರೆ ಮಾನ್ಯ ಸಭಾಪತಿಯವರೇ, ನಿನ್ನೆ ಮೊನ್ನೆ ಕಾಲೇಜುಗಳಿಂದ ಉತ್ತೀರ್ಣರಾಗಿ ಬಂದಿದ್ದಾರೆ. To start with stipendiary ಎನ್ನುವ ರೀತಿಯಲ್ಲಿ 25 ಸಾವಿರ ರೂಪಾಯಿಗಳು. ತದನಂತರ yearly contract ಇರುತ್ತದೆ. ಆ ರೀತಿಯಾಗಿ placement ಗೆ ಅವಕಾಶಗಳು ಕೂಡ ಇರುತ್ತದೆ. ಮಾನ್ಯ ಸದಸ್ಯರೆಲ್ಲರೂ ಹೇಳಿದಂತಹ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಒಟ್ಟಾರೆ ಹೊರನಾಡಿನ ಕನ್ನಡಿಗರಿಗೂ ಕೂಡ ಒಂದು ವಿಶೇಷವಾದಂತಹ ಅವಕಾಶವನ್ನು ಕಲ್ಪಿಸುವುದರ ಬಗ್ಗೆ ಚಿಂತನೆ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಮಾನ್ಯ ಸದಸ್ಯರುಗಳಿಂದ ಸಲಹೆಗಳು ಬರಲಿ, ಕುಳಿತು ಮಾತನಾಡೋಣ. ಅದಕ್ಕೆ ಒಂದು ವಿಶೇಷವಾದಂತಹ ರೀತಿ-ನೀತಿ ಮಾರ್ಪಡಿಸೋಣ ಎನ್ನುವ ಮಾತನ್ನು ಹೇಳಿ, ಈ ಮಸೂದೆಗೆ ಅನುಮತಿ ಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತೇನೆ.

**ಉಪಸಭಾಪತಿಯವರು:-** ಮಾನ್ಯ ಉಗ್ರಪ್ಪನವರೇ ಸಾಕಷ್ಟು ಹೇಳಿದ್ದಾರೆ ಅಲ್ಲವೇ

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೇ, ಮೊದಲನೆಯದು, ಈಗಾಗಲೇ ಹೈಕೋರ್ಟ್‌ನ ನಿರ್ದೇಶನದ ಮೇಲೆ National Law School of India ನಲ್ಲಿ reservation seat ಗಳನ್ನು ಕೊಟ್ಟಿದ್ದಾರೆ. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳು ಇದಕ್ಕೂ ಸಹ ಬಹಳಷ್ಟು writ ಗಳನ್ನು ಹಾಕಿ ನಿರ್ದೇಶನಗಳನ್ನು ಕೊಟ್ಟಿದ್ದಾರೆ. Reservation policy ಯನ್ನು ಶೇಕಡ 50 ರಲ್ಲಿ as a

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

matter of right ಪಾಲನೆ ಮಾಡಬೇಕಾಗುತ್ತದೆ ಎನ್ನುವುದನ್ನು ಸರ್ಕಾರ ಗಮನ ಹರಿಸಬೇಕೆಂದು ನಾನು ಬಯಸುತ್ತೇನೆ. ಎರಡನೆಯದು, ಈಗ ನಾನು ನೋಡುತ್ತಿದ್ದೇನೆ. ಏಕೆಂದರೆ ನನ್ನ ಮಗನು ಸಹ University Law College ನಲ್ಲಿ ಕಾನೂನು ಪದವಿಯನ್ನು ಮುಗಿಸಿ ಇಂಗ್ಲೆಂಡ್‌ಗೆ ಹೋಗಿ "Intellectual Properties Right" ಮೇಲೆ LLM ಮಾಡಿಕೊಂಡು ಬಂದಿದ್ದಾನೆ. ಈಗ ಕಾಲೇಜುಗಳಲ್ಲಿ ಯಾರೆಲ್ಲಾ LLB or LLM ಮಾಡುತ್ತಾರೆ, ಇವರಲ್ಲಿ ಬಹುಪಾಲು ಜನರು ಯಾರೂ ಸಹ law practice ಮಾಡುವುದಿಲ್ಲ. ಇವರು Lawyers ಆಗುವುದಿಲ್ಲ ಅಥವಾ Judicial Appointments ಗೆ ಹೋಗುವವರು ಬಹಳ ಕಡಿಮೆ. ಹೋಗುವುದೇ ಇಲ್ಲ. All India Judicial Commission ನ್ನು ಸ್ಥಾಪನೆ ಮಾಡುವುದರ ಮೂಲಕ ಒಂದು ಬೇರೆ ರೀತಿಯ ವ್ಯವಸ್ಥೆಯನ್ನು ತರಬೇಕೆಂದು ಹೇಳಿ, ಇವತ್ತು ರಾಷ್ಟ್ರ ಮಟ್ಟದಲ್ಲಿ ಚರ್ಚೆಗಳಾಗುತ್ತಿದೆ, ಸುಪ್ರೀಂ ಕೋರ್ಟ್‌ನಲ್ಲಿ ಆಗುತ್ತಿದೆ. ಆದರೆ ಬರುವಂತಹವರು ಸಹ ಅಲ್ಲೊಬ್ಬರೋ ಇಲ್ಲೊಬ್ಬರೋ ಬರುತ್ತಾರೆ. ಬರುವುದೇ ಇಲ್ಲ ಎಂದು ಹೇಳುವುದಿಲ್ಲ. ಅವರು ಸಹ ಸರ್ಕಾರದ Government Pleader or Government Advocate ಆಗುತ್ತೇವೆ ಎಂದರೆ, ಏಕೆಂದರೆ Government Pleader ಆಗಬೇಕಾದರೆ ಕನಿಷ್ಟ 10 ವರ್ಷಗಳಾಗಿರಬೇಕು. Government Advocate ಆಗಬೇಕಾದಾರೆ 15 ವರ್ಷ practice ಮಾಡಿರಬೇಕು. ಆದರೆ ಇಲ್ಲಿ ಪ್ರಶ್ನೆ ಏನೆಂದರೆ, ಇವರು Corporate Filed ಮತ್ತು ಕಂಪನಿಗಳಿಗೆ ಹೋಗುವಂತಹವರು ಹೆಚ್ಚಿದ್ದಾರೆ. ಆದರೆ ನಮ್ಮ ರಾಜ್ಯದ ಅನೇಕ ಈಗ ಉದಾಹರಣೆಗೆ water disputes ನಲ್ಲಿ, ಗಡಿ ವಿವಾದದಲ್ಲಿ ಇವರನ್ನು ಅತ್ಯಂತ ಪರಿಣಾಮಕಾರಿಯಾದಂತಹ ವಕೀಲರುಗಳನ್ನು ಕರ್ನಾಟಕದಿಂದ ನೇಮಕ ಮಾಡಬೇಕು ಎನ್ನುವುದಾಗಿದ್ದರೆ, ನನಗೆ ಅನಿಸುವಂತಹದು ಎಲ್ಲಾ ಕಾನೂನು ಕಾಲೇಜುಗಳಲ್ಲಿರುವಂತಹ ವಿದ್ಯಾರ್ಥಿಗಳಿಗೆ specialized issues ಏನಿದೆ, ಈ ಗಡಿ ವಿವಾದದ ಬಗ್ಗೆ ಮತ್ತು water disputes ಬಗೆ ಇರುವಂತಹದು. ಇಂತಹ ವಿವಾದಗಳ ಬಗ್ಗೆ ಯಾವ ಕಾಲೇಜುಗಳಿಂದ ಹೆಚ್ಚು practiceಗೆ ಬರತಕ್ಕಂತಹ ವಿದ್ಯಾರ್ಥಿಗಳು, ಈಗ ಉದಾಹರಣೆಗೆ University Law College, ನಾವೆಲ್ಲಾ ಯಾವ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಬಂದಿದ್ದೇವೋ, ಅನೇಕ ಜನ ಅದೇ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಬಂದು Advocate General ಆಗಿರುವಂತಹವರು ಇದ್ದಾರೆ. ಅಂತಹವರಿಗೆ ಒತ್ತು ಕೊಡುವ ದೃಷ್ಟಿಯಿಂದ ಇವತ್ತು ಸರ್ಕಾರ ಆ ಕಡೆ ಗಮನ ಹರಿಸಿದರೆ; ಎಲ್ಲಿಲ್ಲಿ

Government Law Colleges or University Law Colleges ಇವೆ. ಅಲ್ಲಿ ಒತ್ತನ್ನು ಕೊಟ್ಟರೆ practice ಗೆ ಬರುವವರು ಅವರೇ ಜಾಸ್ತಿ ಜನ, Judges ಆಗುವವರು ಅವರೇ ಜಾಸ್ತಿ ಜನ. ಅವರ ಮೂಲಕ ಒಂದು ಒಳ್ಳೆಯ legal fraternity or legal class ನ್ನು create ಮಾಡುವಂತಹದ್ದಕ್ಕೆ ಸಾಧ್ಯತೆಯಿದೆ. ಆ ದಿಕ್ಕಿನಲ್ಲಿ ಸರ್ಕಾರ ಹೆಚ್ಚು ಒತ್ತು ಕೊಟ್ಟು, ಯೋಚನೆ ಮಾಡಲಿ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಟಿ.ಬಿ. ಜಯಚಂದ್ರ :-** ಈಗ All India Level Competition ಇದ್ದಾಗ, ಎಲ್ಲೋ ಕೆಲವರು ಮಾನ್ಯ ಉಗ್ರಪ್ಪನವರ ಮಕ್ಕಳು ಅಂತಹವರು ಮತ್ತು ಕೆಲವರಿಗೆ ಮಾತ್ರ ಅವಕಾಶ ಸಿಗತ್ತಿತ್ತು. ಈಗ ಶೇಕಡ 50 ರಷ್ಟು ಮಾಡಿರುವುದರಿಂದ ಬಹಳಷ್ಟು ಜನರು ಬರುವುದಕ್ಕೆ ಸಾಧ್ಯತೆಯಿದೆ. ಈ ರೀತಿಯಾಗಿ ಯಾವ reservation ಇಲ್ಲದಿರುವಾಗ ಕೂಡ ನಮ್ಮಲ್ಲಿ ಹೈಕೋರ್ಟ್‌ನಲ್ಲಿ ಸಾಕಷ್ಟು ಜನರು practice ಮಾಡುತ್ತಿದ್ದಾರೆ. ಅಂದರೆ ಎಲ್ಲಾರೂ Corporate Sector ಗೆ ಹೋಗುತ್ತಾರೆ ಎಂದಲ್ಲ, ಪ್ರಾರಂಭದ ದಿನಗಳಲ್ಲಿ 2-3 ವರ್ಷಗಳು ಹೋಗಿ ತದನಂತರ High Court practice ಗೆ ಬರುವಂತಹದ್ದು ಇದೆ. ದೆಹಲಿಯಲ್ಲಾಗಲೀ ಅಥವಾ ರಾಜ್ಯ ಮಟ್ಟದಲ್ಲಾಗಲೀ National Law School of India students ಯಾರ್ಯಾರು practice ಮಾಡಿದ್ದರೋ, ಅವರೆಲ್ಲರಿಗೂ ಕೂಡ Government Advocates ಆಗಿ ನಾನು nominate ಮಾಡಿದ್ದೇನೆ. ಹಾಗಾಗಿ quality improve ಆಗಬೇಕಾಗುತ್ತದೆ. ಮೊನ್ನೆ ಜಿಲ್ಲಾ ನ್ಯಾಯಾಧೀಶರಿಗೆ. . . .

**ಶ್ರೀ ರಮೇಶ ಬಾಬು:-** ಮಾನ್ಯ ಸಭಾಪತಿಯವರೇ ದಯಮಾಡಿ ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

**ಉಪಸಭಾಪತಿಯವರು:-** ಬೇಡ, ಮಾನ್ಯ ರಮೇಶ್‌ಬಾಬುರವರೆ

**ಶ್ರೀ ರಮೇಶ ಬಾಬು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ನಿಮಗೆ ಪೂರಕವಾಗಿ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಅವರು ನಮ್ಮ ಜೊತೆ practice ಮಾಡಿದಂತಹ ಸಾಹೇಬರು, ನಮ್ಮ ಚಿಕ್ಕನಾಯಕನಹಳ್ಳಿ ಭಾಗದವರು. ಇಲ್ಲಿ Government Advocate ಆದಂತಹವರು ಯಾರು practical ಆಗಿ practice ಮಾಡುತ್ತಾರೆಯೋ ಅವರು ಮಾತ್ರ ಬರುವಂತಾಗಬೇಕು. ನ್ಯಾಷನಲ್ ಕಾಲೇಜಿನಲ್ಲಿ ಪ್ರತಿ ವರ್ಷ 80 ಮಕ್ಕಳು ವಿದ್ಯಾಭ್ಯಾಸ ಮುಗಿಸಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರ ಬರುತ್ತಾರೆ. ಕರ್ನಾಟಕದಲ್ಲಿ 8 ರಿಂದ 10 ಸಾವಿರ ವಕೀಲರುಗಳು ಪ್ರತಿ ವರ್ಷ enrol ಆಗುತ್ತಿದ್ದಾರೆ. As on today more than 1 lakh Advocates have enrolled. ಪ್ರಶ್ನೆ ಇರುವಂತಹದು ನಾವು ಏನು ಒಂದು procedure ನ್ನು follow ಮಾಡುತ್ತಿದ್ದೇವೆ ಎಂದರೆ,

(ಮುಂದು..)

891/21.06.2017/4.10/hv.ak

**(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ರಮೇಶ್‌ಬಾಬು(ಮುಂದುವರೆದದ್ದು):-**

ಸನ್ಮಾನ್ಯ ಸಭಾಪತಿಯವರೇ, ಯಾರು ಪ್ರಾಕ್ಟೀಸ್ ಇದ್ದಾರೆ ಅವರೇ, Government Advocate, Panel Advocate, Government Pleader, Empanelment ಇರಬಹುದು, ಎಲ್ಲ ಇವರೇ ಆಗುವವರು. ಈ ವಿಶ್ವವಿದ್ಯಾಲಯದಿಂದ ಹೊರಗೆ ಬರುವಂತಹ ಬಹಳಷ್ಟು ಜನರು ಕಂಪನಿಗಳಲ್ಲಿ ಸೇವೆ ಸಲ್ಲಿಸುತ್ತಾರೆ. ಮಾನ್ಯ ಉಗ್ರಪ್ಪನವರು ಹೇಳಿದಂತೆ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯಕ್ಕಿಂತ ಬೇರೆ ಕಾನೂನು ಕಾಲೇಜುಗಳಿಗೆ ಹೆಚ್ಚು ಒತ್ತು ಕೊಟ್ಟರೆ, ಅಲ್ಲಿಂದ ಉತ್ತಮ ಗುಣಮಟ್ಟದ ವಕೀಲರು ಹೊರಬರುತ್ತಾರೆ. ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯದಲ್ಲಿ Guest Faculty ಆಗಿ ಬರುವಂತಹವರು ರಾಷ್ಟ್ರೀಯ ಮಟ್ಟದಲ್ಲಿರುವ ಸುಪ್ರೀಂ ಕೋರ್ಟಿನ ಜಡ್ಜ್‌ಗಳು ಮತ್ತು ಹೈಕೋರ್ಟಿನ ನಿವೃತ್ತ ಜಡ್ಜ್‌ಗಳಾಗಿರುತ್ತಾರೆ. ಆದರೆ, ಬೇರೆ ಕಾನೂನು ಕಾಲೇಜುಗಳಲ್ಲಿನ ಪರಿಸ್ಥಿತಿಯನ್ನು ನೋಡಿದರೆ ಈಗ ಇರುವಂತಹ 95 ಕಾನೂನು ಕಾಲೇಜುಗಳ ಪೈಕಿ ಸುಮಾರು 80-85 ಕಾನೂನು ಕಾಲೇಜುಗಳಲ್ಲಿ ಬೋಧನಾ ಸಿಬ್ಬಂದಿಗಳೇ ಇರುವುದಿಲ್ಲ. ಈಗ ಸ್ವಲ್ಪಮಟ್ಟಿಗೆ ಸರ್ಕಾರ streamline ಮಾಡಿ, ಹಾಜರಾತಿಯನ್ನು ಕಡ್ಡಾಯಗೊಳಿಸಿ, 5 ವರ್ಷಗಳ ಕೋರ್ಸ್ ಅನ್ನು ಜಾರಿಗೆ ತಂದು 3 ವರ್ಷಗಳ ಕಾನೂನು ಪದವಿಯ ಕೋರ್ಸ್‌ಗಳನ್ನು ತೆಗೆದು ಹಾಕಲಾಗಿದೆ. ಆದರೆ, ಈ ಕಾಲೇಜುಗಳಿಗೆ ಪ್ರಾಕ್ಟೀಸ್ ಮಾಡುತ್ತಿರುವಂತಹ ಅಡ್ವೋಕೇಟ್‌ಗಳು ಬರುತ್ತಾರೆ. ಇಂತಹ ಕಾಲೇಜುಗಳ ಬಗ್ಗೆ ಸರ್ಕಾರ ಹೆಚ್ಚು ಗಮನವನ್ನುಹರಿಸಿದರೆ ಉತ್ತಮ ಗುಣಮಟ್ಟದ ಅಡ್ವೋಕೇಟ್‌ಗಳು ಆ ಕಾಲೇಜುಗಳಿಂದ ಹೊರಬರುವುದಕ್ಕೆ ಸಾಧ್ಯವಾಗುತ್ತದೆ.

**ಶ್ರೀ ಟಿ.ಬಿ.ಜಯಚಂದ್ರ:-** ಸನ್ಮಾನ್ಯ ಸಭಾಪತಿಯವರೇ, ನಾನು ಇದನ್ನೇ ಹೇಳುವುದಕ್ಕೆ ಹೊರಟಿದ್ದೆ. ನಿರ್ದಿಷ್ಟ ವಿಷಯಗಳಲ್ಲಿ ಪರಿಣತಿ ಅಥವಾ ತಜ್ಞತೆ (Specialization) ಎನ್ನುವುದು ಬೇಕಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉದಾಹರಣೆಗೆ ಹೇಳಬೇಕಾದರೆ, 'Water Law' ಗೆ ಸಂಬಂಧಪಟ್ಟಂತೆ ಧಾರವಾಡ ಜಿಲ್ಲೆಯಲ್ಲಿ ಒಂದು ಕೋರ್ಸ್ ಪ್ರಾರಂಭ ಮಾಡಿದ್ದೇವೆ. 'Water Law' ನಲ್ಲಿ specialization ನ್ನು ಪಡೆದುಕೊಳ್ಳಲು ಎಲ್.ಎಲ್.ಎಂ ಮಾಡುವುದಕ್ಕೆ ನಾವು ಅವಕಾಶವನ್ನು ನೀಡಿದ್ದೇವೆ. ಅದೇ ರೀತಿಯಲ್ಲಿ ಎಲ್.ಎಲ್.ಎಂ. ಅಡಿಯಲ್ಲಿ ಬೇರೆ ಬೇರೆ ಕೋರ್ಸ್‌ಗಳನ್ನು ತೆಗೆದುಕೊಂಡು ಪೋಸ್ಟ್-ಗ್ರಾಜ್ಯುಯೇಶನ್‌ಗೆ ಹೋಗಲು ನಾವು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಈಗ ಈ ಕಾಲೇಜನ್ನು ಬ್ರಾಂಡ್ ಆಗಿ ಇಟ್ಟುಕೊಂಡು ಅದಕ್ಕೆ ಸರಿಸಾಟಿಯಾಗಿ ಕಾನೂನು ಶಿಕ್ಷಣವನ್ನು update ಮಾಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಈಗ ನಾನೇ ಈ ನಿಟ್ಟಿನಲ್ಲಿ ಸಾಕಷ್ಟು ಆಸಕ್ತಿಯನ್ನು ವಹಿಸಿ ಕಳೆದ 15 ದಿನಗಳ ಹಿಂದೆ ಆ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ನಮ್ಮ ಇತರೆ ಕಾಲೇಜುಗಳಲ್ಲಿ ಆ ರೀತಿಯ ಗುಣಮಟ್ಟವನ್ನು ಹೇಗೆ ಜಾರಿಗೆ ತರುವುದು ಎನ್ನುವುದರ ಬಗ್ಗೆ ಎಲ್ಲ ಕಾಲೇಜುಗಳ ಪ್ರಾಂಶುಪಾಲರನ್ನು ಕರೆದು ಎರಡು ದಿನಗಳ ಕಾಲ ಚರ್ಚೆಯನ್ನು ಮಾಡಿದ್ದೇನೆ. ಇಂತಹ ಪ್ರಯತ್ನಗಳು ನಡೆಯುತ್ತಿವೆ. ಅನುದಾನಕ್ಕೆ ಒಳಪಡಿಸಿರುವುದರಿಂದ ಆ ಕಾಲೇಜುಗಳಲ್ಲಿನ ಶಿಕ್ಷಣ ಮಟ್ಟ ಉತ್ತಮಗೊಂಡಿದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಅದೇ ರೀತಿಯಲ್ಲಿ ಪರೀಕ್ಷೆಗಳನ್ನು ಸಹ ಬಹಳ ಕಟ್ಟುನಿಟ್ಟಾಗಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಲಾಗಿದೆ. ಆ ಕಾರಣದಿಂದಾಗಿ NAAC (National Assessment and Accreditation Council) ನಿಂದ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯಕ್ಕೆ ಇಡೀ ದೇಶದಲ್ಲಿಯೇ 'ಎ' ಗ್ರೇಡ್ ಅನ್ನು ಪಡೆದುಕೊಂಡಿದೆ. ಕಾನೂನು ಶಿಕ್ಷಣವನ್ನು ಬಲಯುತಗೊಳಿಸುವುದಕ್ಕೆ ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮಾನ್ಯ ಸದಸ್ಯರು ಕೊಟ್ಟಂಥ ಎಲ್ಲ ಸಲಹೆಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡಿರುತ್ತದೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

<u>ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು</u>

**<u>ಖಂಡ 2</u>**

**ಉಪ ಸಭಾಪತಿಯವರು:–** "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**(ಖಂಡ 2 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

**" ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಟಿ.ಬಿ.ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಉಪ ಸಭಾಪತಿಯವರುಃ–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ,2017**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ)__ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

<u>ಪ್ರಸ್ತಾವವನ್ನು ಮಂಡಿಸಲಾಯಿತು</u>

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–** ಸನ್ಮಾನ್ಯ ಸಭಾಪತಿಯವರೇ, ಇಲ್ಲಿ ಎರಡು ಅಂಶಗಳಿಗೆ ಸಂಬಂಧಪಟ್ಟಂತೆ ತಿದ್ದುಪಡಿಗಳನ್ನು ತರಲಾಗಿದೆ. ಮೊದಲನೆಯದಾಗಿ ಕರ್ನಾಟಕ ರಾಜ್ಯಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2000ದಲ್ಲಿ ಕುಲಪತಿಗಳ ವಯೋಮಿತಿಗೆ ಸಮಾನವಾಗಿ ಮತ್ತು ಯು.ಜಿ.ಸಿ.ಯ ಮಾರ್ಗಸೂಚಿಯ ಪ್ರಕಾರ ಈ ತಿದ್ದುಪಡಿಯನ್ನು ತರಲಾಗಿದೆ. ಕುಲಸಚಿವರನ್ನಾಗಿ ನೇಮಕ ಮಾಡಿದ್ದೇವೆ. Whenever there is vacancy of Vice-Chancellor on temporary basis, ರಜೆಯ ಮೇಲೆ ಹೋದಂತಹ ಸಂದರ್ಭದಲ್ಲಿ ಅಥವಾ ವಿದೇಶಕ್ಕೆ ಹೋದಂತಹ ಸಂದರ್ಭದಲ್ಲಿ ಆ ಕುಲಸಚಿವರಿಗೆ if the Registrar is a professor then he will be put in charge of Vice-Chancellorship. If he is not a professor, ನಾವು ಏನಾದರೂ ಅಧಿಕಾರಿಗಳನ್ನು ನೇಮಕ ಮಾಡಿದ್ದರೆ, ಆ ಸಂದರ್ಭದಲ್ಲಿ some other professor will be appointed ಎನ್ನುವ ಹಿನ್ನೆಲೆಯಲ್ಲಿ ಎರಡನೆಯ ತಿದ್ದುಪಡಿಯನ್ನು ತರಲಾಗಿದೆ. ಈ ತಿದ್ದುಪಡಿಗಳಿಗೆ ಸದನವು ತನ್ನ ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್(ವಿರೋಧ ಪಕ್ಷದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ 2017ರ ಮೂಲಕ ಕೆಲವೊಂದು ತಿದ್ದುಪಡಿಗಳನ್ನು ತರಲಾಗಿದೆ. ಉಳಿದ ವಿಶ್ವವಿದ್ಯಾಲಯಗಳಲ್ಲಿರುವ ಮಾನದಂಡಗಳನ್ನೇ ಈ ವಿಶ್ವವಿದ್ಯಾಲಯಕ್ಕೂ ಅನ್ವಯಿಸಬೇಕೆನ್ನುವ ಕಾರಣದ ಹಿನ್ನೆಲೆಯಲ್ಲಿ ತಂದಿರುವಂತಹ ಈ ವಿಧೇಯಕವನ್ನು ನಾನು ಸ್ವಾಗತಿಸುತ್ತಿದ್ದೇನೆ. ನನಗೆ ತಿಳಿದಿರುವಂತೆ ಮೂಲ ವಿಧೇಯಕವನ್ನು 2016ರಲ್ಲಿ ತರಲಾಗಿದೆ. ಮೂಲ ವಿಧೇಯಕವನ್ನು ತಂದಂತಹ ಸಂದರ್ಭದಲ್ಲಿ ಅಂದರೆ, 2016ರಲ್ಲಿ ಕರ್ನಾಟಕದಲ್ಲಿ 2000ನೇ ಇಸವಿಯಲ್ಲಿ ತಂದಂತಹ ಕರ್ನಾಟಕ ವಿಶ್ವವಿದ್ಯಾಲಯಗಳ ವಿಧೇಯಕ ಅಸ್ತಿತ್ವದಲ್ಲಿ ಇತ್ತು. ಆ ವಿಧೇಯಕದಲ್ಲಿ ಆಗಲೇ ವಯೋಮಿತಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಕಿಕೊಂಡಿದ್ದರು. ನಾನು ಬೆಳಿಗ್ಗೆ ಹೇಳಿದಂತೆ ಈ ವಿಧೇಯಕದ ಕರಡನ್ನು ತಯಾರು ಮಾಡುವಂತಹ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯಗಳ ವಿಧೇಯಕ, 2000 ಇದನ್ನು ನೋಡಿದ್ದರೆ ಇವತ್ತು ಈ ತಿದ್ದುಪಡಿಯನ್ನು ತರುವಂತಹ ಅವಶ್ಯಕತೆ ಇರಲಿಲ್ಲ. ಈ ರೀತಿಯ ಸಣ್ಣಪುಟ್ಟ ತಪ್ಪುಗಳನ್ನು ಮಾಡಿಕೊಂಡು ಪುನಃ ಮತ್ತೊಂದು ತಿದ್ದುಪಡಿ ವಿಧೇಯಕವನ್ನು ತರುವಂತಹ ಪ್ರಯತ್ನವನ್ನು ಏತಕ್ಕೋಸ್ಕರ ಮಾಡಬೇಕೆನ್ನುವುದು ನನ್ನ ಪ್ರಶ್ನೆಯಾಗಿದೆ. ಒಂದು ಮಾದರಿ ಅಧಿನಿಯಮದಲ್ಲಿ ಈ ವಯೋಮಿತಿಯ ಬಗ್ಗೆ ಉಲ್ಲೇಖ ಇರಬೇಕಾದರೆ, ಪ್ರಾರಂಭದಲ್ಲಿ ಈ ವಿಧೇಯಕವನ್ನು ತರಬೇಕಾದರೆ, ವಯೋಮಿತಿಯನ್ನು 'ಅರವತ್ತೈದು' ಎಂದು ಸೇರಿಸಿಕೊಳ್ಳಬೇಕಾದ ಅವಶ್ಯಕತೆ ಇರಲಿಲ್ಲ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಇನ್ನು ಮುಂದೆ ಈ ರೀತಿ ಸಣ್ಣಪುಟ್ಟ ತಿದ್ದುಪಡಿಗಳನ್ನು ತರುವುದಕ್ಕೆ ಬದಲಾಗಿ ಅದರ ಬಗ್ಗೆ ವ್ಯಾಪಕವಾಗಿ ವಿಮರ್ಶೆ ಮಾಡಿಕೊಂಡು ಒಂದು ಕರಡು ಪ್ರತಿಯನ್ನು ತಯಾರು ಮಾಡಿಕೊಂಡು ವಿಧೇಯಕವನ್ನು ತಂದರೆ ಈ ರೀತಿ ತಪ್ಪುಗಳಾಗುವುದನ್ನು ತಪ್ಪಿಸಬಹುದಾಗಿದೆ. ಬೇರೆ ವಿಶ್ವವಿದ್ಯಾಲಯಗಳಿಗೆ ಸಮನಾದ ವಯೋಮಿತಿಯನ್ನು ಈ ವಿಶ್ವವಿದ್ಯಾಲಯದ ಕುಲಪತಿಗಳಿಗೂ ಅನ್ವಯಿಸಿರುವುದನ್ನು ಸ್ವಾಗತಿಸುತ್ತಿದ್ದೇನೆ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ವಿಧೇಯಕದಲ್ಲಿನ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿ 'ಕುಲಪತಿ' ಎನ್ನುವ ಪದ ಪ್ರಯೋಗ ಮಾಡಲಾಗಿದೆ. ನನಗೆ ತಿಳಿದ ಮಟ್ಟಿಗೆ 'Chancellor' ಎಂದರೆ 'ಕುಲಪತಿ' 'Vice-Chancellor' ಎಂದರೆ 'ಉಪ ಕುಲಪತಿ'; ಇಲ್ಲಿ ambiguity ಏನಿದೆ, ಅದರಲ್ಲಿ 'Chancellor' ಅಂದರೆ ಯಾರು ಅವರನ್ನು ಏನೆಂದು ಕರೆಯಲಾಗುತ್ತದೆ, 'Vice-Chancellor' ಎಂದರೆ ಯಾರು ಅವರನ್ನು ಏನೆಂದು ಕರೆಯುತ್ತಾರೆ ಎನ್ನುವುದನ್ನು ಸ್ಪಷ್ಟಪಡಿಸಬೇಕಾಗಿದೆ. ಈ ತಿದ್ದುಪಡಿ ವಿಧೇಯಕದಲ್ಲಿ 'Vice-Chancellor' ಗೆ ಕುಲಪತಿ ಎಂದು ಉಲ್ಲೇಖ ಮಾಡಲಾಗಿದೆ. ನಾವೆಲ್ಲರೂ ವಿಶ್ವವಿದ್ಯಾಲಯದ ಶಿಕ್ಷಣವನ್ನು ಪಡೆದುಕೊಂಡಿದ್ದೇವೆ. ನಮ್ಮ ತಿಳುವಳಿಕೆಯ ಪ್ರಕಾರ 'Vice-Chancellor' ಎಂದರೆ ಉಪ ಕುಲಪತಿ, 'Chancellor' ಅಂದರೆ ಕುಲಪತಿಗಳು ಅವರು ಘನತೆವೆತ್ತ ರಾಜ್ಯಪಾಲರಾಗಿರುತ್ತಾರೆ. ಈ ambiguity ಯ ಬಗ್ಗೆ ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗಿದೆ. ಇನ್ನು ಎರಡನೆಯದಾಗಿ, ವಯೋಮಿತಿಗೆ ಸಂಬಂಧಪಟ್ಟಿರುವ ತಿದ್ದುಪಡಿಯ ಬಗ್ಗೆ ನನಗೆ ಅರ್ಥವಾಗುತ್ತಿಲ್ಲ. ನಾನು ಈ ದಿನ ಬೆಳಿಗ್ಗೆ ಸಹ ಇದರ ಬಗ್ಗೆ ಉಲ್ಲೇಖ ಮಾಡಿದ್ದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮುಂದುವರಿದಿದೆ)

(892) 21.06.17, 4.20, TCH-AK **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ವಿ.ಎಸ್.ಉಗ್ರಪ್ಪ:- (ಮುಂದು...)**

ನಾನು ಬೆಳಿಗ್ಗೆಯೂ ಹೇಳಿದೆನು. ಒಂದು ಹಂತದಲ್ಲಿ ನಮ್ಮ ರಾಜ್ಯದಲ್ಲಿ ನಿವೃತ್ತಿಯ ವಯೋಮಿತಿ 55 ವರ್ಷ ಇತ್ತು. ಕ್ರಮೇಣ ಅದನ್ನು 58 ವರ್ಷ ಇದ್ದುದನ್ನು 60 ವರ್ಷಕ್ಕೆ ಹೆಚ್ಚಿಸಲಾಯಿತು. ಇನ್ನು ಕೆಲವು ಕಡೆಗಳಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ಇದನ್ನು 65 ವರ್ಷಕ್ಕೆ ಮಿತಿಗೊಳಿಸಲಾಗಿದೆ. Chief Justice of India ಅವರ ನಿವೃತ್ತಿಯ ವಯೋಮಿತಿ ಗರಿಷ್ಠ 65 ವರ್ಷ ಆಯಿತು. 62 ವರ್ಷ ಇದ್ದುದ್ದು ನಂತರ 65 ವರ್ಷ ಆಯಿತು, ಈಗ 67 ವರ್ಷ ಆಗಿದೆ. ನಾನು ಬೆಳಿಗ್ಗೆ ಹೇಳಿದ ಹಾಗೆ, ಈಗ ಯಾವುದೇ ಮಲ್ಟಿ-ನ್ಯಾಷನಲ್ ಕಂಪನಿಗಳಲ್ಲಿ ಯಾರಿಗೆ ಹೆಚ್ಚು ಅವಕಾಶ ಸಿಗುತ್ತಿದೆ ಎಂದರೆ, ಅತ್ಯಂತ ಪ್ರತಿಭಾವಂತ ಯುವಜನರು ಯಾರು ಇದ್ದಾರೆ, ಅವರುಗಳಿಗಷ್ಟೇ ಅವಕಾಶ ಸಿಗುತ್ತಿದೆ. ನಾವು ಏನನ್ನು ಮಾಡುತ್ತೇವೆಂದರೆ, ಆದರೆ ಕೊನೆಗೆ " ಆಳೂರಿಗೆ ಉಳಿದವನೇ ಗೌಡ" ಎನ್ನುವಂಥ ರೀತಿಯಲ್ಲಿ ಯಾರು ಇದ್ದಾರೋ, ಡೊಮೈನ್‌ನಲ್ಲಿ ಟಾಲೆಂಟ್ಸ್‌ಗಳು ಸಾಕಷ್ಟು ಅವರಿಗೆ ಅವಕಾಶ ಕೊಡತಕ್ಕಂಥ ಹಿನ್ನೆಲೆಯಲ್ಲಿ ಹೆಚ್ಚು ಯೋಚನೆ ಮಾಡಬೇಕೇ ಹೊರತು, ಅವರು ಓಬಿರಾಯನ ಕಾಲದಿಂದ ಒಂದು ನಿರ್ದಿಷ್ಟ ವಿಷಯದಲ್ಲಿದ್ದಾರೆ. ಅವರಿಗೆ 65 ವರ್ಷಗಳಿಗೂ ಹೆಚ್ಚು ವಯಸ್ಸಾಗಿದೆ. ಅವರ ನಿವೃತ್ತಿಯ ವಯೋಮಿತಿಯನ್ನು 67 ವರ್ಷದವರೆಗೆ ವಿಸ್ತರಿಸೋಣ ಎನ್ನುವುದು, ಇದು ನನಗೆ ಏಕೋ ಅಷ್ಟೊಂದು ಸೈಂಟಿಫಿಕ್ ಆಗಿ ಕಾಣುತ್ತಿಲ್ಲ. ದಯಮಾಡಿ ಸರ್ಕಾರ ಇನ್ನು ಮುಂದೆ ಹೆಚ್ಚು ಒತ್ತು ಕೊಡತಕ್ಕಂಥದ್ದು, ಯಾರು ಪ್ರತಿಭಾವಂತ ಯುವಜನರಿದ್ದಾರೆ, ಯಾರು ವಿಚಾರವಂತರಿದ್ದಾರೆಯೋ ಅವರಿಗೆ ಹೆಚ್ಚು ಒತ್ತು ಕೊಡತಕ್ಕಂಥ ದೃಷ್ಟಿಯಲ್ಲಿ ತೀರ್ಮಾನ ಮಾಡಬೇಕು. ಈಗಾಗಲೇ ಬೆಳಿಗ್ಗೆ ಇನ್ನೊಂದು ಕಡೆ 70 ವರ್ಷ ನಿವೃತ್ತಿ ವಯಸ್ಸನ್ನು ಮಾಡಿದ್ದೇವೆಂದು ಹೇಳಿದರು. ಇದು ಪದೇ ಪದೇ 60 ವರ್ಷ, 62 ವರ್ಷ, 65 ವರ್ಷ, 67 ವರ್ಷ ಮತ್ತು 70 ವರ್ಷಕ್ಕೆ ನಿವೃತ್ತಿ ವಯಸ್ಸನ್ನು ನಿಗದಿ ಮಾಡಲಾಗಿರುತ್ತದೆ. ನಾನು ಅದಕ್ಕೆ ಬೇಸರದಿಂದ ಅದನ್ನು ಸಾಯುವವರೆಗೂ ಎಂದು ಮಾಡಿ ಬಿಡಿ, ಸರಿಹೋಗುತ್ತದೆ ಎಂದು ಬೆಳಿಗ್ಗೆಯೂ ಹೇಳಿದೆನು. ದಯಮಾಡಿ ಈ ರೀತಿಯ ಬದಲಾವಣೆಗಳನ್ನು ತರುವುದನ್ನು ಬಿಡಬೇಕು. ಯು.ಜಿ.ಸಿ ಗ್ರ್ಯಾಂಟ್ ಅವರೇನು ಹೀಗೆ ಇರಬೇಕು ಎಂದು ಹೇಳುವುದು ಮ್ಯಾಂಡೇಟರಿ ಅಲ್ಲ. ಬೆಳಿಗ್ಗೆಯೂ ಅದರ ಬಗ್ಗೆ ವಾದ ಮಾಡುತ್ತಿದ್ದರು. ಅದಕ್ಕೋಸ್ಕರ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಹೆಚ್ಚು ಪ್ರತಿಭಾವಂತ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯುವಜನರಿಗೆ ಅವಕಾಶ ಸಿಗತಕ್ಕಂಥ ದೃಷ್ಟಿಯಿಂದ ಒಂದು ನಿರ್ದಿಷ್ಟ ವಯಸ್ಸಿಗೆ ನಿಲ್ಲಿಸಲು ಸರ್ಕಾರ ಕ್ರಮ ಜರುಗಿಸುವುದು ಸೂಕ್ತವೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ.

**ಉಪ ಸಭಾಪತಿಯವರು:–** " ಆ ಸಾಯುವವರೆಗೆ ಮಾಡಬೇಕು ಎನ್ನುವುದನ್ನು ಕಡತದಿಂದ ತೆಗೆಯಿರಿ".

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, . . .

**ಉಪ ಸಭಾಪತಿಯವರು:–** ಶ್ರೀ ಪುಟ್ಟಣ್ಣನವರೆ, ಈಗಾಗಲೇ ಸಾಕಷ್ಟು ಸದಸ್ಯರು ಈ ಬಗ್ಗೆ ಮಾತನಾಡಿದ್ದಾರೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ಇದು ವಿಧೇಯಕ ಆಗಿರುವುದರಿಂದ ಮಾತನಾಡಬೇಕಾಗಿರುತ್ತದೆ.

**ಉಪ ಸಭಾಪತಿಯವರು:–** ಆಯಿತು, ಮಾನ್ಯ ಪುಟ್ಟಣ್ಣನವರೆ ಮಾತನಾಡಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, ನಾನು ಮಾತನಾಡುವುದು ಬೇಡವೆಂದರೆ ಕುಳಿತುಕೊಳ್ಳುತ್ತೇನೆ. ನನ್ನದೇನು ಇಲ್ಲ, ಆದರೆ, ಹಿಂದಿನ ವಿಧೇಯಕಗಳಲ್ಲಿ. . .

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಹೇಳಿರುವುದು ಅಸಂಸದೀಯ ಪದ ಆಗಿರುವುದಿಲ್ಲ.

**ಉಪ ಸಭಾಪತಿಯವರು:–** ಇಲ್ಲ ಇಲ್ಲ, ಅದನ್ನು ಅಸಂಸದೀಯ ಪದವೆಂದು ತೆಗೆಯಲಿಲ್ಲ. ಶಾಸನ ಸಭೆಯಲ್ಲಿ ನೀವು ಬ್ಬರು ಹಿರಿಯ ಸದಸ್ಯರಾಗಿ ಆ ಪದ ಬಳಕೆ ಮಾಡುವುದು ಬೇಡ; ಅದು ಸೌಜನ್ಯ ಅಲ್ಲವೆಂಬ ಕಾರಣದಿಂದಷ್ಟೇ ಆ ಪದಗಳನ್ನು ಕಡತದಿಂದ ತೆಗೆಯಲಾಗಿದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, 'ಜೀವ ಇರುವವರೆಗೆ' ಎಂತಲಾದರೂ ಸೇರಿಸಿ.

**ಉಪ ಸಭಾಪತಿಯವರು:–** ಬೇಡ, ಬೇಡ. ನೀವು ಯಾರೋ ಒಬ್ಬ ತಜ್ಞರನ್ನು ನೇಮಕಾತಿ ಮಾಡತಕ್ಕಂಥ ಸಂದರ್ಭದಲ್ಲಿ, ಇಂತಹ ವಯೋಮಾನದವರನ್ನು ಮಾಡಬೇಕು ಎನ್ನುವಂಥ ವಿಚಾರದಲ್ಲಿ 'ಸಾಯುವವರೆಗೆ' ಎನ್ನುವ ಪದ ಬಳಕೆ ಮಾಡುವುದು ಬೇಡ ಎನ್ನುವುದು ಅಷ್ಟೆ. ಈಗ ಮಾನ್ಯ ಪುಟ್ಟಣ್ಣನವರು ಮಾತನಾಡಲಿ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, *ಮೊದನೆಯದಾಗಿ ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ಎರಡನೆಯದು, ಉದ್ದೇಶ ಮತ್ತು ಕಾರಣಗಳ ಹೇಳಿಕೆ ಏನಿದೆ, ಇದರಲ್ಲಿ 'ಕುಲಪತಿಯ ಹುದ್ದೆಯು ತಾತ್ಕಾಲಿಕವಾಗಿ ಖಾಲಿಯಾದರೆ ಮತ್ತು ಭರ್ತಿಯಾಗದೇ ಉಳಿದಲ್ಲಿ, ಆತನು ಪ್ರಾಧ್ಯಾಪಕನಾಗಿರುವ ಸಂದರ್ಭದಲ್ಲಿ ರಿಜಿಸ್ಟ್ರಾರ್‌ನನ್ನು, ಕುಲಪತಿಯ ಕರ್ತವ್ಯಗಳನ್ನು ನೆರವೇರಿಸಲು, ಆತನನ್ನು ಪದನಾಮೀಕರಿಸಲು ಅಥವಾ ನೇಮಕ ಮಾಡಲು'* ಎಂದು ಇದೆ.

ನಾನು ಹೇಳುವುದೇನೆಂದರೆ, ಬೇರೆ ವಿಶ್ವವಿದ್ಯಾಲಯಗಳಲ್ಲಿ ಎಲ್ಲವೂ ಕೂಡ ಇವರು, ಬೇರೆ ವಿಶ್ವವಿದ್ಯಾಲಯದ ವೈಸ್-ಚಾನ್ಸಲರ್ ಪ್ರಭಾರದಲ್ಲಿರಿಸುತ್ತಾರಂತೆ. ನಿಮಗೆ ಹೇಳಿದ್ದು, ಖಾಲಿ ಬಿದ್ದಿದ್ದಲ್ಲಿ ಬೇರೆ ವಿಶ್ವವಿದ್ಯಾಲಯದ ವೈಸ್-ಚಾನ್ಸಲರ್‌ನ್ನು ಪ್ರಭಾರದಲ್ಲಿರಿಸುತ್ತಾರಂತೆ. ಬೇರೆ ಎಲ್ಲಾ ವಿಶ್ವವಿದ್ಯಾಲಯಗಳಿಗೆ. ಈ ವಿಶ್ವವಿದ್ಯಾಲಯಗಳಿಗೆ ಅಲ್ಲಿ ಇರುವಂತಹ ಕುಲಸಚಿವರಿಗೆ, ಕುಲಪತಿಗೆ ಇರತಕ್ಕಂಥ ಅಧಿಕಾರ ನಿರ್ವಹಣೆ ಮಾಡಬೇಕಂತೆ. ಈ ತರಹ ಆಗುವುದು ಸರಿ. ಇದನ್ನು ನೀವು ಕೊಡುವುದಾದರೆ ನೀವು ಎಲ್ಲಾ ಅಲ್ಲೂ ಕೊಡಿ. ನೀವೇನಾದರೂ ಒಂದು ಮಾನದಂಡವನ್ನು ಮಾಡಿ. ಪಂಚಾಯತ್‌ರಾಜ್ ಎನ್ನುವುದು ಇದೆ, ನಾನು ಹೇಳುವುದು ಅದು ಅಲ್ಲ. ಈ ಪ್ರಭಾರವನ್ನು ಕೊಡುವಂಥ ಸಂದರ್ಭದಲ್ಲಿ, ಈ ಪ್ರಭಾರದ ವ್ಯವಸ್ಥೆಯನ್ನು ಬೇರೆ ವಿಶ್ವವಿದ್ಯಾಲಯದವರು ಬಂದು ಮಾಡುವುದ್ಕಕಾಗುತ್ತದೆಯೆ, ಬೇರೆ ವಿಶ್ವವಿದ್ಯಾಲಯದೊಳಗೆ, ಈಗ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮೈಸೂರು ವಿಶ್ವವಿದ್ಯಾಲಯದವರನ್ನು ಪ್ರಭಾರದಲ್ಲಿರಿಸುವುಕ್ಕೆ ಆಗುತ್ತದೆಯೇ; ಅದನ್ನು ನಡೆಸುವುದಕ್ಕೆ ಆಗುತ್ತದೆಯೇ? ನೀವು ಅಲ್ಲಿ ಹೇಗೆ ಮಾಡುತ್ತೀರಿ. ನಾನು ಹೇಳುವುದೇನೆಂದರೆ, ಇದೇ ತರಹ ಮಾಡಿ, ಈ ತರಹದ್ದು ಬೇಡವೆಂದು ನಾನು ಹೇಳುವುದು. ಇದು ಸರಿ ಇದೆ. ಅದನ್ನು ಸರಿಪಡಿಸಬೇಕು. ಅದನ್ನು ನಾನು ಹೇಳುತ್ತಿರುವುದು. ಈ ತರಹ ಬೇಡ, ಇದು ಸರಿಯಾಗಿದೆ. ಇದೇ ತರಹ ಅದನ್ನು ಅಳವಡಿಸಿದರೆ, ಸರಿ ಇರುತ್ತದೆ. ಇಲ್ಲವೆಂದರೆ, ಕರ್ನಾಟಕ ವಿಶ್ವವಿದ್ಯಾಲಯದವರನ್ನು ತಂದು, ಶಿವಮೊಗ್ಗ ವಿಶ್ವವಿದ್ಯಾಲಯಕ್ಕೆ ಪ್ರಭಾರದಲ್ಲಿರಿಸುವುದು ಈ ತರಹ ಆಗುವುದು ಬೇಡ. ಅದಕ್ಕೆ ನಾನು ಇದನ್ನು ಸ್ವಾಗತ ಮಾಡುತ್ತೇನೆ. ದಯವಿಟ್ಟು ಮಾಡಿ ಮುಂದೆ ಈಗೇನು ಇದನ್ನು ಅಪ್ರೂವ್ ಮಾಡಿಕೊಂಡಿದ್ದೀರಿ, ಇನ್ನು ಮುಂದೆ ಬರುವಂಥ ವಿಶ್ವವಿದ್ಯಾಲಯದ ವಿಧೇಯಕಗಳಲ್ಲಿ ಕೂಡ ಇದನ್ನೇ ನೀವು ಮಾಡಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಯವರೆ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಒಂದು observation ಮಾಡಿದರು. ಇದು ತರುತ್ತಿರುವುದು ತಪ್ಪು. ಇದು ಮಾಡದೇ ಉಳಿದುಕೊಂಡು ಹೋಯಿತು. ಇದನ್ನು ಆಂದು ಏತಕ್ಕೆ ಮಾಡಲಿಲ್ಲ ಎಂದು ಹೇಳಿದರು. ಏಕೋ ಗೊತ್ತಿಲ್ಲ. ಈ ಮೇಲ್ಮನೆಯಲ್ಲಿ ಬಹಳಷ್ಟು ಶಿಕ್ಷಣ ಕ್ಷೇತ್ರದಲ್ಲಿ ಸೇವೆ

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿದವರು ಮತ್ತು ಪರಿಣಿತರೇ ಇದ್ದರು. ನಾವೆಲ್ಲರೂ ಅಲ್ಲಿ ಕುಳಿತುಕೊಂಡು ಕೆಲಸ ಮಾಡಿದ್ದೆವು. ಅವಾಗೆಲ್ಲಾ ಮಾನ್ಯ ಶ್ರೀಕಂಠೇಗೌಡರವರು ಮತ್ತಿತರೆ ಸದಸ್ಯರುಗಳೆಲ್ಲಾ, ನಾವು ಎಂತಹ ಸಣ್ಣ ಸಣ್ಣ ವಿಧೇಯಕಗಳು ಬರುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೆವು. ಅವೆಲ್ಲವನ್ನೂ ಸರಿಯಾಗಿ ಮಾಡಿಸಿಬಿಡುತ್ತಿದ್ದೆವು. ಆ ಸಲಹೆ ಆವತ್ತು ನಿಮ್ಮಿಂದ ಹರಿದು ಬಂದಿದ್ದರೆ, ಆವತ್ತು ನಾನು ಅದನ್ನು ಅಲ್ಲೇ ಒಪ್ಪಿಕೊಳ್ಳುತ್ತಿದ್ದೆ. ಅದು ಬರಲಿಲ್ಲ. ಹಾಗಾಗಿ, ನನ್ನದು ಸ್ವಲ್ಪ ತಪ್ಪಾಯಿತು, ನಿಮ್ಮದು ಸ್ವಲ್ಪ ತಪ್ಪಾಯಿತು. ಆ ಹಳೆಯ ಕಾನೂನು, ಕಾನೂನಾಗಿಯೇ ಇದೆ. ಈಗ ಇನ್ನು ಮುಂದೆ ಈ ತರಹ ಸಣ್ಣ ತಪ್ಪು ಆಗದೇ ನೋಡಿಕೊಳ್ಳಬೇಕಾಗಿರುವುದು ನಮ್ಮ ಜವಾಬ್ದಾರಿಯಾಗಿದೆ. ಮಾನ್ಯ ಉಗ್ರಪ್ಪನವರು ಒಂದು ಮಾತನ್ನು ಹೇಳಿದರು. ಮಾನ್ಯ ಉಗ್ರಪ್ಪನವರು ಈಗಾಗಲೇ ನಮ್ಮ ರಾಜ್ಯದಲ್ಲಿ ಒಂದು ಸ್ಪಷ್ಟವಾಗಿರತಕ್ಕಂಥ ಆ ರೀತಿಯ ಶಬ್ದ ಬಳಕೆಗಳನ್ನು ನಾವು ಮಾಡುತ್ತಿದ್ದೇವೆ. ಚಾನ್ಸಲರ್‌ರವರಿಗೆ ಕುಲಾಧಿಪತಿ ಎನ್ನುತ್ತೇವೆ, ವೈಸ್-ಚಾನ್ಸಲರ್‌ರವರಿಗೆ ಕುಲಪತಿ ಎನ್ನುತ್ತೇವೆ, ರಿಜಿಸ್ಟ್ರಾರ್‌ರವರಿಗೆ ಕುಲಸಚಿವ ಎನ್ನುತ್ತೇವೆ. ಇದು ಒಂದು ರೀತಿ ಒಪ್ಪಿತವಾಗಿರತಕ್ಕಂಥದ್ದು. ಆ ಹಿನ್ನೆಲೆಯಲ್ಲಿ, ಪ್ರೋ-ಚಾನ್ಸಲರ್‌ಗೆ ಸಹ ಕುಲಾಧಿಪತಿ, ಸಹ ಕುಲಪತಿ ಹೀಗೆ ಕರೆಯುತ್ತೇವೆ. ಆದ್ದರಿಂದ ಅದು ಅಂಥಾದ್ದೇನಿಲ್ಲ.

ತಾವು ವಯಸ್ಸಿನ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇನ್ನೊಂದು ಸಂದರ್ಭದಲ್ಲಿ ಮಧ್ಯಾಹ್ನ ಮಾತನಾಡುವಾಗ ನಾನು ಹೇಳಿದೆನು. traditional universities ಏನಿವೆ, ಆ traditional universities ನಲ್ಲಿ ಈ ವಯಸ್ಸು ಹೆಚ್ಚಾದಂತೆ, ಅವರು ರೀಡರ್ ಮತ್ತು ಪ್ರೊಫೆಸರ್ ಎಲ್ಲಾ ಆಗುತ್ತಾರೆ. ಆದರೆ ಉಳಿದ ಎಜ್ಯುಕೇಷನಲ್ ಇನ್‌ಸ್ಟಿಟ್ಯೂಷನ್ಸ್‌ನಲ್ಲಿ, now for example, a person of 35 years will be a Professor in the National Law School. ಈ ಐ.ಐ.ಟಿ ಮತ್ತು ಐ.ಐ.ಎಂ ನೊಳಗೆ 30 ವರ್ಷದವರೆಗೆ ಇರುವಂತಹವರು ಪ್ರೋಫೆಸರ್ ಆಗಿರುತ್ತಾರೆ. ಆದರೆ ಅದು ಈ traditional universities ನೊಳಗೆ ಸಾಧ್ಯವಿಲ್ಲ. But, this is neither on the pattern of traditional university nor on the pattern of IIM. ಆದ್ದರಿಂದ ಮಾನ್ಯ ಉಗ್ರಪ್ಪನವರು ಹೇಳತಕ್ಕಂಥ ಸಲಹೆ ಏನಿದೆ, ಯುವಕರನ್ನು, ಹೊಸ ಪ್ರತಿಭಾವಂತ ಯುವಜನರನ್ನು ಪ್ರೊಫೆಸರ್ ಮಾಡುವಂಥ ಸಂದರ್ಭದಲ್ಲಿ, Head of the Department ಮಾಡುವಂಥ ಸಂದರ್ಭದಲ್ಲಿ. . .

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 6, 8, 10 ತಿಂಗಳ ಕಾಲ ಆ ಹುದ್ದೆಯನ್ನು ಖಾಲಿ ಬಿಡುವ ಬದಲು, ಅವರು ನಿವೃತ್ತಿಯಾಗುವುದಕ್ಕೆ ಮುಂಚೆಯೆ ಆ ಬಗ್ಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಪ್ರಕ್ರಿಯೆ ಮಾಡಿ, ಹುದ್ದೆ ಖಾಲಿ ಬೀಳುತ್ತಿದ್ದಂತೆ, ವೈಸ್-ಚಾನ್ಸಲರ್ ಬರುವುದನ್ನು ನೋಡಿಕೊಂಡರೆ ಸಮಸ್ಯೆ ಪರಿಹಾರವಾಗುತ್ತದೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಆ ರೀತಿಯಾಗಿ ಇರತಕ್ಕಂಥದ್ದರ ಬಗ್ಗೆ ಮಾನ್ಯ ಬಸವರಾಜ ರಾಯರೆಡ್ಡಿಯವರು ಸಹ ಒಮ್ಮೆ ಚರ್ಚೆಯ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದರು. 'Before Vice-Chancellorship concludes, there should be appointment of a Vice-Chancellor' ಎಂದು ಅವರು ಹೇಳುತ್ತಿದ್ದರು. ಆ ಕಾನೂನು ನಮ್ಮ ಎದುರಿಗೆ ಕೆಲವು ದಿವಸಗಳಲ್ಲಿಯೇ ಬರುತ್ತದೆಂದು ನಾನು ಭಾವಿಸುತ್ತೇನೆ. ಈಗ ಪ್ರತಿಭೆಯನ್ನು ಗುರುತು ಹಚ್ಚುವಾಗ ಆ ರೀತಿ ತರುಣ ಪೀಳಿಗೆಯನ್ನು ಮತ್ತು ಯುವ ಪೀಳಿಗೆಯನ್ನು ಹೆಚ್ಚು ಗುರುತಿಸುವುದಕ್ಕೆ ಏನು ಅವಕಾಶಗಳನ್ನು ಇದರೊಳಗೆ ಮಾಡಿಕೊಳ್ಳಬೇಕು, ಅದನ್ನು ಮುಂದಿನ ದಿನಗಳಲ್ಲಿ ಮಾಡುತ್ತೇವೆ. ಈ ವಿಧೇಯಕವನ್ನು ದಯಮಾಡಿ, ಈ ಸದನ ಒಪ್ಪಬೇಕೆಂದು ನಾನು ತಮ್ಮ ಮುಖಾಂತರ ಕೋರುತ್ತೇನೆ.

**ಉಪ ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 & 3**

**ಉಪ ಸಭಾಪತಿಯವರು:-** "ಖಂಡ 2 & 3 ಈ ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 & 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೆ, "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಮುಂದು...)**

(893) 21.6.2017 4.30 ಪಿಕೆ:ಆರ್ಎನ್

**ಇ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್(ತಿದ್ದುಪಡಿ) ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಗಳೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಸಭಾಪತಿಗಳೆ, ಇದರಲ್ಲಿ ಒಂದು ಸಣ್ಣ ತಿದ್ದುಪಡಿ ಇದೆ. ಕೈಬಿಟ್ಟು ಹೋಗಿರುವಂತಹ, ಕೆಲವು ಶಬ್ದಗಳ ತಪ್ಪು ಪ್ರಯೋಗದಿಂದ ಆಗಿರುವಂತಹ ಬದಲಾವಣೆಗಳನ್ನು ಮಾಡುವುದಕ್ಕೆ ತಂದಿರುವಂಥ ತಿದ್ದುಪಡಿ ಇದಾಗಿದೆ. ಈ ತಿದ್ದುಪಡಿಯಲ್ಲಿ 3 ಅಂಶಗಳಿವೆ. ಒಂದನೆಯದು, ಹಿಂದೆ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳ ಚುನಾವಣಾ ವಿವಾದಗಳನ್ನು, ಗೊತ್ತುಪಡಿಸಿದ ನ್ಯಾಯಾಲಯಗಳಲ್ಲಿ ಇತ್ಯರ್ಥಪಡಿಸುವುದು ಎಂದಿತ್ತು. ಹೀಗೆ ಹೇಳುವುದರ ಬದಲಾಗಿ, ಯಾವ ನ್ಯಾಯಾಲಯ ಎಂದು ಸ್ಪೆಸಿಫಿಕ್ ಆಗಿ ಹೇಳಬೇಕು ಎನ್ನುವ ಸೂಚನೆ ಹಾಗೂ ಸಲಹೆ ಬಂದಿರುತ್ತದೆ. ಅಂತಹ ವಿವಾದಗಳನ್ನು ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಕ್ಕೆ, ಅದರ ಅಧಿಕಾರ ವ್ಯಾಪ್ತಿಗೆ ವಹಿಸುವುದು ಎನ್ನುವ ತಿದ್ದುಪಡಿಯನ್ನು ತಂದಿದ್ದೇವೆ. ಇತ್ತೀಚೆಗೆ ಜಿಎಸ್‌ಟಿ ಏನು ಬಂತೋ ಅದನ್ನು ಅಳವಡಿಸಿಕೊಂಡು, ಅದರಿಂದ ಆಗಬೇಕಾದಂತಹ ಪರಿಣಾಮದಿಂದ ಕೆಲವು ಬದಲಾವಣೆಯನ್ನು ಇದರಲ್ಲಿ ಮಾಡಿದ್ದೇವೆ, ಈ ವಿಧೇಯಕದಲ್ಲಿ ತಿದ್ದುಪಡಿಗಾಗಿ ತಂದಿದ್ದೇವೆ. ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಸದನವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-** ಗೌರವಾನ್ವಿತ ಸಚಿವರು ಮಂಡಿಸಿರುವಂತಹ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್(ತಿದ್ದುಪಡಿ)ವಿಧೇಯಕ 2017 ನ್ನು ನಾನು ಸ್ವಾಗತ ಮಾಡುತ್ತೇನೆ. ಈ ಕುರಿತು ವಿವರಗಳನ್ನೂ ಕೂಡ ಕೊಟ್ಟಿದ್ದಾರೆ. ಅದು ಸರಿಯಿದೆ. ವಿಧೇಯಕದ 10ನೇ ಪುಟದಲ್ಲಿರುವ ಪ್ರಕರಣ 48ರಲ್ಲಿ, 'ಅಧ್ಯಕ್ಷನ ಮತ್ತು ಉಪಾಧ್ಯಕ್ಷನ ರಾಜೀನಾಮೆ ಅಥವಾ ತೆಗೆದು ಹಾಕುವಿಕೆ' – ಇದರಲ್ಲಿ, "ದೈಹಿಕ ಅಥವಾ ಮಾನಸಿಕ ಅಶಕ್ತತೆ ಉಳ್ಳವನೆಂದು ರಾಜ್ಯ ಚುನಾವಣಾ ಆಯೋಗವು ಅನುಮೋದಿಸಿರುವ ಸಕ್ಷಮ ಪ್ರಾಧಿಕಾರವು ಪ್ರಮಾಣೀಕರಿಸಿರುವುದರ ರುಜುವಾತಿನ ಆಧಾರದ ಮೇಲೆ ಅಥವಾ ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ಉದ್ಯೋಗದಲ್ಲಿರುವುದರ ಆಧಾರದ ಮೇಲೆ ಆತನನ್ನು ತೆಗೆದುಹಾಕಲು ಬದ್ಧನಾಗಿರತಕ್ಕದ್ದು" ಎಂದು ಹೇಳಿದ್ದೀರಿ. ಇದು ಸರಿಯಿದೆ. ಆದರೆ ತಳದಲ್ಲಿರುವಂತಹ, ನಮ್ಮ ನಮ್ಮ ಪ್ರದೇಶಗಳಲ್ಲಿರುವ ಸಣ್ಣ ಗೊಂದಲ ಏನೆಂದರೆ, ಸಾಮಾನ್ಯವಾಗಿ ಆಶಾ ಕಾರ್ಯಕರ್ತರು ಚುನಾವಣೆಗೆ ನಿಂತಿರುತ್ತಾರೆ. ಆಶಾ ಕಾರ್ಯಕರ್ತರು ಸುಮಾರು ರೂ. 1000 ಗೌರವಧನ ಪಡೆಯುತ್ತಾರೆ. ಬಿಸಿಯೂಟ ಅಡಿಗೆ ಮಾಡುವವರಿಗೆ ಸುಮಾರು 1900–2000 ಗೌರವಧನ ಕೊಡುತ್ತಾರೆ. ಎಲ್ಲರೂ ಒಂದೊಂದು ರಾಜಕೀಯ ಪಕ್ಷದ ಬೆಂಬಲದಿಂದ ಚುನಾವಣೆಗೆ ನಿಲ್ಲುತ್ತಾರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಕಡೆಗೆ ಅವರವರದೇ ಕೆಲಸಗಳನ್ನು ಮಾಡಬೇಕಾದ್ದರಿಂದ ಕೆಲವು ಸಲ ಮಾತ್ರ ಮೀಟಿಂಗ್‌ಗೆ ಬಂದಿರುತ್ತಾರೆ. ಗ್ರಾಮ ಸಹಾಯಕರು ಸುಮಾರು 30–35 ವರ್ಷಗಳಿಂದ ಕೆಲಸ ಮಾಡುತ್ತಿರುತ್ತಾರೆ. ಅವರನ್ನು, ಅವರದೇ ಆದ ಸಂಪರ್ಕ ಹೊಂದಿದ್ದು ಅವರು ಗೆಲ್ಲುತ್ತಾರೆ ಎನ್ನುವ ಕಾರಣಕ್ಕೆ ನಾವು–ನೀವು ಚುನಾವಣೆಗೆ ನಿಲ್ಲಿಸಿಬಿಡುತ್ತೇವೆ. ಅಂಗನವಾಡಿಯ ಸಹಾಯಕಿಯರು ಮತ್ತು ಅವರಲ್ಲಿ ಅಡಿಗೆಯವರು ಯಾರಿರುತ್ತಾರೋ ಅವರಿಗೂ ಕೂಡ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಖಾಯಂ ಆಗಿ ಉದ್ಯೋಗ ಕೊಟ್ಟಿರುವುದಿಲ್ಲ. ಆದರೆ, ಆಯಾಯ ಇಲಾಖೆಗಳು ಸುತ್ತೋಲೆಗಳನ್ನು ಕೊಟ್ಟು ಶಿಕ್ಷಣ ವಜಾಗೊಳಿಸುವ ವ್ಯವಸ್ಥೆ ಹೊಂದಿರುತ್ತವೆ. ಅವರು ರಾಜೀನಾಮೆ ಕೊಡಬೇಕು ಇಲ್ಲವೇ ಅವರನ್ನು ವಜಾಗೊಳಿಸುವಂತಹ ಪರಿಸ್ಥಿತಿ ಇದೆ. ಇದು ಸರಿ ಎನ್ನುತ್ತೀರಾ? ಅಥವಾ ಇದನ್ನೇನಾದರೂ ಸರಿಪಡಿಸಬಹುದೇ? ಅವರು ಅಧಿಕೃತವಾಗಿ ಸರ್ಕಾರದ ಹುದ್ದೆಯಲ್ಲಿದ್ದವರಲ್ಲ. ಹಾಗಾಗಿ ಅವರ ಸಾರ್ವಜನಿಕ ಸಂಪರ್ಕದ ಹಿನ್ನೆಲೆಗೆ ಸಂಬಂಧಪಟ್ಟಂತೆ ನಾವೆಲ್ಲರೂ ಕೂಡ ಅವರನ್ನು ಬೇರೆ ಬೇರೆ ಕಾರಣಕ್ಕೆ ನಿಲ್ಲಿಸಿದ್ದೇವೆ. ಇವರು ಮುಂದುವರೆಯಬೇಕು ಎನ್ನುವ ಆಶಯಗವೆ. ಹೆಚ್ಚಿನವರನ್ನು ತೆಗೆದು ಹಾಕಿದ್ದಾರೆ. ಇಂಥವರಿಗೆ ಕಾಯಿದೆಯಲ್ಲಿ ತಿದ್ದುಪಡಿ ತಂದು ಏನಾದರೂ ಪರಿಹಾರ ಕೊಡುತ್ತೀರಾ ದಯವಿಟ್ಟು ತಿಳಿಸಬೇಕು.

ಪ್ರಕರಣ 64ರಲ್ಲಿ ಕಟ್ಟಡ ನಿರ್ಮಾಣದ ಬಗ್ಗೆ ನಿಯಂತ್ರಣ ಎಂದು ಹೇಳಿ "ಗೊತ್ತುಪಡಿಸಬಹುದಾದಂಥ ನಿಯಮಗಳಿಗೊಳಪಟ್ಟು ಯಾವನೇ ವ್ಯಕ್ತಿಯು, ಗ್ರಾಮ ಪಂಚಾಯತಿಯಿಂದ ಬರಹದ ಅನುಮತಿಯಿಲ್ಲದೆ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದಲ್ಲ ಅಥವಾ ಅಸ್ತಿತ್ವದಲ್ಲಿರುವ ಯಾವುದೇ ಕಟ್ಟಡವನ್ನು ಬದಲಾಯಿಸತಕ್ಕದ್ದಲ್ಲ ಅಥವಾ ಜಾಹೀರಾತು ಫಲಕಗಳನ್ನು ನಿಲ್ಲಿಸಲು ಅಥವಾ ಆವರಣಗಳ ಒಳಗೆ ಖಾಲಿ ಇರುವ ಯಾವುದೇ ಜಾಗದಲ್ಲಿ ಅಥವಾ ಆ ಸ್ಥಳಕ್ಕೆ ಹೊಂದಿಕೊಂಡಿರುವ ಮೊಬೈಲ್ ಟವರ್‌ಗಳನ್ನು ಸ್ಥಾಪಿಸಲು ಅದಕ್ಕೆ ಸೇರ್ಪಡೆ ಮಾಡತಕ್ಕದ್ದಲ್ಲ ಅಥವಾ ಯಾವುದೇ ಕಟ್ಟಡವನ್ನು ಪುನರ್‌ನಿರ್ಮಿಸತಕ್ಕದ್ದಲ್ಲ. ಉಪವಿಧಿಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಅನುಮತಿಯನ್ನು ನೀಡಬಹುದು" ಎಂದು ಬಹಳ ಸ್ಪಷ್ಟವಾಗಿ ಹೇಳಿದ್ದೀರಿ. ಕಾಯಿದೆ ಸರಿಯಾಗಿದೆ. ಆದರೆ ಕಾಯಿದೆಯನ್ನು ಪಾಲಿಸುತ್ತಿಲ್ಲ. ಕಾಯಿದೆಯನ್ನು ಪಾಲಿಸುವಂತಹ ಸ್ಥಿತಿಯಲ್ಲಿ ಇಲ್ಲದೇ ಇದ್ದರೆ ಕಾಯಿದೆ ಮೂಲಕವೇ ಇದಕ್ಕೆ ಇರುವ ಪರಿಹಾರವೇನು? ಉದಾಹರಣೆಗೆ ನೀವು ಮೊಬೈಲ್ ಟವರ್ ಬಗ್ಗೆ ಹೇಳಿದ್ದೀರಿ. ಒಂದು ಗ್ರಾಮದಲ್ಲಿ 10–12 ಮೊಬೈಲ್ ಟವರ್‌ಗಳಿವೆ. ಇವರಲ್ಲಿ ಒಬ್ಬ ಮಾತ್ರ ರೂ. 12 ಸಾವಿರ ಹಣ ಕಟ್ಟಿದ್ದಾರೆ. ಇನ್ನು 11 ಜನ ಕೋರ್ಟ್‌ಗೆ ಹೋಗಿ ಸ್ಟೇ ತಂದು ಹಣ ಕೊಡುವುದಿಲ್ಲ. ಆ ವಸೂಲಿಯ ಪ್ರಕ್ರಿಯೆಗಳಲ್ಲಿ ಕೋರ್ಟ್‌ನಿಂದ ಸ್ಟೇಯನ್ನು ತೆರವು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಿಸುವಂತಹ ಪರಿಸ್ಥಿತಿಯಲ್ಲಿ ನಿಮ್ಮ Executive Officer and Project Development Officer ಗಳು ಯಾರೂ ಇಲ್ಲ. ಇಂಥದ್ದರ ಬಗ್ಗೆ ಇವರು ವಿಶೇಷವಾದ ಗಮನಹರಿಸುತ್ತಿಲ್ಲ. ಇದರಿಂದ ಪಂಚಾಯಿತಿಯ ಆದಾಯ ಕುಂಠಿತವಾಗುತ್ತದೆ. ಕಾನೂನುಗಳನ್ನು ಮಾಡಿದ್ದೀರಿ. ತಿದ್ದುಪಡಿಯಲ್ಲಿ ಸ್ಪಷ್ಟತೆ ಇದೆ, ಆದರೆ ಅನುಷ್ಠಾನದಲ್ಲಿ ಲೋಪ ಆಗುತ್ತದೆ. ಮೊಬೈಲ್ ಟವರ್ ಅಳವಡಿಸಿರುವವರಿಂದ ಕಟ್ಟಬೇಕಾದ ಹಣವನ್ನು ವಸೂಲಿ ಮಾಡುವುದಕ್ಕಿರುವ ತೊಂದರೆಗಳನ್ನು ಪರಿಹಾರ ಮಾಡುವುದಕ್ಕೆ ನೀವೇ ಏನಾದರೂ ಮಾರ್ಗಸೂಚಿಗಳನ್ನು ಹಾಕುತ್ತೀರಾ ಅಥವಾ ಸುತ್ತೋಲೆಗಳನ್ನು ಕಳುಹಿಸುತ್ತೀರಾ ಅಥವಾ ಯಾವರೀತಿಯ ಕ್ರಮಗಳನ್ನು ಅನುಸರಿಸುತ್ತೀರಿ ಎನ್ನುವ ಬಗ್ಗೆ ತಿಳಿಸಬೇಕು.

ಪ್ರಕರಣ 129ರಲ್ಲಿ, ಖಾಲಿ ಇರುವಂತಹ ತಾಲ್ಲೂಕು ಪಂಚಾಯತಿ ಸದಸ್ಯರ ಬಗ್ಗೆ ಏನಿದೆಯೋ ಅದನ್ನೇ ತಂದಿದ್ದೀರಿ, ಇದರಲ್ಲಿ ಯಾವುದೇ ಗೊಂದಲಗಳಿಲ್ಲ. ಪ್ರಕರಣ 141 ಕೂಡ ಅದನ್ನೇ ಹೇಳುತ್ತದೆ.

ಪ್ರಕರಣ 157ರಲ್ಲಿ, ದಾಖಲೆ ಇತ್ಯಾದಿಗಳನ್ನು ಕಡ್ಡಾಯವಾಗಿ ಕೋರಲು ಕಾರ್ಯನಿವಾಹಕ ಅಧಿಕಾರಿಯ ಹಕ್ಕು ಎಂಬುದನ್ನು ಹೇಳಿದ್ದೀರಿ. ಇದನ್ನು ಮೊದಲೂ ಕೂಡ ತಂದ್ದಿದ್ದು ಇದರಲ್ಲಿ ಒಂದು ಶಬ್ದ ಕೂಡ ಬದಲಾವಣೆ ಮಾಡಿಲ್ಲ. ಒಂದು ವೇಳೆ ಬದಲಾವಣೆ ಇದ್ದರೆ ದಯವಿಟ್ಟು ತಿಳಿಸಿ. ಇದೇ ಪ್ರಕರಣದ (4)ರಲ್ಲಿ, "ಈ ಪ್ರಕರಣದ ಅಡಿಯಲ್ಲಿ ಕಾರ್ಯದರ್ಶಿಯು ಮಾಡಿದ ಆದೇಶದ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಪೀಲು ಮಾಡಿಕೊಳ್ಳಲು ಅವಕಾಶವಿರತಕ್ಕದ್ದು" ಎಂದು ಹೇಳುತ್ತೀರಿ. ಅವು ಯಾವುದೂ ನಮಗೆ ಸಮಸ್ಯೆಗಳಲ್ಲ. ಈಗಿರುವ ಸ್ಥಿತಿ ಏನೆಂದರೆ, ಗ್ರಾಮ ಪಂಚಾಯಿತಿಯ ನಿರ್ಣಯಕ್ಕೆ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು ತಡೆಯಾಜ್ಞೆ ಕೊಡುವ ಪ್ರಕರಣದಲ್ಲಿ ಒಂದಷ್ಟು ಚರ್ಚೆಗಳು ನಡೆಯುತ್ತಿವೆ. ಗ್ರಾಮ ಪಂಚಾಯಿತಿಯವರು ಯಾವುದೋ ಕಾರಣಕ್ಕೆ ಒಂದು ನಿರ್ಣಯವನ್ನು ಮಾಡಿರುತ್ತಾರೆ. ಅದಕ್ಕೆ ಕೆಲವರು ಮೇಲ್ಮನವಿಗೆ ಹೋಗುತ್ತಾರೆ. ನಿರ್ದಿಷ್ಟವಾಗಿರುವಂಥ ಮೂಲ ಕಾಯಿದೆಯಲ್ಲಿ, ಗ್ರಾಮ ಪಂಚಾಯಿತಿ ಮಾಡಿದ ನಿರ್ಣಯದ ಅನುಷ್ಠಾನದಲ್ಲಿ ಶಾಂತಿ–ಸುವ್ಯವಸ್ಥೆ–ಗೊಂದಲಗಳು ಬಂದರೆ ಮಾತ್ರ ತಡೆಯಾಜ್ಞೆ ಕೊಡಬಹುದು ಎಂದಿದೆ. ಆದರೆ ಇವತ್ತು ತಾಲ್ಲೂಕು ಪಂಚಾಯಿತಿ ಅಧ್ಯಕ್ಷರು, ರಾಜಕೀಯ ಕಾರಣವೂ ಸೇರಿದಂತೆ ಎಲ್ಲಕ್ಕೂ ಸ್ಟೇ ಕೊಟ್ಟುಬಿಡುತ್ತಾರೆ. ಇದರಿಂದ ಒಂದಷ್ಟು ಆಡಳಿತಾತ್ಮಕವಾದ ಸಮಸ್ಯೆಗಳು ಇವೆ. ಈಗ ತಂದಿರುವ ತಿದ್ದುಪಡಿಯ ವ್ಯಾಪ್ತಿಯಲ್ಲಿ ಇದಕ್ಕೇನಾದರೂ ಪರಿಹಾರ ಸಿಗುವಂತೆ ಮಾಡಬಹುದೇ? ದಯವಿಟ್ಟು ಇದರ ಕಡೆ ಗಮನಿಸಬೇಕು ಎನ್ನುವುದು ನನ್ನ ವಿನಂತಿ. ಮತ್ತೆ, ಜಿಲ್ಲಾ ಪಂಚಾಯಿತಿ ಸದಸ್ಯನ ಗೈರು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಜರಾತಿ ಬಗ್ಗೆ ಏನು ಹೇಳಿದ್ದೀರೋ ಅದು ಮೂಲ ಕಾಯಿದೆಯಲ್ಲೇ ಇದೆ. ಗ್ರಾಮ ಪಂಚಾಯತಿಗಳು ತೆರಿಗೆಗಳ ದರ ವಿಧಿಸುವುದೂ ಕೂಡ ಮೂಲ ಕಾಯಿದೆಯಲ್ಲಿದೆ.

ಪ್ರಕರಣ 246ರ (11)ರಲ್ಲಿ, "ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರು ಲೆಕ್ಕ ಪರಿಶೋಧನಾ ವರದಿಯ ಬಗ್ಗೆ ಮಾಡಿದ ಸಂಕ್ಷಿಪ್ತ ಅಭಿಪ್ರಾಯೋಕ್ತಿಗಳನ್ನು ಮತ್ತು ಗ್ರಾಮ ಪಂಚಾಯತಿಗಳು ಸರಿಪಡಿಸಿರುವುದನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು" ಎಂದು ಹೇಳಿದ್ದೀರಿ. ಇದೂ ಕೂಡ ಮೂಲ ಕಾಯಿದೆಯಲ್ಲೇ ಇದ್ದು ಮತ್ತೆ ಇದನ್ನು ಏಕೆ ತಂದಿದ್ದೀರೋ ನನಗೆ ಗೊತ್ತಾಗುತ್ತಿಲ್ಲ. ಆದರೆ ಒಂದು ಸಂದೇಹ ಎಂದರೆ, ಅನೇಕ ಗ್ರಾಮ ಪಂಚಾಯಿತಿಗಳಲ್ಲಿ ಲೆಕ್ಕಪರಿಶೋಧನೆ ಮಾಡದೇ ಇರುವಂತಹ ಪ್ರಕರಣಗಳು ಇವೆ. ಲೆಕ್ಕ ಪರಿಶೋಧನೆಗೆ ಒಳಪಡುವುದೇ ಇಲ್ಲದ ಪರಿಸ್ಥಿತಿಗಳು ಕೂಡ ಇದೆ. ಕಡ್ಡಾಯ ಗ್ರಾಮ ಪಂಚಾಯಿತಿಗಳು ಲೆಕ್ಕ ಪರಿಶೋಧನೆಗೆ ಒಳಪಡದೇ ಇದ್ದರೆ ಮುಂದೇನು ಮಾಡಬೇಕು ಎನ್ನುವ ನಿಟ್ಟಿನಲ್ಲಿ ನಿಮ್ಮ Chief Executive Officer ಗ್ರಾಮ ಪಂಚಾಯಿತಿಯ ಮೇಲೆ ಯಾವುದೇ ರೀತಿಯ ಒತ್ತಾಡ ಹೇರುವಂತಹ ಕೆಲಸ ಮಾಡುತ್ತಿಲ್ಲ, ಅದನ್ನು ಗಮನಿಸುತ್ತಲೂ ಇಲ್ಲ. Chief Secretary ಕೂಡ ಇದನ್ನು ಗಮನಿಸುವ ವ್ಯವಸ್ಥೆ ಇಟ್ಟುಕೊಂಡಿಲ್ಲ.

ಪ್ರಕರಣ 296ಎ ಯಲ್ಲಿ, ಕುಂದುಕೊರತೆ ನಿವಾರಣಾ ಪ್ರಾಧಿಕಾರಕ್ಕೆ "ನಿವೃತ್ತ ಜಿಲ್ಲಾ ನ್ಯಾಯಾಧೀಶ ಅಥವಾ ವಿಶೇಷ ಡೆಪ್ಯೂಟಿ ಕಮಿಷನರ್‌ರ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಅಧಿಕಾರಿಯನ್ನು ಒಳಗೊಂಡ ಕುಂದುಕೊರತೆ ನಿವಾರಣಾ ಪ್ರಾಧಿಕಾರಿಯನ್ನಾಗಿ ನೇಮಿಸತಕ್ಕದ್ದು" ಎಂದು ಹೇಳಿದ್ದೀರಿ. ನಾವು ಸ್ವಾಗತ ಮಾಡುತ್ತೇವೆ. ಇದನ್ನು Ombudsman ಮಾದರಿಯಲ್ಲೇ ಮಾಡುತ್ತೀರಾ? ದೂರು ಸ್ವೀಕಾರವನ್ನು ಯಾವರೀತಿ ಮಾಡುತ್ತೀರಿ ಎನ್ನುವುದನ್ನು ಸ್ವಲ್ಪ ಸ್ಪಷ್ಟಪಡಿಸಿದರೆ ಒಳ್ಳೆಯದು.

ಪ್ರಕರಣ 310ಎ– ರಾಜ್ಯ ಪಂಚಾಯಿತಿ ಪರಿಷತ್ತು ಬಗ್ಗೆ ಹೇಳಿದ್ದೀರಿ. ನೀವು ಹೇಳಿರುವಂಥದ್ದು ಮೂಲ ಕಾಯಿದೆಯಲ್ಲಿದೆ. ಅದನ್ನೇ ಇಲ್ಲಿ ಹೇಳಿದ್ದೀರಿ. ಇದರಲ್ಲೇನಾದರೂ ಹೊಸದಾಗಿ ತಂದಿದ್ದೀರಾ ತಿಳಿಸಬೇಕು. ಮೂಲ ಕಾಯಿದೆಯಲ್ಲಿ, ಗ್ರಾಮೀಣಾಭಿವೃದ್ಧಿ ಸೆಕ್ರೆಟರಿಯವರು ಅದರ ಸದಸ್ಯರಾಗಿದ್ದಾರೆ ಎಂದಿದೆ. ನೀವು ಹೊಸದಾಗಿ ತಂದಿರುವುದರಲ್ಲಿ ಅದು ಇಲ್ಲ. ಮತ್ತೊಂದು ಎಂದರೆ, ರಾಜ್ಯ ವಿಕೇಂದ್ರೀಕರಣ ಯೋಜನೆ ಸಮಿತಿಯನ್ನು ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಮಾಡಿದ್ದೀರಿ. ಅದು ಮತ್ತು ಇದು ಬೇರೆ ಬೇರೆ ಎಂದು ನಾನು ತಿಳಿದುಕೊಂಡಿದ್ದೇನೆ. ರಾಜ್ಯ ಪರಿಷತ್ತಿನ ಹೊಸ ಕಲ್ಪನೆಗಳೇನಾದರೂ ಇದೆಯೇ? ಏಕೆಂದರೆ ಇವೆಲ್ಲ ಮೂಲ ಕಾಯಿದೆಯಲ್ಲೇ ಇದೆ. ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ, ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಉಪಾಧ್ಯಕ್ಷರಾಗಿರುತ್ತಾರೆ, 5 ಜನ ಸಚಿವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾಮನಿರ್ದೇಶನ ಸದಸ್ಯರಾಗಿರುತ್ತಾರೆ, ಎಲ್ಲಾ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು ಸದಸ್ಯರಾಗಿರುತ್ತಾರೆ ಮತ್ತು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಯ . . . .ಇಬ್ಬರು ಶಾಸಕರು, ಇಬ್ಬರು ವಿಧಾನ ಪರಿಷತ್ತಿನ ಸದಸ್ಯರು ಇರುತ್ತಾರೆ ಎಂದು ಈಗಾಗಲೇ ಹೇಳಿದ್ದೀರಿ. ಇದನ್ನು ಮತ್ತೊಮ್ಮೆ ಏಕೆ ತೆಗೆದುಕೊಂಡು ಬಂದಿದ್ದೀರಿ? ಮೂಲ ಕಾಯಿದೆಯಲ್ಲೂ ಹಾಗೆಯೇ ಇದೆ ಎಂದೆನಿಸುತ್ತದೆ. ಇದನ್ನು ಸ್ಪಷ್ಟಪಡಿಸಬೇಕು ಎನ್ನುವುದು ನನ್ನ ವಿನಂತಿ.

ಪ್ರಕರಣ 199ರಲ್ಲಿ ಸ್ವತ್ತಿನ ಮೇಲೆ ತೆರಿಗೆ ಹಾಕುವುದರ ಬಗ್ಗೆ ಉಲ್ಲೇಖ ಮಾಡಿದ್ದೀರಿ. ಸ್ವತ್ತಿನ ಬಂಡವಾಳ ಮೌಲ್ಯದ ಮೇಲೆ ಶೇಕಡ 0.01ಕ್ಕಿಂತ ಕಡಿಮೆಯಲ್ಲದ ಆದರೆ ಶೇಕಡ 0.02ಕ್ಕಿಂತ ಹೆಚ್ಚಲ್ಲದ ರೀತಿಯಲ್ಲಿ ವಸೂಲು ಮಾಡಬೇಕೆಂದು ಹೇಳುತ್ತೀರಿ. ಅದು ಈಗಲೂ ಕೂಡ ನಡೆಯುತ್ತಿದೆ. ಇದರಲ್ಲಿ ಏನು ಬದಲಾವಣೆ ತಂದಿದ್ದೀರೋ ಗೊತ್ತಾಗುತ್ತಿಲ್ಲ. ಗ್ರಾಮ ಪಂಚಾಯಿತಿಗಳಿಗೆ ಯಾವುದ್ಯಾವುದರಲ್ಲಿ ತೆರಿಗೆ ವಸೂಲು ಮಾಡಬೇಕು ಎಂದು ನೀವು ಕೆಲವು ನಿರ್ದಿಷ್ಟ ಸೂಚನೆಗಳನ್ನು ಕೊಟ್ಟುಬಿಟ್ಟಿದ್ದೀರಿ. ಮಾನ್ಯ ಸಭಾಪತಿಗಳೆ, ಗಾಳಿಯಂತ್ರಕ್ಕೆ (Windmill) ಸಂಬಂಧಪಟ್ಟಂತೆ ಅವರು ನೋಟಿಸ್ ತೆಗೆದುಕೊಳ್ಳುತ್ತಾರೆ, ಆದರೆ ಹಣ ಕಟ್ಟುವುದಿಲ್ಲ.

(ಮುಂದು . . .)

(894)21-6-2017 MM-RN 4.40 (ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಮುಂದು):-**

ಪ್ರತಿಸಲವೂ ನಾವು ಗ್ರಾಮಪಂಚಾಯಿತಿಯಲ್ಲಿ ಕುಳಿತುಕೊಂಡಾಗ ಅವರು ಟವರ್‌ಗೆ ನೋಟಿಸ್ ಕೊಡುತ್ತೇವೆ ಅವರು ನೋಟಿಸ್ ತೆಗೆದುಕೊಂಡು ಹಣ ಕಟ್ಟುವುದಿಲ್ಲ ಮುಂದೆ ಏನು ಮಾಡಬೇಕೆಂಬುದು ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಯಾವುದಾದರೂ ಒಂದು ಪ್ರಕರಣದಲ್ಲಿ ಒಬ್ಬ ತೆರಿಗೆ ಕೊಡಬೇಕಾದರೆ, ಮಾನ್ಯ ಮಂತ್ರಿಯವರು ಒಂದನ್ನು ಗಮನಿಸಬೇಕು. ಕರ್ನಾಟಕ ರಾಜ್ಯದಲ್ಲಿ ತಾವು ಒಂದು ಮಾಹಿತಿಯನ್ನು ಕೊಟ್ಟಿದ್ದಿರಿ. ಮೂರು ವರ್ಷಗಳಲ್ಲಿ ಎಷ್ಟು ತೆರಿಗೆ ಬಾಕಿ ಇದೆ ಎಂದು ಕೇಳಿದಾಗ 2700 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದಿರಿ. 530 ಕೋಟಿ ರೂಪಾಯಿಗಳು ವಸೂಲಾಗಿವೆ. ಅಂಕಿ-ಅಂಶಗಳನ್ನು ನೋಡಿದರೆ ನಮಗೆ ದಿಗ್ಭ್ರಮೆಯಾಗುತ್ತದೆ. ಇಡೀ ಕರ್ನಾಟಕದಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಶೇ.30ರಷ್ಟು ತೆರಿಗೆ ವಸೂಲಿಯಾಗಿಲ್ಲ. ತಿದ್ದುಪಡಿಗೆ ಸೀಮಿತಗೊಳಿಸಿ ಮಾತನಾಡಬೇಕಾಗಿದೆ. ಆದರೆ ಸಿಕ್ಕಿರುವ ಅವಕಾಶವನ್ನು ಬಳಸಿಕೊಂಡು ಇದನ್ನು ಹೇಳುತ್ತೇನೆ. ಉದಾ. ಪುತ್ತೂರು ತಾಲ್ಲೂಕಿನಲ್ಲಿ 'ಕೇಪು' ಎಂಬ ಒಂದು ಗ್ರಾಮ ಪಂಚಾಯಿತಿ ಇದೆ. ಅಲ್ಲಿ 18 ವರ್ಷದಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶೇ.100ರಷ್ಟು ತೆರಿಗೆಯನ್ನು ವಸೂಲಿ ಮಾಡುತ್ತಿದ್ದಾರೆ. ನನಗೆ ಆಶ್ಚರ್ಯವಾಗುತ್ತದೆ. ಕೆಲವು ಗ್ರಾಮ ಪಂಚಾಯ್ತಿಗಳಲ್ಲಿ ಶೇ.25ರಷ್ಟು ತೆರಿಗೆ ವಸೂಲಿ ಮಾಡಿಲ್ಲ. ಈ ಸರಾಸರಿ ಲೆಕ್ಕ ತೆಗೆದುಕೊಂಡರೆ, ಶೇ.25ರಷ್ಟು ಆಗಿಲ್ಲ. ನಾನು ಹೇಳುವುದೇನೆಂದರೆ, ಯಾವ ನೋಟಿಸನ್ನು ಕೊಡುತ್ತೇವೆ ನಮ್ಮ ಮೊಬೈಲ್ ಟವರ್‌ಗಳು ಮತ್ತು Windmillಗಳು ಹಾಗೂ ಟೋಲ್‌ಗೇಟ್‌ಗಳು ನೀವು OFC (Offshore Finance Centre) ಗೆ ಟ್ಯಾಕ್ಸ್ ಹಾಕಿ ಎಂದು ಹೇಳುತ್ತೀರಿ. ಟೋಲ್‌ಗೇಟ್‌ಗಳಿಗೆ ಹಾಕಿ ಎಂದು ಹೇಳುತ್ತೀರಿ. ಒಂದೊಂದು ಟೋಲ್‌ಗೇಟ್‌ಗಳಲ್ಲಿ ನೀವು ಹೇಳಿದ ಪರ್ಸೆಂಟೇಜ್‌ನಲ್ಲಿ ತೆರಿಗೆಯನ್ನು ವಸೂಲಿ ಮಾಡಿದರೆ ಎರಡು ಗ್ರಾಮ ಪಂಚಾಯಿತಿಗಳು ಅಕ್ಕ ಪಕ್ಕ ಇದ್ದರೆ ಒಂದೊಂದು ಗ್ರಾಮ ಪಂಚಾಯ್ತಿಯಿಂದ ವರ್ಷಕ್ಕೆ 15 ಲಕ್ಷ ರೂಪಾಯಿಗಳಾದರು ಬರಬಹುದು. ಒಂದು ಟೋಲ್‌ಗೇಟ್‌ನವರು ಕೂಡ ಒಂದು ರೂಪಾಯಿಯನ್ನೂ ನಮ್ಮ ಸ್ಥಳೀಯ ಸಂಸ್ಥೆಗಳಿಗೆ ಕೊಟ್ಟಿದ್ದನ್ನು ನಾನು ಇಲ್ಲಿಯವರೆಗೂ ಕೇಳಿಲ್ಲ. OFC ಯಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸುಮಾರು 500 ಕೋಟಿ ರೂಪಾಯಿಗಳನ್ನು ವಸೂಲಿ ಮಾಡಿದ್ದಾರೆ. ನಮ್ಮ ಗ್ರಾಮ ಪಂಚಾಯಿತಿಗೆ ಒಂದು ರೂಪಾಯಿಯನ್ನೂ ಕೊಡುವುದಿಲ್ಲ. ಗ್ರಾಮ ಪಂಚಾಯಿತಿಯನ್ನು ಯಾರೂ ಗಂಭೀರವಾಗಿ ತೆಗೆದುಕೊಳ್ಳುತ್ತಾ ಇಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕಾನೂನುಬದ್ಧವಾಗಿ ಬರಬೇಕಾದ ತೆರಿಗೆಗೆ ಗ್ರಾಮಪಂಚಾಯಿತಿಯು ಯಾವರೀತಿ ನೋಟಿಸ್ ಕೊಡುತ್ತದೆ, ನೋಟಿಸ್ ಕೊಟ್ಟಿದ್ದರೂ ಅವರು ತೆರಿಗೆಯನ್ನು ಕಟ್ಟದೇ ಇದ್ದರೆ ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಅವರ ಮೇಲೆ ಕ್ರಿಮಿನಲ್ ಕೇಸನ್ನು ಏಕೆ ದಾಖಲು ಮಾಡಬಾರದು? ಆ ಅಧಿಕಾರವನ್ನು ಏಕೆ ಕೊಡಬಾರದು? ಇದು ಮೊದಲನೆಯದು. ಮತ್ತೊಂದು ಎಂದರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಬಡವರು ಯಾರೂ ತೆರಿಗೆಯನ್ನು ಇಟ್ಟುಕೊಂಡಿಲ್ಲ. ಪರಿಶಿಷ್ಟ ಜಾತಿ & ಪರಿಶಿಷ್ಟ ಪಂಗಡದವರು, ಹಿಂದುಳಿದ ವರ್ಗದವರು, ಬಿಪಿಎಲ್ ಕಾರ್ಡ್‌ದಾರರು ಎಲ್ಲೋ ಶೇ.01ರಷ್ಟು ಬಾಕಿ ಇಟ್ಟುಕೊಂಡಿರಬಹುದು. ಅದನ್ನು ಬಿಟ್ಟರೆ ಆಂಗ್ಲ ಮಾಧ್ಯಮ ಶಾಲೆಯವರು, ಬೇರೆ ಬೇರೆ ಉದ್ಯಮದವರು ಮಾತ್ರ ಇಟ್ಟುಕೊಂಡಿರುವುದು ಕಂಡುಬಂದಿದೆ. ಸರ್ಕಾರವು ಯಾವುದೇ ಕಾರಣಕ್ಕೂ ತೆರಿಗೆಯನ್ನು ವಸೂಲಿ ಮಾಡಿದರೆ ಬಡವರಿಗೆ ತೊಂದರೆಯಾಗಬಹುದು ಎನ್ನುವ ಆತಂಕ ಬೇಡ. ನಾನು ಹೇಳಿದ 2-3 ವಿಚಾರದಲ್ಲಿ ತಮ್ಮ ಸ್ಪಷ್ಟನೆಯನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಿಲ್ ಅನ್ನು ಪೂರ್ಣ ಪ್ರಮಾಣದಲ್ಲಿ ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮೂರು ಅಂಶಗಳ ಮೇಲೆ ರಾಜ್ಯ ಸರ್ಕಾರವು ಈ ಕಾಯಿದೆಗೆ ತಿದ್ದುಪಡಿಯನ್ನು ತಂದಿದ್ದಾರೆ. ಬಹಳ ಪ್ರಮುಖವಾಗಿ ಚುನಾವಣಾ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಕರಾರುಗಳಿಗೆ ಸಂಬಂಧಪಟ್ಟಂತೆ ನ್ಯಾಯಾಲಯದ ವ್ಯಾಪ್ತಿಯನ್ನು ನಿಷ್ಕರ್ಷೆ ಮಾಡುವ ರೀತಿಯಲ್ಲಿ ಬದಲಾವಣೆ ಮಾಡಿ ಒಂದು ತಿದ್ದುಪಡಿಯನ್ನು ತಂದಿದ್ದಾರೆ ಮತ್ತು ಕೆಲವು ಉಪಖಂಡಗಳನ್ನು ಕೈ ಬಿಟ್ಟಿದ್ದಾರೆ. ಜಿಎಸ್‌ಟಿ ಕಾಯಿದೆಗನುಗುಣವಾಗಿ ಕೆಲವು ಅಂಶಗಳನ್ನು ಸೇರಿಸಿದ್ದಾರೆ. ನ್ಯಾಯಾಲಯದ ಚುನಾವಣಾ ತಕರಾರಿಗೆ ಸಂಬಂಧಪಟ್ಟಂತಹ ಒಂದು ಬದಲಾವಣೆ ತಿದ್ದುಪಡಿಯನ್ನು ತಂದಿದ್ದಾರೆ ಅಲ್ಲಿಯು ಕೂಡ ಇನ್ನೂ ಕ್ಲಾರಿಟಿ ಇಲ್ಲ. ಅವರು 2ನೇ ಪ್ರಕರಣದ (9ಎ) ತಿದ್ದುಪಡಿಯಲ್ಲಿ ಹೇಳುತ್ತಾರೆ; *"ಗೊತ್ತುಪಡಿಸಿದ ನ್ಯಾಯಾಲಯ" ಎಂದರೆ, ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಿಸಿದ ಚುನಾವಣಾ ವಿವಾದಗಳನ್ನು ಅಧಿವಿಚಾರಣೆಯನ್ನು ನಡೆಸಲು ಗೊತ್ತುಪಡಿಸಿದ ಅಧಿಕಾರ ವ್ಯಾಪ್ತಿಯುಳ್ಳ ಮತ್ತು ಪಂಚಾಯತ್ ಪ್ರದೇಶವು ಅಥವಾ ಪಂಚಾಯತ್ ಪ್ರದೇಶದ ಬಹಳಷ್ಟು ಭಾಗವು ಅನುಕ್ರಮವಾಗಿ ಯಾವ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತದೋ ಆ ಅಧಿಕಾರ ವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ".* ಹಿಂದೆ ಜಿಲ್ಲಾ ನ್ಯಾಯಾಲಯಕ್ಕೆ ಅಧಿಕಾರವನ್ನು ಕೊಟ್ಟು ಆ ಜಿಲ್ಲೆಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳನ್ನು ಅಲ್ಲಿ ತೀರ್ಮಾನಿಸಬೇಕೆಂದು ಕೊಟ್ಟಿದ್ದರು. ಇಲ್ಲಿ ಹಿರಿಯ ನ್ಯಾಯಾಧೀಶರು ಎಂದು ಹೇಳುತ್ತಾರೆ. ಆದರೆ ಅವರಿಗೆ ವ್ಯಾಪ್ತಿ ಕೊಡಬೇಕಾದರೆ ಪಂಚಾಯತ್ ಪ್ರದೇಶದ ವ್ಯಾಪ್ತಿ ಎಂದು ಹೇಳುತ್ತಾರೆ. ಉದಾ. ಮದ್ದೂರು ತಾಲ್ಲೂಕಿನಲ್ಲಿ ಕೊಪ್ಪ ಎಂಬ ಒಂದು ಜಿಲ್ಲಾ ಪಂಚಾಯತ್ ಕ್ಷೇತ್ರ ಇದೆ. ಅದಕ್ಕೆ ತಾಲ್ಲೂಕು ಮದ್ದೂರು ಆಗಿದೆ. ವಿಧಾನಸಭಾ ಕ್ಷೇತ್ರ ಬಂದರೆ ಅದು ನಾಗಮಂಗಲ ಕ್ಷೇತ್ರಕ್ಕೆ ಸೇರುತ್ತದೆ. ಅದೇ ರೀತಿ ಕೆಲವು jurisdictional ಬದಲಾವಣೆಗಳಾಗುತ್ತವೆ. ಇಲ್ಲಿ ಇವರು ತಾಲ್ಲೂಕು ಎಂದು ನಿರ್ದಿಷ್ಟವಾಗಿ ಹೇಳಿದರೆ ಯಾವ ತಾಲ್ಲೂಕು ವ್ಯಾಪ್ತಿಗೆ ಬರುತ್ತದೆ ಆ ಪ್ರದೇಶದ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಎಂದು ಹೇಳಿದರೆ ಅಲ್ಲಿ ಸಂಬಂಧಪಟ್ಟ ಹಿರಿಯ ನ್ಯಾಯಾಧೀಶರ ಮುಂದೆ ಈ ಪ್ರಕರಣ ಹೋಗುತ್ತದೆ. ಇವರು ಪಂಚಾಯಿತಿ ಪ್ರದೇಶ ಎಂದರೆ, ಅವರು ನಾಗಮಂಗಲಕ್ಕೆ ಹೋಗಬೇಕೋ ಅಥವಾ ಮದ್ದೂರಿಗೆ ಬರಬೇಕೋ? ಇಂತಹ ಗೊಂದಲವುಂಟಾಗುವುದಕ್ಕೆ ಅವಕಾಶವಾಗುತ್ತದೆ. ಗ್ರಾಮಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯಿತಿಗಳಲ್ಲಿಯು ಕೂಡ ಇದೇ ಪ್ರಕರಣ ಬರುತ್ತದೆ. ಇವರು ಅದನ್ನು ತಾಲ್ಲೂಕಿಗೆ ನಿರ್ದಿಷ್ಟಪಡಿಸಿ, ಒಂದು ನಿರ್ದಿಷ್ಟ ನ್ಯಾಯಾಲಯದ ತಾಲ್ಲೂಕು ವ್ಯಾಪ್ತಿಯೊಳಗೆ ಎಂದು ಹೇಳಿದರೆ ಅದು clarity ಬರುತ್ತದೆ. ಬಹಳಷ್ಟು ಕಡೆಗಳಲ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಹಿರಿಯ ಸಿವಿಲ್ ನ್ಯಾಯಾಲಯಗಳು ಇಲ್ಲ. ಇವತ್ತು ಕೂಡ ಕಿರಿಯ ಶ್ರೇಣಿಯ ಸಿವಿಲ್ ನ್ಯಾಯಾಲಯಗಳಿವೆ. ಅವರು ಪ್ರಕರಣವನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು? ಆ ತಾಲ್ಲೂಕುಗಳಲ್ಲಿ ಸೀನಿಯರ್ ಸಿವಿಲ್ ಜಡ್ಜ್ ಇರುವುದಿಲ್ಲ. ಆಗ ಪ್ರಕರಣವನ್ನು ಅವರು ಎಲ್ಲಿ ದಾಖಲು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬೇಕು? ಅದಕ್ಕೆ ಸಂಬಂಧಪಟ್ಟಂತೆ ಕೂಡ ಇಲ್ಲಿ clarity ಇಲ್ಲ. ದಯಮಾಡಿ ಈ ತಿದ್ದುಪಡಿಯಲ್ಲಿ ಕ್ಲಾರಿಟಿಯನ್ನು ತರುವ ಪ್ರಯತ್ನವನ್ನು ಮಾಡಬೇಕಾಗಿದೆ.

ಇನ್ನು 48ನೇ ಪ್ರಕರಣದ ತಿದ್ದುಪಡಿಗೆ ತರುತ್ತಾ sub-clause '*(i) ದೈಹಿಕ ಅಥವಾ ಮಾನಸಿಕ ಅಶಕ್ತತೆ ಉಳ್ಳವನೆಂದು ರಾಜ್ಯ ಚುನಾವಣಾ ಆಯೋಗವು ಅನುಮೋದಿಸಿರುವ ಸಕ್ಷಮ ಪ್ರಾಧಿಕಾರವು ಪ್ರಮಾಣೀಕರಿಸಿರುವ ರುಜುವಾತಿನ ಆಧಾರದ ಮೇಲೆ;*' ಅಂದರೆ ಅವರು ಯಾವುದೋ ಒಂದು ಪ್ಯಾನಲ್ ಮಾಡಿರುತ್ತಾರೆ. ಆ ಪ್ಯಾನಲ್ ಮೇಲೆ ನನಗಾಗದಿರುವ ಗ್ರಾಮಪಂಚಾಯಿತಿ ಅಧ್ಯಕ್ಷರ ಮೇಲೆ ಒಂದು ಸರ್ಟಿಫಿಕೇಟ್ ತಂದರೆ, ಆಗ ಅವರ ಪರಿಸ್ಥಿತಿ ಏನಾಗುತ್ತದೆ? ಒಬ್ಬ elected member ಮೇಲೆ ಸೃಷ್ಟಿಮಾಡಿರುವಂತಹ ದಾಖಲೆಯೊಂದನ್ನು ತೆಗೆದುಕೊಂಡು ಅವರನ್ನು ಇಳಿಸುವುದಕ್ಕೆ ಅಥವಾ ಅನರ್ಹಗೊಳಿಸುವುದಕ್ಕೆ ಇದರಲ್ಲಿ ಅವಕಾಶ ಇರುವಂತಹ ಸಾಧ್ಯತೆಗಳಿವೆ. ದಯಮಾಡಿ ಈ ಅಂಶವನ್ನು ಕೂಡ ಪರಿಗಣಿಸಬೇಕಾಗುತ್ತದೆ. *Sub-clause '(ii) ಕೇಂದ್ರ ಸರ್ಕಾರದಲ್ಲಿ ಅಥವಾ ರಾಜ್ಯ ಸರ್ಕಾರದಲ್ಲಿ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ಉದ್ಯೋಗದಲ್ಲಿರುವುದರ ಆಧಾರದ ಮೇಲೆ;*' ತನ್ನ ಪದಕ್ಕೆ ಅಥವಾ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡತಕ್ಕದ್ದು ಅಥವಾ ಆತನನ್ನು ತೆಗೆದುಹಾಕಲು ಬದ್ಧನಾಗಿರತಕ್ಕದ್ದು. ಈ ಪ್ರಕರಣದಲ್ಲಿ ಅವರಿಗೆ ಕೇಳುವುದಕ್ಕೆ ಅವಕಾಶ ಕೊಡಲಿಲ್ಲವೆಂದರೆ, ರಾಜಕೀಯ ಕಾರಣಗಳಿಗೂ ಕೂಡ ಒಬ್ಬ ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಬದಲಾವಣೆ ಮಾಡುವುದಕ್ಕೆ ಅವಕಾಶವಿರುತ್ತದೆ. ಆದರೆ ಇಲ್ಲಿ ಒಂದು clarity ಬರಬೇಕು. ಒಂದು ಅವನ ದೂರು ಬಂದಂತಹ ಸಮಯದಲ್ಲಿ ಅವನ ದೂರನ್ನು ಕೇಳಿ ಅದರ ಮೇಲೆ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ ಅವನಿಗೆ ಒಂದು ಅವಕಾಶವನ್ನು ಕೊಟ್ಟರೆ principles of natural justice ಸಿಗುವಂತಾಗುತ್ತದೆ. ಇಲ್ಲದಿದ್ದರೆ ಇದು ಏಕಪಕ್ಷೀಯವಾಗಿ ಆಗುವ ಸಾಧ್ಯತೆಗಳು ಮತ್ತು ರಾಜಕೀಯ ದ್ವೇಷಗಳಿಂದ ಇದನ್ನು ಮಾಡುವಂತಹ ಸಾಧ್ಯತೆಗಳಿರುತ್ತವೆ.

ಇನ್ನು 141ನೇ ತಿದ್ದುಪಡಿ, ಇದರಲ್ಲಿ ಮೂಲ ಅಧಿನಿಯಮದ 141ನೇ ಪ್ರಕರಣದ sub-clause-2 ಉಪಪ್ರಕರಣದ (ಎ) ಖಂಡದಲ್ಲಿ "ತರುವಾಯ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ತಾಲ್ಲೂಕು ಪಂಚಾಯಿತಿಯ ಹಿಂದಿನ ಸಭೆಯಲ್ಲಿ ಗೊತ್ತುಪಡಿಸತಕ್ಕದ್ದು" ಎಂಬ ಪದಗಳಿಗೆ "ತರುವಾಯದ ಪ್ರತಿಯೊಂದು ಸಾಮಾನ್ಯ ಸಭೆಯ ದಿನಾಂಕವನ್ನು ಅಧ್ಯಕ್ಷನು ತೀರ್ಮಾನಿಸತಕ್ಕದ್ದು ಹಾಗೂ ಅದನ್ನು ಆತನು ತಕ್ಷಣದ ಹಿಂದಿನ ದಿನಾಂಕದ ತಾಲ್ಲೂಕು ಪಂಚಾಯ್ತಿಯ ಸಭೆಯಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಿಳಿಸತಕ್ಕದ್ದು" ಅಂದರೆ ಅಧ್ಯಕ್ಷರಿಗೆ authorization, power ಕೊಟ್ಟಿರುವುದು ಸರಿ. ಅವರು ಹಿಂದಿನ ಸಭೆಯಲ್ಲಿ ಅಕಸ್ಮಾತ್ ಬರೆಯಲಿಲ್ಲ then what is the cause of action? ಈಗ ನಾನು ಒಬ್ಬ ಅಧ್ಯಕ್ಷನಾಗಿ ಈ ದಿನ ಮೀಟಿಂಗ್ ಆಗುತ್ತದೆ, ಮುಂದಿನ ಸಭೆಯಲ್ಲಿ disclose ಮಾಡಲಿಲ್ಲ then what is the provision? ಮತ್ತೆ ಸಭೆಯನ್ನು ಯಾರು ಕರೆಯಬೇಕು? ಆ ರೀತಿಯ ಒಂದು clarity ಬರಬೇಕು. ತಿದ್ದುಪಡಿಯಲ್ಲಿ ಆ ಅಂಶವನ್ನು ಕೂಡ ಸೇರಿಸಬೇಕಾಗುತ್ತದೆ.

ಇನ್ನು 180ನೇ ಪ್ರಕರಣದ ತಿದ್ದುಪಡಿಯಲ್ಲಿ 141ನೇ ತಿದ್ದುಪಡಿಯಲ್ಲಿರುವ ಅದೇ ಅಂಶಗಳು 180ನೇ ಪ್ರಕರಣದ ತಿದ್ದುಪಡಿಯಲ್ಲಿಯೂ ರಿಪೀಟ್ ಆಗಿದೆ. ಅವೆರಡನ್ನೂ ಸೇರಿಸಿ ಒಂದೇ ಸ್ಪಷ್ಟನೆ ಕೊಟ್ಟರೆ ಅನುಕೂಲವಾಗುತ್ತದೆ.

308ಎಬಿ ಪ್ರಕರಣದ ತಿದ್ದುಪಡಿ:- ಮೂಲ ಅಧಿನಿಯಮದ 308ಎಬಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳಿಗೆ "ಚುನಾವಣಾಧಿಕಾರಿಯು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು. ಇಲ್ಲಿ ರಾಜ್ಯ ಚುನಾವಣಾ ಆಯೋಗವೇ clarity right authority. ನೀವು ನೋಟಿಫಿಕೇಷನ್ ಮಾಡಬೇಕಾದರೆ, ಮತ್ತೊಂದು ಮಾಡಬೇಕಾದರೆ ಅದು clarity ಇಲ್ಲವೆಂದು ನನ್ನ ಭಾವನೆಯಾಗಿದೆ, ಅದನ್ನು ತಾವು ನೋಡಬೇಕಾಗುತ್ತದೆ.

ಇನ್ನು ಚುನಾವಣೆ ವಿಷಯಕ್ಕೆ ಸಂಬಂಧಪಟ್ಟಂತೆ ತಾವು ಚುನಾವಣಾ ಆಯೋಗದ ಗೈಡ್‌ಲೈನ್ಸ್ ಪ್ರಕಾರವಾಗಿ ಸೇರಿಸಿರುವ 308ಎಡಿ ಸ್ವೀಕಾರಾರ್ಹವಾಗಿದೆ. ಇನ್ನು ಬಹಳ ಪ್ರಮುಖವಾಗಿ 310ಎ ಪ್ರಕರಣದ ತಿದ್ದುಪಡಿ ರಾಜ್ಯ ಪರಿಷತ್ ಎಂದಿರುವುದನ್ನು 310ಎ ಪ್ರಕರಣದ (2)ನೇ ಉಪಪ್ರಕರಣದ (v) ಖಂಡದಲ್ಲಿ "ಪ್ರತಿ ಜಿಲ್ಲಾ ಪಂಚಾಯತಿಯಿಂದ" ಎಂಬ ಪದಗಳಿಗೆ "ಸರ್ಕಾರದಿಂದ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು. ಅಂದರೆ ಈಗಿರುವ ಕಾಯಿದೆಯಲ್ಲಿ ಒಂದು ಜಿಲ್ಲಾ ಪಂಚಾಯ್ತಿಗೆ ನಾಲ್ಕು ಗ್ರಾಮ ಪಂಚಾಯತ್ ಅಧ್ಯಕ್ಷರನ್ನು ನಾಮಿನೇಟ್ ಮಾಡಲು ಅವಕಾಶವಿದೆ. ತಾವು ಜಿಲ್ಲಾ ಪಂಚಾಯ್ತಿಯಿಂದ ಸರ್ಕಾರಕ್ಕೆ ಕೊಟ್ಟಿದ್ದೀರಿ. ಅಂದರೆ ಇಡೀ ರಾಜ್ಯಕ್ಕೆ ನಾಲ್ಕೇ ಗ್ರಾಮಪಂಚಾಯ್ತಿಗಳೇ? ಈಗಿರುವ ಕಾಯಿದೆಯಲ್ಲಿ ಜಿಲ್ಲಾ ಪಂಚಾಯತ್‌ಗೆ ನಾಲ್ಕು ಗ್ರಾಮಗಳನ್ನು ಕೊಟ್ಟಿದ್ದೀರಿ. ಈಗಿರುವ ಕಾಯಿದೆಯಲ್ಲಿ ಒಂದು ಜಿಲ್ಲಾ ಪಂಚಾಯ್ತಿಯಿಂದ ನಾಲ್ಕು ಗ್ರಾಮ ಪಂಚಾಯತ್ ಅಧ್ಯಕ್ಷರನ್ನು ಕೊಡಲು ಪ್ರಾವಿಜನ್ ಮಾಡಿದ್ದೀರಿ. 30 ಜಿಲ್ಲಾ ಪಂಚಾಯತ್, ಅಂದರೆ 30x4 ಆಗುತ್ತದೆ. ಆದರೆ ಈಗ ತಿದ್ದುಪಡಿಯಲ್ಲಿ ಸರ್ಕಾರದಿಂದ ಎಂದು ಮಾಡಿದ್ದೀರಿ. ಆದರೆ ಬಲ ಎಷ್ಟು ಎಂದು ಹೇಳಿಲ್ಲ. ಇಡೀ ರಾಜ್ಯಕ್ಕೆ ನಾಲ್ಕೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಗ್ರಾಮಪಂಚಾಯ್ತಿಗಳು. ಹಾಗಾಗಿ ಅದನ್ನು ಬದಲಾವಣೆ ಮಾಡುವ ಅವಶ್ಯಕತೆ ಇದೆ. ದಯಮಾಡಿ ರಾಜ್ಯಸರ್ಕಾರ ಈ ತಿದ್ದುಪಡಿಗಳನ್ನು ಪರಿಗಣನೆ ಮಾಡಬೇಕು ಬಹುತೇಕ ನನಗನ್ನಿಸಿದಂತೆ ಕರ್ನಾಟಕದಲ್ಲಿ ಹೆಚ್ಚು ತಿದ್ದುಪಡಿಗಳಿಗೊಳಪಟ್ಟ ಕಾಯಿದೆಯೆಂದರೆ, ಗ್ರಾಮಪಂಚಾಯ್ತಿ ಕಾಯಿದೆ ಅದು ಬಿಟ್ಟರೆ ಸಹಕಾರಿ ಕಾಯಿದೆಯಾಗಿದೆ. ಸೆಂಟ್ರಲ್ ಆಕ್ಟ್‌ಗೆ ಪೂರಕವಾಗಿ ತಾವು ತಿದ್ದುಪಡಿಯನ್ನು ಮಾಡಬೇಕಾಗುತ್ತದೆ. ಕೆಲವು ಕಡೆ ತಿದ್ದುಪಡಿಯನ್ನು ಕಡಿಮೆ ಮಾಡಿ, ಮಾಡಿದರೂ ಅದನ್ನು ಪರಿಣಾಮಕಾರಿ ಮಾಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಮಾನ್ಯ ರಮೇಶ್ ಬಾಬುರವರೆ ಸಾಕು, ಸಮಯ ಕಡಿಮೆ ಇದೆ. ಮಾನ್ಯ ಉಗ್ರಪ್ಪರವರೆ, ತಾವು ಒಂದೆರಡು ನಿಮಿಷದಲ್ಲಿ ಮುಗಿಸಬೇಕು.

(ಮುಂದು . . .

895/21-6-2017/4.50/ಡಿಎಸ್-ವಿಕೆ

(ಉಪಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಸಂವಿಧಾನದ ಆರ್ಟಿಕಲ್ 243 ಕೆಳಗಡೆ 73 ತಿದ್ದುಪಡಿಯನ್ನು ತರುವುದರ ಮೂಲಕ.....

**ಉಪಸಭಾಪತಿಯವರು:-** ಅಲ್ಲಿಗೆ ಹೋಗಬೇಡಿ. ಮುಂದೆ ಬನ್ನಿ.

**ಶ್ರೀ ವಿ.ಎಸ್.ಉಗ್ರಪ್ಪ(ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಪಂಚಾಯಿತಿಗೆ ಮೂಲವೇ ಅದು. ಯಾವ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವುದಕ್ಕೆ ನಮ್ಮ ಸಂವಿಧಾನದ ಆಶಯ ಇದೆ, ಆ ಆಶಯದ ಹಿನ್ನೆಲೆಯಲ್ಲಿ ಪಂಚಾಯತ್ ವ್ಯವಸ್ಥೆಯನ್ನು ಸದೃಢಗೊಳಿಸುವಂಥಾದ್ದಕ್ಕೇನು ಈ ವಿಧೇಯಕವನ್ನು ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನನಗೆ ಈ ವಿಧೇಯಕದಲ್ಲಿ ಕೆಲವು ನ್ಯೂನ್ಯತೆಗಳು ಎದ್ದು ಕಾಣುತ್ತಿವೆ. ಈಗ Section 2: Definitions. (9A) ಇವರು ತಿದ್ದುಪಡಿಗೆ propose ಮಾಡಿದ್ದಾರೆ. Original Act ನಲ್ಲಿ ಹಿಂದುಗಡೆ ಕೊಟ್ಟಿದ್ದಾರೆ. ಪುಟ 9 ರಲ್ಲಿ 2.(9ಎ) ನಲ್ಲಿ ಇದಕ್ಕೂ-ಅದಕ್ಕೂ ಬಹಳ ದೊಡ್ಡ ವ್ಯತ್ಯಾಸ ಏನು ಇಲ್ಲ. ಅಲ್ಲಿ ಏನು ಹೇಳಿದ್ದಾರೆಂದರೆ, ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗೆ ಹಿರಿಯ ಸಿವಿಲ್ ನ್ಯಾಯಾಧೀಶರು ಎಂದು ಹೇಳಿದ್ದಾರೆ. ಜಿಲ್ಲಾ ಪಂಚಾಯಿತಿಗೆ ಜಿಲ್ಲಾ ನ್ಯಾಯಧೀಶರು ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಾಗಾದರೆ, ಜಿಲ್ಲಾ ನ್ಯಾಯಾಧೀಶರಿಗೆ ಇದ್ದಂಥ ವ್ಯಾಪ್ತಿಯನ್ನು ಜಿಲ್ಲಾ ಪಂಚಾಯಿತಿಯ ಚುನಾವಣಾ ವಿವಾದಗಳಿಗೆ ಸಂಬಂಧಪಟ್ಟ ಹಾಗೆ ಏಕೆ ಇವತ್ತು ಬದಲಾವಣೆ ಮಾಡುತ್ತಿದ್ದಾರೆ? ನಾನು ಇದನ್ನು ಏಕೆ ಕೇಳುತ್ತಿದ್ದೇನೆಂದರೆ, ಹಿರಿಯ ಸಿವಿಲ್ ನ್ಯಾಯಾಧೀಶರು ತಾಲ್ಲೂಕು ಮಟ್ಟದಲ್ಲಿರುವುದಿಲ್ಲ, ಅವರು Sub division ಮಟ್ಟದಲ್ಲಿ ಮಾತ್ರ ಇರುತ್ತಾರೆ. ಈಗಾಗಲೇ Magistrate or Munsif ಅವರನ್ನು 'ಕಿರಿಯ ಸಿವಿಲ್ ನ್ಯಾಯಾಧೀಶರು' ಎಂದು ಏನು ಕರೆಯುತ್ತಿದ್ದೆವು, ಅವರ ಮೇಲೆ ಇರತಕ್ಕಂಥವರು 'ಹಿರಿಯ ಸಿವಿಲ್ ನ್ಯಾಯಾಧೀಶರು' ಎಂದು ಹೇಳುತ್ತಿದ್ದೆವು. ಅವರಿಗೆ civil litigations ಜಾಸ್ತಿ ಇದೆ. Representation of the People Act, 1951 ಕೆಳಗಡೆ ಪಾರ್ಲಿಮೆಂಟ್ ಅಥವಾ ವಿಧಾನಸಭೆ ಅಥವಾ ವಿಧಾನ ಪರಿಷತ್ ಚುನಾವಣೆ ಆಗಲಿ, ಹೈಕೋರ್ಟ್‌ನಲ್ಲಿ election petition ಹಾಕುವುದಕ್ಕೆ ಅವಕಾಶ ಇದೆ. ಇಷ್ಟು ದಿವಸದಲ್ಲಿ election petition ಅನ್ನು dispose of ಮಾಡಬೇಕು ಎಂದು ಅಲ್ಲಿ ಕಾಲಮಿತಿ ಇದೆ. ಆದರೆ ಆ ಕಾಲಮಿತಿಯಲ್ಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥವಾಗುತ್ತಿಲ್ಲ. ಇಲ್ಲಿ ಇವರೇನು ವ್ಯಾಪ್ತಿಯನ್ನು ಬದಲಾವಣೆ ಮಾಡುತ್ತಿದ್ದಾರೆ, ಆ ವ್ಯಾಪ್ತಿಯನ್ನು ಬದಲಾವಣೆ ಮಾಡುವಂತಹ ಸಂದರ್ಭದಲ್ಲಿ "any election dispute related to Gram Panchayats or Taluk Panchayats or Zilla Panchayatas, it has to be disposed of within six months or one year." ಎನ್ನುವಂಥದ್ದನ್ನು ಏನಾದರೂ ಸೇರಿಸುವುದಕ್ಕೆ ಸಾಧ್ಯತೆ ಇದ್ದರೆ ಅದನ್ನು ಸೇರಿಸಬೇಕು. ಈ ಎಲ್ಲಾ disputes ಅನ್ನು ಕನಿಷ್ಠ ಒಂದು ವರ್ಷದಲ್ಲಿ dispose of ಮಾಡುವುದಕ್ಕೆ ಕ್ರಮ ಜರುಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕೆ ಯಾವುದೇ clarity or provision ಇದರಲ್ಲಿ ಕಾಣದಿರುವುದರಿಂದ ನಾನು ಕೇಳುವುದಕ್ಕೆ ಬಯಸುತ್ತೇನೆ.

ನನಗೆ ಮಾತನಾಡುವುದಕ್ಕೆ ಹೆಚ್ಚು ಕಾಲಾವಕಾಶ ಇಲ್ಲದಿರುವುದರಿಂದ ನಾನು ಓದುವುದಕ್ಕೆ ಹೋಗುವುದಿಲ್ಲ. ಸೆಕ್ಷನ್ 48 ರಲ್ಲಿ, ಆತನನ್ನು ತೆಗೆದುಹಾಕಲು ಬದ್ಧನಾಗಿರತಕ್ಕದ್ದು ಎಂದು ಇದೆ. ಅವರನ್ನು ಯಾರು ತೆಗೆದು ಹಾಕುತ್ತಾರೆ? Who is the authority who has to pass an order? Main Act ಅನ್ನು ನಾನು ಓದಿದ್ದೇನೆ. ಸೆಕ್ಷನ್ 48 ರಲ್ಲಿ ರಾಜೀನಾಮೆಯನ್ನು ಅಸಿಸ್ಟೆಂಟ್ ಕಮಿಷನರ್‌ರವರಿಗೆ ಕೊಡಬಹುದು ಎಂದು ಹೇಳುತ್ತಾರೆಯೇ ಹೊರತು ತೆಗೆದುಹಾಕುವಂತಹ ಅಧಿಕಾರ ಯಾರಿಗೆ ಎಂದು ಹೇಳಿರುವುದಿಲ್ಲ. ಅದರ ambiguity ಇಲ್ಲಿ ಇರತಕ್ಕಂಥದ್ದು ಸೆಕ್ಷನ್ 48

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಲ್ಲಿ ಇದೆ. ಆಮೇಲೆ Section 13 ರಲ್ಲಿ ಇದನ್ನು repeal ಮಾಡುತ್ತಿದ್ದಾರೆ. ಏಕೆ ಮಾಡುತ್ತಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಸೆಕ್ಷನ್ 13 ರಲ್ಲಿ ಏನಿದೆ ಎಂದರೆ, ಸದಸ್ಯರ ಸ್ಥಾನವು ಖಾಲಿಯಾಗುವುದು ಯಾವಾಗ ಎಂದರೆ, there are certain conditions on which one can be disqualify. ಈಗ ಉದಾಹರಣೆಗೆ ಸಂವಿಧಾನದ 10th Schedule ನಲ್ಲಿ ಎಂಎಲ್ಎ ಅಥವಾ ಎಂಎಲ್ಸಿ ಅಥವಾ ಎಂಪಿ ಗಳಿಗೆ ಯಾರು abstain ಆಗುತ್ತಾರೆ, ಯಾರು ಪಾರ್ಟಿ ಬಿಡುತ್ತಾರೆ, ಯಾರು ವಿಪ್‌ಗೆ ವಿರುದ್ಧವಾಗಿ ಓಟು ಹಾಕುತ್ತಾರೆ ಅವರನ್ನು ಅನರ್ಹಗೊಳಿಸುವುದಕ್ಕೆ ಸಂವಿಧಾನದ 10th Schedule ನಲ್ಲಿದೆ. ಅದೇ ರೀತಿ ಈ ಆಕ್ಟ್‌ನಲ್ಲಿ ಸೆಕ್ಷನ್ 13 ಕೆಳಗೆ ಯಾವ ಸಂದರ್ಭದಲ್ಲಿ ಆ ಸ್ಥಾನ ಖಾಲಿಯಾಗುವುದಕ್ಕೆ ಸಾಧ್ಯತೆ ಇದೆ? ಇಲ್ಲಿ ವಿಪ್ ಬಗ್ಗೆಯೂ ಇದೆ. ಇದನ್ನು ತೆಗೆದು ಹಾಕುವುದರಿಂದ ಯಾವ ಸದಸ್ಯನಿದ್ದಾನೆ, ಅವನ ಸ್ವೇಚ್ಛಾಚಾರಕ್ಕೆ ಅವಕಾಶ ಮಾಡುತ್ತಿದ್ದೀರೋ-ಇಲ್ಲವೋ? ಅದೇ ರೀತಿ ಸೆಕ್ಷನ್ 168 ಅನ್ನು repeal ಮಾಡುವುದಕ್ಕೆ ಮಾಡಿದ್ದಾರೆ. ಸೆಕ್ಷನ್ 168 ರಲ್ಲಿಯೂ ಕೂಡ ಚುನಾಯಿತನ ಸ್ಥಾನ ಖಾಲಿಯಾಗುವುದು. ಎಂದರೆ, ಅವರು ಏನು ಬೇಕಾದರೂ whip violate ಮಾಡಲಿ abstain ಆಗಲಿ, ಪಾರ್ಟಿ ಬಿಡಲಿ, ಅವರನ್ನು ಸೆಕ್ಷನ್ 168, ಸೆಕ್ಷನ್ 13 ಕೆಳಗಡೆ ಇರತಕ್ಕಂಥದ್ದನ್ನು repeal ಮಾಡಿದರೆ ಅವರ ಮೇಲೆ ಯಾವ ರೀತಿ ನಿಯಂತ್ರಣ ಮಾಡುವುದಕ್ಕೆ ಸಾಧ್ಯತೆ ಇದೆ? ಹೀಗೆ ಕೆಲವು anomalies ಗಳಿವೆ. ಅದನ್ನು ಹೇಗೆ set right ಮಾಡುತ್ತಾರೆಂದು ನಾನು ಸರ್ಕಾರವನ್ನು ಕೇಳುವುದಕ್ಕೆ ಬಯಸುತ್ತೇನೆ. ಈ anomalies ಅನ್ನು set right ಮಾಡಿದರೆ ಇದು ಜನಪರವಾಗಿರುವಂತಹ ಸಂವಿಧಾನದ ಆಶಯಗಳಿಗೆ ಪರವಾಗಿರುವಂತಹ ವಿಧೇಯಕ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಈ ವಿಧೇಯಕವನ್ನು ಸ್ವಾಗತ ಮಾಡುತ್ತೇನೆ. ನಾನು ಒಂದು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. "Section 64: Regulation of the erection of buildings." ಎಂದು ಏನಿದೆ, ಅದರಲ್ಲಿ ಗ್ರಾಮ ಪಂಚಾಯಿತಿ ಮೊಬೈಲ್ ಟವರ್ ಅಥವಾ ಜಾಹೀರಾತು ಫಲಕಗಳನ್ನು ಹಾಕಬೇಕಾದರೆ ಅನುಮತಿಯನ್ನು ತೆಗೆದುಕೊಳ್ಳಬೇಕು ಎಂದು ಇದೆ. ಇತ್ತೀಚಿನ ದಿನಗಳಲ್ಲಿ ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ wind power mills ಬರುತ್ತಿದೆ. ಪ್ರತಿಯೊಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 50-60-70 wind mills ಗಳನ್ನು ಹಾಕುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಈಗಾಗಲೇ ಗ್ರಾಮ ಪಂಚಾಯಿತಿಯವರು ಅನುಮತಿಯನ್ನು ತೆಗೆದುಕೊಳ್ಳಿ ಎಂದು ಹೇಳಿದರೆ ಅನುಮತಿಯನ್ನು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಇವತ್ತು ಸಾಕಷ್ಟು ಹಣವನ್ನು ಗಳಿಸುವಂತಹ ಎನರ್ಜಿ ಕಂಪನಿಗಳಾಗಿವೆ. ಅದಕ್ಕೆ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಆ wind mills ಗಳನ್ನು ಹಾಕಬೇಕಾದರೆ ಆಯಾಯ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಏನು ಬರುತ್ತವೆ, ಅದಕ್ಕೆ ಶುಲ್ಕವನ್ನು ನಿಗದಿ ಮಾಡಿ ಪ್ರತಿ ತಿಂಗಳು ಒಂದಿಷ್ಟು ಬಾಡಿಗೆ ಕೊಡುವಂತೆ ಮಾಡಿದರೆ ಆ ಗ್ರಾಮ ಪಂಚಾಯಿತಿಗ್ಗೂ ಕೂಡ ಹೆಚ್ಚಿನ ಕಂದಾಯ ಬರುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರ ಗಮನಕ್ಕೆ ತಂದು ಈ ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ.

**ಶ್ರೀ ಎಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೆ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು, ಮಾನ್ಯ ರಮೇಶ್ ಬಾಬು ರವರು, ಮಾನ್ಯ ಉಗ್ರಪ್ಪನವರು, ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಮಹತ್ವದ ಸಲಹೆಗಳನ್ನು ಕೊಟಿದ್ದಾರೆ. ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಪ್ರಶ್ನೆ ಕೇಳುವುದಕ್ಕಿಂತ ಹೆಚ್ಚು ಸಲಹೆಗಳನ್ನು ನನಗೆ ನೀಡಿದ್ದಾರೆ. ಅವರು taxation issue ದಲ್ಲಿ ಪಂಚಾಯಿತಿ ಟ್ಯಾಕ್ಸ್ ಲೆವಿ ಮಾಡಿದರೆ ಅದನ್ನು ಕೊಡುವುದಿಲ್ಲ, ಅದು ಕೊಡದಿದ್ದರೆ ಏನು ಮಾಡುತ್ತೀರಿ ಎಂದು ಪ್ರಶ್ನಿಸುವ ಮೂಲಕ ಆ ತೆರಿಗೆ ವಸೂಲಿ ಮಾಡತಕ್ಕಂಥ ಶಕ್ತಿ ಈ ಪಂಚಾಯಿತಿಗಳಿಗೆ ಬರಬೇಕು ಎನ್ನುವ ಸದುದ್ದೇಶದ ವಿಚಾರವನ್ನು ತಿಳಿಸಿದ್ದಾರೆ. ನಿಜ, ಬಹಳಷ್ಟು ಕಡೆ ದೊಡ್ಡ ಕಾರ್ಖಾನೆ, ದೊಡ್ಡ ಆದಾಯದ ಮೂಲ ಇದ್ದವರು, ಇವರೆಲ್ಲರೂ ಪಂಚಾಯಿತಿಗಳೆಂದರೆ ಲಘುವಾಗಿ ತೆಗೆದುಕೊಳ್ಳುವಂಥದ್ದನ್ನು ಮಾಡುತ್ತಾರೆ. Right from airport to our small towers. ನಾವೇನು ಕಾನೂನಿನಲ್ಲಿ ಕರ ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ, ಆ ಕರ ವಿಧಿಸುವಂತಹ ಸಂದರ್ಭದಲ್ಲಿ ಯಾರು ಆ ಪಂಚಾಯಿತಿ ಕರ ಕಟ್ಟುವುದರಲ್ಲಿ ಅನಾದರ, ಅಗೌರವ ತೋರಿಸುತ್ತಾರೆಯೋ ಅವರಿಗೆ ಕಾನೂನಾತ್ಮಕವಾಗಿರುವಂತಹ ಮುಂದಿನ ಹೆಜ್ಜೆ ಇಡುವುದಕ್ಕೆ ನಾವು ಅವಕಾಶ ಮಾಡಿಕೊಡಲೇಬೇಕು. ಅಷ್ಟು ಶಕ್ತಿಶಾಲಿಯಾಗಿರದಿದ್ದರೆ ಏನು ಮಾಡಬೇಕೆನ್ನುವುದರ ಬಗ್ಗೆ ನಾವು ವಿಚಾರ ಮಾಡುತ್ತೇವೆ. ಮಾನ್ಯ ಬಸವರಾಜ ಪಾಟೀಲ್ ಇಟಗಿಯವರು ಹೇಳಿದರು. ಈ wind mills ನವರು ಏನಿರುತ್ತಾರೆ, ಅವರು ತೆರಿಗೆ ಕಟ್ಟುವುದಿಲ್ಲ, ಅಂತಹ ಸಂದರ್ಭದಲ್ಲಿ ನೀವೇನು ಮಾಡುತ್ತೀರಿ ಎಂದು ಕೇಳಿದರು. ಅವರು ನಮ್ಮ ಸರ್ಕಾರದ ಕೆ.ಇ.ಬಿ. ಯವರ ಹತ್ತಿರ ಬರಬೇಕಲ್ಲವೆ? ಅವರ ಎಲ್ಲಾ ಪವರ್ should be transferred through Karnataka Power Transmission Corporation Limited only. ಆದ್ದರಿಂದ ಒಂದು ವೇಳೆ ಕರ ಹೆಚ್ಚು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾಕಿ ಉಳಿಯುವಂತಹ ಸಂದರ್ಭಗಳು ಬಂದರೆ, ಯಾವ ರೀತಿಯಾಗಿ ಲಗಾಮು ಹಾಕುವುದಕ್ಕೆ ಸಾಧ್ಯ ಎನ್ನುವುದನ್ನು ನಾನು ಇಂಧನ ಮಂತ್ರಿಗಳ ಜೊತೆಯಲ್ಲಿ, ಮಾನ್ಯ ಮುಖ್ಯಮಂತ್ರಿಯವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಎರಡನೆಯದು, ಈ ಸಂದರ್ಭದಲ್ಲಿ ಕೆಲವು ಬದಲಾವಣೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ರಮೇಶ್ ಬಾಬು ರವರು ತೆಗೆದು ಹಾಕತಕ್ಕಂಥದ್ದು ಸೆಕ್ಷನ್ 43(ಎ) ಪ್ರಕಾರ, ಸೆಕ್ಷನ್ 48 ರ ಪ್ರಕಾರ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡುವುದು, ಅದನ್ನು ಒಪ್ಪುವುದು, ಬಿಡುವುದು ಅದು ಆಯಿತು. ಆತನನ್ನು ತೆಗೆದುಹಾಕಲು ಬದ್ಧನಾಗಿರುತ್ತಾನೆ, ಹೇಗೆ ತೆಗೆದು ಹಾಕುತ್ತೀರಿ ಎನ್ನುವುದು ಸದಸ್ಯರೆಲ್ಲರ ಪ್ರಶ್ನೆಯಾಗಿದೆ. ನಾನು ಇಷ್ಟೇ ಹೇಳುವುದಕ್ಕೆ ಬಯಸುತ್ತೇನೆ, ಈಗ parent Act ನಲ್ಲಿ ರಾಜ್ಯ ಸರ್ಕಾರವೇ ಅವರನ್ನು ತೆಗೆದು ಹಾಕಬೇಕು. ತೆಗೆದು ಹಾಕಬೇಕಾದರೆ ಅದಕ್ಕೆ procedure ಇದೆ. ನಮ್ಮ ರೂಲ್ಸ್‌ನಲ್ಲೂ ಆ ರೀತಿಯ provisions ಇವೆ. ಆದ್ದರಿಂದ ತೆಗೆದು ಹಾಕುವುದಕ್ಕೆ ಆ ineligibility disqualify ಆದಾಗ ಹೇಗೆ ನಾವು ಆ ಸದಸ್ಯರನ್ನು, ಅಧ್ಯಕ್ಷರನ್ನು ತೆಗೆದು ಹಾಕಬಹುದು ಎನ್ನುವುದು ಸ್ಪಷ್ಟವಾಗಿರುವುದರಿಂದ ಅದೇನು ತೊಂದರೆಯಾಗುವುದಿಲ್ಲ.

(ಮುಂದು)

(896) 21.06.2017/ 5.00/ ಕೆಹೆಚ್/ವಿಕೆ

(ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಚ್.ಕೆ.ಪಾಟೀಲ್ (ಮುಂದು):-** ಮಾನ್ಯ ಸಭಾಪತಿಯವರೆ, ತಾವು ಇನ್ನು ಕೆಲವು ವಿಚಾರಗಳಿಗೆ ಸ್ಪಷ್ಟತೆ ಬೇಕೆಂದು ಪ್ರಸ್ತಾಪ ಮಾಡಿದ್ದೀರಿ. ಇದರಲ್ಲಿ ತಕ್ಷಣ ತಮಗೆ ಹೇಳುವುದಕ್ಕೆ ಸಾಧ್ಯವಾಗದೆ ಇರುವ ಒಂದು ಅಂಶವೆಂದರೆ, ಹಿರಿಯ ಸಿವಿಲ್ ನ್ಯಾಯಾಧೀಶರು ಎಲ್ಲ ಕಡೆಗಳಲ್ಲಿ ಇರುವುದಿಲ್ಲ. ಕಿರಿಯ ಸಿವಿಲ್ ನ್ಯಾಯಧೀಶರು ಮಾತ್ರ ಇರುತ್ತಾರೆ. ಅದಕ್ಕೆ ನೀವು ಏನು ಮಾಡುತ್ತೀರಿ? ಎಂಬ ಮಾತನ್ನು ಪ್ರಸ್ತಾಪ ಮಾಡಿದ್ದೀರಿ. ಒಂದು ವೇಳೆ ಆ ರೀತಿ ಇದ್ದರೂ ಸಹ ಹಿರಿಯ ಸಿವಿಲ್ ನ್ಯಾಯಾಧೀಶರ ಅಧಿಕಾರಿಗಳಲ್ಲೂ ಇದೇ ನ್ಯಾಯಾಲಯದಲ್ಲಿರುತ್ತಾರೆಂದು ಬಹುತೇಕ ಕಾನೂನಿನಲ್ಲಿ ಇದ್ದರೂ ಇರಬಹುದು. ಆದರೂ ಅದನ್ನು ಮತ್ತೊಮ್ಮೆ ಕಾನೂನು ಇಲಾಖೆಯವರ ಜೊತೆಗೆ, Parliamentary Affairs department ನವರ ಜೊತೆಗೆ ಚರ್ಚೆಯನ್ನು ಮಾಡುತ್ತೇನೆ. ಹಾಗೇನಾದರೂ . . . .

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಕಿರಿಯ ಸಿವಿಲ್ ನ್ಯಾಯಾಧೀಶರಿಗೆ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರಿಗೆ pecuniary jurisdiction ಮೇಲೆ ಡಿವಿಜನ್‌ಗಳನ್ನು ಮಾಡಿದ್ದಾರೆ. ಇದು ಒಂದು ವಿಷಯ. ಕಿರಿಯ ಸಿವಿಲ್ ನ್ಯಾಯಾಧೀಶರು ಎಂದರೆ ಮೊದಲು ನಾವು ಯಾರನ್ನು *Munsif cum* Judicial *Magistrate* ಎಂದು ಕರೆಯುತ್ತಿದ್ದೆವು, ಅವರನ್ನು ಕಿರಿಯ ಸಿವಿಲ್ ನ್ಯಾಯಾಧೀಶರು ಎಂದು ಹೇಳುತ್ತೇವೆ. ಹಾಗಾಗಿ ಹಿರಿಯ ಸಿವಿಲ್ ನ್ಯಾಯಾಧೀಶರುಗಳೆಲ್ಲ ಬಹುತೇಕವಾಗಿ sub division level ನಲ್ಲಿ ಇರುವಂತಹವರು, ಆದರೆ ಜಿಲ್ಲಾ ಪಂಚಾಯತಿಯನ್ನು district level ನಲ್ಲಿರುವುದನ್ನು ತೆಗೆದು sub division level ನಲ್ಲಿ ಏಕೆ ತೆಗೆದುಕೊಂಡು ಹೋಗುತ್ತಿದ್ದಾರೆ ಎಂಬುದು ನನಗೆ ಈಗಲೂ ಅರ್ಥವಾಗುತ್ತಿಲ್ಲ.

**ಶ್ರೀ ಎಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೆ, ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳು ಕಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳ ವ್ಯಾಪ್ತಿಗೆ ಬರುತ್ತವೆ. ಜಿಲ್ಲಾ ಪಂಚಾಯಿತಿಗಳು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳ ವ್ಯಾಪ್ತಿಗೆ ಬರುತ್ತವೆ. ನಾನು ಇದರ ಬಗ್ಗೆ ಸ್ಪಷ್ಟಪಡಿಸಿಕೊಳ್ಳುತ್ತೇನೆ. ಹಾಗೇನಾದರೂ ನಿಯಮದಲ್ಲಿ ಬದಲಾವಣೆ ಮಾಡಿಕೊಳ್ಳುವ ಹಾಗಿದ್ದರೆ ಅದನ್ನು ಬದಲಾವಣೆ ಮಾಡಿಕೊಳ್ಳುತ್ತೇವೆ. ಇನ್ನೊಂದು ಲೆಕ್ಕ ಪರಿಶೋಧನೆಯು ನಿಗದಿತ ವೇಳೆಗೆ ಆಗಬೇಕೆಂದು ಪ್ರಸ್ತಾಪ ಮಾಡಿದ್ದೀರಿ. ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯತಿಗಳ ಲೆಕ್ಕಪರಿಶೋಧನೆಯು ಸಂಪೂರ್ಣವಾಗಿ ಆ ವರ್ಷದಲ್ಲಿ ಆಗಬೇಕು ಹಾಗೂ ಅವುಗಳ audit report ಗಳನ್ನು Legislature ಗಳಲ್ಲೂ ಸಹ ಇಡಬೇಕೆಂದು ಹೇಳಿ, ಈಗಾಗಲೇ ನಮ್ಮ ಕಾನೂನಿನಲ್ಲಿ ಈ ಪ್ರಸ್ತಾವನೆಯನ್ನು ಮಾಡಿರುವುದರಿಂದ, ಇನ್ನು ಮುಂದೆ ನಿಗದಿತ ವೇಳೆಯಲ್ಲಿ ಲೆಕ್ಕಪರಿಶೋಧನೆಯು ಸಾಧ್ಯವಾಗುತ್ತದೆಂದು ನಾನು ಭಾವಿಸಿಕೊಂಡಿದ್ದೇನೆ. ಮಾನ್ಯ ಸದಸ್ಯರು ಇದಲ್ಲದೆ ಹಲವಾರು ಸಲಹೆಗಳನ್ನು ಕೊಟ್ಟಿದ್ದಾರೆ. ಆ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಸಲ ಈ ರೀತಿಯಲ್ಲಿರುವ ತಿದ್ದುಪಡಿಯನ್ನು ತರುವಂತಹ ಸಂದರ್ಭದಲ್ಲಿ ತಿದ್ದುಪಡಿಯನ್ನು ತರುವುದಕ್ಕೆ ಸರ್ಕಾರವು ಉತ್ಸುಕವಾಗಿದೆ ಎಂದು ಹೇಳಿ ಈ ವಿಧೇಯಕವನ್ನು ಪೂರ್ಣವಾಗಿ ಓದಬೇಕೆಂದು ಹೇಳಿ ನಾನು ಸದನವನ್ನು ಕೇಳಿಕೊಳ್ಳುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ಸಣ್ಣ ವಿನಂತಿಯೇನೆಂದರೆ, ಬಹುಶಃ ಅವರು ಚೀಟಿಯನ್ನು ಕಳುಹಿಸಿದ್ದಾರೆ. ಆ ಆಕ್ಟ್‌ನಲ್ಲಿ ಹಾಗೆ ಇಲ್ಲ. Section 2. (9A): ಕಿರಿಯ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಿರಿಯ ಸಿವಿಲ್ ನ್ಯಾಯಾಧೀಶರ ಮಧ್ಯೆ ಯಾವುದೇ ರೀತಿಯ ವ್ಯತ್ಯಾಸವಿಲ್ಲ. ಒಬ್ಬರ ಮುಂದೆಯೇ ಬರುವುದು. ಆದ್ದರಿಂದ ದಯವಿಟ್ಟು ಅದನ್ನು ಗಮನಿಸಿ. ***"ಗೊತ್ತುಪಡಿಸಿದ ನ್ಯಾಯಾಲಯ" ಎಂದರೆ, ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳಿಗೆ ಸಂಬಂಧಿಸಿದ ಚುನಾವಣಾ ವಿವಾದಗಳ ಅಧಿವಿಚಾರಣೆಯನ್ನು ನಡೆಸಲು ಗೊತ್ತುಪಡಿಸಿದ ಅಧಿಕಾರ ವ್ಯಾಪ್ತಿಯುಳ್ಳ ಮತ್ತು ಪಂಚಾಯತ್ ಪ್ರದೇಶವು ಅಥವಾ ಪಂಚಾಯತ್ ಪ್ರದೇಶದ ಬಹಳಷ್ಟು ಭಾಗವು ಅನುಕ್ರಮವಾಗಿ ಯಾವ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತದೋ, ಆ ಅಧಿಕಾರ ವ್ಯಾಪ್ತಿಯುಳ್ಳ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ."*** ಹಾಗಾಗಿ ಕಿರಿಯ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯವೆಂದು ಇಲ್ಲವೇ ಇಲ್ಲ. ಮಾನ್ಯ ಸಚಿವರು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳು ಬೇರೆ ಇರುವುದೆಂದು ಹೇಳಿದರು. ಇದನ್ನು (9A) ಗೆ amended ಎಂದರೆ ಪೂರ್ತಿಯಾಗಬೇಕಾಗುತ್ತದೆ.

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಯಲ್ಲೂ ಕೂಡ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯವನ್ನು ತಂದಿದ್ದಾರೆ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ವಿ.ಎಸ್. ಉಗ್ರಪ್ಪನವರು ಮತ್ತು ಮಾನ್ಯ ಐವನ್ ಡಿ'ಸೋಜಾ ರವರು ಎತ್ತಿರುವಂತಹ ವಿಷಯವೇನಿದೆ. ಇದು ಸೆಕ್ಷನ್ 2. (9ಎ): ರಲ್ಲಿ ತಿಳಿಸಿರುವಂತೆ "ಗೊತ್ತುಪಡಿಸಿದ ನ್ಯಾಯಾಲಯ" ಎಂದರೆ, I will just read out where it really requires the amendment. ಗ್ರಾಮ ಪಂಚಾಯತಿಗಳಿಗೆ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದ ಚುನಾವಣಾ ವಿವಾದಗಳನ್ನು ಅಧಿವಿಚಾರಣೆಯನ್ನು ನಡೆಸಲು ಅಧಿಕಾರ ವ್ಯಾಪ್ತಿಯುಳ್ಳ ಗೊತ್ತುಪಡಿಸಿದ, ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಪಂಚಾಯತ್ ಪ್ರದೇಶವು ಅಥವಾ ಪಂಚಾಯತ್ ಪ್ರದೇಶದ ಬಹಳಷ್ಟು ಭಾಗವು ಯಾವ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಗೆ ಬರುವವೋ ಆ ಜಿಲ್ಲಾ ಪಂಚಾಯತ್‌ಗಳು ಅನುಕ್ರಮವಾಗಿ ಯಾವ ಜಿಲ್ಲಾ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತವೋ, ಅಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಪ್ರಶ್ನೆ ಬರುತ್ತದೆ. ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಎಂಬ ಬಗ್ಗೆ ಏನು ತಪ್ಪಾಗಿದೆ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಈಗಿನ amended Act ನಲ್ಲಿ "ಗೊತ್ತುಪಡಿಸಿದ ನ್ಯಾಯಾಲಯ" ಎನ್ನುವುದನ್ನು redefine ಮಾಡುತ್ತಿದ್ದಾರೆ. Redefine ಮಾಡಿದಾಗ ಹಳೆಯ provision ಏನಿದೆ, ಅದನ್ನು relay ಆಗುವುದಕ್ಕೆ ಆಗುವುದಿಲ್ಲ. That has to be....

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, I am changing it with....

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರೆ, ನೀವು ಬದಲಾವಣೆ ಮಾಡಿರುವುದು ಪುಟ ಸಂಖ್ಯೆ:1 ರಲ್ಲಿದೆ ನೋಡಿ. ಇರುವಂತಹದ್ದು ಪುಟ ಸಂಖ್ಯೆ:9 ರಲ್ಲಿದೆ. ಪುಟ ಸಂಖ್ಯೆಯಲ್ಲಿರುವಂತಹ District Judge ಗೆ ಸಂಬಂಧಪಟ್ಟ Section ಅನ್ನು ಈಗ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಮಾನ್ಯ ಸಚಿವರು, ನ್ಯಾಯಾಲಯ ಯಾವುದೆಂದರೆ redefine ಮಾಡುತ್ತಿದ್ದಾರೆ.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಶ್ರೀ ವಿ.ಎಸ್. ಉಗ್ರಪ್ಪನವರೆ, ತಾವು ದಯಮಾಡಿ ಪುಟ ಸಂಖ್ಯೆ.9 ನಲ್ಲಿರುವುದನ್ನು ಪೂರ್ಣವಾಗಿ ನೋಡಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರೆ, ಪುಟ ಸಂಖ್ಯೆ.9 ನಲ್ಲಿರುವುದನ್ನು ನಾನು ಓದಿ ಆಯಿತು.

**ಶ್ರೀ ಎಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೆ, ಮಾನ್ಯ ವಿ.ಎಸ್. ಉಗ್ರಪ್ಪನವರು, ಯಾವ ಜಿಲ್ಲಾ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತವೋ ಆ ಜಿಲ್ಲಾ ಪಂಚಾಯತ್‌ಗಳಿಗೆ ಸಂಬಂಧಿಸಿದ ಚುನಾವಣಾ ವಿವಾದಗಳ ಅಧಿವಿಚಾರಣೆಗಾಗಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

**ಶ್ರೀ ವಿ.ಎಸ್. ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಈಗ definition ಅನ್ನು ಬದಲಾಯಿಸುತ್ತಿದ್ದಾರೆ. "ಗೊತ್ತುಪಡಿಸಿದ ನ್ಯಾಯಾಲಯ" ಎಂದರೆ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯ ಎಂದು ಮೊದಲು ಈ ರೀತಿಯಲ್ಲಿತ್ತು. ಈಗ ಇವರು ಆ definition ಅನ್ನು ಬದಲಾಯಿಸಿ, ಹೊಸ ವ್ಯಾಖ್ಯಾನವನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡುತ್ತಿದ್ದಾರೆ. ಅದರ ಪ್ರಕಾರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯಗಳು ಮಾತ್ರ. ಅದನ್ನು ತಾವು ದಯವಿಟ್ಟು ನೋಡಿ.

**ಶ್ರೀ ರಮೇಶ್ ಬಾಬು (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಏನು ಓದಿದರು, ಅದು ಸರಿಯಾಗಿದೆ. ಹಳೆಯ ಆಕ್ಟ್ ಅನ್ನು ತೆಗೆದುಕೊಳ್ಳುತ್ತಿರುವುದು, ಅಧಿಕಾರಿಗಳು ಸಚಿವರಿಗೆ ಏನು ಮಾಹಿತಿಯನ್ನು ಕೊಟ್ಟರೋ, ಅದು existing old law. ಈಗ ಮಾನ್ಯ ಸಚಿವರು ಹಿರಿಯ ಸಿವಿಲ್ ನ್ಯಾಯಾಲಯದ ಬಗ್ಗೆ ತಿದ್ದುಪಡಿ ತಂದಿದ್ದಾರೆ. ಅದರಲ್ಲಿ ಸ್ವಲ್ಪ ಸ್ಪಷ್ಟತೆಯಿಲ್ಲ. ಅದನ್ನು ಹಿರಿಯ ಸಿವಿಲ್ ನ್ಯಾಯಾಲಯ ಅಥವಾ ಕಿರಿಯ ಸಿವಿಲ್ ನ್ಯಾಯಾಲಯವೆಂದು ಈ ರೀತಿ ಮಾಡಿಕೊಳ್ಳಬಹುದು. ನಿಯಮಾವಳಿಗಳಲ್ಲಿ ಅಥವಾ rules frame ಮಾಡಿಕೊಳ್ಳಬಹುದು.

**ಶ್ರೀ ಎಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಇದರಲ್ಲಿ ambiguity ಬರುವುದಾದರೆ, ಅದನ್ನು ನಿಯಮಾವಳಿಯಲ್ಲಿ ಸರಿಪಡಿಸಿಕೊಳ್ಳುತ್ತೇವೆ. ಇಷ್ಟು ಮಾತನ್ನು ಹೇಳಿ, ತಾವು ದಯಮಾಡಿ ಈ ವಿಧೇಯಕವನ್ನು ಅನುಮೋದನೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು):–** ಮಾನ್ಯ ಸಭಾಪತಿಯವರೆ, ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಜಿಲ್ಲಾ ಪಂಚಾಯಿತಿ ಚುನಾವಣೆಗಳು, ತಾಲ್ಲೂಕು ಪಂಚಾಯಿತಿ ಚುನಾವಣೆಗಳು ನಡೆಯುತ್ತವೆ.

**ಉಪಸಭಾಪತಿಯವರು:–** ಶ್ರೀಮತಿ ಉಮಾಶ್ರೀಯವರೆ, ನೀವು ಏಕೆ ಮಾತನಾಡುತ್ತಿದ್ದೀರಿ? ಈಗ ವಿಧೇಯಕದ ಮೇಲೆ ಚರ್ಚೆಯಾಗುತ್ತಿರುವುದು.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಭಾಪತಿಯವರೆ, ಅಂಗನವಾಡಿ ಕಾರ್ಯಕರ್ತೆಯರ ಬಗ್ಗೆ ಹೇಳಬೇಕು. ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆಯೇ ನಾನು ಹೇಳುತ್ತಿರುವುದು.

**ಶ್ರೀ ಎಚ್.ಕೆ.ಪಾಟೀಲ್:–** ಮಾನ್ಯ ಸಭಾಪತಿಯವರೆ, ಆಶಾ ಕಾರ್ಯಕರ್ತೆಯರ ಬಗ್ಗೆ ಮಾನ್ಯ ಕೋಟ ಶ್ರೀನಿವಾಸ ಪೂಜಾರಿ ಯವರು ಕೇಳಿದರು. ಅದರ ಬಗ್ಗೆ ಮಾನ್ಯ ಸಚಿವರು ವಿವರಣೆಯನ್ನು ಕೊಡುತ್ತಿದ್ದಾರೆ.

**ಶ್ರೀಮತಿ ಉಮಾಶ್ರೀ:–** ಮಾನ್ಯ ಸಭಾಪತಿಯವರೆ, ಅಂಗನವಾಡಿ ಕಾರ್ಯಕರ್ತೆಯರು ಸಹ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ಆದರೆ ಅವರು ಸ್ಪರ್ಧೆಯಲ್ಲಿ defeat ಆದ ನಂತರ ಆ ಹುದ್ದೆಗಳಿಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ವಾಪಸ್ಸು ಬರುವುದಿಲ್ಲ. ಅವರ ಜೀವನಕ್ಕೆ ತೊಂದರೆಯಾಗುತ್ತಿದೆ. ಅದರ ಬಗ್ಗೆ ಸರ್ಕಾರ ಯಾವ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತದೆ? ನಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳಬೇಕಾದರೆ ಸುಮಾರು 80 ರಿಂದ 82 ಜನ ಅಂಗನವಾಡಿ ಕಾರ್ಯಕರ್ತೆಯರು ಚುನಾವಣೆಗಳಲ್ಲಿ ಸ್ಪರ್ಧಿಸಿದ್ದರು. ಅವರ guidelines ನಲ್ಲಿ ಅವಕಾಶವಿತ್ತು. 15 ದಿವಸಗಳೊಳಗೆ ಅಂಗನವಾಡಿ ಕಾರ್ಯಕರ್ತೆಯರಾಗಿ ಅಥವಾ ಸದಸ್ಯರಾಗಿ ಮುಂದುವರೆಯಬೇಕು. ಅವರಿಗೆ ಆಯ್ಕೆ ಮಾಡಿಕೊಳ್ಳುವುದಕ್ಕೆ ಅವಕಾಶವಿತ್ತು. ಅವರು ಆಯ್ಕೆಯನ್ನು ಮಾಡಿಕೊಂಡಿರಲಿಲ್ಲ. ಹಾಗಾಗಿ ಅವರಿಗೆ ತೊಂದರೆಯಾಗಿತ್ತು. ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರದ guidelines ಪ್ರಕಾರ ಅವರನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ಚುನಾವಣೆಯ ಫಲಿತಾಂಶ ಬಂದ ಮೇಲೆ ಅವರಿಗೆ ಅವಕಾಶವಿತ್ತು. ಅವರೆಲ್ಲ ನ್ಯಾಯಲಯಕ್ಕೂ ಸಹ ಹೋದರು. ಆದರೆ ಯಾವುದೇ ರೀತಿಯ ಅವಕಾಶವಾಗಲಿಲ್ಲ. ಈ ಬಾರಿ ಘನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದ ಕ್ಯಾಬಿನೇಟ್‌ಗೆ ತೆಗೆದುಕೊಂಡು ಹೋದಾಗ ಈಗ age relaxation ಸಹ ಇಲ್ಲ. ಮೊದಲು 45 ವರ್ಷದವರೆಗೂ ಇತ್ತು. ಈಗ 35 ವರ್ಷಕ್ಕೆ ಆಗಿದೆ. ಅದನ್ನೆಲ್ಲ ಮಾಡಿ ಅವರನ್ನು ಹುದ್ದೆಗೆ ವಾಪಸ್ಸು ತೆಗೆದುಕೊಳ್ಳುವಂತಹ ಕೆಲಸವನ್ನು ಮಾಡಿದ್ದಾರೆಂಬ ವಿಷಯವನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, Office of Profit ವಿಚಾರಕ್ಕೆ ಸಂಬಂಧಿಸಿದಂತೆ ಶ್ರೀಮತಿ ಇಂದಿರಾ ಗಾಂಧಿ ವಿರುದ್ಧ ಶ್ರೀ ರಾಜ ನಾರಾಯಣ ರವರ ಪ್ರಕರಣದಲ್ಲಿ 1975 ರಲ್ಲಿ Justice Sinha ರವರು ನೀಡಿರುವ judgement ಇದೆ. ಈ ರೀತಿ ಅನೇಕ judgements ಇವೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ಉದ್ಯೋಗದಲ್ಲಿ ಇದ್ದರೆ Universities and Public Undertakings ನಲ್ಲಿರುವಂತಹವರಿಗೆ Office of Profit ನಲ್ಲಿ ಬರುವಂತಹ ನಮ್ಮ ಸರ್ಕಾರದ ನಿಧಿಯಿಂದ ಅವರಿಗೆ ಸಂಬಳ ಹೋಗುತ್ತದೆ. ಅವರೆಲ್ಲರೂ ಸಹ Office of Profit ನಲ್ಲಿ ಬರುತ್ತಾರೆಂದು ಹೇಳಿ, ಸಂವಿಧಾನದ ಆಶಯಗಳ ರೀತ್ಯಾ ಈ ದಿಕ್ಕಿನಲ್ಲಿ amendment ಆಗಬೇಕಾಗುತ್ತದೆ.

**ಸಭಾಪತಿಯವರು:– ಪ್ರಸ್ತಾವ ಏನೆಂದರೆ;**

**"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017 ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 18 ರವರೆಗೆ**

**ಸಭಾಪತಿಯವರು:–** "ಖಂಡ 2 ರಿಂದ 18 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 18 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:– ಪ್ರಸ್ತಾವ ಏನೆಂದರೆ;**

**"ಮೊದನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–** ಮಾನ್ಯ ಸಭಾಪತಿಯವರೆ, "ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017 ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:– ಪ್ರಸ್ತಾವ ಏನೆಂದರೆ;**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017 ರ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಮಸೂದೆಗೆ ಒಪ್ಪಿಗೆ ನೀಡಲಾಯಿತು.**

(ಮುಂದು)

897/21-06-2017/5-10/bkp-bns

**10. ಸಭೆಯ ಮುಂದಿಡಲಾದ ಕಾಗದ ಪತ್ರಗಳು**

**ಕಾರ್ಯದರ್ಶಿ(ಕವಿಪ):–** ಸನ್ಮಾನ್ಯ ಉಪಸಭಾಪತಿಯವರ ಅನುಮತಿಯೊಂದಿಗೆ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

1. ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2017
2. ಕರ್ನಾಟಕ ಧನವಿನಿಯೋಗ (ಸಂಖ್ಯೆ–3) ವಿಧೇಯಕ 2017
3. ಕರ್ನಾಟಕ ಸ್ಟ್ಯಾಂಪ್ 2ನೇ (ತಿದ್ದುಪಡಿ) ವಿಧೇಯಕ, 2017

**11. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, 2017-18ಕ್ಕೆ ಮಾರ್ಚ್ ತಿಂಗಳಿನಲ್ಲಿ ಆಯವ್ಯಯವನ್ನು ಮಂಡಿಸಿದ್ದೇವೆ. ಮಂಡಿಸಿದಂತಹ ಸಮಯದಲ್ಲಿ ಅದರ ಮೇಲೆ general discussion ಆಗಿದೆ. ಆ ಮನೆಯಲ್ಲೂ ಆಗಿದೆ, ಈ ಮನೆಯಲ್ಲೂ ಆಗಿದೆ. ಅಲ್ಲಿ demands ಗಳ ಮೇಲೆ ಚರ್ಚೆ ಆಗಿದೆ. ಇಲ್ಲಿ demands ಗಳ ಮೇಲೆ ಚರ್ಚೆಯಾಗುವುದಿಲ್ಲ. ಅಲ್ಲಿ ಚರ್ಚೆಯಾಗಿ ಅಂಗೀಕಾರ ರೂಪದಲ್ಲಿರತಕ್ಕಂತಹ ಈ ಧನವಿನಿಯೋಗ ಮಸೂದೆಗಳೆರಡೂ ಕೂಡ ಇಲ್ಲಿಗೆ ಬಂದಿವೆ. ನಾನು ಬಜೆಟ್ ಮಂಡಿಸಿದಂತಹ ಸಂದರ್ಭದಲ್ಲಿ ಇಡೀ ಬಜೆಟ್‌ನಲ್ಲಿ ನಾವು ಎಷ್ಟು ಹಣವನ್ನು ವೆಚ್ಚ ಮಾಡುತ್ತೇವೆ, ಅಷ್ಟು ಹಣಕ್ಕೂ ನಾವು ಸದನದಲ್ಲಿ ಅಂಗೀಕಾರ ಪಡೆದುಕೊಂಡಿಲ್ಲ. ಎರಡು ಸದನಗಳಲ್ಲೂ ಪಡೆದುಕೊಂಡಿರತಕ್ಕಂತಹದ್ದು ಮೂರು ತಿಂಗಳಿಗೆ ಲೇಖಾನುದಾನ ಪಡೆದುಕೊಂಡಿರುವಂತಹದ್ದಾಗಿದೆ, ಜೂನ್ ಕೊನೆಯವರೆಗೆ. ಈಗ ಜೂನ್ ತಿಂಗಳು ಸಹ ಮುಗಿಯುತ್ತಾ ಬಂದಿದೆ. ಆದುದರಿಂದ, ಉಳಿದ ಅವಧಿಗೆ ಅಂದರೆ, ಇನ್ನು 9 ತಿಂಗಳುಗಳು ಮಾರ್ಚ್ 31, 2018ಕ್ಕೆ ಆರ್ಥಿಕ ವರ್ಷ ಮುಕ್ತಾಯವಾಗುತ್ತದೆ. ಆ ಅವಧಿಗೆ ಬೇರೆ ಬೇರೆ ಇಲಾಖೆಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡುತ್ತೇವೆ ಎನ್ನುವ ಬೇಡಿಕೆಗಳನ್ನಿಟ್ಟಿದ್ದೇವೆ. ಎಷ್ಟೆಷ್ಟು ಹಣವನ್ನು allocation ಮಾಡಿದ್ದೇವೆ, ಅದಕ್ಕೆ ಒಪ್ಪಿಗೆಯನ್ನು ಕೊಡಬೇಕು. ಎರಡು ಸದನಗಳು ಒಪ್ಪಿಗೆ ಕೊಡದೇ ಹೋದರೆ ನಾವು ಹಣವನ್ನು ಖರ್ಚು ಮಾಡಲಿಕ್ಕೆ ಬರುವುದಿಲ್ಲ. ಆದ್ದರಿಂದ, ಜೂನ್ 30ನೇ ತಾರೀಖಿನೊಳಗಡೆ ಅನುಮೋದನೆ ಆಗಬೇಕು. ಅದಕ್ಕೆ ಈ ಧನವಿನಿಯೋಗ ಮಸೂದೆಯನ್ನು ತಂದಿರುವುದಾಗಿದೆ. ಒಟ್ಟಾರೆ, 2017-18ಕ್ಕೆ ಬಜೆಟ್‌ನಲ್ಲಿ ಒಟ್ಟು ವೆಚ್ಚ 1,86,561 ಕೋಟಿ ರೂಪಾಯಿಗಳು. ಕಳೆದ ವರ್ಷ ಅದು 1,63,419 ಕೋಟಿ ರೂಪಾಯಿಗಳು ಇತ್ತು. ಕಳೆದ ವರ್ಷಕ್ಕಿಂತ ಈ ವರ್ಷ ಒಟ್ಟು ಬಜೆಟ್ ಗಾತ್ರದಲ್ಲಿ 14.16 ರಷ್ಟು ಬೆಳವಣಿಗೆಯಾಗಿದೆ. ಅದಕ್ಕೆ ಎಲ್ಲರೂ ಒಪ್ಪಿಗೆಯನ್ನು ಕೊಡಬೇಕು.

ಮಾನ್ಯ ಸಭಾಪತಿಯವರೆ, ಮುಖ್ಯವಾಗಿ ನಾನು ಹಿಂದೆಯೂ ಕೂಡ ಹೇಳಿದ್ದೇನೆ. ಈ ವರ್ಷದ ಆಯವ್ಯಯದ ಬಗ್ಗೆ ಬಹಳಷ್ಟು ಜನರು ಮೆಚ್ಚುಗೆ ವ್ಯಕ್ತ ಮಾಡಿದ್ದಾರೆ. ಮಾಧ್ಯಮದವರು ಬಹಳಷ್ಟು ಜನರು, ಅರ್ಥಶಾಸ್ತ್ರಜ್ಞರು ಬಹಳಷ್ಟು ಜನರು, ಮತ್ತೆ electronic media ದವರು ಸೇರಿದಂತೆ ಎಲ್ಲರೂ ಕೂಡ ಬಹಳ ಮೆಚ್ಚುಗೆಯನ್ನು ವ್ಯಕ್ತ ಮಾಡಿದ್ದಾರೆ. ವಿರೋಧ ಪಕ್ಷದವರು ಸ್ವಾಭಾವಿಕವಾಗಿ ಮೆಚ್ಚುಗೆಯನ್ನು ವ್ಯಕ್ತ ಪಡಿಸುವುದಿಲ್ಲ. ಏಕೆಂದರೆ, ಅವರು ವಿರೋಧ ಮಾಡಬೇಕಲ್ಲವೇ? ಅದಕ್ಕೋಸ್ಕರವಾಗಿ ಅವರು ಮೆಚ್ಚುಗೆ ವ್ಯಕ್ತ ಮಾಡುವುದಿಲ್ಲ. ಆದರೆ, ಸಾರ್ವಜನಿಕ ಪ್ರತಿಕ್ರಿಯೆ ಏನಿದೆ ಎಂದರೆ, ಈ ವರ್ಷದ ಆಯವ್ಯಯ ಬಹಳ ಜನಪರವಾಗಿದೆ. ಬೆಳವಣಿಗೆಗೆ ಪೂರಕವಾಗಿದೆ. ಎಲ್ಲಾ ವರ್ಗದ ಜನರಿಗೆ ಇವತ್ತು ಆರ್ಥಿಕ ಶಕ್ತಿಯನ್ನು ತುಂಬುವಂತಹ ರೀತಿಯಲ್ಲಿ ಇದೆ ಎಂದು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅದಕ್ಕೆ ನಾವು inclusive growth ಅದು ಈ ನಮ್ಮ ಬಜೆಟ್‌ನಲ್ಲಿ ಇರುವಂತಹ ಮುಖ್ಯ ಉದ್ದೇಶ. ಈಗ ನಾವು "ಸಬ್‌ಕಾ ಸಾತ್, ಸಬ್‌ಕಾ ವಿಕಾಸ್" ಎಂದು ಹೇಳಿದಾಗ ಅದು "ಸಬ್‌ಕಾ ಸಾತ್ ಆಗಬೇಕು ಸಬ್‌ಕಾ ವಿಕಾಸ್" ಆಗಬೇಕು. "ಸಬ್‌ಕಾ ಸಾತ್, ಸಬ್‌ಕಾ ವಿಕಾಸ್" ಎಂದು ಹೇಳಿ ಕೆಲವುಗಳನ್ನು ಬಿಟ್ಟು ಬಿಡುವುದಲ್ಲ. ಅದು "ಸಬ್‌ಕಾ ಸಾತ್, ಸಬ್‌ಕಾ ವಿಕಾಸ್" ಆಗುವುದಿಲ್ಲ. "ಸಬ್‌ಕಾ ಸಾತ್, ಸಬ್‌ಕಾ ವಿಕಾಸ್" ಆಗಬೇಕಾದರೆ ಎಲ್ಲರನ್ನೂ ಒಳಗೊಂಡಂತಹ, ಸಮಾಜದಲ್ಲಿರುವಂತಹ ಎಲ್ಲಾ ಧರ್ಮದವರು, ಎಲ್ಲಾ ಜಾತಿಯ ಬಡವರು, ಎಲ್ಲರನ್ನೂ ಒಳಗೊಂಡಂತೆ ಬೆಳವಣಿಗೆಯಾಗಬೇಕು. ಅವರಿಗೆ ಆರ್ಥಿಕ ಶಕ್ತಿಯನ್ನು ತುಂಬತಕ್ಕಂತಹ, ಸಾಮಾಜಿಕ ಶಕ್ತಿಯನ್ನು ತುಂಬತಕ್ಕಂತಹ ಕೆಲಸವಾಗಬೇಕು. ಅದರಲ್ಲಿ ನಂಬಿಕೆಯನ್ನಿಟ್ಟುಕೊಂಡು ನಮ್ಮ ಸರ್ಕಾರ ಕಳೆದ 4 ವರ್ಷಗಳಿಂದ ಕೆಲಸ ಮಾಡುತ್ತಿದೆ. ಈ 4 ವರ್ಷಗಳಲ್ಲಿ ಜನರು ನಮಗೆ ಶಭಾಷ್‌ಗಿರಿಯನ್ನು ಸಹ ಕೊಟ್ಟಿದ್ದಾರೆ. ಬಹಳ ಮುಖ್ಯವಾಗಿ ಕೃಷಿ, ಪಶು ಸಂಗೋಪನೆ, ಇಂಧನ, ನೀರಾವರಿ, ಸಮಾಜ ಕಲ್ಯಾಣ, ಕುಡಿಯುವ ನೀರು, ಗ್ರಾಮೀಣಾಭಿವೃದ್ಧಿ, ಇವುಗಳು ನಮ್ಮ ಆದ್ಯತಾ ವಲಯಗಳು. ಅದಕ್ಕೆ ಹೆಚ್ಚು ಒತ್ತು ಕೊಡುವಂತಹ ಕೆಲಸಗಳನ್ನು ನಾವು ಮಾಡಿದ್ದೇವೆ. ಕೃಷಿ ವಲಯಕ್ಕೆ, ಕೃಷಿ, ಪಶುಸಂಗೋಪನೆ, ಸಹಕಾರ, ತೋಟಗಾರಿಕೆ, ಕ್ಷೀರಧಾರೆ, ಬೆಳೆವಿಮೆ ಇವುಗಳಿಗೆ ಮಾತ್ರವೇ ನಾವು ಸುಮಾರು 45 ಸಾವಿರ ಕೋಟಿ ರೂಪಾಯಿಗಳಷ್ಟು ಅನುದಾನವನ್ನಿಟ್ಟಿದ್ದೇವೆ. ನಾವು ಬಂದ ಮೇಲೆ ಕೃಷಿಗೆ ಹೆಚ್ಚು ಒತ್ತು ಕೊಟ್ಟಿದ್ದೇವೆ.

ಮಾನ್ಯ ಸಭಾಪತಿಯವರೆ, ಇತ್ತೀಚಿನ ದಿನಗಳಲ್ಲಿ ತಾವು ಸಹ ಗಮನಿಸಿದ್ದೀರಿ. ಮಹಾರಾಷ್ಟ್ರದಲ್ಲಿ ಮತ್ತೆ, ಮಧ್ಯಪ್ರದೇಶದಲ್ಲಿ ರೈತರು ದೊಡ್ಡ ಹೋರಾಟ ಮಾಡಿದರು.

**ಮುಂದು. .**

(898) 21.06.2017 SPR-BNS 5.20

**(ಉಪಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿದ್ಧರಾಮಯ್ಯ(ಮುಂದು):–**

ಮೊದಲನೆಯದಾಗಿ ಅವರಿಗೆ ನ್ಯಾಯಯುತವಾದ ಬೆಲೆಯನ್ನು ಕೊಡಬೇಕು ಹಾಗೂ ಎರಡನೆಯದಾಗಿ ಅವರಿಗಿರುವ ಸಾಲವನ್ನು ಮನ್ನಾ ಮಾಡಬೇಕೆಂಬುದಾಗಿ ಬೇಡಿಕೆ ಇಟ್ಟಿದ್ದಾರೆ. ನಾವು ಅವರ ಜೊತೆಗೆ ಇದ್ದೇವೆ ಎಂಬ ಭಾವನೆ ನಮ್ಮ ರಾಜ್ಯದಲ್ಲಿನ ರೈತರಿಗೆ ಇದೆ. ನಮ್ಮ ಸರ್ಕಾರ ರೈತರ ಜೊತೆಗೆ ಇದೆ ಎನ್ನುವ ಭಾವನೆ ಸಹ ಇದೆ. ಈ ಕಾರಣಕ್ಕಾಗಿ ಇಲ್ಲಿ ಯಾವುದೇ ರೀತಿಯ ಗಲಾಟೆಗಳು, ಪ್ರತಿಭಟನೆಗಳು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಆಗಿಲ್ಲ. ರಾಜಕೀಯವಾಗಿ ಇವುಗಳನ್ನು ಮಾಡಬಹುದು ಅಷ್ಟೇ, ರಾಜಕೀಯವಾಗಿ ಹೇಳಿಕೆಗಳನ್ನು ಕೊಡಬಹುದು. ಆದರೆ ವಾಸ್ತವಿಕವಾಗಿ ಯಾರೂ ಕೂಡ ಆ ರೀತಿಯಲ್ಲಿ ಇಲ್ಲ. ನಿನ್ನೆಯ ದಿವಸ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಕೆ.ಎಸ್.ಈಶ್ವರಪ್ಪ ರವರು ಬರಗಾಲದ ವಿಚಾರವಾಗಿ ಬಹಳ ದೀರ್ಘವಾಗಿ ಮಾತನಾಡಿದ್ದಾರೆ. ಇದಕ್ಕೆ ಪ್ರತ್ಯುತ್ತರವಾಗಿ ನಮ್ಮ ಕಂದಾಯ ಸಚಿವರು ಉತ್ತರವನ್ನೂ ಸಹ ನೀಡಿದ್ದಾರೆ. ಅದರಿಂದ ಮಾನ್ಯ ಈಶ್ವರಪ್ಪನವರಿಗೆ ಸಮಾಧಾನವಾಗಿದೆ ಎಂದು ಕಾಣಿಸುತ್ತಿಲ್ಲ.

**ಶ್ರೀ ವಿ.ಸೋಮಣ್ಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ತಾವು ಎಲ್ಲಾ ಅಂಶಗಳನ್ನು ಹೇಳುತ್ತಿದ್ದೀರಿ. ಆದರೂ ಮಾನ್ಯ ಮುಖ್ಯಮಂತ್ರಿಗಳು ಶ್ರೀ ಈಶ್ವರಪ್ಪನವರನ್ನು ಸುಮ್ಮನೆ ಕುಳಿತುಕೊಳ್ಳಲು ಬಿಡುವುದಿಲ್ಲ. ಅಷ್ಟು ಮಾತ್ರ ಗ್ಯಾರಂಟಿ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಹಾಗಿದ್ದರೆ ನಾವು ಯಾರ ಹೆಸರನ್ನೂ ಪ್ರಸ್ತಾಪ ಮಾಡಬಾರದೇ? ವಿರೋಧ ಪಕ್ಷದವರಾದ ಶ್ರೀ ಸೋಮಣ್ಣನವರನ್ನು ಮಾತನಾಡಿಸಬಾರದೇ? ಮಾನ್ಯ ಸೋಮಣ್ಣನವರ ಜೊತೆಗೆ ನನಗೆ ಬಹಳ ಸ್ನೇಹವಿದೆ, ಅವರ ಹೆಸರನ್ನು ಹೇಳದೇ ಹೋದರೆ ನನಗೆ ಸಮಾಧಾನವಾಗುವುದಿಲ್ಲ. ಶ್ರೀ ಈಶ್ವರಪ್ಪನವರಿಗೂ ಹಾಗೂ ನಮಗೂ ವೈಯಕ್ತಿಕವಾಗಿ ಒಳ್ಳೆಯ ಸಂಬಂಧವಿದೆ. ಹೀಗಾಗಿ ನಾನು ಅವರ ಹೆಸರನ್ನು ಹೇಳಬೇಕಲ್ಲವೇ? ಅವರು ಹೇಳಿದ್ದನ್ನೇ ಕೇಳಿ, ಅದನ್ನೇ ನಾನು ಇಲ್ಲಿ ಹೇಳುವುದು. ನಿನ್ನೆಯ ದಿವಸ ಅವರು ಮಾತನಾಡುವಾಗ ನಾನು ಇರಲಿಲ್ಲ. ಆದರೆ ಅವರು ಹೇಳಿರುವ ಎಲ್ಲಾ ಅಂಶಗಳನ್ನೂ ನಾನು ತಿಳಿದುಕೊಂಡಿದ್ದೇನೆ. ಅವರು ಬರಗಾಲ, ಕುಡಿಯುವ ನೀರು, ಜನರಿಗೆ ಉದ್ಯೋಗ, ಮೇವು ಇವುಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಜೊತೆಗೆ ರೈತರ ಸಾಲ ಮನ್ನಾ ಮಾಡುವ ಬಗ್ಗೆ ಹೇಗೆ ಗಲಾಟೆಯನ್ನು ಮಾಡಿದ್ದಾರೆಂದೂ ಸಹ ನೋಡಿದ್ದೇನೆ. ಅವುಗಳ ಬಗ್ಗೆಯೂ ಸಹ ನಾನು ಕೇಳಿದ್ದೇನೆ. ಸಾಲ ಮನ್ನಾ ವಿಚಾರವಾಗಿ ಅವರು ಸಭಾತ್ಯಾಗವನ್ನೂ ಸಹ ಮಾಡಿದ್ದಾರೆ. ಪರಿಸ್ಥಿತಿ ಹೇಗಿದೆ ನೋಡಿ. ಇಲ್ಲಿ ಸದನದ ಮಾನ್ಯ ಸದಸ್ಯರುಗಳೆಲ್ಲಾ ಸಾಲ ಮನ್ನಾ ಮಾಡಿ ಎಂಬುದಾಗಿ ಹೇಳುತ್ತೀರಿ. ಆದರೆ ಕೇಂದ್ರ ಸಚಿವರಾದ ಶ್ರೀ ಅರುಣ್ ಜೆಟ್ಲಿ ರವರು ರಾಜ್ಯ ಸರ್ಕಾರಗಳು ರೈತರ ಸಾಲವನ್ನು ಮಾಡಿದರೆ ಕೇಂದ್ರದಿಂದ ಒಂದು ಬಿಡಿಗಾಸನ್ನೂ ಕೊಡುವುದಿಲ್ಲ ಎಂಬುದಾಗಿ ಅಲ್ಲಿ ಹೇಳುತ್ತಾರೆ. ಸಾಲವನ್ನು ಮನ್ನಾ ಮಾಡಿದರೆ ಒಂದು ಪೈಸೆಯೂ ಅಲ್ಲ ಒಂದು ಬಿಡಿಗಾಸೂ ಕೊಡುವುದಿಲ್ಲ ಎಂಬುದಾಗಿ ಶ್ರೀ ಅರುಣ್ ಜೆಟ್ಲಿ ರವರು ಹೇಳಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಗವರ್ನರ್ ಆಗಿರುವ ಶ್ರೀ ಊರ್ಜಿತ್ ಪಟೇಲ್‌ರವರೂ ಸಹ ರೈತರ ಸಾಲ ಮನ್ನಾ ಮಾಡುವುದು ಒಳ್ಳೆಯ ನೀತಿಯಲ್ಲ ಎಂದು ಅಭಿಪ್ರಾಯ ಪಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾ ಪೀಠವನ್ನು ಅಲಂಕರಿಸಿದರು)**

ದೇಶದ ಆರ್ಥಿಕ ಪರಿಸ್ಥಿತಿಯ ದೃಷ್ಟಿಯಿಂದ ಅದು ಒಳ್ಳೆಯದಲ್ಲ ಹಾಗೂ ಆರ್ಥಿಕ ಪರಿಸ್ಥಿತಿ ಬಹಳ ಹಾಳಾಗಿ ಹೋಗುತ್ತದೆ ಎಂಬುದಾಗಿ ಹೇಳುತ್ತಾರೆ. ಅದೇ ಮಾತನ್ನು ಕೈಗಾರಿಕೋದ್ಯಮಿಗಳು ಸಾಲವನ್ನು ತೆಗೆದುಕೊಂಡು Non Performing Asset (NPA) ಆಗುತ್ತದೆ. ನಂತರದಲ್ಲಿ ತೆಗೆದುಕೊಂಡ ಸಾಲವನ್ನು Bad debt ಎಂಬುದಾಗಿ ಘೋಷಿಸುತ್ತಾರೆ. ಅಂತಹ ಸಾಲಗಳನ್ನು ಮನ್ನಾ ಮಾಡುತ್ತಾರೆ. ಅದು ಸಾವಿರಾರು, ಲಕ್ಷಾಂತರ ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಆಗ ಆರ್ಥಿಕ ಪರಿಸ್ಥಿತಿಯ ಮೇಲೆ ಯಾವುದೇ ರೀತಿಯ ದುಷ್ಪರಿಣಾಮಗಳಾಗುವುದಿಲ್ಲ. ಆದರೆ ರೈತರ ಸಾಲಗಳನ್ನು ಮನ್ನಾ ಮಾಡಿದರೆ ಆರ್ಥಿಕ ಪರಿಸ್ಥಿತಿಯ ಮೇಲೆ ದುಷ್ಪರಿಣಾಮಗಳಾಗುತ್ತವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಕಾರ್ಪೊರೇಟ್ ಸಂಸ್ಥೆಗಳ ಸಾಲವನ್ನು ಮನ್ನಾ ಮಾಡಿದರೆ ಆರ್ಥಿಕ ಪರಿಸ್ಥಿತಿಯ ಮೇಲೆ ಯಾವುದೇ ರೀತಿಯ ದುಷ್ಪರಿಣಾಮಗಳಾಗುವುದಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಇಂತಹ ಪರಿಸ್ಥಿತಿಗಳು ಉಂಟಾಗುತ್ತವೆ. ಆದರೆ ರೈತರ ಸಾಲಗಳನ್ನು ಮನ್ನಾ ಮಾಡುವುದಕ್ಕೆ ಆಗುವುದಿಲ್ಲವೆಂದು ಶ್ರೀ ಊರ್ಜಿತ್ ಪಟೇಲ್ ರವರೂ ಸಹ ಹೇಳುತ್ತಾರೆ. ಮಾನ್ಯ ಕೇಂದ್ರ ಸಚಿವರಾದ ಶ್ರೀ ಅರುಣ್ ಜೇಟ್ಲಿಯವರು ಹಾಗೂ ಕೃಷಿ ಸಚಿವರು ರೈತರ ಸಾಲವನ್ನು ಮನ್ನಾ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಈ ವಿಚಾರವೇನೂ ಹೊಸದಲ್ಲ. ಕೇಂದ್ರ ಸರ್ಕಾರದವರು ಈ ಹಿಂದೆಯೂ ಕೂಡ ಸಾಲವನ್ನು ಮನ್ನಾ ಮಾಡಿದ್ದಾರೆ. ಶ್ರೀ ವಿ.ಪಿ.ಸಿಂಗ್ ರವರ ಅಧಿಕಾರಾವಧಿಯಲ್ಲಿ ಕೇಂದ್ರ ಸರ್ಕಾರವು 1989 ನೇ ಸಾಲಿನಲ್ಲಿ ರೂಪಾಯಿ 10,000/– ಗಳವರೆಗೆ ಇದ್ದ ಸಾಲವನ್ನು ಮನ್ನಾ ಮಾಡಿದ್ದರು. ನಿಮ್ಮಗಳಿಗೆ ಜ್ಞಾಪಕವಿದೆಯೇ? ನಂತರದಲ್ಲಿ ಯು.ಪಿ.ಎ. ಸರ್ಕಾರದ ಅಧಿಕಾರಾವಧಿಯಲ್ಲಿ ಡಾ॥ ಮನ್‌ಮೋಹನ್ ಸಿಂಗ್‌ರವರು ಪ್ರಧಾನ ಮಂತ್ರಿಗಳಾದ ಸಂದರ್ಭದಲ್ಲಿ ರೂಪಾಯಿ 72,000 ಕೋಟಿಗಳಷ್ಟು ಇದ್ದ ಸಾಲವನ್ನು ಮನ್ನಾ ಮಾಡಿದ್ದಾರೆ. ಇದರಿಂದಾಗಿ ಆರ್ಥಿಕ ಪರಿಸ್ಥಿತಿಯ ಮೇಲೆ ಯಾವುದೇ ರೀತಿಯ ದುಷ್ಪರಿಣಾಮಗಳಾಗಿವೆಯೇ? ಮಾನ್ಯ ಶ್ರೀಕಂಠೇಗೌಡರು ಇದಕ್ಕೆ ಏನು ಹೇಳುತ್ತಾರೆ? ಯಾವುದೇ ರೀತಿಯ ದುಷ್ಪರಿಣಾಮಗಳಾಗಿಲ್ಲ. ಹೀಗಿದ್ದಾಗ ಕೇಂದ್ರ ಸರ್ಕಾರದವರು ಸಾಲ ಮನ್ನಾ ಮಾಡಬೇಕೋ ಅಥವಾ ಬೇಡವೋ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೆ, ಡಾ॥ ಮನ್‌ಮೋಹನ್ ಸಿಂಗ್ ರವರಂತಹ ಆರ್ಥಿಕ ತಜ್ಞರೇ ಸಾಲ ಮನ್ನಾ ಮಾಡಿದಾಗ ಇನ್ನು ಯಾರಿಗೆ ಯಾವುದೇ ರೀತಿಯ ಅಡ್ಡಿಯಿಲ್ಲ ಎಂದು ನಾನಂದುಕೊಳ್ಳುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಕೇಂದ್ರ ಸರ್ಕಾರಕ್ಕೆ ಆರ್ಥಿಕ ಸಲಹೆಗಾರರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಅರವಿಂದ ಸುಬ್ರಮಣಿಯನ್‌ರವರೂ ಸಹ ಸಾಲ ಮನ್ನಾ ಮಾಡಬಾರದು ಎಂಬುದಾಗಿ ಹೇಳುತ್ತಾರೆ. ಒಂದು ಕಡೆ ಕೇಂದ್ರ ಸರ್ಕಾರದಲ್ಲಿರುವಂತಹ ಸಲಹೆಗಾರರು, ಆರ್.ಬಿ.ಐ.ನ ಗವರ್ನರ್, ಕೇಂದ್ರದ ಹಣಕಾಸು ಮತ್ತು ಕೃಷಿ ಸಚಿವರುಗಳು ಎಲ್ಲರೂ ಕೂಡ ಸಾಲ ಮನ್ನಾ ಮಾಡಬೇಡಿ ಎಂಬುದಾಗಿ ಹೇಳುತ್ತಾರೆ. ಇಲ್ಲಿ ಮಾನ್ಯ ಈಶ್ವರಪ್ಪನವರು ಸಾಲ ಮನ್ನಾ ಮಾಡದೇ ಹೋದರೆ ಸಭಾತ್ಯಾಗ ಮಾಡಿ ಹೊರಟು ಹೋಗುತ್ತಾರೆ. ನೋಡಿ ಹೇಗಿದೆ ವಿಪರ್ಯಾಸ! ಒಂದು ಕಡೆ ಸಾಲ ಮನ್ನಾ ಮಾಡಬೇಡಿ ಎಂದು ಹೇಳುತ್ತಾರೆ ಆದರೆ ಇನ್ನೊಂದೆಡೆ ಸಾಲ ಮನ್ನಾ ಮಾಡದೇ ಹೋದರೆ ಧರಣಿ ಮತ್ತು ಹೋರಾಟಗಳನ್ನು ಮಾಡುತ್ತಾರೆ. ಸಾಲ ಮನ್ನಾ ಮಾಡುವ ಬಗ್ಗೆ ನಮ್ಮ ಪಕ್ಷದವರೂ ಸಹ ಹೇಳುತ್ತಾರೆ. ಕೇವಲ ವಿರೋಧ ಪಕ್ಷದವರು ಮಾತ್ರವೇ ಅಲ್ಲ, ರೈತರೂ ಸಹ ಸಾಲ ಮನ್ನಾ ಮಾಡುವ ಬಗ್ಗೆ ಹೇಳುತ್ತಾರೆ. ಆದರೆ ಕೇಂದ್ರ ಸರ್ಕಾರದವರು, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿನ ರೈತರ ಮೇಲಿನ ಒಟ್ಟು ಸಾಲಗಳೇನಿವೆ; ಅವುಗಳು Co-operative Banks ಗಳಲ್ಲಿ, ಗ್ರಾಮೀಣ ಬ್ಯಾಂಕ್‌ಗಳಲ್ಲಿ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಇರಬಹುದು; ಇವುಗಳಿಂದ ಕೊಟ್ಟಿರುವ ಒಟ್ಟು ಸಾಲದ ಮೊತ್ತ 1,16,006 ಕೋಟಿ ರೂಪಾಯಿಗಳಾಗುತ್ತವೆ. ಈ ಪೈಕಿ ಅಲ್ಪಾವಧಿ ಸಾಲದ ಮೊತ್ತದ ವಿಚಾರಕ್ಕೆ ಬರುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ ಆದರೆ ನಿಮಗೆ ದಾರಿ ತಪ್ಪಿಸುವವರು ಬಹಳ ಜನರಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಈಶ್ವರಪ್ಪನವರೇ ಇದೇ ತಾಪತ್ರಯ; ನಮಗೂ ನಿಮಗೂ ಇರುವ ವ್ಯತ್ಯಾಸ. ನಾವು ಒಳ್ಳೆಯ ವಕೀಲರನ್ನು ಇಟ್ಟುಕೊಂಡಿದ್ದೇವೆ ಆದರೆ ನೀವು ಒಳ್ಳೆಯ ವಕೀಲರನ್ನು ನೇಮಿಸಿಲ್ಲ. ಇದೇ ಬಂದಿರುವ ತಾಪತ್ರಯವಾಗಿದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನೀವು ಹಾಗೆ ಅಂದುಕೊಂಡೇ ಹಾಳಾಗಿ ಹೋಗುತ್ತಿದ್ದೀರಿ; ಒಳ್ಳೆಯ ವಕೀಲರಿದ್ದಾರೆ ಎಂದು ನಂಬಿಕೊಂಡು ನೀವು ಹಾಳಾಗಿ ಹೋಗುತ್ತೀರಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದಕ್ಕಾಗಿ ನಾನು ಮತ್ತೆ ಹೇಳುತ್ತಿರುವುದು ಏನೆಂದರೆ, ನೀವು ಸಾಗುತ್ತಿರುವ ದಾರಿ ಸರಿಯಿದೆ ಆದರೆ ಅಡ್ಡ ದಾರಿಗೆ ಬರುವವರ ಬಗ್ಗೆ ಹುಷಾರಾಗಿರಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು ಹುಷಾರಾಗಿರಬೇಕೆಂದು ಒಳ್ಳೆಯ ಸಲಹೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ನೀಡಿದ್ದಾರೆ. ನಾನು ಯಾವಾಗಲೂ ಅಡ್ಡ ದಾರಿಗೆ ಬರುವವರ ಹಾಗೂ ದಾರಿ ತಪ್ಪಿಸುವವರ ಬಗ್ಗೆ ಬಹಳ ಹುಷಾರಾಗಿರುತ್ತೇನೆ. ಆದರೆ facts, ಸತ್ಯಾಂಶಗಳನ್ನು ಹೇಳಬೇಕಲ್ಲವೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳ ಮಾತಿಗೆ ಶ್ರೀಮತಿ ಉಮಾಶ್ರೀ ರವರು ಬಹಳ ಜೋರಾಗಿ ನಗುತ್ತಿದ್ದಾರೆ. ಹೀಗಾಗಿ ಅವರಿಗೆ ಅಡ್ಡ ದಾರಿ ಎಲ್ಲಿ ಹಿಡಿದಿದೆ ಎನ್ನುವುದು ಗೊತ್ತಿದೆ ಎಂದರ್ಥ. ಅವರು ಬಿದ್ದು ಬಿದ್ದು ನಗುತ್ತಿದ್ದರು. ಏಕೆ ಎಂಬುದಾಗಿ ನಾನು ಕೇಳಿದೆ. ಅದಕ್ಕೆ ಅವರು ಇನ್ನೂ ಜೋರಾಗಿ ನಕ್ಕರು.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಅಕಸ್ಮಾತಾಗಿ ಯಾರಾದರೂ ಅಡ್ಡ ದಾರಿಯನ್ನು ಹಿಡಿಸಿದರೆ ಅವರು ಶ್ರೀಯುತ ಬಸವರಾಜ ಹೊರಟ್ಟಿರವರು ಮಾತ್ರವೇ.

**ಶ್ರೀ ರಘುನಾಥ ರಾವ್ ಮಲ್ಕಾಪೂರೆ:-** ಮಾನ್ಯ ಸಭಾಪತಿಯವರೆ, ಅವರು ಹೇಳುತ್ತಿರುವುದು ಹೊಸ ವಿಚಾರವೋ ಅಥವಾ ಹಳೆಯ ವಿಚಾರವೋ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರಷ್ಟು ಅಡ್ಡ ದಾರಿಯನ್ನು ಹಿಡಿಸುವವರು ಇಲ್ಲಿ ಯಾರೂ ಇಲ್ಲ ಎಂಬ ವಿಚಾರವು ನನಗೆ ಒಬ್ಬನಿಗೆ ಮಾತ್ರವಲ್ಲದೇ ಇಡೀ ಜಗತ್ತಿಗೆ ಗೊತ್ತಿದೆ. ನಾನು ಮುಖ್ಯಮಂತ್ರಿಗಳಿಗೆ ಅಡ್ಡ ದಾರಿಯನ್ನು ಹಿಡಿಸುವುದಕ್ಕೆ ಸಾಧ್ಯವಿಲ್ಲ ಹಾಗೂ ಅವರು ನನ್ನ ಮಾತನ್ನೂ ಸಹ ಕೇಳುವುದಿಲ್ಲ; ನನ್ನ ಎಲ್ಲಾ ಮಾತುಗಳನ್ನು ಅವರು ಕೇಳುವುದಿಲ್ಲ, ಎಷ್ಟು ಬೇಕೋ ಅಷ್ಟನ್ನು ಮಾತ್ರವೇ ಕೇಳುತ್ತಾರೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಸದಸ್ಯರಾದ ಉಗ್ರಪ್ಪನವರು ಹೇಳುವ ಎಲ್ಲಾ ಮಾತುಗಳನ್ನು ಕೇಳುತ್ತಾರೆ. ಇದೇ ವಿಚಾರದಲ್ಲಿ ನಮಗೂ ಹಾಗೂ ಅವರಿಗೂ ವ್ಯತ್ಯಾಸಗಳಿವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನನಗೆ ಇವತ್ತಿನ ದಿನದವರೆಗೆ ಮಾನ್ಯ ಉಗ್ರಪ್ಪನವರು ದಾರಿ ತಪ್ಪಿಸಿರುವ ನಿದರ್ಶನಗಳಿಲ್ಲ. ಆದ್ದರಿಂದಲೇ ನಾನು ಅವರು ಹೇಳಿದ್ದನ್ನೆಲ್ಲಾ ನಂಬುತ್ತೇನೆ. ಅದೇ ರೀತಿಯಾಗಿ ಮಾನ್ಯ ಹೊರಟ್ಟಿಯವರು ಹೇಳಿದ್ದನ್ನೂ ನಾನು ನಂಬುತ್ತೇನೆ. ಆದರೆ ಅವರು ಒಮ್ಮೊಮ್ಮೆ ಹೇಳುತ್ತಾರೆ. ನಂತರದಲ್ಲಿ ತಪ್ಪಿಸಿಕೊಳ್ಳುತ್ತಾರೆ. ಅದೇ ಸಮಸ್ಯೆ ಬಂದಿರುವುದು. He is a very good friend of mine.

**ಸಭಾಪತಿಯವರು:–** ತಮಗೆ ಅವರು ಬಹಳ ಹಳೆಯ ಸ್ನೇಹಿತರು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಮಾನ್ಯ ಹೊರಟ್ಟಿಯವರು ನನಗೆ ಬಹಳ ಒಳ್ಳೆಯ dear friend.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅವರಿಗೆ ನನ್ನ ಮೇಲೆ ಅತಿಯಾದ ಪ್ರೀತಿಯಿದೆ. ಅದಕ್ಕೆ ಏನು ಮಾಡುವುದಕ್ಕಾಗುತ್ತದೆ? ಅತಿಯಾದ ಪ್ರೀತಿಯಾದರೆ ಹೀಗೆಯೇ ಆಗುತ್ತದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಆಯಿತು ಬಿಡಿ, ಮಾನ್ಯ ಹೊರಟ್ಟಿಯವರು ನನಗೆ dear friend.

(ಮುಂದು)

**(899) 21.06.2017 MSS-KS 5.30**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು)(ಮುಂದು):–**

ಆದ್ದರಿಂದ ಮಾನ್ಯ ಸಭಾಪತಿಯವರೆ, ಮಾನ್ಯ ವಿ.ಎಸ್.ಉಗ್ರಪ್ಪನವರು ಹಿಂದೆ ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ರೈತರ ಸಾಲದ ಬಗ್ಗೆ ಏನು ಹೇಳಿದ್ದರು ಅದನ್ನು ಹೇಳಿ ಎಂದು ನೆನಪು ಮಾಡಿದರು. ಅದನ್ನು ಹೇಳಿದರೆ ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಕೂಡ ಖುಷಿಯಾಗಬಹುದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರಿಗೆ ನಮ್ಮ ಮಾನ್ಯ ಬಿ.ಎಸ್.ಯಡಿಯೂರಪ್ಪನವರ ಹೆಸರು, ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರ ಹೆಸರನ್ನು ಹೇಳದೇ ಇದ್ದರೆ ತಿಂದ ಅನ್ನವೇ ಕರಗುವುದಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ನಾನೇನು ಮಾಡುವುದು? ಮಾನ್ಯ ಮುಖ್ಯಮಂತ್ರಿಗಳಿಗೆ ತಿಂದ ಅನ್ನ ಕರಗಬೇಕು, ಅವರು ಆರೋಗ್ಯವಂತರಾಗಿ ಬಹಳ ವರ್ಷಗಳು ಬದುಕಬೇಕೆಂದು ನನಗೂ ಆಸೆ ಇದೆ. ಅದರಲ್ಲಿಯೂ ಕೂಡ ಇವತ್ತಿನ ದಿವಸ "ಯೋಗ ದಿನ" ಎಂದು ಆಚರಿಸುತ್ತಿದ್ದೇವೆ. ಹಾಗಾಗಿ ಅವರು ಚೆನ್ನಾಗಿರಬೇಕೆಂದು ನಮ್ಮ ಆಸೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಕೆ.ಎಸ್.ಈಶ್ವರಪ್ಪನವರು ನನಗಿಂತಲೂ ಚಿಕ್ಕವರು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳಿಗಿಂತಲೂ ನಾನು ವಯಸ್ಸಿನಲ್ಲಿ ಸ್ವಲ್ಪ ದೊಡ್ಡವನು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಇಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಅವರ ಹುಟ್ಟಿದ ದಿನಾಂಕವನ್ನು ಹೇಳಿದರೆ ಯಾರು ವಯಸ್ಸಿನಲ್ಲಿ ದೊಡ್ಡವರು ಎಂದು ಗೊತ್ತಾಗುತ್ತದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು 30ನೇ ಆಗಸ್ಟ್ 1948ರಲ್ಲಿ ಹುಟ್ಟಿರುವುದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಜೂನ್ 1948ನೇ ಇಸವಿಯಲ್ಲಿ ಹುಟ್ಟಿರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ನನಗಿಂತಲೂ ವಯಸ್ಸಿನಲ್ಲಿ ಚಿಕ್ಕವರು. ಹಾಗಾಗಿ ಮಾನ್ಯ ಮುಖ್ಯಮಂತ್ರಿಗಳು ಚಿಕ್ಕವರಾಗಿರುವುದರಿಂದ ಅವರು ದೊಡ್ಡವರ ಮಾತನ್ನು ಕೇಳಬೇಕು ಮತ್ತು ಅದನ್ನು ಅಭ್ಯಾಸ ಮಾಡಿಕೊಳ್ಳಬೇಕು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಇನ್ನು ಮೇಲೆ ರಾಜಕೀಯವಾಗಿ ಮಾನ್ಯ ಕೆ.ಎಸ್.ಈಶ್ವರಪ್ಪನವರು ಹೇಳಿದ ಹಾಗೆಯೇ ಕೇಳುತ್ತೇನೆ. ಏಕೆಂದರೆ, ಅವರು ನನಗಿಂತ ಎರಡು ತಿಂಗಳು ಮಾತ್ರ ದೊಡ್ಡವರು. ಅದರೂ ಕೇಳುತ್ತೇನೆ. ಆದರೆ ನಾನು ಇಲ್ಲಿ ಏನು ಮಾತನಾಡಬೇಕೆಂದು ಇದ್ದೇನೆ ಅದನ್ನೇ ಮಾತನಾಡುವುದು. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ದಿನಾಂಕ 31ನೇ ಡಿಸೆಂಬರ್ 2009ರಂದು ಮಾನ್ಯ ವಿ.ಎಸ್.ಉಗ್ರಪ್ಪನವ ರೈತರ ಸಾಲವನ್ನು ಮನ್ನಾ ಮಾಡಿ ಎಂದು ಕೇಳಿದಂತಹ ಸಂದರ್ಭದಲ್ಲಿ ಅವರು ಸಾಲ ಮನ್ನಾ ಮಾಡುವುದಕ್ಕಾಗುವುದಿಲ್ಲ, ಏಕೆಂದರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದುಡ್ಡು ಪ್ರಿಂಟ್ ಮಾಡುವಂತಹ ಯಂತ್ರ ನಮ್ಮ ಹತ್ತಿರ ಇಲ್ಲ. ಅದುದರಿಂದ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದರು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ಅದನ್ನು ಸದನದಲ್ಲಿ ಹೇಳಿದ್ದಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಅವರು ಸದನದಲ್ಲಿಯೇ ಹೇಳಿರುವಂಥದ್ದು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಅವರು ಅದನ್ನು ಸದನದಲ್ಲಿ ಹೇಳಿದ್ದಲ್ಲ. ಹೊರಗಡೆ ಹೇಳಿರುವಂಥದ್ದು.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ವಿಧಾನ ಪರಿಷತ್ತಿನಲ್ಲಿಯೇ ಹೇಳಿರುವಂಥದ್ದು. ನಡವಳಿ ಪುಸ್ತಕದಲ್ಲಿಯೂ ಕೂಡ ಪ್ರಿಂಟ್ ಆಗಿದೆ. ಅದನ್ನು ಬೇಕಾದರೆ ನೋಡಬಹುದು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, It is on record.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಇಲ್ಲಿ ಹೇಳಿಲ್ಲ. ಅವರು ಹೊರಗಡೆ ಎಲ್ಲಿ ಹೇಳಿದರು ಎಂದು ನನಗೂ ಮತ್ತು ವಿರೋಧ ಪಕ್ಷದ ನಾಯಕರಾದ ಮಾನ್ಯ ಮಾನ್ಯ ಕೆ.ಎಸ್.ಈಶ್ವರಪ್ಪನವರಿಗೂ ಕೂಡ ಗೊತ್ತಿದೆ. ಆ ರೀತಿಯಾಗಿ ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನನ್ನ ಹತ್ತಿರ ದಿನಾಂಕ 31ನೇ ಡಿಸೆಂಬರ್ 2009ರ ವಿಧಾನ ಪರಿಷತ್ತಿನ ನಡವಳಿಕೆ ಇದೆ. ಅದನ್ನು ಓದಿ ಹೇಳುತ್ತೇನೆ. ಏನು ಹೇಳಿದ್ದಾರೆಂದರೆ,

> **"ನೀವುಗಳು ರೈತರ ಸಾಲವನ್ನು ಮನ್ನಾ ಮಾಡಿ ಎಂದು ಹೇಳುತ್ತೀರಿ. ರೈತರ ಸಾಲವನ್ನು ಮನ್ನಾ ಮಾಡಲು ನಾನು ತಯಾರಿದ್ದೇನೆ. ಆದರೆ ಅದಕ್ಕೆ ಹಣವನ್ನು ಎಲ್ಲಿಂದ ತರುವುದು? ನನಗೆ ಹಣವನ್ನು ಮುದ್ರಿಸುವಂತಹ ಅಧಿಕಾರವನ್ನು ಕೇಂದ್ರ ಸರ್ಕಾರ ನೀಡಿಲ್ಲ. ರೈತರ ಸಾಲವನ್ನು ಮನ್ನಾ ಮಾಡಲು ಕೇಂದ್ರ ಸರ್ಕಾರ ಹಣವನ್ನು ನೀಡುವುದೇ? ಹಣವನ್ನು ಎಲ್ಲಿಂದ ತರಬೇಕೆಂದು ಹೇಳಿ. ನಾನೂ ಕೂಡ ವಿರೋಧ ಪಕ್ಷದ ನಾಯಕನಾಗಿದ್ದಾಗ ಈ ರೀತಿಯಲ್ಲಿಯೇ ಮಾತನಾಡಿದ್ದೇನೆ."**

ಮಾನ್ಯ ವಿ.ಎಸ್.ಉಗ್ರಪ್ಪನವರು ಮಾತನಾಡುವಂತಹ ರೀತಿಯಲ್ಲಿ ಈಗ ಹೇಳಿದ್ದೇನೆ. ಜನರಿಗೆ ವಿಶ್ವಾಸ ಇರುವಂತಹ ರೀತಿಯಲ್ಲಿ ಮಾತನಾಡಬೇಕೇ ಹೊರತು, ನಾನಾಗಲಿ–ನೀವಾಗಲಿ ಆಗದಿರುವ

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಚಾರಗಳನ್ನು ಮಾಡುವುದು ಸರಿ ಹೋಗುವುದಿಲ್ಲ. ಈ ವಿಚಾರದಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದ ನೆರವಿಗೆ ಬರಲಿ. ನಾವೆಲ್ಲರೂ ಕೇಂದ್ರ ಸರ್ಕಾರದ ಹತ್ತಿರ ನಿಯೋಗ ತೆಗೆದುಕೊಂಡು ಹೋಗೋಣ. ಕೇಂದ್ರ ಸರ್ಕಾರದವರು ಹೆಚ್ಚು ಹಣವನ್ನು ನೀಡಿದಲ್ಲಿ ರಾಜ್ಯಕ್ಕೆ ನಾನು ಏನು ಬೇಕಾದರೂ ಮಾಡುವುದಕ್ಕೆ ಸಿದ್ಧನಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, "ದುಡ್ಡು ಪ್ರಿಂಟ್ ಮಾಡುವಂತಹ ಯಂತ್ರ ನಮ್ಮ ಹತ್ತಿರ ಇಲ್ಲ" ಎಂದು ಹೇಳಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, "ನನಗೆ ಹಣವನ್ನು ಮುದ್ರಿಸತಕ್ಕಂತಹ ಅಧಿಕಾರವನ್ನು ಕೇಂದ್ರ ಸರ್ಕಾರ ನೀಡಿಲ್ಲ." ಎಂದು ಅವರು ಸದನದಲ್ಲಿಯೇ ಹೇಳಿರುವಂಥದ್ದು ಇದನ್ನು ಮಾನ್ಯ ಬಸವರಾಜ ಹೊರಟ್ಟಿಯವರಿಗೆ ಕೊಡಪ್ಪ. ಅವರು ಓದಿಕೊಳ್ಳಲಿ.

**(ಈ ಹಂತದಲ್ಲಿ ದಿನಾಂಕ 31ನೇ ಡಿಸೆಂಬರ್ 2009ರ ವಿಧಾನ ಪರಿಷತ್ತಿನ ನಡವಳಿಕೆ ಪುಸ್ತಕದ ಜೆರಾಕ್ಸ್ ಪ್ರತಿಯನ್ನು ಸಭಾಪತಿಯವರ ಮುಖಾಂತರ ಮಾನ್ಯ ಸದಸ್ಯರಾದ ಬಸವರಾಜ ಎಸ್.ಹೊರಟ್ಟಿಯವರಿಗೆ ಕಳುಹಿಸಿಕೊಟ್ಟರು.)**

ಮಾನ್ಯ ಬಸವರಾಜ ಎಸ್. ಹೊರಟ್ಟಿಯವರೆ ತಾಳ್ಮೆಯಿಂದ ಓದಿಕೊಳ್ಳಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರಲಿಲ್ಲ. ಅದನ್ನು ಮಾನ್ಯ ಮುಖ್ಯಮಂತ್ರಿಗಳ ಬಾಯಿಯಿಂದ ಹೇಳಿಸಿದ್ದೇನೆ ಅಷ್ಟೇ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾದಂತಹ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದನ್ನು ಇಲ್ಲಿ ಕೋಟ್ ಮಾಡಿದ್ದಾರೆ. ಮಾನ್ಯ ಸಿದ್ದರಾಮಯ್ಯನವರನ್ನು ಸೇರಿಸಿಕೊಂಡಂತೆ ಮುಖ್ಯಮಂತ್ರಿಗಳಾದವರು ಸ್ವಾಭಾವಿಕವಾಗಿ ಜಿಪುಣರಾಗಿರುತ್ತಾರೆ.

**ಡಾ:ಹೆಚ್.ಸಿ.ಮಹದೇವಪ್ಪ:-** ಮಾನ್ಯ ಸಭಾಪತಿಯವರೆ, ನಮ್ಮ ಮುಖ್ಯಮಂತ್ರಿಗಳು ಜಿಪುಣರಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಡಾ:ಹೆಚ್.ಸಿ.ಮಹದೇವಪ್ಪನವರು ಈಗ ಸ್ವಲ್ಪ ಮುಖ್ಯಮಂತ್ರಿಗಳಿಂದ ದೂರದಲ್ಲಿ ಕುಳಿತುಕೊಂಡಿದ್ದಾರೆ. ಅವರ ಪಕ್ಕದಲ್ಲಿಯೇ ಕುಳಿತುಕೊಳ್ಳಬೇಕಾಗಿತ್ತು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಈಗ ನಾವು ಅವರು ಸ್ವಲ್ಪ ದೂರವಾಗಿದ್ದೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನೀವು ಎಷ್ಟು ದೂರವಾದರೂ ಡಾ:ಹೆಚ್.ಸಿ. ಮಹದೇವಪ್ಪನವರು ನಿಮ್ಮ ಹತ್ತಿರ ಬರುವವರೆ. ಇರಲಿ. ಯಾವ ಮುಖ್ಯಮಂತ್ರಿಗಳಾಗಲಿ, ಯಾವ ಹಣಕಾಸಿನ ಸಚಿವರು ಕೂಡ ರೈತರ ಸಾಲವನ್ನು ಮನ್ನಾ ಮಾಡಿ ಎಂದು ಹೇಳಿದ ತಕ್ಷಣ ಮಾಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ಬಜೆಟ್ ಕೊಟ್ಟಿದ್ದೆ, ಆಗ ಇಡೀ ಎಲ್ಲಾ ಪತ್ರಿಕೆಗಳು ಮತ್ತು ಎಲ್ಲಾ ಸಮಾಜದವರು ಹೊಗಳಿದರು. ಆದರೆ ವಿರೋಧ ಪಕ್ಷದವರು ಮಾತ್ರ ಬಜೆಟ್ ಅನ್ನು ವಿರೋಧ ಮಾಡಿದರು ಎಂದು ಹೇಳಿದರು. ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದಲ್ಲಿದ್ದಾಗ ನಮ್ಮ ಪಕ್ಷದ ಸರ್ಕಾರ ಕೊಟ್ಟಂತಹ ಬಜೆಟ್ ಅನ್ನು ಇಡೀ ಸಮಾಜ ಹೊಗಳಿದಂತಹ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದಲ್ಲಿದ್ದ ಮಾನ್ಯ ಸಿದ್ದರಾಮಯ್ಯನವರು ಸ್ವಾಗತ ಮಾಡಿದ್ದರೇ? ವಿರೋಧ ಪಕ್ಷಗಳು ಇರುವುದೇ ಆಡಳಿತ ಪಕ್ಷದ ತಪ್ಪುಗಳನ್ನು ಹುಡುಕುವುದಕ್ಕೆ. ನೀವು ವಿರೋಧ ಪಕ್ಷದಲ್ಲಿದ್ದಾಗ ಮಾಡಿದ್ದು ಅದನ್ನೇ, ಈಗ ನಾವು ಮಾಡುತ್ತಿರುವುದೂ ಕೂಡ ಅದನ್ನೇ. ಈಗ ಪ್ರಶ್ನೆ ಬಂದಿರುವುದು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಆ ರೀತಿಯಾಗಿ ಹೇಳಿರಬಹುದು. ಮೊನ್ನೆಯ ದಿವಸ ಮಾನ್ಯ ವಿ.ಎಸ್.ಉಗ್ರಪ್ಪನವರು ಹೇಳಿದಂತಹ ಸಂದರ್ಭದಲ್ಲಿ ಸಹ ನಾನು ಹೇಳಿದ್ದೇನೆ. ನಮ್ಮ ಪಕ್ಷದ ಅವಧಿಯಲ್ಲಿ ಎರಡು ರೀತಿಯ ಮುಖ್ಯಮಂತ್ರಿಗಳನ್ನು ನೋಡಿದ್ದೇವೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ನನ್ನ ಕೈಯಲ್ಲಿ ರೈತರ ಸಾಲ ಮನ್ನಾ ಮಾಡುವುದಕ್ಕಾಗುವುದಿಲ್ಲವೆಂದು ಇವರು ಹೇಳಿದ ಹಾಗೆ ಹೇಳುತ್ತಾ ಬಂದರು. ಇವರು ಹೇಳಿದ ಹಾಗೆ ಅಂದರೆ, ಅವತ್ತಿನಿಂದ ಇವತ್ತಿನವರೆಗೂ ರೈತರ ಸಾಲ ಮನ್ನಾ ಮಾಡುವುದಕ್ಕಾಗುವುದಿಲ್ಲವೆಂದು ಏನು ಹೇಳುತ್ತಾ ಬಂದಿದ್ದಾರೆ, ಅವರು ಆ ರೀತಿ ಹೇಳಿದರು. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಹೇಳಿದ ಹಾಗೆಯೇ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾದಾಗ ರೈತರ ಸಾಲ ಮನ್ನಾ ಮಾಡಿದರು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ರೈತರ ಸಾಲವನ್ನು ಮನ್ನಾ ಮಾಡಲಿಲ್ಲ. ಆದರೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದಾಗ ರೈತರ ಸಾಲವನ್ನು ಮನ್ನಾ ಮಾಡಿದರು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ನೀವು ಯಾವ ರೀತಿಯಾಗಿ ಅಗುವುದಿಲ್ಲವೆಂದು ಹೇಳಿಕೊಂಡು ಬಂದು ಈಗ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಏನು ರೈತರ ಸಾಲವನ್ನು 50,000 ರೂಪಾಯಿಗಳ ವರೆಗೆ ಮನ್ನಾ ಮಾಡುತ್ತಿದ್ದೀರೋ ಅದೇ ರೀತಿಯಲ್ಲಿ ಮಾಡಿದರು. ಆದರೆ ಶ್ರೀ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾಗಿದ್ದಾಗ ವಿರೋಧ ಪಕ್ಷದವರು ರಾಜ್ಯದಲ್ಲಿ ಹಾಹಾಕಾರ ಇದೆ. ರೈತರು ತುಂಬಾ ತೊಂದರೆಯಲ್ಲಿದ್ದಾರೆ ಎಂದಾಗ ಸದನವನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿ ಎಂದು ಸಭಾಧ್ಯಕ್ಷರ ವಿನಂತಿಯನ್ನು ಮಾಡಿಕೊಂಡು ಅಲ್ಲಿಯೇ ಇರುವಂತಹ ಕ್ಯಾಬಿನೆಟ್ ಸಚಿವರುಗಳನ್ನು ಕರೆದು 5 ನಿಮಿಷದಲ್ಲಿ ಚರ್ಚೆ ಮಾಡಿ ಬಂದು 25,000 ರೂಪಾಯಿಗಳ ವರೆಗೆ ರೈತರ ಸಾಲವನ್ನು ಮನ್ನಾ ಮಾಡಿದರು. ಎರಡು ರೀತಿಯ ಮುಖ್ಯಮಂತ್ರಿಗಳನ್ನು ನಾವು ನೋಡಿದ್ದೇವೆ. ಈಗ ಸಿದ್ದರಾಮಯ್ಯನವರು ಮಾನ್ಯ ಬಿ.ಎಸ್.ಯಡಿಯೂರಪ್ಪನವರಿಗಿಂತಲೂ ಬಹಳ ನಿಧಾನ ಮಾಡಿದ್ದಾರೆ. ರೈತರ ಆತ್ಮಹತ್ಯೆಗಳಾದಂತಹ ಸಂದರ್ಭದಲ್ಲಿ ರೈತರ ಸಾಲ ಮನ್ನಾ ಮಾಡಲಿಲ್ಲ. ಆದರೆ ಚುನಾವಣೆ ಹತ್ತಿರ ಬಂತು ಎಂದು ಈಗ ರೈತರ 50,000 ರೂಪಾಯಿಗಳವರೆಗಿನ ಸಾಲವನ್ನು ಮನ್ನಾ ಮಾಡುತ್ತಿದ್ದಾರೆ.

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೆ, ನಿಮ್ಮ ಬಿಜೆಪಿ ಸರ್ಕಾರ ಇದ್ದಾಗ ಚುನಾವಣೆ ಹತ್ತಿರ ಬಂದಾಗ ರೈತರ ಸಾಲವನ್ನು ಮನ್ನಾ ಮಾಡಿದ್ದು. ಮಾನ್ಯ ವಿರೋಧ ಪಕ್ಷದ ನಾಯಕರು ಈ ಮಾತನ್ನು ಹೇಳುವುದು ಸರಿಯೇ? ನಿಮ್ಮ ಸರ್ಕಾರ ಬರೀ ರೈತರ ಸಾಲ ಮನ್ನಾ ಮಾಡಿ ಘೋಷಣೆ ಮಾಡಿದ್ದು ನಂತರ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನಾವು ಹಣವನ್ನು ಕೊಟ್ಟಿದ್ದು.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅದಕ್ಕೆ ನಾನು ಭಗವಂತನ ಮೇಲೆ ಆಣೆ ಮಾಡಿ ಹೇಳುತ್ತಿದ್ದೇನೆ. ಕಾಂಗ್ರೆಸ್ ಪಕ್ಷದ ಸರ್ಕಾರ " ರೈತರ 50,000 ರೂಪಾಯಿಗಳ ಸಾಲವನ್ನು ಮನ್ನಾ" ಎಂದು ಘೋಷಣೆ ಮಾಡುತ್ತದೆ. ನಾವು ಚುನಾವಣೆಯಲ್ಲಿ ಗೆದ್ದು ಬಂದ ಮೇಲೆ ಅದನ್ನು ನಾವು ತೀರಿಸುತ್ತೇವೆ.

**(ಗೊಂದಲ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೆ, ನಮ್ಮ ರಾಜ್ಯದ ಜನ ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರವನ್ನು ನೋಡಿ ಆಗಿದೆ. ಮಾನ್ಯ ಹೆಚ್.ಡಿ.ಕುಮಾರಸ್ವಾಮಿಯವರು ಜೆಡಿ(ಎಸ್) ಅನ್ನು ಅಧಿಕಾರಕ್ಕೆ ತರುತ್ತೇವೆಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ವಿಧಾನಸಭೆಯಲ್ಲಿ ರೈತರ ಸಾಲ ಮನ್ನಾ ಮಾಡುತ್ತೇವೆಂದು ಘೋಷಣೆ ಏನೋ ಮಾಡಿದರಂತೆ, ಅದರ ಬಗ್ಗೆ ನಮಗೆ ಇನ್ನು ಏನೂ ಗೊತ್ತಿಲ್ಲ. ನಮ್ಮ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗಲೂ ಕೂಡ ನಾವು ಸರ್ಕಾರವನ್ನು ರಚನೆ ಮಾಡಿದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

ಪ್ರಾರಂಭದಲ್ಲಿ ರೈತರ ಸಾಲವನ್ನು ಮನ್ನಾ ಮಾಡುವುದಿಲ್ಲ ಎಂದರೂ ಕೂಡ ರೈತರ ಸಾಲವನ್ನು ಎರಡು ಬಾರಿ ಮನ್ನಾ ಮಾಡಿದ್ದೇವೆ. ಆಮೇಲೆ ಆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಉತ್ತರವನ್ನು ಕೊಡುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಉತ್ತರವನ್ನು ಕೊಡುವುದಕ್ಕೆ ಬರುವುದಿಲ್ಲ. ಕ್ಲ್ಯಾರಿಫಿಕೇಷನ್ ಅಷ್ಟೇ ಕೇಳಬೇಕು. ವಿರೋಧ ಪಕ್ಷದ ನಾಯಕರು ಆಡಳಿತಕ್ಕೆ ಬಂದುಬಿಟ್ಟ ಹಾಗೆ ಕಾಣುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಕ್ಲಾರಿಫಿಕೇಷನ್ ಕೇಳುವುದು ವಿರೋಧ ಪಕ್ಷದವರು. ಆದರೆ ಒಂದು ರೀತಿಯಲ್ಲಿ ನಾವು ಆಡಳಿತ ಪಕ್ಷದ ಸ್ಥಾನಕ್ಕೆ ಬಂದುಬಿಟ್ಟಿದ್ದೇವೆ. ಹಾಗಾಗಿ ನಾವು ಉತ್ತರವನ್ನು ಕೊಡುತ್ತೇವೆಂದು ಹೇಳಿದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಇದು ಯಾವ ಪಾರ್ಲಿಮೆಂಟರಿ ಸಿಸ್ಟಂನಲ್ಲಿ ಇದೆಯೋ ಗೊತ್ತಿಲ್ಲ. ಇದನ್ನು ನಾವು ಎಲ್ಲಿಯೂ ಕೂಡ ಓದಿಲ್ಲ. ಇದನ್ನು ಹೊಸದಾಗಿ ತಿಳಿದುಕೊಳ್ಳಬೇಕು. ಪಾರ್ಲಿಮೆಂಟರಿ ಅಡ್ಮಿನಿಸ್ಟ್ರೇಷನ್‌ನಲ್ಲಿ ನಾವು ಅಧಿಕಾರಕ್ಕೆ ಬರುತ್ತಿದ್ದೇವೆ. ಈಗಲೇ ಸರ್ಕಾರದ ಪರವಾಗಿ ಉತ್ತರವನ್ನು ಕೊಡುತ್ತೇವೆಂದು ಹೇಳುವುದು, ಈ ಭ್ರಮೆಯಲ್ಲಿ ಬಹಳ ಜನ ತೇಲಾಡುತ್ತಿದ್ದಾರೆ.

**. . . ಮುಂದು**

(900) 21.06.2017 05.40 SV-KS

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿದ್ದರಾಮಯ್ಯ(ಮುಂದು):-**

ನಾನು ಏಕೆ ಮಾನ್ಯ ಯಡಿಯೂರಪ್ಪನವರ ವಿಚಾರವನ್ನು ಪ್ರಸ್ತಾಪ ಮಾಡಿದೆ ಎಂದರೆ, ಅವರು ಜೇಬಿನಲ್ಲಿ ಕೈಹಾಕಿಕೊಂಡು 'ಮಿಷನ್ – 150' ಎಂದು ಹೇಳುತ್ತಾ ಎಲ್ಲಾ ಕಡೆ ತಿರುಗಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಅವರ ಕಾಲೇಜು ದಿನಗಳಲ್ಲಿ ಒಳ್ಳೆಯ ನಾಟಕ ಮಾಡುವವರಾಗಿದ್ದರೇನೋ? ಅವರು ಒಳ್ಳೆಯ ನಾಟಕಕಾರರೆಂದು ನನಗೆ ಅನ್ನಿಸುತ್ತಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಒಮ್ಮೆ ನಾಟಕವನ್ನು ಮಾಡಿದ್ದೇನೆ. ಕಾನೂನು ಕಾಲೇಜಿನಲ್ಲಿ ವ್ಯಾಸಂಗ ಮಾಡುವಾಗ 'ಯಮಧರ್ಮರಾಯನ ಸನ್ನಿಧಿಯಲ್ಲಿ' ಎಂಬ ಒಂದು ನಾಟಕದಲ್ಲಿ ನಾನು ವೈದ್ಯರ ಪಾತ್ರವನ್ನು ಮಾಡಿದ್ದೆನು. ಗೋವಿಂದರಾಜು ಎಂಬಾತ ಅವನು ಯಮಧರ್ಮರಾಯನ ಪಾತ್ರವನ್ನು ಮಾಡಿದ್ದನು. ಅದೊಂದೇ ಬಾರಿ ನಾನು ನಾಟಕವನ್ನು ಮಾಡಿದ್ದು. ಆಮೇಲೆ Law college ಅನ್ನು ಬಿಟ್ಟ ಮೇಲೆ ನಾಟಕ ಏನೂ ಮಾಡಲಿಲ್ಲ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಡಾಕ್ಟರ್ part ಮಾಡಿದಾಗ ಮಾನ್ಯ ಈಶ್ವರಪ್ಪನವರು ಹೇಳಿದ ರೀತಿಯಲ್ಲಿ ಮಾಡಲಾಗಿರುವುದಿಲ್ಲ.

**ಶ್ರೀ ರಘುನಾಥರಾವ್ ಮಲ್ಕಾಪೂರೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳು ಮಾಡಿದ್ದ ಆ ನಾಟಕದಲ್ಲಿ ಮಾನ್ಯ ಹೆಚ್.ವಿಶ್ವನಾಥ್ ಅವರೂ ಮುಖ್ಯಮಂತ್ರಿಗಳ ಜೊತೆಯಲ್ಲಿ ಇದ್ದರು. ಇವತ್ತು ಇಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅವರು ವ್ಯಾಪಾರ ಮಾಡುವ ಶೆಟ್ಟರ ಪಾತ್ರವನ್ನು ನಿರ್ವಹಿಸಿದ್ದರು.

**(ಸದನದಲ್ಲಿ ನಗುವಿನ ಅಲೆ)**

ಅವರು ಪ್ರಥಮ ವರ್ಷದ law ತರಗತಿಯಲ್ಲಿದ್ದರು. ನಾನು ಅಂತಿಮ ವರ್ಷದ law ತರಗತಿಯಲ್ಲಿ ಓದುತ್ತಿದ್ದೆನು. ಆಗ ನಾವೆಲ್ಲಾ ಸೇರಿ College Day ಗೆ ಒಂದು ನಾಟಕವನ್ನು ಮಾಡಿದ್ದೆವು. ಅದು ಬಹಳ ಒಳ್ಳೆಯ ನಾಟಕ; ಬಹಳ ಚೆನ್ನಾಗಿತ್ತು. ಈಗ ಯಾವಾಗಲಾದರೂ ಇನ್ನೊಮ್ಮೆ ಮಾಡೋಣ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ 5 ವರ್ಷದ ಅಧಿಕಾರಾವಧಿಯನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಶಾಸಕರ ದಿನಾಚರಣೆಯನ್ನು ಮಾಡಿ ಎಲ್ಲರೂ ಕೂಡಿ ಒಂದು ನಾಟಕವನ್ನು ಮಾಡೋಣ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಭಾರತೀಯ ಜನತಾ ಪಕ್ಷದವರು ಭ್ರಮೆಯಲ್ಲಿದ್ದಾರೆ. ಮಿಷನ್-150, ಮತ್ತೆ ನಾವು ಅಧಿಕಾರಕ್ಕೆ ಬರುತ್ತೇವೆ ಎಂಬ ಭ್ರಮಾಲೋಕದಲ್ಲಿದ್ದಾರೆ. ಈ ರಾಜ್ಯದ ಜನ ಬಹಳ ಬುದ್ಧಿವಂತರು. ಯಾರು ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜಕಾರಣ ಮಾಡುತ್ತಾರೆಯೋ ಅವರನ್ನು ತಿರಸ್ಕಾರ ಮಾಡುತ್ತಾರೆ. ಏಕೆಂದರೆ ಇದು ಬಸವಣ್ಣನವರು ಹುಟ್ಟಿದ ನಾಡು; ಕನಕದಾಸರು ಹುಟ್ಟಿದ ನಾಡು; ಸಂತ ಶಿಶುನಾಶ ಶರೀಫರು ಹುಟ್ಟಿದ ನಾಡು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, 28 ಲೋಕಸಭಾ ಕ್ಷೇತ್ರಗಳಲ್ಲಿ 17 ಕ್ಷೇತ್ರಗಳಲ್ಲಿ ಗೆದ್ದು, 9 ಕ್ಷೇತ್ರಗಳಲ್ಲಿ ಸೋತಾಗ ಕನಕದಾಸರು, ಬಸವಣ್ಣನವರು ನೆನಪಾಗಲಿಲ್ಲವೆ? ಆ ಕನಕದಾಸರು, ಬಸವಣ್ಣನವರು ಧರ್ಮವನ್ನು, ಸಂಸ್ಕೃತಿಯನ್ನು ಯಾರು ಉಳಿಸುತ್ತಾರೆಯೋ ಅವರನ್ನು ಗೆಲ್ಲಿಸುತ್ತಾರೆ. ನಾಟಕ ಮಾಡಿಕೊಂಡು ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಎಂದು ಹೇಳುವವರಿಗೆ 9 ಸೀಟು ಕೊಟ್ಟರು. ಇನ್ನೂ ಇವರಿಗೆ ಗೊತ್ತಿಲ್ಲ. ಇಡೀ ದೇಶದಲ್ಲಿಯೇ ಕೊಚ್ಚಿಕೊಂಡು ಹೋಗಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಈಶ್ವರಪ್ಪನವರೆ, ನೀವು ಮಾತನಾಡಿದ್ದೀರಲ್ಲವೆ? ಕುಳಿತುಕೊಳ್ಳಿ. ಆಮೇಲೆ ನೀವು ಮಾತನಾಡಿ. ಈಗ ನನಗೆ ಮಾತನಾಡಲು ಅವಕಾಶ ಕೊಡದಿದ್ದರೆ ಹೇಗೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾತನಾಡುವುದಕ್ಕೆ ಬಿಡದೆಯೇ ಇಷ್ಟು ಮಾತನಾಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅದಕ್ಕೆ ಹೀಗೆ ಅಡ್ಡಿಪಡಿಸಬಹುದೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಯವರು ತಮ್ಮ ಮಾತನ್ನು ಮುಗಿಸಲಿ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ಕಡೆಯಲ್ಲಿ ಶ್ರೀ ಈಶ್ವರಪ್ಪನವರನ್ನು ಮಹಿಷಾಸುರನಿಗೆ ಹೋಲಿಸುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಹಿಷಾಸುರನೆಂಬ ರಾಕ್ಷಸನನ್ನು ಮರ್ದನ ಮಾಡಿದ್ದು ಮಹಿಷಾಸುರ ಮರ್ದಿನಿ. ಇವರಂತಹ ರಾಕ್ಷಸರನ್ನು ತೆಗೆದಿದ್ದು.

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಮಹಿಷಾಸುರನನ್ನು ಚಾಮುಂಡಿ ಸಂಹರಿಸಿದ್ದಲ್ಲವೆ? ಇವರೇನು ಹೇಳುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಹಿಷಾಸುರ ಮರ್ದಿನಿಯೇ ಚಾಮುಂಡಿ. ಇವರೆಲ್ಲಾ ಯಾರು ಹೇಳಿ? ಅದೆಲ್ಲಾ ಬೇಡ ಬಿಡಿ. ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ:-** ಮಾನ್ಯ ಸಭಾಪತಿಯವರೆ, ಮಹಿಷಾಸುರನ ಅವತಾರವನ್ನು ನೋಡಿದರೆ ಬಹಳ ಚೆನ್ನಾಗಿ ಗೊತ್ತಾಗುತ್ತದೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇವರೇ ಇಬ್ಬರು. ಅರ್ಥವಾಯಿತಲ್ಲವೆ? ಸ್ವಲ್ಪ ಹುಷಾರಾಗಿರಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಈಶ್ವರಪ್ಪನವರೆ, ನಾನೀಗ ಹುಷಾರಾಗಿರುವುದರಿಂದಲೇ ನಾಲ್ಕು ವರ್ಷ ಮುಗಿಸಿ 5ನೇ ವರ್ಷಕ್ಕೆ ಕಾಲಿಟ್ಟಿದ್ದೇನೆ. ಇಲ್ಲದಿದ್ದರೆ ಬಹಳ ಕಷ್ಟವಾಗಿ ಬಿಡುತ್ತಿತ್ತು. ನಾಲ್ಕು ವರ್ಷ ಮುಗಿಸಿ 5ನೇ ವರ್ಷಕ್ಕೆ ಕಾಲಿಟ್ಟು ಪುನಃ 2018ರ ಚುನಾವಣೆಯಲ್ಲಿ ಮತ್ತೆ ಗೆದ್ದು ಅಧಿಕಾರಕ್ಕೆ ಬರುತ್ತೇವೆ.

**(ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತ ಪಡಿಸಿದರು.)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದೇ ಭ್ರಮಾಲೋಕದಲ್ಲಿ ಇರುವುದು ಎಂದು ಹೇಳುವುದು. ಇಷ್ಟು ಹೊತ್ತು ನಿದ್ರೆಯಲ್ಲಿದ್ದು, ನಿದ್ರಾಲೋಕದಲ್ಲಿದ್ದರೆ ಅನ್ನಿಸುತ್ತದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮತ್ತೆ ನಾವೇ ಅಧಿಕಾರಕ್ಕೆ ಬರುತ್ತೇವೆ. ನಂಜನಗೂಡು, ಚಾಮರಾಜನಗರದ ಉಪ ಚುನಾವಣೆಯಲ್ಲಿ ಏನು ಹೇಳಿದ್ದರು?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಹೆಬ್ಬಾಳ, ದೇವದುರ್ಗ ಉಪ ಚುನಾವಣೆಯ ಬಗ್ಗೆ ಏನು ಹೇಳುತ್ತಾರೆ? ಲೋಕಸಭೆ ಚುನಾವಣೆಯಲ್ಲಿ ಏನು ಹೇಳಿದ್ದರು?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಚಾಮರಾಜನಗರ, ಗುಂಡ್ಲುಪೇಟೆ ಉಪ ಚುನಾವಣೆಯ ಫಲಿತಾಂಶ 2018ರ ಚುನಾವಣೆಯ ದಿಕ್ಸೂಚಿ ಎಂದು ಹೇಳಿದ್ದರು. 'ದಿಕ್ಸೂಚಿ' ಎಂಬುದು ಅವರೇ ಬಳಸಿದ್ದ ಪದ. 2018ರಲ್ಲಿ ಈ ಯಡಿಯೂರಪ್ಪ ಮುಖ್ಯಮಂತ್ರಿಯಾಗಬೇಕಾದರೆ ಬಿ.ಜೆ.ಪಿ.ಗೆ ಮತ ಹಾಕಬೇಕೆಂದು ಹೇಳಿದ್ದರು. ಆದರೆ ಜನ ಏನು ಮಾಡಿದರು? ನಂಜನಗೂಡಿನಲ್ಲಿ ಇದು ಸಿದ್ಧರಾಮಯ್ಯನವರಿಗೂ ನನಗೂ ನಡೆಯುತ್ತಿರುವ ಚುನಾವಣೆ; ಗೆದ್ದು ಆಗಿಹೋಯಿತು; ವಿಜಯೋತ್ಸವ ಆಚರಿಸಲು ಹೋಗುತ್ತಿದ್ದೇವೆ ಎಂದು ಹೇಳಿದ್ದರು. ನಾವು 21,000 ಮತಗಳ ಅಂತರದಿಂದ ಗೆದ್ದಿರುತ್ತೇವೆ. ಇದು ಹೇಗೆ ಸಾಧ್ಯವಾಯಿತು? ಅವರ ಪ್ರಕಾರ ಇದೇ 2018ರ ಚುನಾವಣೆಗೆ ದಿಕ್ಸೂಚಿಯಾಗಲಿ. ನಾನು 'ಇದು ದಿಕ್ಸೂಚಿಯಾಗುವುದಿಲ್ಲ' ಎಂದು ಹೇಳಿದ್ದೆನು. ಮಾನ್ಯ ಈಶ್ವರಪ್ಪನವರು 'ಇಲ್ಲ, ಇದೇ ದಿಕ್ಸೂಚಿ' ಎಂದು ಹೇಳಿದ್ದರು.

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಆಡಳಿತ ಪಕ್ಷದ ಸದಸ್ಯರು ಮತ್ತೊಮ್ಮೆ ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು.)**

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, 'ನರೇಂದ್ರಮೋದಿ ಕೊಲೆಗಡುಕ, ಕೋಮುವಾದಿ' ಎಂದು ಹೇಳಿದ್ದರು. ನಾವು 17 ಸ್ಥಾನಗಳನ್ನು ಗೆದ್ದೆವು, ಅದಕ್ಕೆ ಉತ್ತರವಿಲ್ಲ. ದುಡ್ಡು ಹಂಚಿ 2 ಸೀಟನ್ನು ಗೆದ್ದು ಇಡೀ ಜಗತ್ತನ್ನೇ ಗೆದ್ದೆವು ಎಂಬಂತೆ ಆಡುತ್ತಿದ್ದಾರೆ. ಲೋಕಸಭಾ ಚುನಾವಣೆ ಬರಲಿ. ಗೆದ್ದಿದ್ದನ್ನು ಹೇಳಬೇಕು. ಆ ಲೋಕಸಭಾ ಚುನಾವಣೆಯನ್ನು ಮರೆತುಬಿಟ್ಟಿದ್ದಾರೆ. ಆಗ ಮಾನ್ಯ ನರೇಂದ್ರ ಮೋದಿಯವರನ್ನು ಟೀಕೆ ಮಾಡಿದರು. ಇಂದು ಇಡೀ ವಿಶ್ವವೇ ಶ್ರೀ ನರೇಂದ್ರ ಮೋದಿಯವರನ್ನು ಹೊಗಳುತ್ತಿದೆ. ಇಡೀ ದೇಶದಲ್ಲಿಯೇ ಕಾಂಗ್ರೆಸ್ ವಿಳಾಸವಿಲ್ಲದಂತಾಗಿದೆ. ಇವರಿಗೆ ಇನ್ನೂ ಬುದ್ಧಿ ಬಂದಿಲ್ಲವೆಂದರೆ ನಾನು ಏನು ಹೇಳಲಿ? ಇನ್ನಾದರೂ ಇವರಿಗೆ ಬುದ್ಧಿ ಬರಲಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಈ ಎರಡೂ ಪಕ್ಷಗಳವರು ನಮ್ಮನ್ನು ನೆನಪಿಸಿಕೊಳ್ಳಬೇಕು.

**ಶ್ರೀ ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಇವರು ಹೊಸದಾಗಿ ಸಂಬಂಧವನ್ನು ಬೆಳೆಸಿದ್ದಾರೆ. ಆಮೇಲೆ ವಿಚ್ಛೇದನ ಆಗಿಬಿಟ್ಟೀತು.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 'ದಳ' ಇಲ್ಲದೆ ಯಾವುದೇ 'ದಾಳ' ಉರುಳುವುದಿಲ್ಲ ಎಂದು ನಾವು ಹೇಳಿದ್ದೇವೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಶರವಣ ಅವರೆ, ನಿಮಗೆ ಗುಂಡ್ಲುಪೇಟೆಯೂ ಗೊತ್ತಿಲ್ಲ, ಚಾಮರಾಜನಗರವೂ ಗೊತ್ತಿಲ್ಲ.

**(ಸದನದಲ್ಲಿ ನಗುವಿನ ಅಲೆ)**

ಇನ್ನೂ ಬೇಕಾದರೆ ಮಾನ್ಯ ವಿ.ಸೋಮಣ್ಣನವರು ಮಾತನಾಡಿದರೆ ನಾನು ಒಪ್ಪಿಕೊಳ್ಳಬಹುದು. ಏಕೆಂದರೆ ಅವರಿಗೆ ಗುಂಡ್ಲುಪೇಟೆಯೂ ಗೊತ್ತು, ಚಾಮರಾಜನಗರವೂ ಗೊತ್ತು.

**ಶ್ರೀ ವಿ.ಸೋಮಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಒಂದು ನಿಮಿಷ ಕುಳಿತುಕೊಂಡರೆ ನಾನು ಮಾತನಾಡುತ್ತೇನೆ. ಗುಂಡ್ಲುಪೇಟೆ, ಚಾಮರಾಜನಗರ, ನಂಜನಗೂಡಿನಲ್ಲಿ 21,000 ಮತಗಳ ಅಂತರದಿಂದ ಗೆಲುವು ಸಾಧಿಸಿದೆವು ಎಂದು ಮುಖ್ಯಮಂತ್ರಿಯವರು ಹೇಳಿದ್ದು ಸತ್ಯ. ಅದಕ್ಕೆ ನಮ್ಮದೇನೂ ತಕರಾರಿಲ್ಲ. ದೇವದುರ್ಗ ಮತ್ತು ಹೆಬ್ಬಾಳ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚುನಾವಣೆ ನಡೆಯಿತು. ಅದಕ್ಕೆ ಅವರೂ ಬಂದಿದ್ದರು. ಮುಖ್ಯಮಂತ್ರಿಗಳು ತಮ್ಮ ತವರು ಜಿಲ್ಲೆ ಎನ್ನುವುದನ್ನು ಮರೆತುಬಿಟ್ಟು ಪದೇ ಪದೇ ಹೇಳುತ್ತಿದ್ದರೂ ನಮಗೇನೂ ಬೇಜಾರಿರುವುದಿಲ್ಲ.

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಬೀದರ್ ಒಂದನ್ನೂ ಸೇರಿಸಲಿ.

**ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು):–** ಮಾನ್ಯ ಸಭಾಪತಿಯವರೆ, ಒಂಭತ್ತು ಉಪಚುನಾವಣೆಗಳು ನಡೆದಿವೆ.

**(ಗೊಂದಲ)**

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಇಂದು ಬಹಳ ಸಂತೋಷವಾಗಿದ್ದಾರೆ. ಅದರಲ್ಲಿ ನಮ್ಮ ತಕರಾರು ಏನೂ ಇಲ್ಲ. ದೇವದುರ್ಗ ಇರಬಹುದು, ಬೀದರ್ ಇರಬಹುದು, ಬಳ್ಳಾರಿ ಇರಬಹುದು, ಹೆಬ್ಬಾಳ ಇರಬಹುದು. ಆದರೆ ಒಂದು ಸತ್ಯ ಏನೆಂದರೆ, ಆಡಳಿತ ಪಕ್ಷ ಮತ್ತು ವಿರೋಧಪಕ್ಷದವರೆಲ್ಲರೂ ಕಳೆದ ಲೋಕಸಭಾ ಚುನಾವಣೆಯಲ್ಲಿ ಏನಾಯಿತು ಎನ್ನುವುದಕ್ಕಿಂತ ಹೆಚ್ಚಾಗಿ, ಮೊನ್ನೆ ನಡೆದಂತಹ ಚುನಾವಣೆಯಲ್ಲಿ ಆದದ್ದನ್ನು ಮುಖ್ಯಮಂತ್ರಿಗಳು ಪದೇ ಪದೇ ಉಲ್ಲೇಖ ಮಾಡುತ್ತಿದ್ದಾರೆ. ನಮಗೇನೂ ಬೇಜಾರಿಲ್ಲ. 2018ಕ್ಕೆ ಈ ಎರಡೂ ಕ್ಷೇತ್ರಗಳಲ್ಲಿ, ನಂಜನಗೂಡಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ಇಲ್ಲದ ಕಾರಣ ಮಾನ್ಯ ಬಸವರಾಜ ಹೊರಟ್ಟಿಯವರು ಹೇಳಿದಂತೆ ಜನತಾ ದಳದ ಅಭ್ಯರ್ಥಿಯನ್ನು ತಂದು ಹಾಕಿರುವುದನ್ನು ಅವರು ನೆನಪಿನಲ್ಲಿಡಬೇಕು.

**ಶ್ರೀ ಕೃಷ್ಣ ಬೈರೇಗೌಡ:–** ಮಾನ್ಯ ಸಭಾಪತಿಯವರೆ, ಇವರೂ ಕಾಂಗ್ರೆಸ್ ಅಭ್ಯರ್ಥಿಯನ್ನು ಹಾಕಿದ್ದರು. ಹಾಗಾದರೆ ಇವರ ಹತ್ತಿರ ಅಭ್ಯರ್ಥಿ ಇದ್ದರೆ?

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ.

**(ಗೊಂದಲ)**

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ನಾನು ಈಗಾಗಲೇ ತಿಳಿಸಿರುವಂತೆ ಒಂದಂತೂ ಸತ್ಯ. ಮಾನ್ಯ ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಅವರ ಗೌರವವನ್ನು ಉಳಿಸುವಂತಹ ಕೆಲಸವನ್ನು ಅಲ್ಲಿಯ ಜನತೆ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ನಮ್ಮ ಸದನದಲ್ಲಿ ಚುನಾವಣಾ ವಿಶ್ಲೇಷಣೆ ಸಾಕಷ್ಟು ಬಾರಿ ಆಗಿದೆ. ಪದೇ ಪದೇ ಪ್ರಾಸಂಗಿಕವಾಗಿ ಮುಖ್ಯಮಂತ್ರಿಗಳು ಅವರ ವಾದಕ್ಕೆ ಪುಷ್ಟಿ ಕೊಡುವುದಕ್ಕಾಗಿ ಕೆಲವು ಸಂಗತಿಗಳನ್ನು ಹೇಳಿದ್ದಾರೆ. ನಾವು ಅದನ್ನೇ ಬೆಳೆಸುವುದರಲ್ಲಿ ಅರ್ಥವಿಲ್ಲ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ತುಂಬಾ ಗಂಭೀರವಾದಂತಹ ವಿಚಾರಗಳನ್ನು ಕೂಡ ಚರ್ಚೆ ಮಾಡುತ್ತಿದ್ದಾರೆ. ಚುನಾವಣೆ ಬರುತ್ತದೆ; ಹೋಗುತ್ತದೆ. ಮುಂದಿನ ಚುನಾವಣೆಯ ಬಗ್ಗೆ ಅವರೇನು ಹೇಳುತ್ತಾರೆಯೋ ಅದು ಅವರ ವಿವೇಚನೆಗೆ ಬಿಟ್ಟಂತಹ ವಿಚಾರ. ನಮಗೇನು ಬೇಸರಿಕೆ ಇಲ್ಲ. ಅದೃಷ್ಟಲಕ್ಷ್ಮಿ ಯಾರಿಗೆ ಒಲಿಯುತ್ತಾಳೆಯೋ ....

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸೋಮಣ್ಣನವರೆ, ಮುಂದಿನ ಚುನಾವಣೆಯ ಬಗ್ಗೆ ನಾವಿಬ್ಬರೂ ಮಾತನಾಡಿಕೊಳ್ಳೋಣ.

**(ಸದನದಲ್ಲಿ ನಗುವಿನ ಅಲೆ)**

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೆ, ದಯಮಾಡಿ ಮುಖ್ಯಮಂತ್ರಿಗಳು ಸಾಲ ಮನ್ನಾದ ಬಗ್ಗೆ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ಮಾಡಲಿ. ಅದೇ ಗುಂಗಿನಲ್ಲಿರುವುದು ಬೇಡ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನಿಜ, ಅದು ನಮ್ಮ ತವರು ಜಿಲ್ಲೆ. ಇವೆಲ್ಲಾ ಗೊತ್ತಿದ್ದರೂ ಈ ಪದಗಳನ್ನು ಬಳಸಿದ್ದರು ಎಂದು ಹೇಳಿದೆನಷ್ಟೆ. ಅಲ್ಲಿ ನಾವೇ ಗೆಲ್ಲುತ್ತೇವೆಂದು ಮಾನ್ಯ ಸೋಮಣ್ಣನವರಿಗೆ, ಮಾನ್ಯ ಯಡಿಯೂರಪ್ಪನವರಿಗೆ, ಮಾನ್ಯ ಈಶ್ವರಪ್ಪನವರಿಗೆ ಗೊತ್ತಿತ್ತು. ಏಕೆಂದರೆ ಮಾನ್ಯ ಸೋಮಣ್ಣನವರು ಬಹಳ ದಿನ ಅಲ್ಲಿದ್ದರು. ಬಿ.ಜೆ.ಪಿ.ಯ ಇತರ ನಾಯಕರುಗಳಿಗಿಂತ ಶ್ರೀ ಸೋಮಣ್ಣನವರಿಗೆ ನಮ್ಮ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯ ಬಗ್ಗೆ ಹೆಚ್ಚು ತಿಳಿದಿದೆ. ಅದಕ್ಕೆ ಮುಂದಿನ ಚುನಾವಣೆಯ ಹೊತ್ತಿಗೆ ಏನು ಮಾಡಬೇಕು ಎಂದು ನಾವಿಬ್ಬರೂ ಮಾತನಾಡಿಕೊಳ್ಳೋಣ ಮಾನ್ಯ ಸೋಮಣ್ಣನವರೆ.

(...ಮುಂದು)

(901)/21-6-2017/5-50/RC-MD

(ಸಭಾಪತಿಯವರ ಉಪಸ್ಥಿತಿ)

**ಶ್ರೀ ವಿ.ಸೋಮಣ್ಣ:–** ಮಾನ್ಯ ಮುಖ್ಯ ಮಂತ್ರಿಗಳೆ, ನೀವು ಕಣ್ಣು ಹಾಯಿಸುವುದನ್ನು ನೋಡಿದರೆ ಇನ್ನೂ ಯಾರ್ಯಾರನ್ನು ಯಾವ ಯಾವ ಊರಿಗೆ ತೆಗೆದುಕೊಂಡು ಹೋಗಿ ಬಿಡುತ್ತೀರೋ ಗೊತ್ತಿಲ್ಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**Sri SIDDARAMAIAH:-** Are you not a good friend of mine?

**ಶ್ರೀ ವಿ.ಸೋಮಣ್ಣ:–** ಮಾನ್ಯ ಮುಖ್ಯಮಂತ್ರಿಗಳೆ, ನೀವು good friend, ಮತ್ತೊಂದು ಎಲ್ಲವನ್ನೂ ನೋಡಿದೆ. ಹಳೆಯ ಸಿದ್ದರಾಮಯ್ಯನವರನ್ನು ನೋಡಿದೆ, ಹೊಸ ಸಿದ್ದರಾಮಯ್ಯನವರನ್ನು ನೋಡಿದ್ದೇನೆ. ಆದರೆ ಒಂದು ಸತ್ಯವಾದ ಸಂಗತಿ ಏನೆಂದರೆ, ಈ ನಾಲ್ಕು ವರ್ಷ ಈ ಎಲ್ಲದರ ಮಧ್ಯದಲ್ಲಿಯೂ ಬಚಾವ್ ಆಗಿದ್ದೀರಲ್ಲ! ಅದಕ್ಕೆ ನಾನು ನಿಮಗೆ ಅಭಿನಂದನೆಯನ್ನು ಸಹ ಸಲ್ಲಿಸುತ್ತೇನೆ. ಏಕೆಂದರೆ ಯಾವ ಯಾವ ರಾಕ್ಷಸರು ಎಲ್ಲೆಲ್ಲಿ ಇದ್ದಾರೆಯೋ ಯಾವ ಯಾವ ಹುತ್ತದಲ್ಲಿ ಎಂತೆಂತಹ ಘಟಸರ್ಪಗಳಿವೆ ಎನ್ನುವುದರ ಬಗ್ಗೆ ತಾವು ತುಂಬಾ ಚೆನ್ನಾಗಿ ವಿಮರ್ಶೆ ಮಾಡಿದ್ದೀರಿ, ಆದಕಾರಣ ನಿಮಗೂ ಸಹ ಡಾಕ್ಟರೇಟ್ ಪದವಿಯನ್ನು ಕೊಡಬೇಕಾಗುತ್ತದೆ. ಆದರೆ ಮುಂದಿನ ದಿನಗಳಲ್ಲಿ ಅದು ಆಗುತ್ತದೆಯೋ ಇಲ್ಲವೋ ಎಂದು ಜನಗಳೇ ತೀರ್ಮಾನ ಮಾಡುತ್ತಾರೆ.

ಮಾನ್ಯ ಸಭಾಪತಿಯವರೆ, ಮಾನ್ಯ ಸಿದ್ದರಾಮಯ್ಯನವರನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ. ಏಕೆಂದರೆ ಈ ರಾಜ್ಯದಲ್ಲಿ ಒಬ್ಬರೇ ಒಬ್ಬರು ಸಿದ್ದರಾಮಯ್ಯ. ನಿಮ್ಮಂಥವರನ್ನು ಕೂಡ ಎಲ್ಲಿಯೋ ಒಂದು ಕಡೆ ನೀವು ಮಾಡಿರುವಂತಹ ಕೆಲವು ಪಾಪದ ಕೂಸುಗಳನ್ನು ಸಹ ಅವರು ಸೈರಿಸಿಕೊಂಡು ವ್ಯವಸ್ಥಿತವಾಗಿ ಸರ್ಕಾರವನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಆದುದರಿಂದ ದಯಮಾಡಿ ಇದನ್ನು ಎಲ್ಲೆಲ್ಲಿಗೋ ಎಳೆದುಕೊಂಡು ಹೋಗುವುದು ಬೇಡ.

**ಶ್ರೀ ಎನ್.ಎಸ್.ಬೋಸರಾಜು:–** ಯಾರು ಪಾಪ ಮಾಡಿಲ್ಲ.

(ಗೊಂದಲ)

**ಸಭಾಪತಿಯವರು:–** ಸಾಕು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೆ.....

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಶರವಣ ಅವರೆ, ಈ ರಾಜ್ಯದ ಜನತೆಗೆ ಯಾರ ಯಾರ ಪಾಪದ ಕೊಡ ತುಂಬಿದೆ ಎಂದು ಗೊತ್ತಾಗಿದೆ. ಆ ಪಾಪದ ಕೊಡ ತುಂಬಿದ ಮೇಲೆ ಯಾರೂ ಸಹ ಉಳಿಯುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಈ ರೀತಿಯ ಭ್ರಮೆಗಳು ಬೇಡ. ಏಕೆಂದರೆ "Mission – 150" ಎಂದರೆ ಏನು? I can't understand it. ಏನು ಹಾಗೆಂದರೆ? 150 ಜನ ಓಟು ಹಾಕಿದರೆ ಆಯಿತಾ? ಜನ ನಿಮ್ಮನ್ನು ಗೆಲ್ಲಿಸಿ ಬಿಟ್ಟರೇನು? ಹೋಗಿ–ಬಂದು "Mission – 150"

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಪುನರುಚ್ಚರಿಸುತ್ತಿದ್ದರು. ಇದನ್ನು ನೋಡಿ ನನಗೆ ನಗಬೇಕೋ, ಬೈಯಬೇಕೋ ಒಂದೂ ಗೊತ್ತಾಗುತ್ತಿರಲಿಲ್ಲ. ನಂತರ ಈಗ ಸಾಲ ಮನ್ನಾ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ ಮೇಲೆ ನನಗೆ ಮುಖ್ಯಮಂತ್ರಿ ಸ್ಥಾನ ಸಿಕ್ಕದರೆ 24 ಗಂಟೆಯಲ್ಲಿ ಸಾಲ ಮನ್ನಾ ಮಾಡುತ್ತೇನೆ ಎಂದು ಹೇಳಿದರು. ಇದ್ದಾಗಲೇ ಮಾಡಲಿಲ್ಲ, ಇನ್ನು ಬರುವುದೇ ಇಲ್ಲವಲ್ಲ! ಅವರು ಇನ್ನೇನು ಮಾಡುತ್ತಾರೆ?

**ಶ್ರೀ ಟಿ.ಎ.ಶರವಣ:-** ಈ ವಿಷಯದ ಬಗ್ಗೆ ಹಿಂದೆಯು ಸಹ ಹೋರಾಟ ಮಾಡಿದ್ದೇವೆ.

(ಗೊಂದಲ)

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಶರವಣ ಅವರೆ ದಯಮಾಡಿ ತಾವು ಸುಮ್ಮನೆ ಕುಳಿತುಕೊಳ್ಳಿ. ನೀವು ಯಾವ ಹೋರಾಟ ಮಾಡಿದ್ದೀರಿ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ಶರವಣ ಅವರನ್ನು ಕಂಡರೆ ನಿಮಗೇಕೆ ಅಷ್ಟೊಂದು ಸಿಟ್ಟು?

**ಶ್ರೀ ಸಿದ್ದರಾಮಯ್ಯ:-** ಅದು ಸಿಟ್ಟಲ್ಲ, ಪ್ರೀತಿ.

**ಶ್ರಿ ಕೆ.ಎಸ್.ಈಶ್ವರಪ್ಪ:-** ಪ್ರೀತಿ; ನೀವು ಬಳಸುವಂತಹ ಭಾಷೆ, ನಿಮ್ಮ ಶೈಲಿ ಎಲ್ಲಾ ನೋಡಿದರೆ ಇದು ಯಾವ ಸೀಮೆಯ ಪ್ರೀತಿ ಎಂದು ನನಗೆ ಅರ್ಥವಾಗುತ್ತಿಲ್ಲ.

**ಶ್ರೀ ಸಿದ್ದರಾಮಯ್ಯ:-** ಹೋರಾಟ ಮಾಡಿದ್ದೇವೆಂದು ಹೇಳುತ್ತಾರಲ್ಲ, ಏನು ಹೋರಾಟ ಮಾಡಿದ್ದಾರೆ ತಿಳಿಸಿ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಹಾಗಾದರೆ ಅವರ ಮೇಲೆ ಏಕಿಷ್ಟು ಸಿಟ್ಟು?

**ಶ್ರೀ ಸಿದ್ದರಾಮಯ್ಯ:-** ಅವರ ಮೇಲೆ ಯಾವ ರೀತಿಯಾದಂತಹ ಸಿಟ್ಟು ಇಲ್ಲ. ನೀವು ಹೋರಾಟ ಮಾಡಿಲ್ಲ ಕುಳಿತುಕೊಳ್ಳಿ ಎಂದು ಹೇಳಿದೆ. ನನಗೆ ಯಾರ ಮೇಲೆಯೂ ಸಿಟ್ಟಿಲ್ಲ.

**ಶ್ರೀ ಟಿ.ಎ.ಶರವಣ:-** ಮಾನ್ಯ ಈಶ್ವರಪ್ಪ ಸಾಹೇಬರೆ, ಅತಿಯಾದ ಪ್ರೀತಿ ಅಪಾಯಕ್ಕೆ ಆಹ್ವಾನ.

**Sri SIDDARAMAIAH:-** I love everybody. That is what Basavanna, Mahatma Gandhiji, Dr. B.R.Ambedkar taught us.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಎಲ್ಲರನ್ನೂ ಪ್ರೀತಿಸುತ್ತೇವೆ. ಅಂದರೆ ಮಾನ್ಯ ಶರವಣ ಅವರನ್ನು, ಮಾನ್ಯ ಸೋಮಣ್ಣ ಅವರನ್ನು ಮಾನ್ಯ ಈಶ್ವರಪ್ಪನವರನ್ನೂ ಸಹ ಪ್ರೀತಿಸುತ್ತೇವೆ.

**ಶ್ರೀ ಎಂ.ಕೆ.ಪ್ರಾಣೇಶ್:-** ಮಾನ್ಯ ಮುಖ್ಯಮಂತ್ರಿಗಳೆ, ಗುಂಡ್ಲುಪೇಟೆಯ ಚುನಾವಣೆಯಲ್ಲಿ ಗೆದ್ದನಂತರ ತಾವು ಅಭಿನಂದಿಸಿದ್ದು ಜನತಾದಳದವರನ್ನೇ! ಆದರೆ ಈ ದಿವಸ ಅವರನ್ನು ನೆನಪು ಸಹ ಮಾಡಿಕೊಳ್ಳಲಿಲ್ಲವಲ್ಲ ನೀವು.

**ಶ್ರೀ ಸಿದ್ದರಾಮಯ್ಯ:-** ನೋಡಿ ನಾವು ಕೃತಘ್ನರಲ್ಲ, ಕೃತಜ್ಞತೆ ಅರ್ಪಿಸುವಂಥವರು.

**ಶ್ರೀ ಎಂ.ಕೆ.ಪ್ರಾಣೇಶ್:-** ಆದರೆ ಗೆಲುವಿನಲ್ಲಿ ಅವರ ಸಹಕಾರ ಇದೆ ಎಂಬುದನ್ನು ತಾವು ಹೇಳಬೇಕಲ್ಲವೆ.

**Sri SIDDARAMAIAH:-** You don't know. ನಾನು ಬಹಿರಂಗವಾಗಿಯೇ ಹೇಳಿಕೆಯನ್ನು ಕೊಟ್ಟಿದ್ದೇನೆ. ಏನಪ್ಪ ಶರವಣ ನಾನು ಕೊಟ್ಟಿಲ್ಲವೆ?

**ಶ್ರೀ ಟಿ.ಎ.ಶರವಣ:-** ಕೊಟ್ಟಿದ್ದೀರಿ ಸರ್.

**ಶ್ರೀ ಎಂ.ಕೆ.ಪ್ರಾಣೇಶ್:-** ಅದಕ್ಕೆ ನಮ್ಮದ್ದೇನೂ ತಕರಾರಿಲ್ಲ. ಆದರೆ ಜಯ ನಮ್ಮದಷ್ಟೇ ಅಲ್ಲ, ನಮ್ಮದು, ಜೆ.ಡಿ.ಎಸ್. ಅವರದು ಸಹ ಎಂದು ಹೇಳಬೇಕಾಗಿತ್ತು. ಹಿರಿಯರಾದಂತಹ ಮಾನ್ಯ ಹೊರಟ್ಟಿಯವರ ಹೆಸರನ್ನೇ ತಾವು ಪ್ರಸ್ತಾಪ ಮಾಡಿಲ್ಲ!

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳಿಗೆ relax ಬೇಕು ಎಂದರೆ, ನಮ್ಮ ವಿಧಾನ ಪರಿಷತ್ತಿಗೆ ಬರುತ್ತಾರೆ. ಅಲ್ಲಿ ಜಗಳವಾಡುತ್ತಾರೆ, ಇಲ್ಲಿ relax ಮಾಡಿಕೊಳ್ಳುವುದಕ್ಕೆ ಬರುತ್ತಾರೆ; ಇಲ್ಲಿಗೆ ಬಂದು relax ಆದ ಮೇಲೆ ಸ್ವಲ್ಪ ಸಮಾಧಾನವಾಗುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಇದಕ್ಕೆ ನನಗೆ ಸ್ಫೂರ್ತಿ ಯಾರು ಗೊತ್ತೆ? ನನಗೆ ಮಾನ್ಯ ಈಶ್ವರಪ್ಪನವರೆ ಸ್ಫೂರ್ತಿ. ಸ್ಫೂರ್ತಿ ಪಡೆದುಕೊಳ್ಳುವುದಕ್ಕೋಸ್ಕರವೆ ನಾನು ಇಲ್ಲಿಗೆ ಬರುತ್ತೇನೆ.

ಮಾನ್ಯ ಸಭಾಪತಿಯವರೆ, ಮಾನ್ಯ ಯಡಿಯೂರಪ್ಪನವರು 24 ಗಂಟೆಯೊಳಗೆ ಸಾಲ ಮನ್ನಾ ಮಾಡುತ್ತೇನೆ ಎಂದು ಹೇಳಿದ್ದರು. ಇಲ್ಲಿ ಇದ್ದಾಗ ಈ ರೀತಿ ಹೇಳುವುದು, ಈಗ ಕೇಂದ್ರ

ಸರ್ಕಾರದಲ್ಲಿದ್ದವರು ಆ ರೀತಿ ಹೇಳುತ್ತಾರೆ. ನಾವು ಕೇಂದ್ರದಲ್ಲಿ ನಮ್ಮ ಸರ್ಕಾರ ಇಲ್ಲದೆ ಇದ್ದಾಗಲೂ ಸಹ ಸಾಲ ಮನ್ನಾ ಮಾಡಿದ್ದೇವೆ. ಮಾನ್ಯ ವಿ.ಪಿ.ಸಿಂಗ್ ಅವರು ಇದ್ದಾಗಲೂ ಮಾಡಿದ್ದೇವೆ, ಮಾನ್ಯ ಮನಮೋಹನಸಿಂಗ್ ಅವರು ಇದ್ದಾಗಲೂ ಸಹ ಸಾಲ ಮನ್ನಾ ಮಾಡಿದ್ದೇವೆ. ನಾನು ಸಾಲ ಮನ್ನಾ ಮಾಡುವುದಕ್ಕೆ ವಿರೋಧ ಇಲ್ಲ. ನಾನು ಏನು ಹೇಳಿದೆ ಎಂದರೆ, ಕರ್ನಾಟಕದಲ್ಲಿ ಈಗಾಗಲೇ 1 ಲಕ್ಷ 16 ಸಾವಿರದ 6 ಕೋಟಿ ರೂಪಾಯಿ ಸಾಲ ಇದೆ. ಅದರಲ್ಲಿ 52,577 ಕೋಟಿ ರೂಪಾಯಿ ಅಲ್ಪಾವಧಿ ಸಾಲ ಇದೆ. ಇದರಲ್ಲಿ ಸೊಸೈಟಿಗಳ ಮೂಲಕ 10,736 ಕೋಟಿ ರೂಪಾಯಿಗಳನ್ನು 22,27,506 ಜನರಿಗೆ ನಾವು ಸಾಲ ಕೊಟ್ಟಿದ್ದೇವೆ. ಇದರಲ್ಲಿ ಕೆಲವರು 25 ಸಾವಿರ, ಕೆಲವರು 50 ಸಾವಿರ, ಕೆಲವರು 75 ಸಾವಿರ, ಇನ್ನೂ ಕೆಲವರು 1 ಲಕ್ಷ, ಕೆಲವರು 2 ಲಕ್ಷ, ಕೆಲವರು 3 ಲಕ್ಷ ರೂಪಾಯಿಗಳಷ್ಟು ಅಲ್ಪಾವಧಿ ಸಾಲವನ್ನು ತೆಗೆದುಕೊಂಡಿದ್ದಾರೆ. ಇದಕ್ಕೆ ಬಡ್ಡಿ ಇಲ್ಲ. 3 ಲಕ್ಷದವರೆಗೂ ಬಡ್ಡಿ ಕಟ್ಟುವಂತಿಲ್ಲ. ಅದರ ಸಬ್ಸಿಡಿಯನ್ನು ನಾವು ಕೊಡುತ್ತೇವೆ. ವರ್ಷಕ್ಕೆ ಸುಮಾರು 800 ಕೋಟಿಗೂ ಹೆಚ್ಚು ಹಣವನ್ನು ನಾವು ಬಡ್ಡಿ ಸಬ್ಸಿಡಿ ರೂಪದಲ್ಲಿ ಕೊಡುತ್ತೇವೆ. ಹಾಗಾಗಿ 52,572 ಕೋಟಿ ರೂಪಾಯಿಗಳಲ್ಲಿ ಸುಮಾರು 42 ಸಾವಿರ ಕೋಟಿಗೂ ಹೆಚ್ಚು ಹಣ ಕೇಂದ್ರ ಸರ್ಕಾರದ ಗ್ರಾಮೀಣ ಬ್ಯಾಂಕುಗಳು ಹಾಗೂ Commercial Bank ಗಳಲ್ಲಿವೆ. ನಾವು ಕೊಟ್ಟಿರುವುದು 10,736 ಕೋಟಿ ರೂಪಾಯಿಗಳು. ಒಟ್ಟು ಸಾಲದಲ್ಲಿ ನಮ್ಮದು ಕೇವಲ ಶೇಕಡ 20ರಷ್ಟು ಮಾತ್ರ cover ಆಗುತ್ತದೆ. ಅದಕ್ಕೆ ನಾನು ಎಲ್ಲಾ ರೈತರಿಗೂ ಅನುಕೂಲವಾಗಲಿ ಎಂದು ಹೇಳಿದೆ.

ನಾನು ಮಾತನಾಡುವಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾದಂತಹ ಮಾನ್ಯ ಜಗದೀಶ್ ಶೆಟ್ಟರ್ ಅವರು ಏನು ಹೇಳಿದರು ಎಂದರೆ, ನೀವು ಕೇಂದ್ರ ಸರ್ಕಾರಕ್ಕೆ ಈ ವಿಷಯದ ಬಗ್ಗೆ ಒಂದು ಪತ್ರ ಬರೆಯಿರಿ, ನಾವು ಸಹ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇವೆಂದು ಹೇಳಿದರು. ನಾವು ಆ ಕೂಡಲೆ ಕೇಂದ್ರ ಸರ್ಕಾರಕ್ಕೆ ಒಂದು ಪತ್ರ ಬರೆದೆವು. ಆನಂತರ ಮಾನ್ಯ ರಾಹುಲ್ ಗಾಂಧಿಯವರು ರಾಣಿಬೆನ್ನೂರು ಕ್ಷೇತ್ರಕ್ಕೆ ಬಂದಿದ್ದಾಗ ಒಂದು ಸಭೆ ನಡೆಯಿತು, ಅಲ್ಲಿ ನಾನು ಒಂದು ಘೋಷಣೆ ಮಾಡಿದ್ದೆ. ಏನೆಂದರೆ, ಸುಮಾರು 52 ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಅಲ್ಪಾವಧಿ ಸಾಲವಿದೆ. ಅದರಲ್ಲಿ ಸುಮಾರು 42 ಸಾವಿರ ಕೋಟಿ ರೂಪಾಯಿಗಳನ್ನು ರಾಷ್ಟ್ರೀಯ ಹಾಗೂ ಗ್ರಾಮೀಣ ಬ್ಯಾಂಕುಗಳ ಮುಖಾಂತರ ರೈತರಿಗೆ ಸಾಲವನ್ನು ನೀಡಲಾಗೊದೆ. It covers about nearly 80 percent. ನಾವು ಕೊಟ್ಟಿರುವುದು it covers about nearly 20 percent. ಅವರು(ಕೇಂದ್ರ ಸರ್ಕಾರ) ಅರ್ಧ ಸಾಲವನ್ನು ಮನ್ನಾ ಮಾಡಲಿ, ನಾನು ಅರ್ಧ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಾಲವನ್ನು ಮನ್ನಾ ಮಾಡುತ್ತೇನೆಂದು ಆ ಸಂದರ್ಭದಲ್ಲಿ ರೈತರನ್ನು ಉದ್ದೇಶಿಸಿ ಮಾತನಾಡುವಾಗ ಹೇಳಿದ್ದೆ. ಏಕೆಂದರೆ ಎಲ್ಲಾ ಕಡೆಗಳಿಂದಲೂ ರೈತರು ಒಕ್ಕೊರಳಿನಿಂದ ಸಾಲ ಮನ್ನಾ ಮಾಡಿ, ಸಾಲ ಮನ್ನಾ ಮಾಡಿ ಎಂದು ಕೇಳುತ್ತಿದ್ದರು. ಅದಕ್ಕೆ ಕಾರಣ ಕೂಡ ಇದೆ. ಏನೆಂದರೆ ಎರಡು ವರ್ಷಗಳ ಕಾಲ ಭೀಕರ ಬರಗಾಲವಿತ್ತು. ಬಹಳಷ್ಟು ಬೆಳೆ ನಷ್ಟವಾಗಿದೆ, ಸಾಲ ಮಾಡಿಕೊಂಡಿದ್ದಾರೆ. ಅನೇಕ ಕಡೆ ರೈತರು ಆತ್ಮಹತ್ಯೆ ಕೂಡ ಮಾಡಿಕೊಂಡಿದ್ದಾರೆ. ಈ ರೀತಿ ಮಾಡಿಕೊಂಡಿರುವುದರಿಂದ ನಾನು ಸಾರ್ವಜನಿಕ ಸಭೆಗಳಿಗೆ ಹೋದಾಗ ಅಥವಾ ಇನ್ಯಾವುದಾದರು ಕಾರ್ಯಕ್ರಮಕ್ಕೆ ಹೋದಾಗ, ಇತ್ತೀಚೆಗೆ ನಾನು ಬಿಜಾಪುರದಲ್ಲಿರುವಂತಹ ಮಹಿಳಾ ವಿಶ್ವವಿದ್ಯಾನಿಲಯಕ್ಕೆ "ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ" ಎಂದು ನಾಮಕರಣ ಮಾಡುವಂತಹ ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ. ಆ ಕಾರ್ಯಕ್ರಮದಲ್ಲಿ ಸುಮಾರು 60 ರಿಂದ 70 ಸಾವಿರ ಜನರು ಸೇರಿದ್ದರು. ಅದರಲ್ಲಿ ಸುಮಾರು 40 ಸಾವಿರದಷ್ಟು ಜನ ಮಹಿಳೆಯರೇ ಇದ್ದರು. ಕೆಲವು ರೈತರು ಹಸಿರು ಶಾಲನ್ನು ಹಾಕಿಕೊಂಡು ಬಂದಿದ್ದರು. ಅವರಲ್ಲಿ ಕೆಲವು ರೈತರು ಎದ್ದುನಿಂತು ಮಾನ್ಯ ಮುಖ್ಯ ಮಂತ್ರಿಗಳೇ ನೀವು ತುಂಬಾ ಒಳ್ಳೆಯ ಕೆಲಸ ಮಾಡಿದ್ದೀರಿ, ಅದೇ ರೀತಿ ರೈತರ ಸಾಲವನ್ನು ಸಹ ಮನ್ನಾ ಮಾಡಿ ಎಂದು ಕೇಳಿಕೊಂಡರು. ಈ ರೀತಿ ಅನೇಕ ಕಡೆಗಳಲ್ಲಿ ನನಗೆ ಒತ್ತಾಯ ಮಾಡುತ್ತಿದ್ದರು. ಅಲ್ಲದೆ ಬರಗಾಲವೂ ಇತ್ತು. ಅದಕ್ಕೆ ನಾನು ಕೇಂದ್ರ ಸರ್ಕಾರ ಅರ್ಧ ಸಾಲವನ್ನು ಮನ್ನಾ ಮಾಡಲಿ, ರಾಜ್ಯ ಸರ್ಕಾರ ಅರ್ಧ ಸಾಲವನ್ನು ಮನ್ನಾ ಮಾಡುತ್ತದೆ ಎಂದು ಹೇಳಿದೆ.

ಸನ್ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಲು ನಾನು ಕೇಂದ್ರ ಸರ್ಕಾರಕ್ಕೆ ಒಂದು ನಿಯೋಗವನ್ನು ಸಹ ಕರೆದುಕೊಂಡು ಹೋಗಿದ್ದೆ. ಮಾನ್ಯ ಪ್ರಧಾನ ಮಂತ್ರಿಯವರನ್ನು ಸಹ ನಾನು ಸಾಲ ಮನ್ನಾ ಮಾಡಲಿ ಎಂದು ಕೇಳಿಕೊಂಡೆ. ಆದರೆ ಇವತ್ತಿನವರೆಗೂ ಸಹ ಮಾಡಲಿಲ್ಲ. ಅಲ್ಲದೆ, ಕೇಂದ್ರ ಸಚಿವರಾದಂತಹ ಮಾನ್ಯ ಅರುಣ್ ಜೇಟ್ಲಿಯವರು ಸಹ ಸಾಲ ಮನ್ನಾ ಮಾಡುವುದಿಲ್ಲವೆಂದು ಹೇಳಿದ್ದರು. ಹಾಗಾಗಿ ಕೇಂದ್ರ ಸರ್ಕಾರ ಕೈ ಎತ್ತಿಬಿಟ್ಟರು. ಆದ್ದರಿಂದ ನಾವು ಕೇಂದ್ರ ಸರ್ಕಾರಕ್ಕೆ ಎಷ್ಟೇ ಪತ್ರ ಬರೆದರೂ ಅದರಿಂದ ಪ್ರಯೋಜನವಾಗಲಿಲ್ಲ. ಈಗ ಉತ್ತರ ಪ್ರದೇಶದಲ್ಲಿ ಶ್ರೀ ಯೋಗಿ ಆದಿತ್ಯನಾಥ್ ಅವರು ಮುಖ್ಯಮಂತ್ರಿಯಾಗಿದ್ದಾರೆ. ಚುನಾವಣೆ ಸಮಯದಲ್ಲಿ ಬಿ.ಜೆ.ಪಿ. ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಅಧಿಕಾರಕ್ಕೆ ಬಂದರೆ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದರು. ಸನ್ಮಾನ್ಯ ನರೇಂದ್ರ ಮೋದಿಯವರು ಸಹ ನಾವು ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡುತ್ತೇವೆಂದು ಭಾಷಣ ಮಾಡಿದ್ದರು. ಆದರೆ ಈಗ ಅವರು ಏನು ಮಾಡಿದ್ದಾರೆ?

(ಮುಂದು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(902) 21.06.2017 KG.MD 6.00**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಿದ್ದರಾಮಯ್ಯ (ಮುಂದು...):-**

ಬಿಜೆಪಿಯವರು ಅವರ ಪ್ರಣಾಳಿಕೆಯಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದರು. ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ರವರು ಸಹ ಉತ್ತರ ಪ್ರದೇಶದಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದ್ದರು. ಈಗ ಉತ್ತರ ಪ್ರದೇಶದ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಯೋಗಿ ಆದಿತ್ಯನಾಥ್ ರವರು 36 ಸಾವಿರ ರೂಪಾಯಿಗಳವರೆಗಿನ ಸಾಲವನ್ನು ಮಾತ್ರ ಮನ್ನಾ ಮಾಡಿದ್ದೇವೆಂದು ಘೋಷಣೆ ಮಾಡಿದ್ದಾರೆ. ನಾನು ಅವರ Statement ಅನ್ನು ನೋಡಿದ್ದೇನೆ. ಅವರು Statement ನಲ್ಲಿ ದಿನಾಂಕ: 16.03.2017 ರವರೆಗೆ ಎಷ್ಟು ಬಾಕಿ ಇತ್ತು, ಅದನ್ನು ಮಾರ್ಚ್, 2017 ರ ಒಳಗೆ ಯಾರು ಕಟ್ಟಿಲ್ಲ it is overdue, not outstanding. There are two things. Overdue ಬೇರೆ, outstanding ಬೇರೆ. ಇದು overdue. 5 ಎಕರೆ ಭೂಮಿ ಹೊಂದಿರುವಂತಹ ಸಣ್ಣ ರೈತರಿಗೆ ಮತ್ತು ಅತಿ ಸಣ್ಣ ರೈತರಿಗೆ ಒಂದು ಲಕ್ಷ ರೂಪಾಯಿಗಳವರೆಗೆ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಒಂದು ಲಕ್ಷ ರೂಪಾಯಿಗಳವರೆಗೆ ಸಾಲ ಮನ್ನಾ ಮಾಡುತ್ತೇವೆಂದು ಹೇಳಿ ಬ್ಯಾಂಕ್‌ಗಳಿಗೆ ಪತ್ರ ಬರೆದಿದ್ದಾರೆ. ಅದನ್ನು ಬಿಟ್ಟರೆ ಇವತ್ತಿನವರೆಗೆ ಉತ್ತರ ಪ್ರದೇಶದಲ್ಲಿ ಯಾವುದೇ ಆದೇಶ ಮಾಡಿಲ್ಲ.

ಮಹಾರಾಷ್ಟ್ರದಲ್ಲಿ ರೈತರ ಗಲಾಟೆ ಆಯಿತು. ರೈತರ ಸಾಲ ಮನ್ನಾ ಮಾಡಿ, ರೈತರಿಗೆ ನ್ಯಾಯಯುತವಾದ ಬೆಲೆ ಕೊಡಿ ಹಾಗೂ ರೈತರಿಗೆ ಬೆಂಬಲ ಬೆಲೆ ಕೊಡಿ ಎಂದು 14 ದಿವಸಗಳ ಕಾಲ ದೊಡ್ಡ ಚಳುವಳಿ ಮಾಡಿದರು. ಅಲ್ಲಿನ ಮುಖ್ಯ ಮಂತ್ರಿಗಳಾದ ಮಾನ್ಯ ದೇವೇಂದ್ರ ಫಡ್ನಾವಿಸ್ ರವರು ರೈತರ ಸಾಲ ಮನ್ನಾ ಮಾಡುವುದಕ್ಕೆ ಒಂದು ಸಮಿತಿಯನ್ನು ಮಾಡುತ್ತೇವೆಂದು ಹೇಳಿ ಒಂದು ಉನ್ನತ ಸಮಿತಿಯನ್ನು ರಚನೆ ಮಾಡಿದ್ದಾರೆ. ಆದರೆ, ಅವರು ಸಹ ಯಾವುದೇ ಆದೇಶ ಮಾಡಿಲ್ಲ. ಅವರು ಸಹ 5 ಎಕರೆ ಜಮೀನು ಹೊಂದಿರುವಂತಹ ಸಣ್ಣ ರೈತರು ಮತ್ತು ಅತಿ ಸಣ್ಣ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಆ ಉನ್ನತ ಸಮಿತಿಯವರು ವರದಿಯನ್ನು ಕೊಡಬೇಕು. ಹೀಗಾಗಿ, ಅವರು ಸಹ ಯಾವುದೇ ಆದೇಶ ಮಾಡಿಲ್ಲ. ಈ ಎರಡು ರಾಜ್ಯಗಳಲ್ಲಿ ಘೋಷಣೆಗಳನ್ನು ಮಾಡಿದ್ದಾರೆ. ಆ ಮೇಲೆ ಪಂಜಾಬ್‌ನ ಮುಖ್ಯ ಮಂತ್ರಿಗಳಾದ ಸನ್ಮಾನ್ಯ ಅಮರೇಂದರ್ ಸಿಂಗ್ ರವರು ಸಹ ತಮ್ಮ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದಾರೆ. ಅವರು ಎರಡು ಲಕ್ಷ ರೂಪಾಯಿಗಳವರೆಗೆ ಯಾರು ಯಾರು ಬಾಕಿ ಇದ್ದಾರೆ ಅವರ ಸಾಲವನ್ನು ಮನ್ನಾ ಮಾಡುತ್ತೇವೆಂದು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಘೋಷಣೆ ಮಾಡಿದ್ದಾರೆ. ಆದರೆ, ಅದರ ಬಗ್ಗೆ ಇನ್ನೂ ಸರಿಯಾದ ಸ್ಪಷ್ಟತೆ ಬಂದಿಲ್ಲ. ಆದರೆ, ಘೋಷಣೆಯನ್ನು ಮಾಡಿದ್ದಾರೆ. ನಾನು ಕೇಂದ್ರ ಸರ್ಕಾರದವರು ರೈತರ ಅರ್ಧ ಸಾಲವನ್ನು ಮನ್ನಾ ಮಾಡುತ್ತಾರೆಂದು ಇವತ್ತಿನವರೆಗೆ ಭಾವಿಸಿದ್ದೆ. ಆದರೆ, ಕೇಂದ್ರ ಸರ್ಕಾರದವರು ಸಾಲ ಮನ್ನಾ ಮಾಡುವಂತೆ ಕಾಣಿಸುತ್ತಿಲ್ಲ. ಕೇಂದ್ರ ಹಣಕಾಸು ಸಚಿವರಾದ ಸನ್ಮಾನ್ಯ ಅರುಣ್ ಜೇಟ್ಲಿ ರವರ ಮತ್ತು ಸನ್ಮಾನ್ಯ ಊರ್ಜಿತ್ ಪಟೇಲ್ ರವರ statement ಅನ್ನು ನೋಡಿದರೆ, ಅವರು ಸಹ ರೈತರ ಪರವಾಗಿ ಬರುತ್ತಿಲ್ಲ. ನಾನು ನೋಡೋಣ ಕೇಂದ್ರ ಸರ್ಕಾರದವರು ಇವತ್ತು ಮಾಡುತ್ತಾರೆ, ನಾಳೆ ಮಾಡುತ್ತಾರೆ, ಅದರಿಂದ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ ಎಂದು ಕಾಯುತ್ತಿದ್ದೆ. ಆದರೆ, ಅದು ಆಗಲಿಲ್ಲ. ಅದಕ್ಕೆ ನಾನು ಈಗ ತೀರ್ಮಾನ ಮಾಡಿಬಿಟ್ಟಿದ್ದೇನೆ. ನನಗೆ ಕೆಲವು ರೈತರು ಸಾಲ ಮನ್ನಾ ಮಾಡಿ ಬಿಡಿ, ನಾವು ಕೇಂದ್ರದ ಮೇಲೆ ಒತ್ತಡ ತರುತ್ತೇವೆಂದು ಹೇಳಿದ್ದರು. ನಾನು ಆ ಬಗ್ಗೆ ಯೋಚನೆ ಮಾಡಿದೆ. ರೈತರು ಬಹಳ ಕಷ್ಟದಲ್ಲಿದ್ದಾರೆ, ಅವರು ಸರ್ಕಾರಕ್ಕೆ ಒತ್ತಡವನ್ನು ಮಾಡುತ್ತಿದ್ದಾರೆ, ಎರಡು ವರ್ಷಗಳಿಂದ ಬರಗಾಲ ಇದೆ. ನಾನು ಅದಕ್ಕಾಗಿ ಸಾಲ ಮನ್ನಾ ಮಾಡೋಣವೆಂದು ತೀರ್ಮಾನ ಮಾಡಿದ್ದೇನೆ. 25 ಸಾವಿರ ಮತ್ತು 50 ಸಾವಿರ ರೂಪಾಯಿಗಳ ಸಾಲ ಪಡೆದಿರುವಂತಹ ಸುಮಾರು 16 ಲಕ್ಷ ರೈತರು ಕರ್ನಾಟಕ ರಾಜ್ಯದಲ್ಲಿದ್ದಾರೆ. ಬೇರೆಯವರು 22,27,506 ರೈತರು ಇದ್ದಾರೆ. 50 ಸಾವಿರಕ್ಕಿಂತ ಹೆಚ್ಚಿಗೆ ಸಾಲ ತೆಗೆದುಕೊಂಡಿರುವ ರೈತರ ಸಂಖ್ಯೆ ಸುಮಾರು 5 ಲಕ್ಷಕ್ಕಿಂತಲೂ ಹೆಚ್ಚಿಗೆ ಇದೆ. ಅದಕ್ಕೆ ನಾನು ಏನು ಮಾಡಿದ್ದೇನೆಂದರೆ, ದಿನಾಂಕ 20.06.2017 ಕ್ಕೆ outstanding ಇರುವಂತಹ ಸಾಲಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ನಾನು ಕೇವಲ ಘೋಷಣೆ ಮಾಡಿ ಹೋಗುವುದಿಲ್ಲ. ಆದೇಶವನ್ನು ಹೊರಡಿಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ಮಾನ್ಯ ಮುಖ್ಯಮಂತ್ರಿಯವರ ಮಾತುಗಳನ್ನು ಸ್ವಾಗತಿಸಿದರು)**

ಆದೇಶ ಮಾಡಿ ರೈತರಿಗೆ relief ಕೊಡುವಂತಹ ಕೆಲಸವನ್ನು ಮಾಡುತ್ತೇನೆ. 22,27,506 ಜನ ರೈತರು ಎಷ್ಟು ಸಾಲ ತೆಗೆದುಕೊಂಡಿದ್ದಾರೆ, ಅದರಲ್ಲಿ 50 ಸಾವಿರ ರೂಪಾಯಿಗಳ ಸಾಲವನ್ನು ಮನ್ನಾ ಮಾಡುತ್ತೇನೆ. ಇದರಿಂದ ಸರ್ಕಾರದ ಮೇಲೆ 8,165 ಕೋಟಿ ರೂಪಾಯಿಗಳ ಹೊರೆ ಆಗುತ್ತದೆ. ಇದು ಸಹಕಾರ ಸಂಘಗಳದ್ದು. ನಾವು ರಾಷ್ಟ್ರೀಯ ಬ್ಯಾಂಕ್‌ಗಳ ಮತ್ತು ಗ್ರಾಮೀಣ ಬ್ಯಾಂಕ್‌ಗಳ ಸಾಲ ಮನ್ನಾ ಮಾಡುವುದಕ್ಕೆ ಆಗುವುದಿಲ್ಲ. ಮೊದಲಿನಿಂದಲೂ ಎಲ್ಲಾ ಸರ್ಕಾರಗಳು ಇದನ್ನೇ ಮಾಡಿಕೊಂಡು ಬಂದಿರುತ್ತವೆ. ಈ ಹಿಂದೆ ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾಗಿದ್ದ ಹೆಚ್.ಡಿ.ಕುಮಾರಸ್ವಾಮಿ ರವರು ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ, 1,600 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿದ್ದರು.

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾದ ಜಗದೀಶ ಶೆಟ್ಟರ್ ರವರು ಸಹ ಸಹಕಾರ ಸಂಘಗಳ ಸಾಲವನ್ನು ಮನ್ನಾ ಮಾಡಿದ್ದರು. ಮಾನ್ಯ ಜಗದೀಶ ಶೆಟ್ಟರ್ ರವರು announce ಮಾಡಿ ಹೋದರು. ನಾವು ಅಧಿಕಾರಕ್ಕೆ ಬಂದು ಅದನ್ನು ತೀರಿಸಿದೆವು; ಅವರು 3,500 ಕೋಟಿ ರೂಪಾಯಿಗಳಲ್ಲಿ 960 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟರು, ನಾವು ಅಧಿಕಾರಕ್ಕೆ ಬಂದು ಉಳಿದಿದ್ದನ್ನು ತೀರಿಸಿದೆವು.

ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಕೆ.ಎಸ್.ಈಶ್ವರಪ್ಪನವರು ನಾವು ಅಧಿಕಾರಕ್ಕೆ ಬಂದು ತೀರಿಸುತ್ತೇವೆ. ನೀವು ಘೋಷಣೆ ಮಾಡಿಬಿಡಿ ಎಂದು ಹೇಳುತ್ತಿದ್ದಾರೆ. ಮುಂದಿನ ವರ್ಷದ ಮೇ, ತಿಂಗಳಿನವರೆಗೆ ಎಷ್ಟು ಕಂತುಗಳನ್ನು ರೈತರು ಕಟ್ಟಬೇಕಾಗಿದೆ ಅಷ್ಟು ಕಂತುಗಳನ್ನು ನಾವು ಕಟ್ಟಿಬಿಡುತ್ತೇವೆ. ಏಕೆಂದರೆ, ಸೂಸೈಟಿಗಳು ನಡೆಯಬೇಕಲ್ಲವೆ? ಸೂಸೈಟಿಗಳಿಗೆ re-finance ಮಾಡಬೇಕಲ್ಲವೆ? ನಾವು ಅದನ್ನು ಸಹ ಕಟ್ಟುವುದಕ್ಕೆ reimbursement ಮಾಡುವುದಕ್ಕೆ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಂಡಿದ್ದೇವೆ. ಈ ಸರ್ಕಾರ ರೈತರ ಪರವಾಗಿ ಇದೆ, ರೈತರ ಕಷ್ಟಗಳಿಗೆ ನಾವು ಯಾವಾಗಲೂ ಸ್ಪಂದಿಸುತ್ತೇವೆ. ಈಗಲೂ ಸಹ ರೈತರ ಕಷ್ಟಗಳಿಗೆ ಸ್ಪಂದಿಸುತ್ತೇವೆ, ಮುಂದೆಯು ಸಹ ರೈತರ ಕಷ್ಟಗಳಿಗೆ ಸ್ಪಂದಿಸುತ್ತೇವೆ, ಈ ಹಿಂದೆಯು ಸಹ ರೈತರ ಕಷ್ಟಗಳಿಗೆ ಸ್ಪಂದಿಸಿದ್ದೇವೆ. ಇದು ರೈತರ ಪರವಾಗಿ ಇರುವಂತಹ ಸರ್ಕಾರ.

ನಮ್ಮ ಮೈಸೂರಿನ ಕಡೆ ಒಂದು ಗಾದೆ ಮಾತು ಇದೆ. ಮಾನ್ಯ ಸೋಮಣ್ಣನವರೆ, ನಿಮ್ಮ ಕನಕಪುರದ ಕಡೆಗೂ ಈ ಗಾದೆ ಮಾತು ಇದೆಯೇ? ಮದುವೆಯಾದ ಹೆಣ್ಣು ಮಕ್ಕಳನ್ನು ಗಂಡನ ಮನೆಗೆ ಕರೆದುಕೊಂಡು ಹೋಗುವಂತಹ ಸಂದರ್ಭದಲ್ಲಿ ಆ ಹೆಣ್ಣು ಮಗಳು ಊರಿನ ಕೊನೆ ಮನೆಗೆ ಹೋದಾಗ, ಆ ಮನೆಯಲ್ಲಿರುವವರು 'ಹೋಗಿ ಬಾ ತಾಯಿ, ಚೆನ್ನಾಗಿ ಇರು, ಹೋಗಿ ಬಾ' ಎಂದು ಹೇಳುತ್ತಾರೆ. ನಮ್ಮ ಕಡೆಗೆ "ಅಟ್ಟಿಕ್ಕಿದವರಿಗಿಂತ ಬೊಟ್ಟಿಕ್ಕಿದವರು ಮೇಲು" ಎಂಬ ಒಂದು ಗಾದೆ ಮಾತಿದೆ. ಮಾನ್ಯ ಸದಸ್ಯರಾದ ಶ್ರೀಮತಿ ತಾರಾ ಅನೂರಾಧ ರವರೆ ನಿಮಗೆ ಏನಾದರೂ ಈ ಗಾದೆ ಮಾತು ಗೊತ್ತಿದೆಯೇ? 'ಅಟ್ಟಿಕ್ಕಿದವರು' ಎಂದರೆ, ಕೋಳಿ ಸಾರು ಮಾಡಿ, ಶಾವಿಗೆ ಮಾಡಿ ಅವರಿಗೆ ಊಟ ಹಾಕಿ ಕಳುಹಿಸಿ ಕೊಡುವವರು ಎಂದು ಅರ್ಥ. 'ಹೋಗಿ ಬಾ ತಾಯಿ, ಚೆನ್ನಾಗಿ ಇರು, ಹೋಗಿ ಬಾ' ಎಂದು ಹೇಳುವವರು 'ಬೊಟ್ಟಿಕ್ಕಿದವರು' ಎಂದು ಅರ್ಥ.

**ಶ್ರೀ ವಿ.ಸೋಮಣ್ಣ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, 'ಅಟ್ಟಿಕ್ಕಿದವರು' ಎಂದರೆ, ಆಡಳಿತ ಪಕ್ಷದವರು. 'ಬೊಟ್ಟಿಕ್ಕಿದವರು' ಎಂದರೆ, ವಿರೋಧ ಪಕ್ಷದವರು ಎನ್ನುವ ರೀತಿಯಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಹೆಚ್.ಎಂ.ರೇವಣ್ಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ವಿ.ಸೋಮಣ್ಣನವರು ಬಹಳ ಚೆನ್ನಾಗಿ ಮಾತನಾಡಿದರು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ವಿ.ಸೋಮಣ್ಣ ರವರಿಗೂ ಈ ಗಾದೆ ಗೊತ್ತಿದೆ. ಮಾನ್ಯ ಸೋಮಣ್ಣ ರವರು ನಮ್ಮ ಪರವಾಗಿ ಇದ್ದಾರೆ. ಮಾನ್ಯ ಕೆ.ಎಸ್.ಈಶ್ವರಪ್ಪನವರು ಬೇಸರ ಮಾಡಿಕೊಳ್ಳುತ್ತಾರೆಂದು, ಮಾನ್ಯ ಸೋಮಣ್ಣ ರವರು ಆಗಾಗ ಮಧ್ಯೆ ಎದ್ದು ನಿಂತುಕೊಳ್ಳುತ್ತಾರೆ ಅಷ್ಟೇ.

**ಶ್ರೀಮತಿ ತಾರಾ ಅನುರಾಧ (ನಾಮ ನಿರ್ದೇಶಿತರು):-** ಮಾನ್ಯ ಸಭಾಪತಿಯವರೆ. ಮಾನ್ಯ ಮುಖ್ಯ ಮಂತ್ರಿಗಳಾದ ಸಿದ್ದರಾಮಯ್ಯನವರು ಸಿನಿಮಾರಂಗಕ್ಕೆ ಬಂದಿದ್ದರೆ ಬಹಳ ಒಳ್ಳೆಯ ಖ್ಯಾತ ನಟರಾಗುತ್ತಿದ್ದರು. ಅವರು ಬಹಳ ಒಳ್ಳೆಯ ಡೈಲಾಗ್‌ಗಳನ್ನು ಹೇಳುತ್ತಾರೆ. ಅವರು ನಾಟಕದಿಂದ ಹಾಗೇ ಸಿನಿಮಾ ರಂಗಕ್ಕೆ ಬರಬೇಕಿತ್ತು; ಅವರು ಈಗಲೂ ಸಿನಿಮಾರಂಗಕ್ಕೆ ಬರಬಹುದು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರಾದ ಶ್ರೀಮತಿ ತಾರಾ ಅನುರಾಧ ರವರು producer ಆಗಲಿ, ನಾನು ಈಗಲೂ ನಟನೆ ಮಾಡುತ್ತೇನೆ. ನಾನು ಚೆನ್ನಾಗಿ ನಟನೆ ಮಾಡುತ್ತೇನೆಯೆ?

**ಶ್ರೀಮತಿ ತಾರಾ ಅನುರಾಧ:-** ಮಾನ್ಯ ಸಭಾಪತಿಯವರೆ, ಸನ್ಮಾನ್ಯ ಮುಖ್ಯ ಮಂತ್ರಿಗಳು ಸಿನಿಮಾ ಮಾಡಲು Finance ಮಾಡಿದರೆ, ನಾನು producer ಆಗುತ್ತೇನೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಎಂತಹ ಒಂದು ಅದ್ಭುತ ನಟನನ್ನು ಕಳೆದುಕೊಂಡೆ ಎಂದು ಶ್ರೀಮತಿ ತಾರಾ ಅನುರಾಧ ರವರಿಗೆ ಗಾಬರಿ ಆಯಿತು.

**ಶ್ರೀಮತಿ ಉಮಾಶ್ರೀ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು):-** ಮಾನ್ಯ ಸಭಾಪತಿಯವರೆ, ನನಗೆ Producer position ಬೇಡ. As an artist, I am happy.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು ರೈತರ ಸಾಲ ಮನ್ನಾವನ್ನು ಕೇವಲ ಘೋಷಣೆ ಮಾಡುತ್ತಿಲ್ಲ. ನಾಳೆ ಅಥವಾ ನಾಡಿದ್ದು ಆದೇಶ ಮಾಡುತ್ತೇನೆ. ಇದರಿಂದ ರೈತರ ಎಲ್ಲಾ ಸಮಸ್ಯೆಗಳು ಬಗೆಹರಿಯುತ್ತವೆ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ. ರೈತರ ಕಷ್ಟಗಳು ಬೇಕಾದಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುತ್ತವೆ. ಆದರೂ ಸಹ, ರೈತರ ಕಷ್ಟಗಳಿಗೆ ಸ್ವಲ್ಪ ಮಟ್ಟಿಗಾದರೂ ನೆರವು ಆಗಬೇಕು ಎನ್ನುವ ದೃಷ್ಟಿಯಿಂದ ಸಾಲ ಮನ್ನಾ ಮಾಡಿದ್ದೇನೆ. ನಾನು ಈಗ ಸೂಸೈಟಿಗಳ ಸಾಲವನ್ನು ಮನ್ನಾ ಮಾಡಿದ್ದೇನೆ. ಮಾನ್ಯ ಕೆ.ಎಸ್.ಈಶ್ವರಪ್ಪ ರವರು ಬಿಜೆಪಿಯವರಾಗಿರುವುದರಿಂದ ಅವರು ಕೇಂದ್ರ ಹಣಕಾಸು ಸಚಿವರಾದ ಸನ್ಮಾನ್ಯ ಅರುಣ್ ಜೇಟ್ಲಿ ಮತ್ತು ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ಅವರಿಗೆ ಒತ್ತಡ ಹಾಕಿ ರೈತರ ಮೇಲಿರುವಂತಹ 42 ಸಾವಿರ ಕೋಟಿ ರೂಪಾಯಿಗಳ ಅಲ್ಪಾವಧಿ ಸಾಲವನ್ನು ಮನ್ನಾ ಮಾಡಿಸುವಂತಹ ಕೆಲಸವನ್ನು ಮಾಡಬೇಕೆಂದು ನಾನು ಆಗ್ರಹಪೂರ್ವಕವಾಗಿ ಒತ್ತಾಯ ಮಾಡುತ್ತೇನೆ. ನಾನು ಈ ಬಗ್ಗೆ ಕೇಂದ್ರಕ್ಕೆ ಪತ್ರವನ್ನು ಸಹ ಬರೆಯುತ್ತೇನೆ, ನಾನು ಮನ್ನಾ ಮಾಡಿದ್ದೇನೆ; ನೀವು ಸಹ ಮನ್ನಾ ಮಾಡಿ ಎಂದು. ನಾನು ರೈತರಿಗೂ ಹೇಳುತ್ತೇನೆ, ನಾವು ಮನ್ನಾ ಮಾಡಿದ್ದೇವೆ; ನೀವು ಕೇಂದ್ರದವರನ್ನು ಹಿಡಿದುಕೊಳ್ಳಿ ಎಂದು.

(ಮುಂದು)

(903) 6:10 21-06-2017 CS.AK

**ಶ್ರೀ ವಿ.ಸೋಮಣ್ಣ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಈಗ ರೈತರಿಗೆ 50,000 ರೂಪಾಯಿಗಳ ಸಾಲ ಮನ್ನಾ ಮಾಡಿದ್ದಾರೆ. ಅದೇರೀತಿ ಕೆಲವು ರೈತರು 1 ರಿಂದ 2 ಲಕ್ಷ ರೂಪಾಯಿಗಳವರೆಗೆ ಬಡ್ಡಿರಹಿತ ಸಾಲವನ್ನೇನು ಮಾಡಿದ್ದಾರೆ, ಅವರ ಸಾಲವನ್ನು ಕೂಡ ಮನ್ನಾ ಮಾಡಲಾಗುತ್ತದೆಯೆ?

**ಶ್ರೀ ಸಿದ್ದರಾಮಯ್ಯ:-** ಅವರ ಸಾಲದಲ್ಲಿಯೂ ಸಹ ರೂ.50,000 ಗಳ ಸಾಲ ಮನ್ನಾ ಆಗುತ್ತದೆ. ಎಲ್ಲರ ಸಾಲ ಮನ್ನಾ ಆಗುತ್ತದೆ. ಯಾವುದೇ ಜಾತಿ, ಧರ್ಮ ಭೇದ ಇಲ್ಲದಂತೆ 22,27,506 ಜನ ರೈತರ ಒಟ್ಟು 8165 ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದೇನೆ.

**ಶ್ರೀ ರಮೇಶ್ ಬಾಬು:-** ಮುಖ್ಯಮಂತ್ರಿಗಳೇ, 22,27,506 ಜನ ರೈತರ ಸಾಲ ಮನ್ನಾ ಮಾಡಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

**ಶ್ರೀ ಸಿದ್ದರಾಮಯ್ಯ:-** ನಿನ್ನೆ ಸಂಜೆವರೆಗೆ ಇದ್ದಂತಹ outstanding loan...

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ಕೆ.ಪ್ರಾಣೇಶ್:–** ಮಾನ್ಯ ಸಭಾಪತಿಗಳೇ, ಎಷ್ಟೋ ರೈತರು ಈಗಾಗಲೇ ತಮ್ಮ ಮನೆಯಲ್ಲಿದ್ದ ಚಿನ್ನ ಬೆಳ್ಳಿಯನ್ನು ಮಾರಿ ಸಾಲವನ್ನು ಕಟ್ಟಿದ್ದಾರೆ. ಅವರು ಸಹ ಬಡವರು ಅವರಿಗೂ ಸಹ 50,000 ರೂಪಾಯಿಗಳನ್ನು ಸರ್ಕಾರ ನೀಡಬೇಕು.

**ಶ್ರೀ ಸಿದ್ದರಾಮಯ್ಯ:–** ಕೆಲವು ರೈತರು more than 98% repayment ಮಾಡಿ, ಹೊಸ ಸಾಲ ಪಡೆಯಬೇಕೆಂದಿದ್ದಾರೆ. ಕಳೆದ ವರ್ಷ ಮತ್ತು ನಿನ್ನೆವರೆಗೆ ರೈತರಿಗೆ ನೀಡಿರುವ ಒಟ್ಟು outstanding loan 10,736 ಕೋಟಿ ರೂಪಾಯಿಗಳು, ಅದರಲ್ಲಿ ಎಲ್ಲಾ ರೈತರಿಗೂ ಸಹ 50,000 ರೂಪಾಯಿಗಳವರೆಗೆ ಸಾಲವನ್ನು ಮನ್ನಾ ಮಾಡಿ 8165 ಕೋಟಿ ರೂಪಾಯಿಗಳ ಮೊತ್ತವನ್ನು ಸರ್ಕಾರ ಸಹಕಾರ ಸಂಘಗಳಿಗೆ ನೀಡುತ್ತಿದೆ. ಇದು "ಸಬ್ ಕಾ ಸಾಥ್, ಸಬ್ ಕಾ ವಿಕಾಸ್" ಎನ್ನುವ ರೀತಿಯಲ್ಲಿ ಇದೆ. ಈಶ್ವರಪ್ಪನವರು 'ಅಲ್ಪಸಂಖ್ಯಾತರು ಬಂದು ನಮ್ಮ ಕಛೇರಿಯ ಕಸ ಹೊಡೆದರೆ ನಮ್ಮ ಪಕ್ಷದ ಟಿಕೇಟು ನೀಡುವುದು' ಎಂದು ಹೇಳುತ್ತಾರಲ್ಲ, ನಮ್ಮದು ಹಾಗಿಲ್ಲ. This is what ಸಬ್ ಕಾ ಸಾಥ್ ಸಬ್ ಕಾ ವಿಕಾಸ್... ಇದು ರೈತರ ಸಾಲದ ಬಗ್ಗೆ ಹೇಳುತ್ತಿರುವುದು, ಏಕೆಂದರೆ ನಿನ್ನೆಯ ದಿವಸ ವಾಕ್ಔಟ್ ಮಾಡಿದ್ದರು, ಇವತ್ತು ನಮ್ಮ ನಿರ್ಣಯದಿಂದ ವಾಕ್ಔಟ್ ಮಾಡದೇ ಸ್ವಾಗತ ಮಾಡುತ್ತಾರೆಂದು ನನಗನಿಸುತ್ತದೆ. ಮತ್ತು ನಮ್ಮ ಸರ್ಕಾರವನ್ನು ಅಭಿನಂದಿಸುತ್ತಾರೆಂದು ನಾನು ಭಾವಿಸಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸರ್ಕಾರ ಏನೇ ಮಾಡಲಿ, ರೈತರ ಸಾಲ ಮನ್ನಾ ಮಾಡಿದ್ದಕ್ಕೆ ನನ್ನ ಧನ್ಯವಾದಗಳು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಗಳೇ, ಇನ್ನು ಧನವಿನಿಯೋಗದ ಬಗ್ಗೆ ಕೆಲವೊಂದು ವಿಚಾರಗಳನ್ನು ಹೇಳಿದ್ದೇನೆ. ಇಲ್ಲಿ ಯಾವುದೇ ವಿಚಾರ ಪ್ರಸ್ತಾಪಿಸದೇ ಇರುವುದರಿಂದ ನಾನೇನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈ ವರ್ಷ 1,86,561 ಕೋಟಿ ರೂಪಾಯಿಗಳಿಗೆ ಈ ಸದನದ ಒಪ್ಪಿಗೆ ಪಡೆಯಬೇಕಾಗಿದೆ. ಇದರ ಜೊತೆಗೆ Supplementary Estimate ಕೂಡ ಇಟ್ಟಿದ್ದೇವೆ. ಅದಕ್ಕೂ ಸಹ ಈ ಸದನ ಸರ್ವಾನುಮತದಿಂದ ಒಪ್ಪಿಗೆಯನ್ನು ನೀಡಬೇಕು. ಇಡೀ ಸದನ ಸರ್ಕಾರದ ತೀರ್ಮಾನವನ್ನು ಸ್ವಾಗತಿಸಿ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತದೆ ಎಂದು ನಾನು ಭಾವಿಸಿದ್ದೇನೆ. ಹಾಗೆಯೇ ನಾವೆಲ್ಲರೂ ಸೇರಿ ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕೆ ಒತ್ತಾಯವನ್ನು ಮಾಡೋಣ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಸ್.ರವಿ:-** ನಾವೆಲ್ಲರೂ Lower House, Upper House ಸೇರಿ ಕೇಂದ್ರ ಸರ್ಕಾರಕ್ಕೆ ಒಂದು ನಿರ್ಣಯ ಮಂಡಿಸೋಣ.

**ಶ್ರೀ ಸಿದ್ದರಾಮಯ್ಯ:-** ಅವರು ಒಪ್ಪುವುದಿಲ್ಲ, ನೀವು ಸುಮ್ಮನಿರಿ. ಏಕೆಂದರೆ ಅವರೆಲ್ಲರೂ ಸೇರಿ ಕೇಂದ್ರ ಸರ್ಕಾರದ ಮೇಲೆ ರೈತರ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಒತ್ತಡ ತರುತ್ತಾರೆಂದು ನಾನು ಭಾವಿಸಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮುಖ್ಯಮಂತ್ರಿಗಳೇ, ನೀವೆಲ್ಲರೂ ಸೇರಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಸಾಲ ಮನ್ನಾ ಮಾಡಿಸುವುದಕ್ಕೆ ನಮ್ಮ ಪಕ್ಷದ ಸಂಪೂರ್ಣವಾದ ಬೆಂಬಲವಿದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಗಳೇ, ನಾವು ಮಂಡಿಸಿರುವ ಬೇಡಿಕೆಗಳಿಗೆ ಈ ಸದನ ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸದನದಲ್ಲಿ ವಿಧೇಯಕದ ಬಗ್ಗೆ ಚರ್ಚೆ ಆಗಿಲ್ಲದ ಕಾರಣ ನಾನು ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಯಾರು ಏನು ಮಾತನಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ, ಆದ್ದರಿಂದ ಈ ವಿಧೇಯಕಕ್ಕೆ ಸದನ ಒಪ್ಪಿಗೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ನಾನು ಇತೀಚಿನ ದಿವಸಗಳಲ್ಲಿ ಒಳ್ಳೆಯ ನಾಟಕ ನೋಡಿರಲಿಲ್ಲ, ಒಳ್ಳೆಯ ನಟರನ್ನು ಕೂಡ ನೋಡಲಿಕ್ಕೆ ಆಗಿರಲಿಲ್ಲ.

**ಶ್ರೀ ಸಿದ್ದರಾಮಯ್ಯ:-** ಈ ಮಾತನ್ನು ಹೇಳುವ ಮೂಲಕ 3 ಜನ ನಟರಿಗೆ ಅವಮಾನ ಮಾಡುತ್ತಾ ಇದ್ದೀರಿ. ಒಬ್ಬರು ತಾರಾ, ಇನ್ನೊಬ್ಬರು ಉಮಾಶ್ರೀ, ಮತ್ತೊಬ್ಬರು ಜಯಮಾಲ. ಅವರ ಮುಂದೆ ನಾನು ನಾಟಕ ಮಾಡಲು ಸಾಧ್ಯವೇ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಈ ಮೂವರು ನನ್ನ ಒಳ್ಳೆಯ ಸಹೋದರಿಯರು, ನಮ್ಮಲ್ಲಿ ಬೆಂಕಿ ಹಚ್ಚಬೇಡಿ.

**ಶ್ರೀಮತಿ ಜಯಮಾಲ ರಾಮಚಂದ್ರ:-** ಮಾನ್ಯ ಸಭಾಪತಿಗಳೇ, ನಾವೆಲ್ಲರೂ ಅಲ್ಲಿ ಬಣ್ಣ ಹಚ್ಚಿಕೊಂಡು ಪಾತ್ರ ಮಾಡುತ್ತೇವೆ,

**ಶ್ರೀ ಕೆ.ಎಸ್.ಈಶ್ವರಪ್ಪ:-** ಇಲ್ಲಿ ಬಣ್ಣ ಇಲ್ಲದೇ ನಾಟಕ ಮಾಡುತ್ತಿದ್ದಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀಮತಿ ಜಯಮಾಲ ರಾಮಚಂದ್ರ:-** ಖಂಡಿತ ಇಲ್ಲ ಸರ್, ಬಣ್ಣ ಹಚ್ಚದೇ ಪಾತ್ರ ಮಾಡುವವರ ಬಣ್ಣವನ್ನು ನಮ್ಮ ಮುಖ್ಯಮಂತ್ರಿಗಳು ಇಲ್ಲಿ expose ಮಾಡುತ್ತಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಗಳೇ, ನನಗೆ ಈಗ ಮುಖ್ಯಮಂತ್ರಿಗಳು ರೈತರ ಸಾಲವನ್ನು ಮನ್ನಾ ಮಾಡೇ ಮಾಡುತ್ತಾರೆಂದು ನೂರಕ್ಕೆ ನೂರರಷ್ಟು ಗೊತ್ತಿತ್ತು. ಒಂದು ವರ್ಷದ ಕೆಳಗೆ ಈ ರೈತರ ಸಾಲವನ್ನು ಸರ್ಕಾರ ಮನ್ನಾ ಮಾಡಬಹುದಿತ್ತು. ಈಗ ಮುಖ್ಯಮಂತ್ರಿಗಳು ಮುಂದಿನ ಚುನಾವಣೆ ಬರುವ ತನಕ ಬರುವ ಎಲ್ಲಾ ಕಂತುಗಳನ್ನು ಕಟ್ಟುವುದಾಗಿ ಹೇಳಿದ್ದಾರೆ. ಇದನ್ನು ಒಂದು ವರ್ಷ ಮೊದಲು ಮಾಡಿದ್ದರೆ ಆ ವರ್ಷದ್ದನ್ನು ಕಟ್ಟಬಹುದಿತ್ತು.

**ಶ್ರೀ ಸಿದ್ದರಾಮಯ್ಯ:-** ಆ ರೀತಿ ಮಾಡುವುದಕ್ಕೆ ಬರುವುದಿಲ್ಲ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ವಿರೋಧ ಪಕ್ಷದ ನಾಯಕರಿಗೆ ತಿಳಿಸುವುದೇನೆಂದರೆ ಬೆಳೆಸಾಲ ಕೊಡುವುದು ಒಂದು ವರ್ಷದಲ್ಲಿ ಒಂದೇ ಸಲ. ಹಾಗೆಯೇ ಅವರು ಒಂದು ವರ್ಷದಲ್ಲಿ ನಾಲ್ಕು ಕಂತುಗಳನ್ನು ಕಟ್ಟಬೇಕಾಗುತ್ತದೆ. ಅದನ್ನು ಎರಡು ವರ್ಷಗಳ ಅವಧಿಗೆ ಹೇಗೆ ಕೊಡಲು ಸಾಧ್ಯ?

(ಗೊಂದಲ)

**ಶ್ರೀ ಕೆ.ಎಸ್.ಈಶ್ವರಪ್ಪ:-** ಕಳೆದ 46 ವರ್ಷಗಳಿಂದ ಬರದಿದ್ದಂತಹ ಬರಗಾಲ ಬಂದಿದೆ ಎನ್ನುವ ವಿಚಾರ ಪತ್ರಿಕೆಗಳಲ್ಲಿ ಬಂದಿರುವುದನ್ನು ನಾವೆಲ್ಲರೂ ಓದಿದ್ದೇವೆ. ಕಳೆದ 6 ವರ್ಷಗಳಿಂದಲೂ ಸಹ ನಮ್ಮಲ್ಲಿ ಬರಗಾಲವಿದೆ. ಪ್ರತಿ ವರ್ಷ ನಾವು ರೈತರ ಸಾಲ ಮನ್ನಾ ಮಾಡಿ ಎಂದು ಹೇಳುತ್ತಲೇ ಬಂದೆವು. ಆದರೆ ಸರ್ಕಾರ ಕಳೆದ ವರ್ಷ, ಅದರ ಹಿಂದಿನ ವರ್ಷ ಮಾಡಲಿಲ್ಲ. ಈ ವರ್ಷ ಚುನಾವಣೆ ಹತ್ತಿರ ಬಂದಾಗ ರೈತರ ಸಾಲ ಮನ್ನಾ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಅವರು ಎಷ್ಟು ಸಾಲ ಮನ್ನಾ ಮಾಡಿದರು ಎಂದರೆ. . .

**ಶ್ರೀ ಮಾನೆ ಶ್ರೀನಿವಾಸ:-** ಮಾನ್ಯ ಸಭಾಪತಿಗಳೇ, ನಮ್ಮ ಸರ್ಕಾರ ರೈತರ ಬೆಲೆ ಸಾಲ. . . .

**ಶ್ರೀ ಕೆ.ಎಸ್.ಈಶ್ವರಪ್ಪ:-** ದಯಮಾಡಿ ನಾನು ಕೈ ಮುಗಿದು ಕೇಳಿಕೊಳ್ಳುತ್ತೇನೆ. ನಾನು ಮಾತನಾಡುವಾಗ ಮಧ್ಯೆ ಮಾತನಾಡಬೇಡಿ.

**ಶ್ರೀ ಮಾನೆ ಶ್ರೀನಿವಾಸ:-** ಮಾನ್ಯ ಸಭಾಪತಿಯವರೆ, ಸಾಲ ಮನ್ನಾ ಮಾಡಿದ್ದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಕೋಪ ಬಂದಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:-** ಈಗ ನಾನು ಬೇರೆ ಭಾಷೆಯನ್ನು ಬಳಸಬೇಕಾಗುತ್ತದೆ. ನಾನು ಪ್ರತಿಸಲ ಮುಖ್ಯಮಂತ್ರಿಗಳ ಹತ್ತಿರ ಮಾತನಾಡುವಾಗ ಈ ರೀತಿ ಮಾಡುವುದು ಸರಿಯಲ್ಲ.

**ಶ್ರೀ ಮಾನೆ ಶ್ರೀನಿವಾಸ:-** ನಿಮ್ಮ ಮನಸ್ಸಿನಲ್ಲಿರುವುದೇ ಬೇರೆ ಭಾಷೆ.

(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ(ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರಾಗಿ ಸದನದಲ್ಲಿ ಬೇರೆ ಭಾಷೆ ಬಳಸುತ್ತೇನೆ ಎಂದರೆ ಏನರ್ಥ?

**ಶ್ರೀ ಕೆ.ಎಸ್.ಈಶ್ವರಪ್ಪ:-** ನೀವು ಮಂತ್ರಿಗಳಾಗಿದ್ದುಕೊಂಡು ನನಗೆ ಮಾತನಾಡಲು ಅವಕಾಶ ಕೊಡದಿದ್ದರೆ ಹೇಗೆ? ಮುಖ್ಯಮಂತ್ರಿಗಳನ್ನು ಒಬ್ಬ ವಿರೋಧ ಪಕ್ಷದ ನಾಯಕನಾಗಿ ನಾನು ಕ್ಲಾರಿಫಿಕೇಷನ್ ಕೇಳಿದರೆ ಮಂತ್ರಿಗಳೇ ಮಧ್ಯದಲ್ಲಿ ಎದ್ದುನಿಂತು ತೊಂದರೆ ಕೊಡುವುದು ಒಳ್ಳೆಯದಲ್ಲ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೆ, ವಿರೋಧ ಪಕ್ಷದ ನಾಯಕರಾಗಿ ಸದನದಲ್ಲಿ ಬೇರೆ ಭಾಷೆ ಬಳಸುತ್ತೇನೆ ಎಂದರೆ ಏನರ್ಥ? ಹೇಗೆ ಸರ್ ಇದು? ಹಿರಿಯರಾಗಿ ಅವರು ಮಾತನಾಡಲಿ, ಆದರೆ ಬೇರೆ ಭಾಷೆ ಬಳಸುತ್ತೇನೆ ಎಂದರೆ ಏನರ್ಥ?

(ಗೊಂದಲ)

**ಸಭಾಪತಿಯವರು:-** ಕ್ಲಾರಿಫಿಕೇಷನ್ ಕೇಳುವುದಕ್ಕೆ ಮಾನ್ಯ ಸದಸ್ಯರಿಗೆ ಅಧಿಕಾರವಿದೆ. ಆದ್ದರಿಂದ ಅವರಿಗೂ ತಾವು ಮಾತನಾಡಲು ಅವಕಾಶ ಕೊಡಿ. ಬೇರೆಯವರು ಮಾತನಾಡುವುದನ್ನು ನಾವು ಸಹ ಕೇಳಬೇಕಾಗುತ್ತದೆ. ಆದ್ದರಿಂದಲೇ ಸದನದಲ್ಲಿ ಚರ್ಚೆಗೆ ಅವಕಾಶ ನೀಡುವುದು.

(ಗೊಂದಲ)

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಗಳೇ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಸದಸ್ಯರು ಹೀಗೆ ಮಧ್ಯ ಪ್ರವೇಶ ಮಾಡಿದರೆ ಹೇಗೆ? ಅವರು ಏನು ಹೇಳುತ್ತಿದ್ದಾರೆ ಎಂಬುದನ್ನು ಬೇರೆಯವರೂ ಕೇಳಬೇಕಲ್ಲವೇ? ಮುಖ್ಯಮಂತ್ರಿಗಳು ಸದನದಲ್ಲಿರುವಾಗಲೇ ಹೀಗೆ ಮಾಡಿದರೆ ಹೇಗೆ?

(ಗೊಂದಲ)

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ ದಯಮಾಡಿ ಆಡಳಿತ ಪಕ್ಷದ ಕಡೆಯವರು ಮಧ್ಯೆ ಮಾತನಾಡಬಾರದೆಂದು ಹೇಳಿ.

**ಶ್ರೀ ಸಿದ್ದರಾಮಯ್ಯ:–** ಅವರಿಗೆ ಮಾತನಾಡಬಾರದೆಂದು ಯಾರು ಹೇಳಿದ್ದಾರೆ? ನಾನು ಮಾತನಾಡುವಾಗ ಎಲ್ಲರೂ ಮಧ್ಯೆ ಮಾತನಾಡಲಿಲ್ಲವೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ನಾವು ಮಾತನಾಡುವುದು ಬೇರೆ, ನೀವು ಆಡಳಿತ ಪಕ್ಷದವರು, ಮಧ್ಯೆ ಎದ್ದುನಿಂತು ಮಾತನಾಡುತ್ತಿರುವ ಸದಸ್ಯರಿಗೆ ಮಾತನಾಡಬಾರದೆಂದು ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮುಖ್ಯಮಂತ್ರಿಗಳು ಮಾತನಾಡಬೇಕಾದರೆ ನೀವು ಏನು ಬೇಕಾದರೂ ಮಾತನಾಡಬಹುದು, ...

(ಗೊಂದಲ)

(ಮುಂದು)

**(904) 6.20 21-06-2017 : ಎಂವಿ:ಎಕೆ**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರಾದರೂ ಈಗ ಏನು ಮಾತನಾಡಿದ್ದಾರೆ? ಕೇಳುವಾಗ ಅಡ್ಡ ಬರುವುದು, ಮಾತನಾಡುವಾಗ ಮಧ್ಯದಲ್ಲಿ ಎದ್ದು ನಿಲ್ಲುವುದು, ಮಾತನಾಡುವುದಕ್ಕೆ ಬಿಡುವುದಿಲ್ಲ ಎನ್ನುವಂತೆ ನಡೆದುಕೊಳ್ಳುವುದು ಸರಿಯಲ್ಲ. ಹಾಗಾದರೆ ಅವರು ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಇದೇ ಮಾತನ್ನು ಆಡುತ್ತಿದ್ದರೆ?

**ಸಭಾಪತಿಯವರು:–** ಸಾಕು, ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಮಾನ್ಯ ವಿ.ಎಸ್.ಉಗ್ರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದಾರೆ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಅದಕ್ಕೆ ನಾವು ಹೇಳುತ್ತಿರುವುದು.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ನೀವು ಕೇಳಬೇಕೆಂದು ನಾವು ಹೇಳುತ್ತಿದ್ದೇವೆ. ಮಾನ್ಯ ಉಗ್ರಪ್ಪನವರು ಮಾತನಾಡುವಂತಹ ಎಲ್ಲಾ ಮಾತುಗಳಿಗೂ ನಾವು ಸುಮ್ಮನೆ ಇರುವುದಕ್ಕೆ ಆಗುವುದಿಲ್ಲ. ಏಕೆಂದರೆ ಅವರು ಸಹ ವಿರೋಧ ಪಕ್ಷದ ನಾಯಕರಾಗಿ ಕೆಲಸ ಕಾರ್ಯನಿರ್ವಹಿಸಿರುವುದರಿಂದ. ವಿರೋಧ ಪಕ್ಷದ ನಾಯಕರಿಗೆ ಸದನದಲ್ಲಿ ಸ್ವಲ್ಪ ಜಾಸ್ತಿ ಮಾತನಾಡುವುದಕ್ಕೆ liberty ಇದೆ ಎನ್ನುವಂತಹ ವಿಚಾರ ಅವರಿಗೂ ಗೊತ್ತಿದೆ. ಅದಕ್ಕೆ ನಾನು ಏನು ಹೇಳುತ್ತಿದ್ದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ಉತ್ತಮವಾದಂತಹ ರೀತಿಯಲ್ಲಿ ನಮಗೆಲ್ಲಾ ಉತ್ತರ ಹೇಳಿದ್ದಾರೆ, ಅದಕ್ಕೆ ನಾನು ಸಹಿತ ಅವರಿಗೆ ಅಭಿನಂದನೆಯನ್ನು ಸಲ್ಲಿಸಿದ್ದೇನೆ. ಮಾನ್ಯ ಉಗ್ರಪ್ಪನವರೂ ಮಾತನಾಡಲಿ, ಹೇಳುವಂಥದ್ದನ್ನು ಹೇಳಲಿ. ಆದರೆ, ಅವರು ವಿರೋಧ ಪಕ್ಷದ ನಾಯಕರು ಮತ್ತು ನಾವೆಲ್ಲರೂ ಮಾತನಾಡಬಾರದೆಂಬ ಕಾರಣಕ್ಕಾಗಿ ನಡುವೆ-ನಡುವೆ ಬರುತ್ತಾರೆ. ಈಗ ಮಂತ್ರಿಗಳಿದ್ದಾರೆ, ಆದ್ದರಿಂದ ಅವರ ಪರವಾಗಿ ಬೇರೆ ಯಾರೂ ಮಾತನಾಡಬಾರದೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ ಅಷ್ಟೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಉತ್ತರ ಪ್ರದೇಶದಲ್ಲಿ ಮೂವತ್ತಾರು ಸಾವಿರ ಕೋಟಿ ರೂಪಾಯಿ ಸಾಲ ಮನ್ನಾ ಮಾಡಿರುವುದನ್ನು ಮಾನ್ಯ ಮುಖ್ಯಮಂತ್ರಿಗಳು ಉಲ್ಲೇಖಿಸುತ್ತಾ. ಆದರೆ, ಆದೇಶ ಹೊರಡಿಸಿಲ್ಲ, ಎಂದು ಸಹ ಹೇಳಿದ್ದಾರೆ.

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೆ, ಅವರು ಘೋಷಣೆ ಮಾಡಿದ್ದಾರೆ ಅಷ್ಟೆ. ಆದರೆ, ಆದೇಶ ಹೊರಡಿಸಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಿಜ, ಮಾನ್ಯ ಮುಖ್ಯಮಂತ್ರಿಯವರು ಏನು ಹೇಳಿದ್ದಾರೆ, ಅದು ನನಗೆ ಗೊತ್ತಿಲ್ಲ. ಅವರು ಆದೇಶ ಹೊರಡಿಸದೆಯೂ ಇರಬಹುದು. ನಾನು ಇಲ್ಲ ಎಂದು ಹೇಳಿಲ್ಲ, ಇರಬಹುದು ಎಂದು ಹೇಳಿದ್ದೇನೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, it is a fact. ನಾನು ಅದರ ಮಾಹಿತಿ ಪಡೆದುಕೊಂಡೆ ಹೇಳುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದೇ ರೀತಿ ಮಹಾರಾಷ್ಟ್ರದಲ್ಲಿಯೂ ಕೂಡ ಸುಮಾರು ಮೂವತ್ತಾರು ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಮನ್ನಾ ಘೋಷಣೆ ಮಾಡಿದ್ದಾರೆ. ಘೋಷಣೆ ಮಾಡಿದ ಮೇಲೆ ಆದೇಶ ಹೊರಡಿಸುತ್ತಾರೆಯೋ, ಇಲ್ಲವೋ?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅವರು committee ಮಾಡಿದ್ದಾರೆ. ಸುಮಾರು ಮೂವತ್ತಾರು ಸಾವಿರ ಆಗಬಹುದೆಂದು ಅಂದಾಜು ಮಾಡಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಆಗಲಿ, ಯಾವುದೇ ಸರ್ಕಾರ ಮೂವತ್ತಾರು ಸಾವಿರ ಕೋಟಿ ರೂಪಾಯಿ ಎಂದು ಘೋಷಣೆ ಮಾಡಿ, ಅಂತಿಮವಾಗಿ ಅದು ನಲವತ್ತು ಸಾವಿರ ಕೋಟಿ ಅಥವಾ ಮೂವತ್ತೆಂಟು ಸಾವಿರ ಕೋಟಿ ರೂಪಾಯಿ ಆಗಬಹುದು, ಆದೇಶ ಮಾಡಿದ ಮೇಲೆ ಎಷ್ಟೇ ಆಗಬಹುದು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಆದೇಶ ಆಗಿಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಘೋಷಣೆ ಮಾಡಿದ ಮೇಲೆ,...

**ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೆ, ಘೋಷಣೆ ಅವರದ್ದು; ಸಾಧನೆ ನಮ್ಮದು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇಲ್ಲಿ ಬಹಳ ಜನ ನಕಲಿ ಶಾಮರಾವ್ ಆಗಿಬಿಟ್ಟಿದ್ದಾರೆ. ನನಗೆ ಏನು ಹೇಳಬೇಕೋ ಗೊತ್ತಾಗುತ್ತಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ನೇರವಾಗಿ ಪ್ರಶ್ನೆಯನ್ನು ಕೇಳುತ್ತೇನೆ, ಇಲ್ಲಿ ಘೋಷಣೆ ಮಾಡಿರುವಂತಹ ಉತ್ತರ ಪ್ರದೇಶ ರಾಜ್ಯ ಇರಬಹುದು, ಪಂಜಾಬ್ ರಾಜ್ಯ ಇರಬಹುದು ಮತ್ತು ಮಹಾರಾಷ್ಟ್ರ ರಾಜ್ಯ ಇರಬಹುದು, ಆ ಘೋಷಣೆ ಮಾಡಿದ ಮೇಲೆ ಅವರು ಸಾಲವನ್ನು ಮನ್ನಾ ಮಾಡಿಯೇ ಮಾಡುತ್ತಾರೆ ಅಲ್ಲವೆ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, I do not know.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅವರು ಸಾಲವನ್ನು ಮನ್ನಾ ಮಾಡಿಯೇ ಮಾಡುತ್ತಾರೆಂದು ನಾನು ಹೇಳುತ್ತೇನೆ

**Sri SIDDARAMAIAH:** O.K.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಈಗ ನೀವು ಹೇಳುತ್ತಿರುವಂತಹ style ನೋಡಿಬಿಟ್ಟರೆ, ಅವರು ಘೋಷಣೆ ಮಾಡಿಬಿಟ್ಟಿದ್ದಾರೆ, ಆದರೆ, ಮನ್ನಾ ಮಾಡುತ್ತಾರೋ ಇಲ್ಲವೋ ಎಂದು ಸಂದೇಹ ವ್ಯಕ್ತಪಡಿಸುವ ಮೂಲಕ ಇಲ್ಲೆಲ್ಲಾ ರಾಜಕಾರಣ ಬೆಳೆಸುವುದು ಒಳ್ಳೆಯದಲ್ಲ. ನಾವು ಹೇಳುತ್ತಿರುವುದೇನೆಂದರೆ, ಪಂಜಾಬ್ ರಾಜ್ಯದಲ್ಲಿ ಎರಡು ಲಕ್ಷದವರೆವಿಗೂ ಸಾಲ ಮನ್ನಾ ಮಾಡುತ್ತಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉತ್ತರಪ್ರದೇಶ ರಾಜ್ಯದಲ್ಲಿ ಮತ್ತು ಮಹಾರಾಷ್ಟ್ರ ರಾಜ್ಯದಲ್ಲಿ ಒಂದು ಲಕ್ಷದವರೆವಿಗೂ ಸಾಲ ಮನ್ನಾ ಮಾಡಿದ್ದಾರೆ. ನೀವು ಐವತ್ತು ಸಾವಿರ ರೂಪಾಯಿವರೆವಿಗೂ ಸಾಲವನ್ನು ಮನ್ನಾ ಮಾಡಿದ್ದೀರಿ. ನನ್ನ ಮನವಿ ಬೇರೆಯೇನೂ ಇಲ್ಲ, ಇದು 10,760/- ಕೋಟಿ ರೂಪಾಯಿಗಳು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅದು 10,736/- ಕೋಟಿ ರೂಪಾಯಿಗಳು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದು ನನಗೆ ಗೊತ್ತಿಲ್ಲ. ಇದು ನಿನ್ನೆಯ ದಿವಸ ನಿಮ್ಮ ಕಂದಾಯ ಸಚಿವರು ಕೊಟ್ಟಿರುವಂತಹ statement. ಕೃಷಿ ಸಾಲದ ಪೈಕಿ ಸಹಕಾರ ಸಂಘದ ಬ್ಯಾಂಕ್‌ಗಳಲ್ಲಿ 10,760/- ಕೋಟಿ ರೂಪಾಯಿಗಳಷ್ಟು ಬಾಕಿ ಇದೆ ಎಂದು ಅವರು ಹೇಳಿರುವುದನ್ನು ನಾನು ನಿಮಗೆ ಹೇಳುತ್ತಿದ್ದೇನೆ. ಅದು ಈಗ ಬದಲಾವಣೆಯಾಗಿರಬೇಕು, ಆಯಿತು. ತಾವು 8,165/- ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದೀರಿ. ಇನ್ನು ಉಳಿದಿರುವ 2,600/- ಕೋಟಿ ರೂಪಾಯಿಗಳ ಒಂದಿಷ್ಟು ಮನ್ನಾ ಮಾಡಿದ್ದರೆ, ಇಡೀ ಕರ್ನಾಟಕ ರಾಜ್ಯದ 22,27,506 ರೈತರಿಗೂ ಕೂಡ ಸಮಾಧಾನವಾಗುತ್ತಿತ್ತು. ಏಕೆಂದರೆ ಇಂತಹ ಭೀಕರ ಬರಗಾಲ ಬಂದಿಲ್ಲ ಎನ್ನುವುದನ್ನು ನಾನು ನಿಮಗೆ ವರ್ಣನೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನೋಡಿ ನಿಮ್ಮ ಮಾಹಿತಿಗೆ ಅಲ್ಲಿನ ಮುಖ್ಯಮಂತ್ರಿಗಳಾದ ಶ್ರೀ ಯೋಗಿ ಆದಿತ್ಯನಾಥ್‌ರವರು ಬರಿ ಸಣ್ಣ ರೈತರು ಮತ್ತು ಅತೀ ಸಣ್ಣ ರೈತರಿಗೆ ಮಾತ್ರ, ಐದು ಎಕರೆ ಮತ್ತು ಅದಕ್ಕಿಂತ ಕಡಿಮೆ ಇರುವವರಿಗೆ ಮಾತ್ರ ಒಂದು ಲಕ್ಷವೆಂದು ಅವರು ಹೇಳಿದ್ದಾರೆ. ಅದು ಏನೂ outstanding ಅಲ್ಲ, overdue ಇರುವವರಿಗೆ ಮಾತ್ರ. 'Overdue' ಎಂದರೆ ನಿಮಗೆ ಗೊತ್ತಾಯಿತೆ? ಅಂದರೆ, default ಆಗಿರುವವರಿಗೆ ಮಾತ್ರ; ಯಾರು defaulter ಆಗಿದ್ದಾರೆ ಅವರಿಗೆ ಮಾತ್ರ. Overdue ಬೇರೆ outstanding ಬೇರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಹೇಳುತ್ತಿರುವುದು, ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಅರ್ಥಸಚಿವರಾಗಿ ಅತಿ ಹೆಚ್ಚು ಬಾರಿ ಕೆಲಸ ಮಾಡಿರುವವರಲ್ಲಿ ನೀವೇ ಮೊದಲು, ನಾನು ಇಲ್ಲ ಎನ್ನಲಿಲ್ಲ. ಆದರೆ, ನನ್ನ ಪ್ರಶ್ನೆಯೇನೆಂದರೆ ಉತ್ತರ ಪ್ರದೇಶದವರು ಎಷ್ಟು ಹಣ ಮನ್ನಾ ಮಾಡಿದ್ದಾರೆ, ಮಹಾರಾಷ್ಟ್ರದವರು ಎಷ್ಟು ಹಣ ಮನ್ನಾ ಮಾಡಿದ್ದಾರೆ ಮತ್ತು ಪಂಜಾಬ್‌ನವರು ಎಷ್ಟು ಹಣ ಮನ್ನಾ ಮಾಡಿದ್ದಾರೆ ಎಂಬುದಕ್ಕೆ ನಿಮ್ಮ ಹತ್ತಿರ ಎಲ್ಲಾ complete ಅಂಕಿ-ಅಂಶ ಸಿಕ್ಕೇ ಸಿಗುತ್ತದೆ. ಇಂದಲ್ಲ ನಾಳೆ ಆದೇಶ ಹೊರಡಿಸಲ್ಪಡುತ್ತದೆ. ಆದ್ದರಿಂದ ಆದೇಶ ಹೊರಟ್ಟಿಲ್ಲ, ಆದೇಶ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೊರಟ್ಟಿಲ್ಲ ಎಂದು ಅದನ್ನು ಒತ್ತಿ-ಒತ್ತಿ ಹೇಳುವಂತಹ ಅವಶ್ಯಕತೆ ಇರಲಿಲ್ಲ, ಆದೇಶ ಆಗುತ್ತದೆ. ಆದರೆ, ನಾನು ನಿಮಗೆ ಹೇಳುವುದಕ್ಕೆ ಹೊರಟಿರುವುದೇನೆಂದರೆ,...

**ಶ್ರೀ ಐವನ್ ಡಿ'ಸೋಜಾ (ಸರ್ಕಾರದ ಮುಖ್ಯಸಚೇತಕರು):-** ಮಾನ್ಯ ಸಭಾಪತಿಯವರೆ, ಅವರು ಮಾಡಿರಲಿಲ್ಲ, ನಾವು ಮಾಡುತ್ತೇವೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಅಯ್ಯೋ! ರಾಮ. ಮಾನ್ಯ ಸಭಾಪತಿಯವರೆ, ಈ Cabinet expansion ಏನೋ ಮಾಡುವುದಾಗಿ ತಿಳಿದುಬಂತು. ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಕೈ ಮುಗಿದುಬಿಡುತ್ತೇನೆ, ಸ್ವಲ್ಪ ಜನಕ್ಕೆ ಮಾಡಿಬಿಟ್ಟರೆ ಒಳ್ಳೆಯದು. ಇಂತಹವರಿಂದ ನಮಗೆ ಸಾಕಾಗಿ ಹೋಗಿದೆ. ಆಗ ಇವರೆಲ್ಲಾ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳುತ್ತಾರೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಏನಾದರೂ ಮಾಡಿ, ಯಾರು ಹೆಚ್ಚು ಗಲಾಟೆ ಮಾಡುತ್ತಾರೆಂದು video ತೆಗೆಸಿಕೊಂಡು ನೋಡಿದರೆ ಆಗ ಗೊತ್ತಾಗುತ್ತದೆ. ಅವರುಗಳು video conference experts. ಕರ್ನಾಟಕ ರಾಜ್ಯದಲ್ಲಿ ಅವರಷ್ಟು video conference ಮಾಡಿದಂತಹ ಮುಖ್ಯಮಂತ್ರಿಗಳು ಯಾರೂ ಇಲ್ಲ, ಅಷ್ಟನ್ನು ಅವರು ಮಾಡಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, effective governance...

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳು ಅನುಭವಸ್ಥರು, ರಾಜ್ಯದಲ್ಲಿ ಪ್ರವಾಸ ಮಾಡಿದ್ದಾರೆ, ಅಲ್ಲೊಂದು ಕಡೆ, ಇಲ್ಲೊಂದು ಕಡೆ ಐದೈದು ನಿಮಿಷ ಹೋಗಿ ಬಂದಿದ್ದಾರೆ. ಆದರೆ ಹೆಚ್ಚು ಪ್ರವಾಸ ಮಾಡಿದ್ದಾರೆ, ಅತೀ ಹೆಚ್ಚು video conference ಮಾಡಿದ್ದಾರೆ. ಮಾಡಿರುವಂತಹ ಸಂದರ್ಭದಲ್ಲಿ, ಆ ರೈತರ ಸಂಕಷ್ಟ ಗೊತ್ತಿರುವಂತಹ ಸಂದರ್ಭದಲ್ಲಿ, ನಾನು ಅದಕ್ಕೆ ಹೇಳಿರುವುದು ಇಷ್ಟು ಜಿಪುಣತನ, ಕೇವಲ 2,600/- ಕೋಟಿ ರೂಪಾಯಿಗಳನ್ನು ಸಹ ಕೊಟ್ಟು ಬಿಟ್ಟಿದ್ದರೆ, ಅದು ಒಂದು ಬಾರಿಗೆ ಮನ್ನಾ ಆಗಿ ಹೋಗುತ್ತಿತ್ತು. ಮಾನ್ಯ ಮುಖ್ಯಮಂತ್ರಿಗಳು ಇಂತಹವರನ್ನೆಲ್ಲಾ ಮಂತ್ರಿ ಮಾಡಿಬಿಟ್ಟಿದ್ದಾರೆ. ಕೆಲವರು Zoo ನಲ್ಲಿ ಇರಬೇಕಾಗಿತ್ತು, ಅವರನ್ನು ಮಂತ್ರಿ ಮಾಡಬೇಕೆಂದು recommend ಮಾಡಿದ್ದು; Zoo ನಲ್ಲಿ ಇದ್ದವರನ್ನು ಕರೆದುಕೊಂಡು ಬಂದು ನಾನೇ recommend ಮಾಡಿದ್ದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೃಷ್ಣ ಬೈರೇಗೌಡ (ಕೃಷಿ ಸಚಿವರು):-** ಮಾನ್ಯ ಸಭಾಪತಿಯವರೆ, ನೀವು recommend ಮಾಡಿದ್ದು.

**ಶ್ರೀ ಶ್ರೀನಿವಾಸ ವಿ. ಮಾನೆ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಚಾಮುಂಡಿಬೆಟ್ಟದ entrance ಗೂ ಅಲ್ಲಿ ಸ್ವಲ್ಪ ಜನ ನಿಂತಿದ್ದಾರೆ.

**ಶ್ರೀ ತನ್ವೀರ್ ಸೇಠ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು):-** ಮಾನ್ಯ ಸಭಾಪತಿಯವರೆ, ಈ ರೀತಿ ಹೇಳುವುದು ಮಂತ್ರಿಗಳಿಗೆ? ಯಾರಿಗೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಬೇಕು.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇದ್ದಕ್ಕಿದ್ದಂತೆ ಮಾನ್ಯ ಶಿಕ್ಷಣ ಸಚಿವರು ಏಕೆ ಮೇಲೆ ಎದ್ದಿದ್ದಾರೆ, ಇವರು ಒಳ್ಳೆಯವರು, ಇರುವವರಲ್ಲಿ ಇವರು ಉತ್ತಮ ಎಂದುಕೊಂಡಿದ್ದೆ. ಈಗ ಇವರೂ ಅವರ ಜೊತೆ ಸೇರಿಕೊಂಡು, ಹತ್ತಿರ-ಹತ್ತಿರ... ಅದಕ್ಕೆ ದಯವಿಟ್ಟು ತಾವು ಜಿಪುಣತನವನ್ನು ಬಿಟ್ಟುಬಿಡಿ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, 8,165/- ಕೋಟಿ ರೂಪಾಯಿಗಳ ಸಾಲವನ್ನು ಮನ್ನಾ ಮಾಡಿರುವುದು ಜಿಪುಣತನವೆ?

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಯವರು ಮಾಡಿದ್ದಾರೆ, ಬೇರೆ-ಬೇರೆ ರಾಜ್ಯದವರು ಮೂವತ್ತಾರು ಸಾವಿರ ಕೋಟಿ ರೂಪಾಯಿ, ಮೂವತ್ತು ಸಾವಿರ ಕೋಟಿ ರೂಪಾಯಿ ಈ ರೀತಿ ಸಾಲ ಮನ್ನಾ ಮಾಡಿದ್ದಾರೆ. ಪಂಜಾಬ್‌ನಲ್ಲಿ ಹತ್ತು ಸಾವಿರ ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದ್ದಾರೆ. ಈಗ ನಾನು ಹೇಳುತ್ತಿರುವುದು ಬೇರೆ, ಇವತ್ತಿನ ದಿವಸ ಇವರು ಮುಖ್ಯಮಂತ್ರಿಗಳಾಗಿ ಘೋಷಣೆ ಮಾಡಿದ್ದಾರೆ. ನಾಲ್ಕು ವರ್ಷದಿಂದ ರೈತರು ಒದ್ದಾಡುತ್ತಿರುವಂತಹ ಸಂದರ್ಭದಲ್ಲಿ, ಪ್ರತಿ ವರ್ಷ ಕೂಡ ರೈತರ ಆತ್ಮಹತ್ಯೆ, ಸಾಲ ಎಂಬುದು ಬರುತ್ತಲೇ ಇದೆ, ಅದು ಇವತ್ತು ನಿನ್ನೆಯದಲ್ಲ. ನಿಮ್ಮ ಸಚಿವ ಸಂಪುಟದ ಅನೇಕ ಸಚಿವರು, ನಿಮ್ಮ-ನಿಮ್ಮ ಜಿಲ್ಲೆಗಳಿಗೆ ಹೋಗಿ...

**ಶ್ರೀ ವಿನಯ ಕುಲಕರ್ಣಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ಇವತ್ತು ಸಂಜೆಗೆ ಅವರಿಗೆ flight ticket ತೆಗೆದುಕೊಡಿ, ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ

"ತಿದ್ದುಪಡಿಯಾಗದ ಪ್ರತಿ; ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮೋದಿಯವರನ್ನು ಭೇಟಿ ಮಾಡಿ, ಅವರು ಆ ಸಾಲವನ್ನು ಮನ್ನಾ ಮಾಡಿದರೆ, ಎಲ್ಲಾ ರೈತರು ಅದನ್ನು ಒಪ್ಪುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದಕ್ಕೆ ನಾನು ಹೇಳುತ್ತಿರುವುದು, ಇನ್ನುಳಿದಿರುವಂತಹ 2,600/- ಕೋಟಿ ರೂಪಾಯಿಗಳ ಸಾಲ ಏನು ಬಾಕಿ ಇದೆ, ದಯವಿಟ್ಟು ಅದನ್ನು ಮನ್ನಾ ಮಾಡಿದರೆ. ಎಲ್ಲಾ ರೈತರ ಸಾಲವೂ ಒಂದು ಬಾರಿಗೆ ಬಗೆಹರಿದು ಹೋಗುತ್ತದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ. ಏಕೆಂದರೆ ಉತ್ತರ ಪ್ರದೇಶದಲ್ಲಿ, ಮಹಾರಾಷ್ಟ್ರದಲ್ಲಿ ಮತ್ತು ಪಂಜಾಬ್‌ನಲ್ಲಿ ಭೀಕರ ಬರಗಾಲ continuous ಆಗಿ ಇಲ್ಲ. ಆಯಾಯ ವರ್ಷದಲ್ಲೂ ಕೂಡ ಅವರು ಒದ್ದಾಡಿದ್ದಾರೆ. ಆದರೆ, ಈ ಬಾರಿ ಇಷ್ಟೊಂದು ಭೀಕರ ಬರಗಾಲ ಇರುವಂತಹ ಸಂದರ್ಭದಲ್ಲಿ, ಸರ್ಕಾರ ನಾಲ್ಕು ವರ್ಷದಲ್ಲಿ ಸಾಲವನ್ನು ಮನ್ನಾ ಮಾಡುವುದಕ್ಕೆ ಆಗಲಿಲ್ಲ. ಬೇರೆ ಬೇರೆ ಕಾರಣಕ್ಕಾಗಿ, ಏಕೆಂದರೆ ಆಗ ಚುನಾವಣೆ ಬರಲಿಲ್ಲ. ಚುನಾವಣೆ ಬರದಿದ್ದರೆ ಮುಕ್ಕಾಲು ಪಾಲು ಆಗಲೇ ಮಾಡಿ ಬಿಡುತ್ತಿದ್ದೀರೇನೋ ಗೊತ್ತಿಲ್ಲ. ಈಗ ಚುನಾವಣೆ ಬಂದಿದೆ, ಆದುದರಿಂದ ಮಾಡುತ್ತಿದ್ದಾರೆ. ಮಾಡುವುದರಲ್ಲಿ ಏಕೆ ಚೌಕಾಶಿ, ಇನ್ನೂ ಉಳಿದಿರುವಂತಹ 2,600/- ಕೋಟಿ ರೂಪಾಯಿಗಳನ್ನು ದಯವಿಟ್ಟು ತಕ್ಷಣ ಮನ್ನಾ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ನಾವು ಮಾತನಾಡುವಂತಹ ಸಂದರ್ಭದಲ್ಲಿ ಮಾನ್ಯ ಕಂದಾಯ ಸಚಿವರು ಕುಡಿಯುವ ನೀರಿನ ಬಗ್ಗೆ ಉತ್ತರ ಕೊಟ್ಟಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಮಾನ್ಯ ಕಂದಾಯ ಸಚಿವರು ಉತ್ತರ ಕೊಟ್ಟಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅವರು ಉತ್ತರ ಕೊಟ್ಟಿದ್ದಾರೆ. ಆದರೆ, ನಾನು ಮಾನ್ಯ ಮುಖ್ಯಮಂತ್ರಿಗಳ ಉತ್ತರದಲ್ಲಿ ಏನು ಸಿಗುತ್ತದೆ ಎಂದುಕೊಂಡೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾನು ಬಜೆಟ್‌ಗಷ್ಟೇ ಸೀಮಿತವಾಗಿ ಮಾತನಾಡುತ್ತಿದ್ದೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇಲ್ಲಿ ನಾನು ಏಕೆ ಹೇಳುತ್ತಿದ್ದೇನೆಂದರೆ, ನೀವು ಹೇಳಲಿಲ್ಲ. ಈಗ ಏನಾಗಿಬಿಟ್ಟಿದೆ ಎಂದರೆ, ನಾವು ಪ್ರಸ್ತಾಪ ಮಾಡುವುದು, ಅವರು ಉತ್ತರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಡುವುದು ಈ ರೀತಿ ಆಗಿದೆ. ಆದರೆ, ಒಂದು ಹನಿ ಕುಡಿಯುವ ನೀರಿಗೆ ಹಣವಿಲ್ಲ, ಸರ್ಕಾರದಿಂದ ಹಣ ಬರಲಿಲ್ಲ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಎಲ್ಲಿ?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅನೇಕ ಜಿಲ್ಲೆಗಳಲಿ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ನೋಡಿ ಶಿವಮೊಗ್ಗದಲ್ಲೂ ಇದೆ, ಎಲ್ಲಾ ಕಡೆಯೂ ಇದೆ. ಇನ್ನು ಜಿಲ್ಲಾಧಿಕಾರಿಗಳ ಹತ್ತಿರ PD Account ನಲ್ಲಿ 254/- ಕೋಟಿ ರೂಪಾಯಿಗಳ ಹಣವಿದೆ ಎಂದು ಮಾನ್ಯ ಸಚಿವರು ನಿನ್ನೆ ದಿವಸ ಹೇಳಿದ್ದಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರೆ ನಮ್ಮ ಜೊತೆಗೆ ನಿಮ್ಮ ಹತ್ತಿರ ಬಂದಿದ್ದರು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಯಾರು ಬಂದಿದ್ದರು?

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಕಂದಾಯ ಸಚಿವರು, ಇಡೀ ಶಿವಮೊಗ್ಗ ಜಿಲ್ಲಾ ಪಂಚಾಯತ್‌ನ ಕಾಂಗ್ರೆಸ್...

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ಅವರು ಬಂದು ಕೇಳಿರುವಂಥದ್ದು, ಕೆಲವು ಕಾರ್ಯಕ್ರಮಗಳನ್ನು ಏನು ಮಂಜೂರು ಮಾಡಿ ಕಾರ್ಯಗತ ಆಗುತ್ತಿವೆಯಲ್ಲ, ಆ pending bills ಗೋಸ್ಕರ ಹಣ ಕೊಡಬೇಕೆಂದು ಬಂದಿದ್ದರು. ಅದು ಈ ಬರ ಪರಿಸ್ಥಿತಿಗೆ ಅಂದುಕೊಂಡಿರುವಂತಹ ಕೆಲಸಕ್ಕೆ ಅಲ್ಲ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಕಂದಾಯ ಸಚಿವರೆ, ನೀವು ಆ ಜಿಲ್ಲಾಪಂಚಾಯತ್ meeting ನಲ್ಲಿ resolution ಏನಾಗಿದೆ ಎಂದು ನೋಡಿ. ಜಿಲ್ಲಾಪಂಚಾಯತ್ ಸದಸ್ಯರು ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರು, ನಾವುಗಳು ಹಳ್ಳಿಗಳಿಗೆ ಹೋಗುವ ಹಾಗೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು...

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ನೀವು ಅದು ಯಾವ ಊರು ಎಂದು ಹೇಳಿ, ಯಾವ ಊರಿನಲ್ಲಿ ಕುಡಿಯುವ ನೀರಿಲ್ಲ?

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸ್ವಲ್ಪ ಕೇಳಿ, ಅಯ್ಯೋ ರಾಮ! ಹಾಗಾದರೆ ನಿಮ್ಮ ಜಿಲ್ಲಾ ಪಂಚಾಯತ್ ಸದಸ್ಯರಿದ್ದಾರಲ್ಲ ಅವರೆಲ್ಲರ ರಾಜೀನಾಮೆಯನ್ನು ತೆಗೆದುಕೊಂಡು ಬಿಡಿ. ಸರ್ವಾನುಮತದಿಂದ ನಿರ್ಣಯವಾಗಿರುವುದನ್ನು ಹೇಳುತ್ತಿದ್ದೇನೆ. ನೀವು ಇಲ್ಲಿ ಮುಖ್ಯಮಂತ್ರಿಗಳ ಹತ್ತಿರ ಈ ರೀತಿ ಹೇಳಿದರೆ ನಾನು ಏನನ್ನು ಹೇಳಲಿ.

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ಯಾವ ಊರಿನಲ್ಲಿ ಕುಡಿಯುವ ನೀರಿನ ತೊಂದರೆ ಇದೆ ಎಂದು ಹೇಳಿಬಿಡಿ, ನಾನು ನಾಳೆಯೇ ಅಲ್ಲಿಗೆ ಹೋಗುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಜಿಲ್ಲಾಪಂಚಾಯತ್ ಸದಸ್ಯರು ಯಾರ್ಯಾರು ಬಂದಿದ್ದರೋ ಅವರಿಗೆಲ್ಲಾ ಹೇಳಿ. ಇಂದಿಗೆ ಈ ಅಧಿವೇಶನ ಮುಗಿಯುತ್ತದೆ, ಎರಡು–ಮೂರು ದಿನ ಬಿಡುವು ಮಾಡಿಕೊಳ್ಳಿ, ನಿಮ್ಮ ಜಿಲ್ಲಾಪಂಚಾಯತ್ ಸದಸ್ಯರು...

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಈಗ ಮಾನ್ಯ ಕಂದಾಯ ಸಚಿವರು ಶಿವಮೊಗ್ಗ ಜಿಲ್ಲೆಗೆ ಬಂದು review ಮಾಡುತ್ತಾರೆ.

**ಶ್ರೀ ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, review ಆಯಿತು. Review ಆದ ಮೇಲೆಯೇ ನಾನು ಹೇಳುತ್ತಿರುವುದು. ಅವರು ಇನ್ನೇನೂ ಮಾಡುವುದು ಬೇಡ, ಜಿಲ್ಲಾಪಂಚಾಯತ್ ಸದಸ್ಯರು ಯಾರ್ಯಾರು ಇದ್ದಾರೆ, ಅಲ್ಲಿಗೆ ನಾನು ಮತ್ತು ಮಾನ್ಯ ಕಂದಾಯ ಸಚಿವರು ಒಟ್ಟಿಗೆ ಹೋಗುತ್ತೇವೆ. ನೀರು ಇಲ್ಲವೆಂದು ಹೇಳಿದರೆ ಆಗ ಇವರು ಒಪ್ಪಿಕೊಳ್ಳುತ್ತಾರೆಯೆ? ಹಣ ಬಿಡುಗಡೆ ಮಾಡಿಸುತ್ತಾರೆಯೆ?

**ಶ್ರೀ ಕಾಗೋಡು ತಿಮ್ಮಪ್ಪ:–** ಮಾನ್ಯ ಸಭಾಪತಿಯವರೆ, ಏನು ಅವರಿಗೆ ಕೊಟ್ಟಿದ್ದಂತಹ ಕೆಲಸ ಆಗಿದೆಯಲ್ಲಾ, pending bills ಇಷ್ಟು ಇದೆ.

**(ಮುಂದು...)**

(905) 21.06.2017 06.30 LL-RN

**ಸಭಾಪತಿಯವರ ಉಪಸ್ಥಿತಿ**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಬಾಕಿ ಬಿಲ್ಲುಗಳ ವಿಚಾರ ಬೇರೆ. ಸುಮ್ಮನೆ, ನಾನು ಇಲ್ಲಿ ವಾದ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಗೆ ಇಷ್ಟು ಮಾತ್ರ ಹೇಳುತ್ತೇನೆ, ಕುಡಿಯುವ ನೀರಿನ ಸಮಸ್ಯೆ ರಾಜ್ಯದ ಅನೇಕ ಕಡೆ ಇದೆ...

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, I will making it very clear. ನಾನು ಎಲ್ಲಾ ಜಿಲ್ಲಾಧಿಕಾರಿಗಳಿಗೆ, "ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗಬಹುದು. ಅದು ಬೋರ್‌ವೆಲ್ ತೊಡಿಸುವುದು ಇರಬಹುದು, ಬಾಡಿಗೆಗೆ ತೆಗೆದುಕೊಳ್ಳುವಂತಹದ್ದು ಇರಬಹುದು, ಟ್ಯಾಂಕರ್‌ಗಳ ಮೂಲಕ ನೀರನ್ನು ಒದಗಿಸುವಂಥಹದ್ದು ಇರಬಹುದು. ಇದಕ್ಕೆ ಯಾವುದೇ ರೀತಿ ತೊಂದರೆಯಾಗಬಾರದು. ಇದಕ್ಕಾಗಿ ಎಷ್ಟು ದುಡ್ಡು ಬೇಕಾದರೂ ಕೂಡ ಕೊಡುತ್ತೇನೆ," ಎಂದು ಹೇಳಿದ್ದೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ದಯವಿಟ್ಟು ಮಾನ್ಯ ಸಚಿವರು ತಕ್ಷಣವೇ ಒಂದು ಸಭೆ ಮಾಡಲಿ, ನಾನು ಕೂಡ ಆ ಸಭೆಗೆ ಬರುತ್ತೇನೆ. ಜಿಲ್ಲಾ ಪರಿಷತ್ ಸದಸ್ಯರ ಬಳಿ ಕೇಳಿಕೊಳ್ಳಲಿ. ಆ ಒಂದು ನೀರಿನ ಸಮಸ್ಯೆಯನ್ನು ಪರಿಹಾರ ಮಾಡುವಂತಹ ಜವಾಬ್ದಾರಿ ಮಾನ್ಯ ಸಚಿವರ ಮೇಲಿದೆ. ಕನಿಷ್ಟ ಈ ವಿಷಯಕ್ಕಾದರೂ ನನಗೊಂದು ಆಶ್ವಾಸನೆ ಸಿಕ್ಕಿದೆ. ಸಮಾಧಾನ, ಇರಲಿ. ನಾನು ಅದಕೋಸ್ಕರ ಹೇಳುವುದೇನೆಂದರೆ, ಈಗ ವಿಶೇಷವಾಗಿ...

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಈಶ್ವರಪ್ಪನವರೆ, ಸಾಕು, ಸಾಲ ಮನ್ನಾ ಮಾಡಿದ್ದರ ಬಗ್ಗೆ ಸರ್ಕಾರದ ನಿರ್ಧಾರವನ್ನು ಸ್ವಾಗತ ಮಾಡಿ. ಸುಮ್ಮನೆ ಏನೇನೋ ಹೇಳಬೇಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಖಂಡಿತ ಸ್ವಾಗತ ಮಾಡುತ್ತೇನೆ. ಸ್ವಾಗತ ಮಾಡುವುದು ಯಾವಾಗ? ತಾವು ಬರೀ 8,165 ಕೋಟಿ ರೂಪಾಯಿ ಕೊಟ್ಟು ಇನ್ನು 2,600 ಕೋಟಿ ರೂಪಾಯಿ ಬಾಕಿ ಇರಬೇಕಾದರೆ..?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಇವರ ಸರ್ಕಾರ ಮಾಡಿದ್ದು ಸುಮಾರು 3,000 ಕೋಟಿ ರೂಪಾಯಿಗಳು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದು ಬಿಡಿ. ಆಗಿನ ಕಾಲ, ಆಗಿನ ಬರಗಾಲ, ಆಗಿನ ಬೆಲೆ ಇತ್ತು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯರೆ, ಬಹಳ ಹಿಂದೆ ಅಲ್ಲ. ಕೇವಲ 5 ವರ್ಷಗಳ ಹಿಂದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಹೌದು ಸರ್. ಅದು ಆಗಿನ ಬರಗಾಲ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಈಶ್ವರಪ್ಪನವರೆ, 2012ರ ಯಾವ ತಿಂಗಳಿನಲ್ಲಿ ಮಾಡಿದ್ದು ಎಂದು ತಮಗೆ ಗೊತ್ತಿದೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಮ್ಮ ಪಾಯಿಂಟ್ ಅದು ಯಾವುದೂ ಅಲ್ಲ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಹಾಗಾದರೆ ಬೇರೆ ಯಾವುದು?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾವು ಎಷ್ಟು ಸಾಲ ಮನ್ನಾ ಮಾಡಿದ್ದೇವೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಹಾಗಾದರೆ, ನಾವು ಎಷ್ಟು ಸಾಲ ಮನ್ನಾ ಮಾಡುತ್ತೇವೆ, ಅಷ್ಟು ಸಾಲವನ್ನು ಮಾತ್ರ ಇವರು ಮನ್ನಾ ಮಾಡುತ್ತಾರೆಯೇ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯರೆ, ಅದು ಹಾಗಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಹಾಗಾದರೆ ಅವರು ಅದನ್ನು ಏತಕ್ಕೆ ಹೋಲಿಕೆ ಮಾಡುತ್ತಾರೆ? ಹೋಲಿಕೆ ಮಾಡಬಾರದು.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯರೆ, ನಾವು ಎಲ್ಲಾ ರೈತರಿಗೂ ಸಾಲ ಮನ್ನಾ ಮಾಡಿದ್ದೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಇನ್ನೂ 2,600 ಕೋಟಿ ರೂಪಾಯಿಗಳ ಸಾಲ ಸರ್ಕಾರದ ಲೆಕ್ಕದಲ್ಲಿಯೇ ಇದೆ. ಆ ರೈತರ ಕಥೆಯೇನು? ಎಲ್ಲರಿಗೂ 50,000 ರೂಪಾಯಿ ಸಿಕ್ಕಿದೆ ಎಂದು ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಆ ರೈತರಿಗೂ ಕೂಡ 50,000 ರೂಪಾಯಿ ಸಾಲ ಮನ್ನಾ ಮಾಡಿದ್ದೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದು ಸಿಕ್ಕಿಲ್ಲ. ನಮಗೆ ಇಷ್ಟೂ ಅರ್ಥವಾಗುವುದಿಲ್ಲವೇ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನೋಡಿ ಆ ರೈತರಿಗೂ 50,000 ರೂಪಾಯಿ ಸಾಲ ಮನ್ನಾ ಮಾಡಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳ ಲೆಕ್ಕದ ಪ್ರಕಾರವೆ 10,760 ಕೋಟಿ ರೂಪಾಯಿ ಸಾಲ ಇದ್ದು, ಅದರಲ್ಲಿ 8,165 ಕೋಟಿ ರೂಪಾಯಿಗಳ ಸಾಲ ಮನ್ನಾ ಆಗಿದ್ದು, ಇನ್ನು 2,600 ಕೋಟಿ ರೂಪಾಯಿಗಳಷ್ಟು ಬಾಕಿಯಿದೆ. ಆ ಸಾಲವನ್ನು ಮನ್ನಾ ಮಾಡುತ್ತಾರೋ, ಇಲ್ಲವೋ? ಇದನ್ನು ಉಳಿಸುವುದು...

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, now I am making it very clear. 22,27,506 ಜನ ರೈತರಿಗೆ 50 ಸಾವಿರದವರೆಗೆ ಸಾಲ ಮನ್ನಾ ಮಾಡಿದ್ದೇವೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಆ 50 ಸಾವಿರ ರೂಪಾಯಿಗೆ ಮಿತಿಗೊಳಿಸಬಾರದೆಂದು ನಾನು ಹೇಳುತ್ತಿದ್ದೇನೆ. **(ಗೊಂದಲ)** 50 ಸಾವಿರ ಮಿತಿಗೊಳಿಸಿದ್ದರಿಂದ ಈ ಸಮಸ್ಯೆ. ಈಗ ಅಲ್ಲಿ ಒಂದೊಂದು ಲಕ್ಷದವರೆಗೆ, ಎರಡೆರಡು ಲಕ್ಷ...

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, 50 ಸಾವಿರ ರೂಪಾಯಿವರೆಗೆ... 25 ಸಾವಿರದವರೆಗೆ, 50 ಸಾವಿರ ಸಾಲ ತೆಗೆದುಕೊಂಡಿರತಕ್ಕಂತಹವರು 16 ಲಕ್ಷ ಜನ ರೈತರಿದ್ದಾರೆ ಅವರ ಸಂಪೂರ್ಣ ಸಾಲ ಮನ್ನಾ ಆಗುತ್ತದೆ. ಇನ್ನು ಉಳಿದವರು...

**ಸಭಾಪತಿಯವರು:-** ಜಾಸ್ತಿ ಸಾಲ ತೆಗೆದುಕೊಂಡಿರುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಇನ್ನು ಉಳಿದವರು, 1 ಲಕ್ಷ, 2 ಲಕ್ಷ, 3 ಲಕ್ಷ ಹೀಗೆಲ್ಲಾ ಸಾಲ ತೆಗೆದುಕೊಂಡಿರುತ್ತಾರೆ. ಅವರಿಗೂ ಕೂಡ 50 ಸಾವಿರ ರೂಪಾಯಿಯ ಸಾಲ ಮನ್ನಾ ಲಾಭ ಸಿಗುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ನಾನು ಅದನ್ನೇ ಹೇಳುತ್ತಿರುವುದು. ಅವರನ್ನು ಏತಕ್ಕೆ ಬೇರ್ಪಡಿಸುತ್ತಿದ್ದಾರೆ?

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ನಾವು ಯಾರನ್ನೂ ಬೇರ್ಪಡಿಸಿರುವುದಿಲ್ಲ. ಎಲ್ಲರಿಗೂ ಸಮಾನ.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಬೇರೆ ಬೇರೆ ರಾಜ್ಯಗಳಲ್ಲಿ 1 ಲಕ್ಷ, 2 ಲಕ್ಷದವರೆಗೆ ಸಾಲ ಮನ್ನಾ ಮಾಡಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಈಶ್ವರಪ್ಪನವರೆ ಬೇರೆ ಬೇರೆ ರಾಜ್ಯಗಳಲ್ಲಿ... ಅದೇ ತಮಗೆ ಗೊತ್ತಿಲ್ಲವೆಂದು ನಾನು ಹೇಳುತ್ತಿರುವುದು. ಅದಕ್ಕೆ ನಾನು ಹೇಳುತ್ತಿರುವುದು 5 ಎಕರೆ ಜಮೀನು ಇರುವವರಿಗೆ...

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಅದು ನಮಗೆ ಅರ್ಥವಾಗಿದೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಅಲ್ಲಿ ಮಾಡಿರುವುದು ಯಾರಿಗೆಂದರೆ..? overdue ಅಂದರೆ ಏನೆಂದು ಇವರಿಗೆ ಗೊತ್ತಿಲ್ಲವೆ?

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, ಮುಖ್ಯಮಂತ್ರಿಗಳು ಹೇಳಿದ್ದು, ನನಗೆ ಗೊತ್ತಾಯಿತು. ಅವರು ಹೇಳಿದ್ದನ್ನೇ ಹತ್ತು ಬಾರಿ ಹೇಳುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಉತ್ತರಪ್ರದೇಶದಲ್ಲಿ ಯಾರು ಸಾಲ ಕಟ್ಟಿಲ್ಲ ಅಂತಹವರಿಗೆ ಮಾತ್ರ ಸಾಲ ಮನ್ನಾ ಮಾಡಲಾಗುತ್ತದೆಯೇ ಹೊರತು, ಎಲ್ಲರಿಗೂ ಸಾಲ ಮನ್ನಾ ಮಾಡಿಲ್ಲ. ಅಲ್ಲಿ ಯಾರು ಸಾಲ ಕಟ್ಟಿಲ್ಲ, defaulter ಆಗಿದ್ದಾರೆ. ಅವರಿಗೆ ಮಾತ್ರ ಎಂದು ಉತ್ತರಪ್ರದೇಶ ಸರ್ಕಾರ ಹೇಳಿರುವುದು.

**ಶ್ರೀ ಕೆ.ಎಸ್. ಈಶ್ವರಪ್ಪ:-** ಮಾನ್ಯ ಸಭಾಪತಿಯವರೆ, 10,760 ಕೋಟಿ ರೂಪಾಯಿ ಎಂದು ಏನು ಉತ್ತರ ಹೇಳಿದ್ದಾರೆ, ಅದರಲ್ಲಿ ಇನ್ನೂ ಸುಮಾರು 2,600 ಕೋಟಿ ರೂಪಾಯಿ ರೈತರಿಗೆ ಸಾಲ ಮನ್ನಾ ಮಾಡುವುದರಲ್ಲಿ ಈ ಸರ್ಕಾರ ಸಂಪೂರ್ಣ ವಿಫಲವಾಗಿದೆ. 4 ವರ್ಷಗಳಿಂದ ಬರಗಾಲ ಪರಿಸ್ಥಿತಿಯಿಂದ ಕಂಗೆಟ್ಟ ರೈತರು ಆತ್ಮಹತ್ಯೆ ಮಾಡಿಕೊಂಡಾಗ ಇವರು ಕಣ್ಣು ಮುಚ್ಚಿಕೊಂಡು ಕುಳಿತಿದ್ದರು, ಸರ್ಕಾರದ ಈ ಧೋರಣೆಯನ್ನು ಪ್ರತಿಭಟನೆ ಮಾಡಿ ನಾವು ಈಗ ಸಭಾತ್ಯಾಗ ಮಾಡುತ್ತಿದ್ದೇವೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ಈಶ್ವರಪ್ಪನವರು ಹೋಗಿ ಅರುಣ್ ಜೇಟ್ಲಿಯವರಿಗೆ ಹೇಳಲಿ. **(ಗೊಂದಲ)** ಅರುಣ್ ಜೇಟ್ಲಿಯವರಿಗೆ ಹೇಳಲಿ. ಇವರಿಗೆ ನಾಚಿಕೆಯಾಗುವುದಿಲ್ಲವೇ?

**(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಸರ್ಕಾರದ ನಿಲುವನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡಿದರು.)**

**(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಭಾರತೀಯ ಜನತಾ ಪಕ್ಷದ ಸದಸ್ಯರುಗಳ ವಿರುದ್ಧ ಘೋಷಣೆಗಳನ್ನು ಕೂಗಿದರು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೆ, ರೈತರ ಸಾಲ ಮನ್ನಾ ಮಾಡಿ ಎಂದು ಇವರು ಅರುಣ್ ಜೇಟ್ಲಿಯವರಿಗೆ ಹೇಳಲಿ. ನಮ್ಮ ಸರ್ಕಾರದ ನಿರ್ಧಾರವನ್ನು ಇವರು ಸ್ವಾಗತ ಮಾಡಬೇಕು. ಕೆಳಮನೆಯಲ್ಲಿ ಏನೂ ಮಾತನಾಡದೆ ಸ್ವಾಗತ ಮಾಡಿದರು. **(ಗೊಂದಲ)** ಇವರಿಗೆ ಏನು ಗೊತ್ತಿಲ್ಲ. ಸಾಲ ಮನ್ನಾ ಮಾಡಬೇಕಂತೆ...

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ(ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೆ, ಇದುವರೆವಿಗೂ ರೈತರ ಸಾಲ ಮನ್ನಾ ಮಾಡಿ ಎಂದು ಒತ್ತಾಯ ಮಾಡಿ, ಈಗ ಸಾಲ ಮನ್ನಾ ಮಾಡಿದ ನಂತರ ಸಭಾತ್ಯಾಗ ಮಾಡಿದ್ದಾರೆ. ಇವರಿಗೆ ನಾಚಿಕೆಯಾಗುವುದಿಲ್ಲವೇ?

**ಸಭಾಪತಿಯವರು:-** ಮಾನ್ಯ ಹೊರಟ್ಟಿಯವರೆ, ತಾವು ಮುಖ್ಯಮಂತ್ರಿಯವರಲ್ಲಿ ಏನಾದರೂ ಸ್ಪಷ್ಟೀಕರಣ ಕೇಳುವುದು ಇದೆಯೇ?

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಬೇರೆ ಏನೂ ಕೇಳುವುದಿಲ್ಲ. ಇವತ್ತು ಏನೇ ಇರಲಿ. ರಾಜಕಾರಣವನ್ನು ದೂರವಿಟ್ಟು ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ರೈತರಿಗೆ ಏನು 50 ಸಾವಿರ ಸಾಲ ಮನ್ನಾ ಮಾಡಿದ್ದಾರೆ, ಅದನ್ನು ಪ್ರಾಮಾಣಿಕವಾಗಿ ಮತ್ತು ಹೃದಯ ಪೂರ್ವಕವಾಗಿ ನಾನು ಸ್ವಾಗತ ಮಾಡುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಮೇಜು ಕುಟ್ಟುವ ಮೂಲಕ ಸರ್ಕಾರಕ್ಕೆ ಬೆಂಬಲ ಸೂಚಿಸಿದರು.)**

ಏನೇ ಇರಲಿ. ನಾವೂ ರಾಜಕಾರಣ ಮಾಡುತ್ತೇವೆ, ಅವರೂ ಮಾಡುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ... ಕಳೆದ 4-5 ವರ್ಷಗಳ ಬರಗಾಲವನ್ನು ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಕಡೆ ಓಡಾಡಿ, ನೋಡಿ ಎಲ್ಲಾ ಕಷ್ಟಗಳನ್ನು ಪರಿಹಾರ ಮಾಡಿದ್ದಾರೆ. ಇದರಲ್ಲಿ ನಾನು ಏನು ಹೇಳುತ್ತೇನೆಂದರೆ, ಪಕ್ಷಾತೀತವಾಗಿ ಏನೇ ಇರಲಿ, ಸಾಯಬೇಕೆನ್ನುವಂತಹ ಒಬ್ಬ ರೈತ ಬದುಕುತ್ತಾನಲ್ಲ? ಅದು ಇಲ್ಲಿ ಬಹಳ ಪ್ರಮುಖವಾದ ಅಂಶವಾಗಿದೆ. ನಾನು ಒಬ್ಬ ರೈತನಾಗಿ ಇದನ್ನು ಸ್ವಾಗತ ಮಾಡುತ್ತೇನೆ. ಇಲ್ಲವಾದರೆ, ನಾವೆಲ್ಲರೂ ಸೇರಿ ರೈತರಿಗೆ ದ್ರೋಹ ಮಾಡಿದಂತಾಗುತ್ತದೆ ಎನ್ನುವ ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಈ ಹಿನ್ನೆಲೆಯಲ್ಲಿ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಿದ್ದೇನೆ. ಅದು ಏನೇ ಇರಲಿ, ಚುನಾವಣೆ ಇರಲಿ; ಮತ್ತೊಂದು ಇರಲಿ; ಮಗದೊಂದು ಇರಲಿ. ರಾಜಕಾರಣ ಮಾಡುವಾಗ ನಾವು ಹೇಳುತ್ತೇವೆ, ಚುನಾವಣೆ ಬರುತ್ತಿರುವ ಹಿನ್ನೆಲೆಯಲ್ಲಿ ಸಾಲ ಮನ್ನಾ ಮಾಡಿದ್ದಾರೆ ಎಂದು ಹೇಳುತ್ತೇವೆ. ಆದರೆ, ಇಷ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನ, ಇದಕ್ಕೆ ಯಾವುದೇ ರೀತಿಯಿಂದ, 5 ಎಕರೆ ಜಮೀನು, 6 ಎಕರೆ ಜಮೀನು ಇದೆ, ಈಗ ನನಗೂ ಕೂಡ ಸಾಲ ಮನ್ನಾ ಆಗಿದೆ. ನಾನು ಸಹಿತ ಅದರಲ್ಲಿ ಬರುತ್ತೇನೆ. ಅಂದರೆ, ಇದರಲ್ಲಿ ಬಹಳ ಜನ ಬರುತ್ತಾರೆ. ಈ ಹಿನ್ನೆಲೆಯಲ್ಲಿ ನಾನು ಅಭಿನಂದನೆ ಸಲ್ಲಿಸುತ್ತೇನೆ.

ಒಂದು ವಿಷಯವೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಸಾಲ ಮನ್ನಾ ಮಾಡಿದ್ದಾರೆ. ಅದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇನ್ನು ಉಳಿದಿರುವ 2,600 ಕೋಟಿ ರೂಪಾಯಿಗಳ ಸಾಲದ ಬಗ್ಗೆ ಏನಾದರೂ ಒಂದು ವಿಚಾರ ಮಾಡಿದರೆಂದರೆ ಸಂಪೂರ್ಣವಾಗಿ ನಾವು ಯಾರೂ ಸರ್ಕಾರದ ವಿರುದ್ಧ ಮಾತನಾಡಲಾರದಂತಹ ಪರಿಸ್ಥಿತಿ ನಿರ್ಮಾಣವಾಗಲಿ ಎನ್ನುವಂತಹ ಭಾವನೆಯಿಂದ ಮತ್ತು ರೈತರಿಗೆಲ್ಲಾ ಇವತ್ತಿನ ದಿವಸ 50 ಸಾವಿರ, 60 ಸಾವಿರ, 1 ಲಕ್ಷ ಸಾಲ ಇದ್ದವರು ಸಹ ಏನೂ ಮಾಡಲಾರದೆ ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಏನು ನಿರ್ಮಾಣವಾಗಿತ್ತು, ಅಂತಹದ್ದರಲ್ಲಿ ಇವತ್ತಿನ ದಿವಸ ಅವರು ನಿರಾಳವಾಗಿದ್ದಾರೆ. ಎಷ್ಟೋ ಜನ ಬದುಕುತ್ತಾರೆ. ಆ ಹಿನ್ನೆಲೆಯಲ್ಲಿ ಸಾಲ ಮನ್ನಾ ಮಾಡಿದ್ದಾರೆ. ಅದರ ಜೊತೆಗೆ ಈ 2,600 ಕೋಟಿ ರೂಪಾಯಿಗಳ ಸಾಲವನ್ನು ಎಲ್ಲಿಯಾದರೂ ಹೊಂದಾಣಿಕೆ ಮಾಡಿ, ಸಾಲ ಮನ್ನಾ ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಭಾವನೆ. ಸರ್ಕಾರದ ಹಣಕಾಸಿನ ಇತಿಮಿತಿ ನೋಡಿಕೊಂಡು ಏನಾದರೂ ಮಾಡಿ...

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯರೆ, ನಾವು ಬಜೆಟ್‌ನಲ್ಲಿ ಇದಕ್ಕಾಗಿ ಅವಕಾಶ ಮಾಡಿಕೊಂಡಿರುವುದಿಲ್ಲ. ಬೇರೆ ಕಡೆಯಿಂದ ಇದಕ್ಕೆ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಬೇಕಾಗುತ್ತದೆ. 8,165 ಕೋಟಿ ರೂಪಾಯಿ ಅಲ್ಪ ಮೊತ್ತವೇನಲ್ಲ. 8,165 ಕೋಟಿ ರೂಪಾಯಿಗಳಷ್ಟು, ಈಗ ನಾವು ಮಾರ್ಚ್ ತಿಂಗಳೊಳಗೆ ಸುಮಾರು 6 ಸಾವಿರ ಕೋಟಿ ರೂಪಾಯಿಯಷ್ಟು ಹಣವನ್ನು ಸಹಕಾರ ಸಂಘಗಳಿಗೆ ಕೊಡಬೇಕಾಗುತ್ತದೆ. ಆದುದರಿಂದ, it is a burden. ರೈತರ ಹಿತದೃಷ್ಟಿಯಿಂದ ರೈತರು ಕಷ್ಟದಲ್ಲಿರುವುದರಿಂದ ಅವರ ಕಷ್ಟಕ್ಕೆ ಸ್ಪಂದಿಸಬೇಕೆಂದು ನಾವು ಈ ತೀರ್ಮಾನ ಮಾಡಿದ್ದೇವೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಮಾನ್ಯ ಸಭಾಪತಿಯವರೆ, ಅದನ್ನು ನಾನು ಒಪ್ಪುತ್ತೇನೆ, ಈಗಾಗಲೇ ಆ ವಿಚಾರವನ್ನು ನಾನು ಹೇಳಿದ್ದೇನೆ.

**ಸಭಾಪತಿಯವರು:-** ಹೌದು, ಹೇಳಿದ್ದಾರೆ. ಮುಂದಿನ ವಿಷಯ ಏನೆಂದು ಹೇಳಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ಸಾಧ್ಯವಾದರೆ, ಈ ಸಾಲವನ್ನೂ ಮನ್ನಾ ಮಾಡಿದರೆ ಒಳ್ಳೆಯದೆಂದು ನನ್ನ ಮನಸ್ಸಿನಲ್ಲಿರುವ ಭಾವನೆಯನ್ನು ನಾನು ವ್ಯಕ್ತಪಡಿಸುತ್ತಿದ್ದೇನೆ. ನಾನು ಕೂಡ ಒಬ್ಬ ರೈತನಾಗಿ ರೈತರ ಸಂಕಷ್ಟ, ಇವತ್ತಿನ ಪರಿಸ್ಥಿತಿಯೇನೆಂದು ತಿಳಿದುಕೊಂಡಿದ್ದೇನೆ. ಆದ್ದರಿಂದ, ಉಳಿದಿರುವ ಸಾಲವನ್ನು ಮನ್ನಾ ಮಾಡಬೇಕೆಂದು ನಾನು ಕೇಳುತ್ತೇನೆ.

**ಶ್ರೀ ರಮೇಶ್‌ಬಾಬು(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ...

**ಸಭಾಪತಿಯವರು:–** ಈಗ ಪುಟ್ಟಣ್ಣನವರು. ಅವರು ಆಗಿನಿಂದಲೂ ಕೈ ಮೇಲೆ ಎತ್ತುತ್ತಿದ್ದಾರೆ. ನಂತರ ತಮಗೂ ಅವಕಾಶ ಕೊಡುತ್ತೇನೆ. ಮೊದಲು ಅವರದ್ದು ಆಗಲಿ. ಮೊದಲು ಕೈ ಮೇಲೆ ಎತ್ತಿದವರಿಗೆ ಒಂದು ಅವಕಾಶ.

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೆ, ...

**(ಗೊಂದಲ)**

**ಸಭಾಪತಿಯವರು:–** ಆಡಳಿತ ಪಕ್ಷದ ಸದಸ್ಯರಿಗೆ ಈ ವಿಚಾರದಲ್ಲಿ ಮಾತನಾಡಲು ಅವಕಾಶವಿಲ್ಲ. ನೀವು ಏನು ಮಾತನಾಡುತ್ತೀರಿ? ಕೊಟ್ಟಿದ್ದು ಕಡಿಮೆಯಾಯಿತು, ಇನ್ನಷ್ಟು ಕೊಡಿ ಅಥವಾ ಕಡಿಮೆ ಮಾಡಿ ಎಂದು ಹೇಳುತ್ತೀರೇನು? ಈ ವಿಚಾರದಲ್ಲಿ ಮಾತನಾಡುವ ಹಕ್ಕು ವಿರೋಧ ಪಕ್ಷದವರಿಗೆ ಮಾತ್ರ ಇರುವುದು.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೆ, 10,760 ಕೋಟಿ ರೂಪಾಯಿ ಸಾಲದಲ್ಲಿ ಸುಮಾರು 22,27,506 ರೈತರಿಗೆ 8,165 ಕೋಟಿ ರೂಪಾಯಿಗಳನ್ನು 50ಸಾವಿರ ರೂಪಾಯಿಗಳವರೆಗೆ ಏನು ಇವತ್ತಿನ ದಿವಸ ಸಾಲ ಮನ್ನಾ ಮಾಡಿದ್ದಾರೆ, ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ತುಂಬು ಹೃದಯದಿಂದ ಅಭಿನಂದಿಸುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರುಗಳು ಮೇಜು ತಟ್ಟುವ ಮೂಲಕ ಸರ್ಕಾರಕ್ಕೆ ಬೆಂಬಲ ಸೂಚಿಸಿದರು.)**

ಈ ರಾಜ್ಯದಲ್ಲಿ ಅತೀ ಹೆಚ್ಚು ಬಜೆಟ್‌ಗಳನ್ನು ಕೊಟ್ಟಂತಹವರು ಮಾನ್ಯ ಮುಖ್ಯಮಂತ್ರಿಗಳು. ನಾನು ನೋಡಿದ ಪ್ರಕಾರ...

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೆ, ದಿವಂಗತ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರೂ ಸಹ ಇಷ್ಟೇ ಬಜೆಟ್‌ಗಳನ್ನು ಕೊಟ್ಟಿದ್ದಾರೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಯವರು ದಿವಂಗತ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಸರಿಸಮಾನರು ಎಂದು ಮಾನ್ಯ ಹೊರಟ್ಟಿಯವರು ಹೇಳಿದ್ದಾರೆ. ಇರಬಹುದು, ಅದು ನನಗೆ ಗೊತ್ತಿಲ್ಲ. ಆದರೆ, ನಾನು ಮುಖ್ಯಮಂತ್ರಿಗಳೆ ಮೊದಲಿಗರು ಎಂದು ಭಾವಿಸಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಏನು ಸಾಲ ಮನ್ನಾ ಮಾಡಿದ್ದಾರೆ, "ಹಟ್ಟಿಕ್ಕಿದವಳಿಗಿಂತ, ಬಟ್ಟಿಕ್ಕಿದವಳು ಮೇಲು" ಎಂದು ಒಂದು ಒಳ್ಳೆಯ ಗಾದೆಯನ್ನು ಮುಖ್ಯಮಂತ್ರಿಗಳು ಹೇಳಿದರು. ಅದು ನನಗೆ ಖುಷಿಯಾಯಿತು. ವೇದ ಸುಳ್ಳಾದರೂ ಗಾದೆ ಸುಳ್ಳಲ್ಲ. ಅದು ಅಕ್ಷರಶಃ ಸತ್ಯ. ನಾವು ಈ ಎಲ್ಲವನ್ನು ನೋಡುತ್ತಾ ಬಂದಿದ್ದೇವೆ. 1980ನೇ ಇಸವಿಯಲ್ಲಿ ನಾನು 8ನೇ ತರಗತಿ ವಿದ್ಯಾರ್ಥಿಯಾಗಿದ್ದೆ. ಅಂದಿನಿಂದಲೂ ನಾನು ಗಮನಿಸಿರುವಂತೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವ ಮುಖ್ಯಮಂತ್ರಿಗಳು ಸಹ ಪುನರಾವರ್ತನೆಯಾಗದೇ ಇರುವುದನ್ನು ನಾನು ನೋಡಿದ್ದೇನೆ, ನಾನು ಬೆಂಗಳೂರಿಗೆ ಬಂದಾಗ ಸನ್ಮಾನ್ಯ ಗುಂಡೂರಾವ್ ಅವರು ಮುಖ್ಯಮಂತ್ರಿಗಳು. **(ಗೊಂದಲ)** ಒಂದು ನಿಮಿಷ ಕೇಳಿ, ನಾನು 1980ನೇ ಇಸವಿಯಲ್ಲಿ, ...

**(ಗೊಂದಲ)**

**ಸಭಾಪತಿಯವರು:-** ಈಗ ರಾಜಕೀಯ ವಿಚಾರ ಮಾತನಾಡುವುದು ಬೇಡ. ರಾಜಕೀಯ ಪ್ರಶ್ನೆ ಬೇಡ. ತಮ್ಮ ಸ್ಪಷ್ಟೀಕರಣ ಏನಾದರೂ ಇದ್ದರೆ ಕೇಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, 1980ನೇ ಇಸವಿಯಿಂದ ಈಚೆಗೆ ನಾನು ನೋಡಿದ ಪ್ರಕಾರ ಆಗಲಿಲ್ಲವೆಂದು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಆಯಿತು. ಈಗ ಆ ವಿಚಾರ ಬಿಟ್ಟು ಮುಂದೆ ಹೋಗಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೆ, ನಾನು ಹೇಳುವುದು ಇಷ್ಟೇ, ದಯಮಾಡಿ, ಏನು ಈಗ ನಡೆದ ಮರು ಚುನಾವಣೆಯಲ್ಲಿ ಗುಂಡ್ಲುಪೇಟೆ ಮತ್ತು ನಂಜನಗೂಡಿನಲ್ಲಿ ನಾವು ಗೆದ್ದಿದ್ದೇವೆ, ಅದು ದಿಕ್ಸೂಚಿಯೆಂದು ಏನು ಹೇಳುತ್ತಿದ್ದಾರೆ, ಅದಲ್ಲ ಎನ್ನುವುದು ನನ್ನ ಭಾವನೆ. ಅದಕ್ಕೆ ಮುಖ್ಯಮಂತ್ರಿಗಳು "ಅಟ್ಟಿಕ್ಕಿದವಳಿಗಿಂತ, ಬೊಟ್ಟಿಕ್ಕಿದವಳು ಮೇಲು" ಎಂದು ಹೇಳಿದ್ದಾರೆ. ಅದನ್ನು ಅವರು ಕಾರ್ಯರೂಪದಲ್ಲಿ ಅಳವಡಿಸಿಕೊಳ್ಳಬೇಕು. ಏತಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆಂದರೆ? ಕೆಲವೊಂದು ಸಂದರ್ಭದಲ್ಲಿ ಸರ್ಕಾರಕ್ಕೆ image is very important. ನಾನು ನಿನ್ನೆಯ ದಿವಸ ಈ ವಿಚಾರದ ಬಗ್ಗೆ ಹೇಳಿದ್ದೇನೆ. ಎಲ್ಲರೂ ಕೂಡ credit basis. ಇವತ್ತಿನ ಎಲ್ಲಾ ಸರ್ಕಾರಗಳಿರಬಹುದು, ಯಾವುದೇ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಖ್ಯಮಂತ್ರಿಗಳಿರಬಹುದು. ನಮ್ಮ ಪಕ್ಷಕ್ಕೆ, ನನಗೆ ಯಾವ ಒಳ್ಳೆಯ ಹೆಸರು ಬರುತ್ತದೆ, ನಮ್ಮ ಪಕ್ಷಕ್ಕೆ ಏನು ಅನುಕೂಲವಾಗುತ್ತದೆ ಎನ್ನುವಂತಹ ದೃಷ್ಟಿಯನ್ನಿಟ್ಟುಕೊಂಡೇ ಈ ಎಲ್ಲಾ ಕೆಲಸಗಳನ್ನು ಮಾಡುವುದು.

(ಮುಂದುವರೆದಿದೆ...)

(906)/21-6-2017/6-40/ಎಲ್ಎಂ/ಆರ್ಎನ್

**ಶ್ರೀ ಪುಟ್ಟಣ್ಣ(ಮುಂದು)**:- ಮಾನ್ಯ ಕುಮಾರಸ್ವಾಮಿಯವರು 25,000 ರೂ.ಗಳಷ್ಟು ರೈತರ ಸಾಲ ಮನ್ನಾ ಮಾಡಿದರು ಆದರೆ ಅವರು ಮತ್ತೆ ಮುಖ್ಯಮಂತ್ರಿಯಾಗಿ ಪುನರಾವರ್ತನೆಯಾಗಲಿಲ್ಲ, ಮಾನ್ಯ ಯಡಿಯೂರಪ್ಪವರು ಮಾನ್ಯ ಜಗದೀಶ್ ಶೆಟ್ಟರ್‌ರವರು ರೈತರ ಸಾಲ ಮನ್ನಾ ಮಾಡಿದರು. ಆದರೂ ಅವರು ಯಾರು ಮತ್ತೆ ಮುಖ್ಯಮಂತ್ರಿಯಾಗಿ ಪುನರಾವರ್ತನೆಯಾಗಲಿಲ್ಲ. ನಿಮಗೆ ನಾನು ಹೇಳುವುದು ಸರ್ಕಾರದ ಮತ್ತು ನಿಮ್ಮ ಇಮೇಜ್‌ಗೆ ಧಕ್ಕೆ ಬರದ ಹಾಗೆ ನೋಡಿಕೊಳ್ಳಬೇಕು. ಅದನ್ನು ಬಿಟ್ಟು ನೀವು 50,000 ರೂ.ಗಳ ರೈತರ ಸಾಲ ಮನ್ನಾ ಮಾಡಿದ್ದೇನೆ, ಅನೇಕ ಕಾರ್ಯಕ್ರಮಗಳನ್ನು ಕೊಟಿದ್ದೇನೆ, ಮುಂದೆಯು ನಾವೇ ಬರುವುದು ಎಂದುಕೊಳ್ಳುವುದು ಖಂಡಿತವಾಗಿ ಅದು ಒಳ್ಳೆಯ ದಿಕ್ಸೂಚಿ ಅಲ್ಲ ಎನ್ನುವುದು ನನ್ನ ಭಾವನೆ.

**ಸಭಾಪತಿಯವರು**:- ಬಜೆಟ್ ಮೇಲೆ ಏನಾದರೂ ಹೇಳುವುದಿದ್ದರೆ ಹೇಳಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಗಳೆ, ಐದು ನಿಮಿಷಗಳಲ್ಲಿ ಹೇಳಿ ಮುಗಿಸುತ್ತೇನೆ. ಡಿವೈಎಸ್‌ಪಿ ಗಣಪತಿಯವರ ಕೇಸ್‌ನಲ್ಲಿ ಮಾನ್ಯ ಕೆ.ಜೆ.ಜಾರ್ಜ್‌ರವರ ಹೆಸರು ಬಂತು, ಆಗ ಮಾನ್ಯ ಮಂತ್ರಿಗಳು ತಕ್ಷಣ ಅವರಿಂದ ರಾಜೀನಾಮೆಯನ್ನು ತೆಗೆದುಕೊಂಡಿದ್ದರೆ ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಅಷ್ಟೊಂದು ಪ್ರಸಾರವಾಗಲು ಅವಕಾಶವೇ ಇರುತ್ತಿರಲಿಲ್ಲ. ಅವರಿಂದ ರಾಜೀನಾಮೆಯನ್ನು ತೆಗೆದುಕೊಳ್ಳಲಾಯಿತು, ಆದರೆ ಅದು ಕೇಸ್ ಎಲ್ಲಾ ಆದಮೇಲೆ. ಹೇಗೆ ಡಿಸಿ ಡಿ.ಕೆ.ರವಿಯವರ ಕೇಸ್‌ನಲ್ಲಿ ಈಗ ಐಎಎಸ್ ಅಧಿಕಾರಿ ತಿವಾರಿ ಅವರ ಕೇಸ್‌ನಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿಯವರಿಗೆ ಯಾವ ತನಿಖೆಯನ್ನಾದರೂ ಮಾಡಬಹುದು ಎಂದು ತಕ್ಷಣ ಪತ್ರವನ್ನು ಬರೆದಿದ್ದೀರಿ. ಹಾಗೆಯೇ ಡಿಸಿ ಡಿ.ಕೆ.ರವಿ ಕೇಸ್‌ನಲ್ಲಿ ತಕ್ಷಣ ಸಿಬಿಐ ತನಿಖೆಗೆ ಕೊಟ್ಟಿದ್ದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತಿತ್ತು. ನಿಮ್ಮ ಸರ್ಕಾರದ ಯಾವುದೇ ಮಂತ್ರಿಗಳಿರಲಿ, ಅಧಿಕಾರಿಗಳ ಬಗ್ಗೆಯಾಗಲಿ ಏನೇ ಆದಾಗ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಆಗ ಮಾತ್ರ ಸರ್ಕಾರದ ಇಮೇಜ್, ನೀವು ಮಾಡಿರುವಂತಹ ಕೆಲಸಗಳು, ಕಾರ್ಯಕ್ರಮಗಳು ಅನುಕೂಲಕ್ಕೆ ಬರುತ್ತವೆ. ಇಲ್ಲದಿದ್ದರೆ ಖಂಡಿತವಾಗಿ ಮಾನ್ಯ ಮುಖ್ಯಮಂತ್ರಿಗಳು ಈಗ "ಅಟ್ಟಿಕ್ಕಿದವಳಿಗಿಂತ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಬೊಟ್ಟಿಕ್ಕಿದವಳು ಮೇಲು” ಎಂದು ಹೇಳಿದರು ಆ ರೀತಿ ಆಗಿಬಿಡುತ್ತದೆ. ಆದ್ದರಿಂದ ಎಚ್ಚರಿಕೆಯಿಂದ ಹೆಜ್ಜೆಯನ್ನು ಮುಂದೆ ಇಡಿ. ಮತ್ತೊಮ್ಮೆ ನಾನು ರೈತರ ಪರವಾಗಿ ನಮ್ಮೆಲ್ಲರ ಪರವಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ.

**ಸಭಾಪತಿಯವರು:-** ಧನ್ಯವಾದಗಳು, ಮಾನ್ಯ ರಮೇಶ್‌ಬಾಬುರವರು ಬಜೆಟ್ ಮೇಲೆ ಏನಾದರೂ ಕ್ಲ್ಯಾರಿಫಿಕೇಶನ್ ಇದ್ದರೆ ಕೇಳಬೇಕು.

**ಶ್ರೀ ರಮೇಶ್‌ಬಾಬು(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಕರ್ನಾಟಕ ರಾಜ್ಯದ ರೈತರ ಬಹಳಷ್ಟು ಬೇಡಿಕೆಗಳಲ್ಲಿ ಬಹಳ ಪ್ರಮುಖವಾದ ಬೇಡಿಕೆ ಎಂದರೆ, ಸಾಲ ಮನ್ನಾ ಮಾಡುವುದು. ಇಂದು ಮಾನ್ಯ ಮುಖ್ಯಮಂತ್ರಿಗಳು 50,000 ರೂಪಾಯಿಗಳಷ್ಟು ರೈತರ ಸಾಲ ಮನ್ನಾ ಮಾಡಲು ತೀರ್ಮಾನ ತೆಗೆದುಕೊಂಡಿರುವುದಕ್ಕೆ ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿನ್ನೆ ನಾನು ಕಂದಾಯ ಸಚಿವರಾದ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ತಾವು ಈ ರೀತಿ ತೀರ್ಮಾನ ತೆಗೆದುಕೊಂಡರೆ ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ ಮತ್ತು ಇದಕ್ಕಾಗಿ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ತರುತ್ತೇನೆ ಎಂದು ಹೇಳಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ತಿಳಿಸುತ್ತೇನೆ. ಇಲ್ಲಿ ಪ್ರಮುಖವಾದ ವಿಚಾರ ಎಂದರೆ, 8000 ಕೋಟಿ ರೂ.ಗಳಷ್ಟು ಅಲ್ಪಾವದಿ ಸಾಲವನ್ನು ಮನ್ನಾ ಮಾಡುವ ಘೋಷಣೆಯನ್ನು ಇಂದು ಮಾಡಿದ್ದಾರೆ. ನಮಗೆ ಬಂದಿರುವ ಮಾಹಿತಿ ಪ್ರಕಾರ ಸಹಕಾರ ಇಲಾಖೆಯಲ್ಲಿ ಸಹಕಾರಿ ಸಂಘದಲ್ಲಿರುವ ನಮ್ಮ ರಾಜ್ಯದ ರೈತರ ಒಟ್ಟು ಸಾಲ 14,300 ಕೋಟಿ ರೂ.ಗಳಷ್ಟು. ಮಾನ್ಯ ಮುಖ್ಯಮಂತ್ರಿಗಳಿಗೆ ತಪ್ಪು ಅಂಕಿ-ಅಂಶಗಳನ್ನು ಕೊಟ್ಟಿದ್ದಾರೆಯೋ ಅಥವಾ ನಮಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೋ ಎನ್ನುವುದು ಗೊತ್ತಿಲ್ಲ. ಇಲ್ಲಿ ಅಲ್ಪಾವಧಿ ಸಾಲ, ದೀರ್ಘಾವಧಿ ಸಾಲ ಮತ್ತು ಮಧ್ಯಮಾವಧಿ ಸಾಲಗಳು ಬರುತ್ತವೆ. ಸಹಕಾರಿ ಸಂಘಗಳಲ್ಲಿ ನಮ್ಮ ರಾಜ್ಯದ ರೈತರ ಒಟ್ಟು ಸಾಲ ಇರುವುದು 14,300 ಕೋಟಿ ರೂ.ಗಳು. ಇವತ್ತು ಮಾನ್ಯ ಮುಖ್ಯಮಂತ್ರಿಯವರು ಅಲ್ಪಾವಾಧಿ ಸಾಲ ಮನ್ನಾಕ್ಕೆ ಏನು ತೀರ್ಮಾನ ತೆಗೆದುಕೊಂಡಿದ್ದಾರೆ, ಸಾಧ್ಯವಾದರೆ ಅದನ್ನು ಇನ್ನು ಸ್ವಲ್ಪ... ಏಕೆಂದರೆ ಎಲ್ಲರಿಗೂ ಗೊತ್ತಿರುವ ಹಾಗೆ ಕಳೆದ ವರ್ಷ ನಮ್ಮ ರಾಜ್ಯದಲ್ಲಿ 1500 ಕ್ಕಿಂತ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಾಲಮನ್ನಾ ಸರ್ಕಾರದಿಂದ ಪ್ರಯತ್ನ ಮುಂಚೆಯೇ ಆಗಿದ್ದರೆ, ಕೆಲವು ರೈತರ ಪ್ರಾಣವನ್ನಾದರೂ ಕಾಪಾಡಬಹುದಾಗಿತ್ತು. ಈಗ ಸರ್ಕಾರ ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದೆ. ಈಗ ಇರುವ ಒಟ್ಟಾರೆ ಸಾಲದಲ್ಲಿ ವಾಣಿಜ್ಯ ಬ್ಯಾಂಕ್‌ಗಳಲ್ಲಿಯ ಸಾಲವನ್ನು ಕೇಂದ್ರ ಸರ್ಕಾರ ಮನ್ನಾ ಮಾಡುವ ವಿಚಾರ ಒಂದು ಕಡೆಯಾದರೆ, ಕೇಂದ್ರ ಸರ್ಕಾರದ ಮೇಲೆ ನಾವು ಒತ್ತಡವನ್ನು ಹಾಕಬೇಕಾಗುತ್ತದೆ. ಹಾಗೆ ಮಧ್ಯಮಾವಧಿ ಸಾಲ ಮತ್ತು ದೀರ್ಘಾವಧಿ ಸಾಲವನ್ನು ಮನ್ನಾ ಮಾಡಲು

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಮುಖ್ಯಮಂತ್ರಿಗಳು ಕ್ರಮ ತೆಗೆದುಕೊಂಡರೆ ಬಹುತೇಕ ರಾಜ್ಯದ ರೈತರಿಗೆ ಶಕ್ತಿಯನ್ನು ತುಂಬುವಂತಹ ಕೆಲಸವನ್ನು ಮಾಡಿದ ಹಾಗೆ ಆಗುತ್ತದೆ. ಇವತ್ತು 22ಲಕ್ಷ ಕುಟುಂಬಗಳಿಗೆ ಶಕ್ತಿಯನ್ನು ಕೊಟ್ಟಿದ್ದಾರೆ. ಅದೇ ರೀತಿ ಉಳಿದ ಸಾಲವನ್ನು ರಾಜ್ಯ ಸರ್ಕಾರ ಮನ್ನಾ ಮಾಡಲು ಮುಂದಾಗಬೇಕೆಂದು ನಾನು ನನ್ನ ಪಕ್ಷದ ಪರವಾಗಿ ಒತ್ತಾಯ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಸಾಂದರ್ಭಿಕವಾಗಿ ಮಾತನಾಡುತ್ತಾ ಮುಂದಿನ ಚುನಾವಣೆಯಲ್ಲಿ ಮಾನ್ಯ ಕುಮಾರಸ್ವಾಮಿಯವರ ಸರ್ಕಾರವಂತೂ ಬರುವುದಿಲ್ಲ, ಅದಕ್ಕಾಗಿ ಮಾತನಾಡಿದ್ದಾರೆ ಎಂದು ಹೇಳಿದರು. ಅದು ಬೇರೆ ವಿಚಾರ. ನಾವು ಇಲ್ಲಿಯೇ ಕುಳಿತು ರಾಜ್ಯದ ಇತಿಹಾಸವನ್ನು ನೋಡುತ್ತಾ ಬಂದಿದ್ದೇವೆ. ಮಾನ್ಯ ಯಡಿಯೂರಪ್ಪನವರು ಇಲ್ಲಿಯೇ ಕುಳಿತು ಇನ್ನು 20 ವರ್ಷ ನಾನೇ ಮುಖ್ಯಮಂತ್ರಿ ಎಂದು ಹೇಳುತ್ತಾ ಬಂದರು. ಮುಂದೆ ಯಾರು ಮುಖ್ಯಮಂತ್ರಿಯಾಗುತ್ತಾರೆ ಎಂದು ಹೇಳಲು ಅವಕಾಶವನ್ನೆ ತಾವು ಕೊಡಬೇಡಿ. ಈಗ ಇರುವ 14,300 ಕೋಟಿ ರೂ.ಗಳ ರೈತರ ಸಾಲವನ್ನು ಮನ್ನಾ ಮಾಡಿ ರಾಜ್ಯದ ರೈತರು ತಮ್ಮನ್ನು ಕೊನೆಯವರೆಗೆ ನೆನೆಪಿಸಿಕೊಳ್ಳುತ್ತಾರೆ. ಈಗ ತಾವು ಮಾಡಿರುವ ಕಾರ್ಯಕ್ಕೆ ತಮಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಸಭಾಪತಿಯವರು:** ಧನ್ಯವಾದಗಳು.

**ಸಭಾಪತಿಯವರು:– ಪ್ರಸ್ತಾವ ಏನೆಂದರೆ,**

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2ಮತ್ತು 3**

**ಸಭಾಪತಿಯವರು:–** " ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ."

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:2) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕ, 2017**

**ಪ್ರರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಿದ್ದರಾಮಯ್ಯ:(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

**ಪ್ರಸ್ತಾವವನ್ನು ಮಂಡಿಸಲಾಯಿತು**

" ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** **ಪ್ರಸ್ತಾವ ಏನೆಂದರೆ,**

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:–** " ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):–** ಮಾನ್ಯ ಸಭಾಪತಿಯವರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸಬೇಕೆಂದು ಕೋರುತ್ತೇನೆ.

" ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2017ರ ಕರ್ನಾಟಕ ಧನವಿನಿಯೋಗ (ಸಂಖ್ಯೆ:3) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ) ಕರ್ನಾಟಕ ಸ್ಟಾಂಪು(ಎರಡನೇ ತಿದ್ದುಪಡಿ) ವಿಧೇಯಕವ, 2017**

**ಪ್ರರ್ಯಾಲೋಚನಾ ಪ್ರಸ್ತಾವ**

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ,

"2017ರ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಸ್ಟಾಂಪು(ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

**ಪ್ರಸ್ತಾವವನ್ನು ಮಂಡಿಸಲಾಯಿತು**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2017ರ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಸ್ಟಾಂಪು(ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** " ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಖಂಡ 2ನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 2**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ
ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ,

**2017ರ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಸ್ಟಾಂಪು(ಎರಡನೇ ತಿದ್ದುಪಡಿ) ವಿಧೇಯಕವನ್ನು** ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"2017ರ ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಸ್ಟಾಂಪು(ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**(ಮುಂದು)**

(907) 21.06.2017 / YL-VK /6.50

**(ಸಭಾಪತಿಯವರ ಉಪಸ್ಥಿತಿ)**

**ಈ) ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕ, 2017**

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಈ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟನ್ನು 1996 ರಲ್ಲಿ ಸರ್ಕಾರದವರು ಒಂದು ಕಾನೂನಿನ ಮೂಲಕ ವಹಿಸಿಕೊಂಡು ನೋಡಿಕೊಳ್ಳುತ್ತಿದ್ದಾರೆ. ಈ ಒಂದು ಕಾನೂನಿನಲ್ಲಿ Board of Trustees ಇದೆ. ಈ Board of Trustees ನಲ್ಲಿ ನಾಲ್ಕು ಜನ ರಷ್ಯಾನ್ ಪ್ರತಿನಿಧಿಗಳಿದ್ದಾರೆ. ಈ ರಷ್ಯಾನ್ ಪ್ರತಿನಿಧಿಗಳನ್ನು Board of Trustees ನಲ್ಲಿ ಸೇರಿಸಿರುವುದು ತಪ್ಪು ಎಂದು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಲಾಗಿತ್ತು. ಅದಕ್ಕಾಗಿ ಉಚ್ಚ ನ್ಯಾಯಾಲಯದ ಆದೇಶದಲ್ಲಿ ತಿದ್ದುಪಡಿ ತಂದು, ರಷ್ಯಾನ್ ಪ್ರತಿನಿಧಿಗಳನ್ನು ತೆಗೆದುಹಾಕುವಂತೆ ಮಾಡಲಾಗಿದೆ.

**ಸಭಾಪತಿಯವರು:–** ಉಚ್ಚ ನ್ಯಾಯಾಲಯದ ಆದೇಶವನ್ನು ಮತ್ತೆ implement ಮಾಡುತ್ತೇವೆಂದು ಹೇಳುತ್ತಿರುವಾಗ ಈ ವಿಧೇಯಕದ ಮೇಲೆ ಮತ್ತೇನು ಚರ್ಚೆ ಇದೆ?

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ,

**ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ವಿಧೇಯಕ ಬಗ್ಗೆ ಮಾತನಾಡುವಾಗ ಮಾತನಾಡುವುದಕ್ಕೆ ಬಿಡುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ.

**ಶ್ರೀ ವಿ.ಎಸ್.ಉಗ್ರಪ್ಪ (ನಾಮನಿರ್ದೇಶನ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ರಿಟ್ ಪಿಟಿಷನ್ ನಂ.32560/96 ರಲ್ಲಿ ಯಾವ ಅವಕಾಶವನ್ನು ultra vires ಮಾಡಿರತಕ್ಕಂಥ ಹಿನ್ನೆಲೆಯಲ್ಲಿ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಂದಿದ್ದಾರೆ. ಈ ವಿಧೇಯಕದಲ್ಲಿ ನನಗೆ ವಿಶೇಷವಾಗಿ ಈ ಅಂಶಗಳ ಬಗ್ಗೆ ಕ್ರ.ಸಂ. 10, 11, 12 ಹಾಗೂ 13 ಗಳಲ್ಲಿ ಕೆಳಕಂಡಂತಿದೆ.

(10) ದೆಹಲಿಯಲ್ಲಿರುವ ರಷ್ಯಾ ಗಣರಾಜ್ಯದ ರಾಯಭಾರಿ,

(11) ರಷ್ಯಾ ಗಣರಾಜ್ಯದ ರಾಯಭಾರ ಕಛೇರಿಯ ಸಂಸ್ಕೃತಿ ಇಲಾಖೆಯ

(12) ಪ್ರೊ.ಎ.ಎ.ಕುಟ್‌ಸೆನ್‌ಕೋವ್, ನಿರ್ದೇಶಕರು, ಇಂಡಿಯೊಲಾಜಿಕಲ್

(13) ಶ್ರೀ ವಿ.ವಿ.ಅನಿಶಿಮೋವ್, ಉಪಾಧ್ಯಕ್ಷರು, ರಷ್ಯಾ ಇಂಡಿಯಾ ಕಲಾ.

ಇವರುಗಳೆಲ್ಲರೂ ರಷ್ಯಾನ್‌ಗಳಾಗಿರುವುದರಿಂದ ಸಂವಿಧಾನದ ತಿದ್ದುಪಡಿಗೆ ವಿರುದ್ಧವಾಗಿರತಕ್ಕಂಥದು, ಈ ವಿಧೇಯಕವು ನಿಜಕ್ಕೂ ಸಹ ಅತ್ಯಂತ ಸ್ವಾಗತಾರ್ಹವಾಗಿರತಕ್ಕಂಥದು ಮತ್ತು ಸಾವಿರಾರು ಕೋಟಿ ರೂಪಾಯಿಗಳಿಗೆ ಬೆಳೆ ಬಾಳತಕ್ಕಂಥ ಸಂಪತ್ತನ್ನು ಉಳಿಸುವಂತ ಕೆಲಸವನ್ನು ಮಾಡಿದ್ದಾರೆ. ಈ ವಿಧೇಯಕಕ್ಕೆ ಸಂಬಂಧಿಸಿದಂತೆ ನನ್ನ ಸಲಹೆಯೆಂದರೆ, ಪ್ರಸ್ತುತ ವಿಧೇಯಕವೂ ಸಾವಿರಾರು ಕೋಟಿಗಳಿಗೆ ಬೆಳೆ ಬಾಳತಕ್ಕಂಥ ಆಸ್ತಿ. ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) ಅತ್ಯಂತ ಅಮೂಲ್ಯವಾಗಿರತಕ್ಕಂಥ ಗಿಡಮೂಲಿಕೆಗಳಿಂದ ಕೂಡಿರತಕ್ಕಂಥ ಜಾಗವಾಗಿದೆ. ಈ ಟ್ರಸ್ಟ್‌ನಲ್ಲಿ ಕರ್ನಾಟಕ ರಾಜ್ಯದ ಮುಖ್ಯ ಕಾರ್ಯದರ್ಶಿ-ಅಧ್ಯಕ್ಷರು ಮತ್ತು ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ-ಸದಸ್ಯ ಕರ್ನಾಟಕ ಸರ್ಕಾರ. ಅದೇ ರೀತಿ ರಾಜ್ಯದ ಇನ್ನಿತರ ಇಲಾಖೆಯವರು ಸಹ ಸದಸ್ಯರಾಗಿರುತ್ತಾರೆ. ಬಹುಶ: ನನಗೆ ತಿಳಿದಿರುವ ಮಟ್ಟಿಗೆ ಈ ಆಸ್ತಿಯನ್ನು ನೋಡಿಕೊಳ್ಳುವುದಕ್ಕೆ ಅಥವಾ ಈ ಟ್ರಸ್ಟ್‌ನ affair ಅನ್ನು ಮಾಡುವುದಕ್ಕೆ ಕೇವಲ ಅಧಿಕಾರಿಗಳಿಗೆ ಸೀಮಿತಗೊಳಿಸುವುದಕ್ಕಿಂತ ಮಿಗಿಲಾಗಿ, ಈ ಟ್ರಸ್ಟಿನ ಅಧ್ಯಕ್ಷರನ್ನು ಅಥವಾ ಮಾನ್ಯ ಮುಖ್ಯಮಂತ್ರಿಗಳನ್ನು ಯಾರನಾದರೂ ಅಧ್ಯಕ್ಷರಾಗಿ ಮಾಡುವುದು ಅವಶ್ಯಕವಾಗಿದೆ. ಏಕೆಂದರೆ, ಇದು ಸಾವಿರಾರು ಕೋಟಿಗಳಿಗೆ ಬೆಳೆ ಬಾಳತಕ್ಕಂಥ ಆಸ್ತಿಯಾಗಿದೆ. ಇಲ್ಲವೆಂದಾದರೆ at least ಕಂದಾಯ ಇಲಾಖೆಯ ಸಚಿವರಾದರೂ ಈ ಟ್ರಸ್ಟ್‌ನ ಅಧ್ಯಕ್ಷರಾಗುವಂತಹ ರೀತಿಯಲ್ಲಿ. . . . ಆಸ್ತಿ ಉಳಿಸುವ ದೃಷ್ಟಿಯಿಂದ ಹಾಗೂ ಅಭಿವೃದ್ಧಿಪಡಿಸುವಂತಹ ದೃಷ್ಟಿಯಿಂದ ಇದಕ್ಕೆ ಬದಲಾವಣೆ ತರುವುದು ಅತ್ಯಂತ ಅವಶ್ಯಕತೆ ಇದೆ. ಸರ್ಕಾರ ಇದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕಾಗೋಡು ತಿಮ್ಮಪ್ಪ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರತಕ್ಕಂಥ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:** ಪ್ರಸ್ತಾವ ಏನೆಂದರೆ;

**ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2017ರ ಕರ್ನಾಟಕ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು**

**ಖಂಡ 2**

**ಸಭಾಪತಿಯವರು:–** "ಖಂಡ 2 ವಿಧೇಯಕದ ಅಂಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2ನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಕಾಗೋಡು ತಿಮ್ಮಪ್ಪ(ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೆ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

**"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ (ಆರ್ಜನೆ ಮತ್ತು ವರ್ಗಾವಣೆ) (ತಿದ್ದುಪಡಿ) ಮಾಡಿರುವಂತೆ ಅಂಗೀಕರಿಸುವುದು"**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉ) ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕ, 2017**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2017ರ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ):-** ಮಾನ್ಯ ಸಭಾಪತಿಯವರೇ, ಈ ಹಿಂದೆ ಯೋಜನಾ ಆಯೋಗವೆಂದು ಇತ್ತು. ನಂತರ ಕೇಂದ್ರ ಸರ್ಕಾರ ನೀತಿ ಆಯೋಗವೆಂದು ತಿದ್ದುಪಡಿ ಮಾಡಿದ ಮೇಲೆ ಈ ನೀತಿ ಆಯೋಗದ ಹಣದ ಹಂಚಿಕೆ ಏನಿದೆ. ಅದರಲ್ಲಿ ಪ್ರತಿ ವರ್ಷವೂ ಆಯವ್ಯಯದ ಯೋಜನಾ ಮೊತ್ತದಲ್ಲಿ ಶೇಕಡಾ 24.1% ಅನ್ನು ಖಅಕ, ಖಖಕ ಜನರ ಅಭಿವೃದ್ಧಿಗಾಗಿ ಹಂಚಿಕೆ ಮಾಡಲಾಗುತ್ತಿದೆ. ಆದರೆ, 2017-18ನೇ ಸಾಲಿನಿಂದ ಯೋಜನಾ ಮತ್ತು ಯೋಜನೇತರ ವ್ಯತ್ಯಾಸಗಳನ್ನು ತೆಗೆದುಹಾಕಲಾಗಿದೆ. ಅದರಿಂದ ಮೇಲ್ಕಂಡ ಅಧಿನಿಯಮದಲ್ಲಿ ಕೆಲವು ಪ್ರಕರಣಗಳಲ್ಲಿ ತಿದ್ದುಪಡಿ ತರಬೇಕಾಗಿದೆ. ಆದುದರಿಂದ ಈ ತಿದ್ದುಪಡಿಗಳನ್ನು ವಿಧೇಯಕದ ಮೂಲಕ ಮಂಡಿಸುತ್ತಿದ್ದೇನೆ.

(ಮುಂದು) . . .

(908) 21-06-2017 (07-00)BSD-VK

ಶ್ರೀ ಹೆಚ್. ಆಂಜನೇಯ (ಮುಂದು)

ಆದ್ದರಿಂದ ಈ ತಿದ್ದುಪಡಿಗಳನ್ನು ವಿಧೇಯಕದ ಮೂಲಕ ಮಂಡಿಸುತ್ತಿದ್ದೇನೆ. ಈ ಕೆಳಗೆ ತಿದ್ದುಪಡಿಗಳನ್ನು ಪ್ರಸ್ತಾಪಿಸಲಾಗಿದೆ. ತಿದ್ದುಪಡಿ 1ರಂತೆ ಹಾಲಿ ಜಾರಿಯಲ್ಲಿರುವ ಕಾಯ್ದೆಯಲ್ಲಿರುವ ಯೋಜನಾ ಅಥವಾ ಯೋಜನಾ ವೆಚ್ಚ ಅಥವಾ ವಾರ್ಷಿಕ ಯೋಜನೆ ಎಂಬ ಪದಗಳನ್ನು ಬದಲಾಯಿಸಿ, SCP/TSP

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಉಪಯೋಜನೆ, ಎಸ್‌ಸಿ/ಎಸ್‌ಟಿ ಜನರ ಜನಸಂಖ್ಯೆ ಆಧಾರದ ಮೇಲೆ ಅನುದಾನವನ್ನು ಹಂಚಿಕೆ ಮಾಡಲು ಹಂಚಿಕೆ ಮಾಡಬಹುದಾದ ಆಯವ್ಯಯ ಪದಗಳನ್ನು ಸೇರಿಸಲಾಗಿದೆ. ಈ ಮೊತ್ತದಲ್ಲಿ ಶೇ.24.10 ವನ್ನು SCP/TSP ಜನರ ಅಭಿವೃದ್ಧಿಗಾಗಿ ಹಂಚಿಕೆ ಮಾಡಲಾಗುವುದು. ಅಂದರೆ ಒಟ್ಟು ಆಯವ್ಯಯದ ಮೊತ್ತದಿಂದ ವಿನಾಯಿತಿ ವೆಚ್ಚವನ್ನು ಕಡಿಮೆಗೊಳಿಸಿ, ಉಳಿದ ಮೊತ್ತವನ್ನು ಹಂಚಿಕೆ ಮಾಡಬಹುದಾದ ಆಯವ್ಯಯ ಎಂದು ಕರೆಯಲಾಗುವುದು. ಅಂದರೆ ನೀತಿ ಆಯೋಗ ಬಂದಮೇಲೆ ನಾವು ಬಜೆಟ್‌ನ ಒಟ್ಟಾರೆ ಯೋಜನೆ ಮತ್ತು ಯೋಜನೇತರ ಎಂದಿದ್ದು, ಯೋಜನೆಯಲ್ಲಿ ಬರುವ ಹಣದಲ್ಲಿ ನಮ್ಮ ಎಸ್‌ಸಿ/ಎಸ್‌ಟಿ ಜನಸಂಖ್ಯೆಗೆ ಖರ್ಚು ಮಾಡುತ್ತಿದ್ದು, ಈಗಲೂ ಅದೆಲ್ಲವನ್ನೂ ಒಟ್ಟುಗೂಡಿಸಿ ಬರಬಹುದಾದ ಯೋಜನೇತರ ಮತ್ತು ಯೋಜನೆಯ ಹಣವನ್ನು ಮಾಡಬಹುದುದೆಂದು ಕೇಂದ್ರ ಸರ್ಕಾರದ ನೀತಿ ಆಯೋಗದಿಂದ ಆಗಿದ್ದು, ಆದ್ದರಿಂದ ಈ ವಿಧೇಯಕದ ತಿದ್ದುಪಡಿ ತಂದಿದ್ದೇವೆ. ಅದರ ಜೊತೆ SCP/TSP ರಾಜ್ಯ ಪರಿಷತ್ತು ಇದ್ದು, ಅದರಲ್ಲಿ ಸಮಾಜ ಕಲ್ಯಾಣ ಸಚಿವರು ಸದಸ್ಯರಾಗಿದ್ದರು. ಅದಕ್ಕೆ ಬದಲಿಯಾಗಿ ಇವರನ್ನು ಉಪಾಧ್ಯಕ್ಷರನ್ನಾಗಿ ಮಾಡಿದ್ದು, ಜೊತೆಗೆ ಮುಖ್ಯ ಕಾರ್ಯದರ್ಶಿಯವರು ಇರಲಿಲ್ಲ. ಇವರನ್ನೂ ಸಹ ಒಬ್ಬ ಸದಸ್ಯರನ್ನಾಗಿ ಮಾಡಿದ್ದು, ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಯವರು ಸದಸ್ಯರಾಗಿ ಇದ್ದರು. ಈಗ ಅವರನ್ನು ಪದನಿಮಿತ್ತ ಸದಸ್ಯ ಕಾರ್ಯದರ್ಶಿಯನ್ನಾಗಿ ಮಾಡಲಾಗಿದೆ. ಪ್ರತಿವರ್ಷ ಬಳಕೆಯಾಗದಿರುವ ಹಣ ಉಳಿಕೆಯಾಗುತ್ತಿದ್ದು, ಆ ಹಣದಲ್ಲಿ one-third ನಷ್ಟು ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ pool ಮಾಡಿ ಅಭಿವೃದ್ಧಿ ಪಡಿಸುವುದಾಗಿದೆ. ಇದೊಂದು ಸಣ್ಣ ತಿದ್ದುಪಡಿ ವಿಧೇಯಕವಾಗಿದೆ. ಇದನ್ನು ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಬಹಳ ಸಂತೋಷದಿಂದ ಬಿಲ್ ಸ್ವಾಗತಿಸುತ್ತಾ, ಇದರಲ್ಲಿ ಉಳಿಕೆ ಹಣವನ್ನು ಬಳಸಿಕೊಳ್ಳಲು ಏನೇನು ಅವಕಾಶ ಇದೆ ಎಂಬ ಬಗ್ಗೆ ಬಿಲ್ ತಂದಿದ್ದಾರೆ. ಪ್ರತಿವರ್ಷವೂ ಉಳಿಕೆ ಹಣವನ್ನು ಮುಂದಿನ ವರ್ಷಕ್ಕೆ ಖರ್ಚು ಮಾಡಿಕೊಳ್ಳಬಹುದು ಎಂಬ ಬಿಲ್ ಅನ್ನೂ ಪಾಸ್ ಮಾಡಿಕೊಂಡಿದ್ದಾರೆ. ಈ ರೀತಿ ಬಿಲ್‌ಗಳನ್ನು ಪಾಸ್ ಮಾಡಿಕೊಂಡ ನಂತರ, ಹೇಗಿದ್ದರೂ ಮುಂದಿನ ವರ್ಷ ಖರ್ಚು ಮಾಡಲು ಅವಕಾಶ ಇದೆ ಎಂದುಕೊಂಡು ಆ ವರ್ಷ ಖರ್ಚು ಮಾಡುವುದೇ ಇಲ್ಲ. ಇಲ್ಲಿ ಪ್ರಶ್ನೆ ಕೇಳಿದಾಗ ಮುಂದಿನ ವರ್ಷ ಖರ್ಚು ಮಾಡುತ್ತೇವೆ ಎಂದು ಉತ್ತರ ಕೊಡುತ್ತಾರೆ. ಇದೊಂದು ರೀತಿ ಖರ್ಚು ಮಾಡದೇ ಇರುವುದಕ್ಕೆ license ಕೊಟ್ಟಂತೆ ಆಗುತ್ತದೆ. ವಿಶೇಷವಾಗಿ ದಲಿತರಿಗೆ ಆಯಾ ವರ್ಷ ಹಣ ತಲುಪಬೇಕು, ಹಾಗಾದರೆ ಆಯಾ ವರ್ಷಗಳ ಬಜೆಟ್ ಅನ್ನು ಏಕೆ ಮಾಡಬೇಕು? ಬಜೆಟ್ ಮಾಡಿದ ಮೇಲೆ ಆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷವೇ ಖರ್ಚು ಮಾಡಬೇಕು. ಅವರು ಬಿಲ್ ತಂದಿರುವುದನ್ನು ಕಣ್ಣು ಮುಚ್ಚಿಕೊಂಡು ಪಾಸು ಮಾಡಿಕೊಡುತ್ತೇವೆ. ಮಾನ್ಯ ಸಚಿವರು ಯೋಜನೆ ಮತ್ತು ಯೋಜನೇತರ ಹಣವನ್ನು ಜೋಡಿಸುವುದಕ್ಕೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ ಸಿಕ್ಕಿದೆ ಎಂದು ಹೇಳಿದರು. ಬಹಳ ಸಂತೋಷ. ಪ್ರತಿ ವರ್ಷವೂ 50%, 55%, 60% ಗಳಷ್ಟು ಹಣ ಕೆಲವು ಸಾರಿ ಖರ್ಚಾಗುತ್ತದೆ, ಕೆಲವು ಸಾರಿ ಖರ್ಚಾಗುವುದಿಲ್ಲ. ಖರ್ಚು ಮಾಡುವುದಕ್ಕೆ ಒತ್ತುಕೊಡಬೇಕು. ಸಂಬಂಧಪಟ್ಟ ಅಧಿಕಾರಿಗಳನ್ನು ಕೂರಿಸಿಕೊಂಡು ಇಷ್ಟು ಹಣ ಇದ್ದು, ಯಾವ ತಿಂಗಳಲ್ಲಿ ಎಷ್ಟೆಷ್ಟು ಖರ್ಚು ಮಾಡಬೇಕೆಂದು physical target ಕೊಡಬೇಕು, monthly wise target ಅನ್ನು ಕೊಡಲಿ. ಇಷ್ಟು ಕೆಲಸ ಮಾಡಬೇಕು ಎಂದು physical target ಕೊಡಲಿ. ಅವರು ಮಾಡದಿದ್ದರೆ ಒಬ್ಬ ಅಥವಾ ಇಬ್ಬರು ಅಧಿಕಾರಿಗಳಿಗೆ ಚುರುಕು ಮುಟ್ಟಿಸಿದರೆ ಕೆಲಸ ಆಗುತ್ತದೆಂದು ಹತ್ತತ್ತು ಸಾರಿ ಹೇಳುತ್ತೇನೆ. ಇಲ್ಲದಿದ್ದರೆ ಬಿಲ್ ಕೊಡುತ್ತಾರೆ, ಬಹುಮತದಿಂತ ಬಿಲ್ ಪಾಸ್ ಮಾಡಿಕೊಡುತ್ತೇವೆ. ಬಿಲ್ ಪಾಸ್ ಮಾಡಿಕೊಡುವುದೇ ನಮಗೂ ಆನಂದ, ಬಿಲ್ ಪಾಸ್ ಮಾಡಿಸಿಕೊಳ್ಳುವುದೇ ಅವರಿಗೂ ಆನಂದ. ಇಷ್ಟು ಮಾತ್ರ ಆಗಬಾರದು. ನಾನು ಬೇರೆ ಬೇರೆ ಇಲಾಖೆಗಳ ಬಗ್ಗೆ ಮಾತನಾಡುವುದಿಲ್ಲ. ಅವರಿಗೆ ಆಸಕ್ತಿ ಇದೆ, ನಾನು ಯಾವತ್ತೂ ಸಚಿವರ ಬಗ್ಗೆ ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಅವರು ಕೆಲಸ ಮಾಡುತ್ತಿದ್ದಾರೆ. ಹಗಲು-ರಾತ್ರಿ ಕೆಲಸ ಮಾಡುತ್ತಾ, ಅವರ ಏರಿಯಾಗಳಿಗೆ ಹೋಗಿ ಅಲ್ಲಿಯೇ ಊಟ ಮಾಡುತ್ತಾರೆ, ಅಲ್ಲಿಯೇ ಮಲಗುತ್ತಿದ್ದಾರೆ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇಟ್ಟ ಹಣವನ್ನು ಖರ್ಚು ಮಾಡುತ್ತಿಲ್ಲ ಎನ್ನುವುದು ತುಂಬಾ ಬೇಸರ ತರುತ್ತದೆ. ಈ ಬಾರಿ ಬಿಲ್ ಅನ್ನು ಪಾಸ್ ಮಾಡಿಕೊಡುತ್ತೇವೆ. ಇನ್ನು 2-3 ತಿಂಗಳಲ್ಲಿ ಅಥವಾ ಮುಂದಿನ ಅಧಿವೇಶನದಲ್ಲಿ ಈವರೆಗೆ ಎಷ್ಟು ಖರ್ಚು ಮಾಡಿದ್ದಾರೆ ಎಂಬ ಮಾಹಿತಿಗಳನ್ನು ಕೊಡಬೇಕು. ಈ ಬಿಲ್ ಅನ್ನು ಸಂತೋಷದಿಂದ ಸ್ವಾಗತ ಮಾಡುತ್ತೇನೆ.

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ರಾಜ್ಯದ ಜನಸಂಖ್ಯೆಯಲ್ಲಿ ಸುಮಾರು 24% scheduled castes and scheduled tribes ಇದ್ದಾರೆ. ಸಂವಿಧಾನದ Article 341 and 342 ಪ್ರಕಾರ ಎಸ್‌ಸಿಯಲ್ಲಿ ಸುಮಾರು 101 ಜಾತಿಗಳು ಮತ್ತು ಎಸ್‌ಟಿಯಲ್ಲಿ ಸುಮಾರು 51 ಜಾತಿಗಳನ್ನು classify ಮಾಡಿದ್ದಾರೆ. ಈ ಜನಸಂಖ್ಯೆ ಮೇಲೆ 2013ರಲ್ಲಿ ಅತ್ಯಂತ ವಿನೂತನ ಹಾಗೂ ಕ್ರಾಂತಿಕಾರಕವಾದ ಕಾನೂನನ್ನು ರಾಜ್ಯ ಸರ್ಕಾರ ತಂದಿದೆ. ಬಹುಶಃ ಆಂಧ್ರಪ್ರದೇಶ ಮತ್ತು ಕರ್ನಾಟಕ...... ಕರ್ನಾಟಕವಂತೂ ಇದರಲ್ಲಿ ಇಡೀ ರಾಷ್ಟ್ರಕ್ಕೆ ಮಾದರಿಯಾಗಿದೆ. 1975ರಲ್ಲಿ.....

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:-** ಈ ಬಿಲ್‌ಗೆ ಅದೇನು ಸಂಬಂಧ? ಬಿಲ್ ಬಗ್ಗೆ ಮಾತನಾಡಿ. ಬಿಲ್‌ನಲ್ಲಿ ಸರಿಯಿದೆಯೋ, ತಪ್ಪಿದೆಯೋ? ಸಮಯ ನೋಡುವುದು ಬೇಡವೇ? ತಾವು ಒಪ್ಪುತ್ತೀರೋ, ಇಲ್ಲವೋ ಎಂದು ಬಿಲ್ ಬಗ್ಗೆ ಮಾತನಾಡಿ.

**ಶ್ರೀ ವಿ.ಎಸ್. ಉಗ್ರಪ್ಪ:-** ಆಯಿತು ಸ್ವಾಮಿ, ಅಲ್ಲಿಗೆ ಬರುತ್ತೇನೆ. ಜನಸಂಖ್ಯೆಗೆ ಅನುಗುಣವಾಗಿ ಹಣ ಕೊಡಬೇಕು ಎಂದು ತೀರ್ಮಾನ ಮಾಡಿದ್ದಾರೆ, ಆ ಕಾನೂನು ಪ್ರಕಾರ ಆಯಾ ವರ್ಷ allocate ಆಗುವ ಹಣವನ್ನು ಅಭಿವೃದ್ಧಿಗೋಸ್ಕರ ಬಳಸಬೇಕಾಗಿದೆ. ಈ ವಿಧೇಯಕದ ಸೆಕ್ಷನ್ 13ರಲ್ಲಿ ಯಾವುದನ್ನೂ replace ಮಾಡುತ್ತಿದ್ದಾರೆ ಮತ್ತು ಏಕೆ ಮಾಡುತ್ತಿದ್ದಾರೆ ಎಂದು ದಯಮಾಡಿ ಮಾನ್ಯ ಸಚಿವರು ಹೇಳಬೇಕು. ಈಗ ಇರುವ ಬಿಲ್‌ನಲ್ಲಿ " ರಾಜ್ಯ ಸರ್ಕಾರವು, ಪ್ರತಿಯೊಂದು ಹಣಕಾಸು ವರ್ಷದಲ್ಲಿ, ರಾಜ್ಯದ ಅನುಸೂಚಿತ ಜಾತಿಗಳು/ಅನುಸೂಚಿತ ಪಂಗಡದ ಜನಸಂಖ್ಯೆಯ ಪ್ರಮಾಣಕ್ಕನುಸಾರವಾಗಿ ರಾಜ್ಯದ ಒಟ್ಟು ಯೋಜನಾ ವೆಚ್ಚದ ಒಂದು ಭಾಗವನ್ನು ಗೊತ್ತುಪಡಿಸಬಹುದಾದಂಥ ರೀತಿಯಲ್ಲಿ ಮೀಸಲಿರಿಸತಕ್ಕದ್ದು, ಅದನ್ನು ಅನುಸೂಚಿತ ಜಾತಿ ಉಪ-ಯೋಜನೆ ಹಾಗೂ ಬುಡಕಟ್ಟು ಉಪ ಯೋಜನೆ ನಿಧಿಯೆಂದು ಕರೆಯತಕ್ಕದ್ದು. ಒಂದು ನಿರ್ದಿಷ್ಟ ಹಣಕಾಸು ವರ್ಷಕ್ಕೆ ಹಂಚಿಕೆ ಮಾಡಿರುವ ಮೊತ್ತವು ಖರ್ಚಾಗದೆ ಉಳಿದ ಸಂದರ್ಭದಲ್ಲಿ....," this is more important. ಅಂದರೆ ಈ ವರ್ಷ ಖರ್ಚಾಗಲಿಲ್ಲ ಎಂದುಕೊಳ್ಳಿ. "........ಅದನ್ನು ಮುಂದಿನ ಹಣಕಾಸು ವರ್ಷದ ಹಂಚಿಕೆಗೆ ಸೇರಿಸಬಹುದು," ಇದು ಹಾಲಿ ಚಾಲ್ತಿಯಲ್ಲಿರುವ ವಿಧೇಯಕ. "......ಆದರೆ ಆ ವರ್ಷವೂ ಮೀರಿದ ನಂತರ ಅದನ್ನು ಮುಂದುವರೆಸತಕ್ಕದ್ದಲ್ಲ;" ಅಂದರೆ ಮುಂದಿನ ವರ್ಷವೂ ಮೀರಿದ ನಂತರವೂ ಮುಂದುವರೆಸತಕ್ಕದ್ದಲ್ಲ ಎಂದು ಇದೆ.

**ಸಭಾಪತಿಯವರು:-** ಎರಡನೇ ವರ್ಷದಲ್ಲಿ ಮುಗಿಸಬೇಕು.

**ಶ್ರೀ ವಿ.ಎಸ್. ಉಗ್ರಪ್ಪ:-** ಸಾಮಾನ್ಯವಾಗಿ ಇದನ್ನು ಆ ವರ್ಷವೇ ಮಾಡಬೇಕು, ಮಾಡದಿದ್ದರೆ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಬೇಕು ಎಂದು ಇದೆ. ಆದರೆ ಮೂಲ ಅಧಿನಿಯಮ 13ನೇ ಪ್ರಕರಣದಲ್ಲಿ "...... ಒಂದು ನಿರ್ದಿಷ್ಟ ಹಣಕಾಸು ವರ್ಷಕ್ಕೆ ಹಂಚಿಕೆ ಮಾಡಿರುವ ಮೊತ್ತವು ಖರ್ಚಾಗದೆ ಉಳಿದ ಸಂದರ್ಭದಲ್ಲಿ, ಅದನ್ನು ಮುಂದಿನ ಹಣಕಾಸು ವರ್ಷದ ಹಂಚಿಕೆಗೆ ಸೇರಿಸಬಹುದು," ಎಂಬ ಪದಗಳಿಗೆ "ಒಂದು ನಿರ್ದಿಷ್ಟ ಬೇಡಿಕೆಯಲ್ಲಿ, ಲೆಕ್ಕ ಪರಿಶೋಧಿತ ಲೆಕ್ಕಗಳ ಪ್ರಕಾರ ನಿರ್ಧರಿಸಿದ ನಿರ್ದಿಷ್ಟ ಹಣಕಾಸು ವರ್ಷದಲ್ಲಿನ ಹಂಚಿಕೆಯ ಪೈಕಿ ಖರ್ಚು ಮಾಡದಿರುವ ಮೊತ್ತದ ಸಂದರ್ಭದಲ್ಲಿ, ಅದನ್ನು ಅನುಕ್ರಮವಾಗಿ 2:1 ಅನುಪಾತದಲ್ಲಿ ಸಂಬಂಧಪಟ್ಟ ಆಡಳಿತಾತ್ಮಕ ಇಲಾಖೆಯ ಅದೇ ಬೇಡಿಕೆಗೆ ಮತ್ತು

ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗೆ, ನಿಕಟ ತರುವಾಯ ಬರುವ ಹಣಕಾಸು ವರ್ಷದ ನಂತರ ಮುಂದಿನ ಹಣಕಾಸು ವರ್ಷದ ಹಂಚಿಕೆಗೆ ಸೇರಿಸಬಹುದು" ಎಂದು ಹೇಳಿದ್ದಾರೆ. ಇದು ಈಗಾಗಲೇ ಆಗುತ್ತಿದ್ದು, ಒಂದು ವೇಳೆ ಯಾವುದಾದರೊಂದು ಕಾರಣಕ್ಕೆ ವೆಚ್ಚ ಮಾಡದಿದ್ದರೆ ಮುಂದಿನ ವರ್ಷ ಅವರಿಗೋಸ್ಕರವೇ ಖರ್ಚು ಮಾಡಲು ಇಡಬೇಕು ಎನ್ನುವುದನ್ನು dilute ಮಾಡಲು ಈ provision ಮಾಡುತ್ತಾರೆಂದರೆ ಇದಕ್ಕೆ ಏನು ಹೇಳಬೇಕು? ಸಾಮಾಜಿಕ ಪರವಾದ ಹಿನ್ನೆಲೆಯಲ್ಲಿ ನನಗೆ ಅನಿಸುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳ ಹಾಗೂ ಸರ್ಕಾರದ ಸದುದ್ದೇಶಕ್ಕೆ ಎಲ್ಲೋ ಒಂದು ಪೆಟ್ಟು ಬೀಳುವ ಸಂದರ್ಭ ಇದೆ. ದಯಮಾಡಿ ಸರ್ಕಾರ ಇದರ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

(ಮುಂದು)

**(909) 21-06-2017 SK-BNS 7.10**

**(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಆಂಜನೇಯ (ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ):-** ಮಾನ್ಯ ಸಭಾಪತಿಯವರೇ, ಇದರಲ್ಲಿ ಯಾವುದೇ ರೀತಿಯ ಅಪಾಯವಿಲ್ಲ. ನಾವು ಎಲ್ಲವನ್ನು ಕೂಡ ಬಹಳ ಯೋಚನೆ ಮಾಡಿ, ಈ ಹಣವನ್ನು ಸದ್ಬಳಕೆ ಮಾಡಬೇಕು. ಮಾನ್ಯ ಈಶ್ವರಪ್ಪನವರು ಆಯಾಯ ವರ್ಷದಲ್ಲಿ ನೀವು ಇಟ್ಟಿರುವಂತಹ ಹಣವನ್ನು ಖರ್ಚು ಮಾಡಬೇಕು ಹಾಗೂ ಖರ್ಚು ಮಾಡದೇ ಇರುವಂತಹ ಹಣ ಏನಿರುತ್ತದೆ ಅದು ಲ್ಯಾಪ್ಸ್ ಆಗುವುದಿಲ್ಲ, ಮುಂದಿನ ವರ್ಷ carry forward ಆಗುತ್ತದೆ ಎನ್ನುವಂತಹ ವಿಚಾರವನ್ನು ಬಹಳ ಕಾಳಜಿಯಿಂದ ಹೇಳಿದರು. ಈ ಒಂದು ಮನೋದೃಷ್ಟಿಯಿಂದ ಯಾವ ಅಧಿಕಾರಿಗಳು ಕೆಲಸ ಮಾಡುವುದಿಲ್ಲ, ಅಂಥವರ ಬಗ್ಗೆ ಕಠಿಣವಾದ ಕ್ರಮವನ್ನು ಕೈಗೊಳ್ಳಬೇಕು, ಹಣವನ್ನು ಬಳಕೆ ಮಾಡದೇ ಹೋದರೆ ಅವರನ್ನು ಶಿಕ್ಷಿಸಬೇಕು ಎನ್ನುವಂತಹ ಕಾಯಿದೆ ಕೂಡ ಇದೆ. ಅದನ್ನು ಹಣ ಬಳಕೆ ಮಾಡುವುದಿಲ್ಲ ಎನ್ನುವ ಅರ್ಥದಲ್ಲಿ ಹೇಳಿದ್ದಾರೆ. ನಾವು ಏನೂ ಕಳಪೆ ಸಾಧನೆಯನ್ನು ಮಾಡಿಲ್ಲ. ಈ ಕಾಯಿದೆ ಬಂದು ಮೂರು ವರ್ಷಗಳಾಗಿವೆ. 2013-14 ನೇ ಸಾಲಿನಲ್ಲಿ ಈ ಕಾಯಿದೆ ಬಂದಿರಲಿಲ್ಲ. ಆ ಸಂದರ್ಭದಲ್ಲಿ ನಾವು ಶೇಕಡ 83 ರಷ್ಟು ಸಾಧನೆ ಮಾಡಿದ್ದೇವೆ. ಅದೇ ರೀತಿ 2014-15 ನೇ ಸಾಲಿನಲ್ಲಿ ಶೇಕಡ 88 ರಷ್ಟು, 2015-16 ನೇ ಸಾಲಿನಲ್ಲಿ ಶೇಕಡ 95 ರಷ್ಟು ಹಾಗೂ 2016-17 ನೇ ಸಾಲಿನಲ್ಲಿ ಶೇಕಡ 90 ರಷ್ಟು ಸಾಧನೆಯನ್ನು ಮಾಡಿದ್ದೇವೆ. ಉಳಿದಂತಹ ಹಣ ಮುಂದಿನ ವರ್ಷ carry forward ಆಗುತ್ತದೆ. ಈ ಹಣ ಖರ್ಚು ಮಾಡದೇ ಹೋದರೆ ಮತ್ತೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮುಂದೆ ಲ್ಯಾಪ್ಸ್ ಆಗುತ್ತದೆ ಎನ್ನುವುದಿತ್ತು. ಅದಕ್ಕೂ ಕೂಡ ಮಾನ್ಯ ಮುಖ್ಯ ಮಂತ್ರಿಗಳು ಏನು ಮಾಡಿದ್ದಾರೆ ಎಂದರೆ, ಲ್ಯಾಪ್ಸ್ ಆಗಬಾರದು; ಆಯಾಯ ವರ್ಷವೇ ಈ ಹಣವನ್ನು ಬಳಕೆ ಮಾಡಬೇಕು, ಅಕಸ್ಮಾತ್ತಾಗಿ ಯಾವುದೇ ಬಲವಾದ ಕಾರಣಗಳಿಂದ ಆ ಹಣವನ್ನು ವೆಚ್ಚ ಮಾಡುವುದಕ್ಕಾಗದೇ ಹೋದರೆ ಏನು carry forward ಆಗಿರುವಂತಹ ಹಣ ಇರುತ್ತದೆ ಅದನ್ನು ಕೂಡ ಮುಂದುವರೆಸೋಣ ಎನ್ನುವಂತಹ ಚಿಂತನೆಯು ಕೂಡ ಇದೆ. Carry forward ಆದಂತಹ ಹಣವನ್ನು ನಾವು ಕಟ್ಟಡಕ್ಕೆ ಖರ್ಚು ಮಾಡುವುದಿಲ್ಲ. ಉಳಿದಿರುವ ಬೇರೆ ಹಣವನ್ನು ಕಾರ್ಪೊರೇಷನ್‌ಗೆ, ಸಮುದಾಯ ಭವನಕ್ಕೆ ಕೊಡುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:-** ಮಾನ್ಯ ಸಭಾಪತಿಯವರೇ, ಮಾನ್ಯ ಉಗ್ರಪ್ಪನವರು ಕೇಳಿರುವುದರಲ್ಲಿ ಆ 2:1 ಅನುಪಾತ ಮಾಡಿರುವುದರಲ್ಲಿ, second year ಗೂ ಪೂರ್ತಿಯಾಗದೇ ಇದ್ದರೆ, ಮುಂದಿನ ವರ್ಷಗಳಲ್ಲಿ 2:1 ಪ್ರಮಾಣದ ಅನುಪಾತದಲ್ಲಿ ಆಡಳಿತಾತ್ಮಕ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ಇವೆರಡು ಇಲಾಖೆಗಳಿಗೆ ಹಂಚಿಕೊಳ್ಳುವುದಕ್ಕೆ ಮಾನ್ಯ ಸಚಿವರು ಏನು ಅವಕಾಶ ಮಾಡಿದ್ದಾರೆ, ಅದಕ್ಕೆ ಏನು ಕಾರಣ?

**ಶ್ರೀ ಹೆಚ್. ಆಂಜನೇಯ:-** Carry forward ಆದಂಥ ಹಣವೇನಿರುತ್ತದೆ, ಆ ಹಣ ಎಷ್ಟಿರುತ್ತದೆಯೋ ಅಷ್ಟು ಹಣವನ್ನು ಆಯಾಯ ಇಲಾಖೆಗಳಿಗೆ ಕೊಡಬೇಕು. ನಾವು ಅದರಲ್ಲಿ ಏನು ಮಾಡಿದ್ದೇವೆ ಎಂದರೆ, ಮೂರನೇ ಒಂದರಷ್ಟು ಹಣವನ್ನು ಸಮಾಜ ಕಲ್ಯಾಣ ಇಲಾಖೆಗೆ ತೆಗೆದುಕೊಳ್ಳುತ್ತೇವೆ. ಆ ಸಮಾಜ ಕಲ್ಯಾಣ ಇಲಾಖೆಗೆ ತೆಗೆದುಕೊಂಡು ಹಾಸ್ಟೆಲ್ ಮತ್ತು ಇತರೇ ಕಟ್ಟಡ ಮತ್ತಿತರ ಪ್ರಗತಿಗಳಿಗೆ ಬಳಸುತ್ತೇವೆ. ಅಕಸ್ಮಾತ್ತಾಗಿ, ಬೇರೆ ಇಲಾಖೆಯವರು ಬಹಳ ಅವಶ್ಯಕತೆಯಿದೆ ಎಂದು ಕೇಳಿದರೆ, ಆ ಹಣವನ್ನು ಮಂಜೂರು ಮಾಡುವಂತಹ ವ್ಯವಸ್ಥೆಯನ್ನು ಕೂಡ ಮಾಡಿಕೊಂಡಿದ್ದೇವೆ.

**ಶ್ರೀ ವಿ.ಎಸ್.ಉಗ್ರಪ್ಪ:-** ಮಾನ್ಯ ಸಭಾಪತಿಯವರೆ, ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಇದು ಬಹಳ ಮುಖ್ಯವಾದುದು. ಅದರಲ್ಲಿ ಮೊದಲನೇ ವರ್ಷದ್ದನ್ನು carry forward ಮಾಡುವುದಕ್ಕೆ ಮೊದಲೇ provision ಇದೆ. ಒಂದು ವೇಳೆ ಎರಡನೇ ವರ್ಷದ ಹಣ ಖರ್ಚಾಗಲಿಲ್ಲ ಎನ್ನುವ ಕಾರಣಕ್ಕಾಗಿ ಇಂತಹ ಒಂದು ವಿಧೇಯಕವನ್ನು ತಂದರೆ ಅದಕ್ಕೆ ಅರ್ಥ ಇರುತ್ತದೆ.

**ಶ್ರೀ ಹೆಚ್. ಆಂಜನೇಯ:-** ಮುಂದೆ ಅದನ್ನೂ ತರುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ವಿ.ಎಸ್.ಉಗ್ರಪ್ಪ:–** ಮುಂದೆ ತರುತ್ತೇವೆ ಎಂದರೆ, ಈಗ ಈ ವಿಧೇಯಕವನ್ನು ಈಗಾಗಲೇ ತಂದಿರುವುದರಿಂದ ಆಮೇಲೆ ಏನಾಗುತ್ತದೆ?

**ಸಭಾಪತಿಯವರು:–** ಮಾನ್ಯ ಸಚಿವರು ಏನು ಮಾಡುತ್ತಾರೆ ಎಂದು ನೋಡೋಣ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ನಾನು ಅಂತಿಮವಾಗಿ ವಿಧೇಯಕಕ್ಕೆ ಬೆಂಬಲ ಕೊಡುವುದು ಬೇರೆ ವಿಚಾರ. ಆದರೆ ಈ ಸದನದಲ್ಲಿ ನಾನು ಒಬ್ಬ ಸದಸ್ಯನಾಗಿರುವುದರಿಂದ ನನ್ನ ಜವಾಬ್ದಾರಿ ಇದೆ. ಇದರಲ್ಲಿ ಏನು loopholes ಇದೆ, ಇದು ಯಾವ ರೀತಿ ಸಾಮಾಜಿಕ ನ್ಯಾಯಕ್ಕೆ ತೊಂದರೆಯಾಗಬಹುದು ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

**ಸಭಾಪತಿಯವರು:–** ಮಾನ್ಯ ಸಚಿವರೇ, ಅವರು ಕೇಳಿರುವ point ಗೆ ತಾವು ಉತ್ತರ ಹೇಳಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮೊದಲೇ Act ನಲ್ಲಿ ಮುಂದುವರೆಸುವುದಕ್ಕೆ ಸಾಧ್ಯತೆಯಿದೆ. ಆ first year ಅನ್ನು as it is ಮುಂದುವರೆಸುವಂತಹದ್ದಕ್ಕೆ ತಾವು provision ಅನ್ನು ಮುಂದುವರೆಸಬೇಕು. ಒಂದು ವೇಳೆ ಯಾವುದಾದರೂ ಕಾರಣದಿಂದ ಎರಡನೇ ವರ್ಷಕ್ಕೆ ಅದನ್ನು ಮುಗಿಸಲಿಲ್ಲ ಎಂದರೆ ಅದರಲ್ಲಿ ನಿಮಗೆ ಈ ratio ಅನ್ನು ಬೇಕಾದರೆ ನೀವು ಅಳವಡಿಸಿಕೊಳ್ಳಿ. ಅದನ್ನು ಬಿಟ್ಟು ಇರುವಂತಹ provision ಅನ್ನು ತೆಗೆದು ಮೊದಲನೇ ವರ್ಷದಲ್ಲಿ ಈಗ ಮಾಡುತ್ತೇವೆಂದರೆ, ಇದು ಎಲ್ಲೋ ಒಂದು ಕಡೆ ಅವರ ಹಿತದೃಷ್ಟಿಯಿಂದ ತೊಂದರೆಯಾಗಬಹುದು ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರ ಸಲಹೆಯನ್ನು ತಾವು ಪರಿಗಣನೆ ಮಾಡಿ.

**ಶ್ರೀ ಹೆಚ್. ಆಂಜನೇಯ:–** ಮಾನ್ಯ ಸಭಾಪತಿಯವರೇ, ಆ ವರ್ಗದ ಜನರಿಗೆ ಯಾವ ದೃಷ್ಟಿಯಿಂದಲೂ ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ನಾವು ಬಹಳ ಕಷ್ಟಪಟ್ಟು ಈ ವಿಧೇಯಕವನ್ನು ತೆಗೆದುಕೊಂಡು ಬಂದಿದ್ದೇವೆ. ಇಡೀ ದೇಶದಲ್ಲಿಯೇ ಮಾದರಿಯಾಗಿರುವಂತಹ ಈ ಒಂದು SCP/TSP Sub-Plan Act ನ್ನು ನಾವು ಏನು ಮಾಡಿದ್ದೇವೆ, ಅದನ್ನು ಜನರ ಸರ್ವತೋಮುಖ ಅಭಿವೃದ್ಧಿಗೆ ಬಳಕೆ ಮಾಡುವುದಕ್ಕೆ ಬೇಕಾಗಿರುವಂತಹ ಎಲ್ಲಾ ಪ್ರಯತ್ನಗಳನ್ನು ಕೂಡ ನಾವು ಮಾಡುತ್ತಿದ್ದೇವೆ. ಇದರಿಂದ ಯಾವುದೇ ರೀತಿಯಿಂದ ಆ ಜನರಿಗೆ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನ್ಯಾಯವಾಗುವುದಕ್ಕೆ ಬಿಡುವುದಿಲ್ಲ. ಆ ಜನರ ಅಭಿವೃದ್ಧಿಗೋಸ್ಕರ ತಂದಿರುವಂತಹ ತಿದ್ದುಪಡಿ ಇದಾಗಿದೆ. ದಯವಿಟ್ಟು ಇದನ್ನು ಅಂಗೀಕರಿಸಬೇಕೆಂದು ನಾನು ತಮ್ಮಲ್ಲಿ ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕ 2017ವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2 ರಿಂದ 8 ರವರೆಗೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಖಂಡ 2 ರಿಂದ 8ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 8ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಉಪ ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲಾಯಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಸ್ತಾವದ ಅಂಗೀಕಾರ

**ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕ 2017 ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) (ತಿದ್ದುಪಡಿ) ವಿಧೇಯಕ 2017ನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.**

### 12. ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರವರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮ 104ರ ಮೇರೆಗೆ ವಿಧಾನ ಸಭೆಯು ದಿನಾಂಕ 21–06–2017 ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿತು ಎಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ವಿಧೇಯಕ, 2017

2) ಕರ್ನಾಟಕ ಸಾರ್ವಜನಿಕ ಸುರಕ್ಷತಾ ಕ್ರಮಗಳ ಜಾರಿ ವಿಧೇಯಕ, 2017

### 13. ಸಭೆಯ ಮುಂದಿಡಲಾದ ಕಾಗದ ಪತ್ರಗಳು

**ಕಾರ್ಯದರ್ಶಿ (ಕ.ವಿ.ಪ):–** ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸದನದ ಮುಂದೆ ಮುಂಡಿಸುತ್ತಿದ್ದೇನೆ.

1. ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ವಿಧೇಯಕ, 2017

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

2. ಕರ್ನಾಟಕ ಸಾರ್ವಜನಿಕ ಸುರಕ್ಷತಾ ಕ್ರಮಗಳ ಜಾರಿ ವಿಧೇಯಕ, 2017

**ಸಭಾಪತಿಯವರು:-** ನಮಗೆ ಎರಡು ವಿಧೇಯಕಗಳು ಈಗಷ್ಟೇ ಬಂದಿವೆ. ನಮಗೆ ಯಾರಿಗೂ ಪ್ರತಿಗಳನ್ನು ಕೊಟ್ಟಿಲ್ಲ. ಅದನ್ನು ಮಂಡಿಸಿದ್ದೇವೆ, ಮುಂದೆ ನೋಡೋಣ. Consequential Bills ಆದರೆ ಜೊತೆಗೆ ಬರಬೇಕಿತ್ತು.

**ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈ ಹಿಂದೆ ಸಚಿವರಾಗಿದ್ದಂತಹ ಸಂದರ್ಭದಲ್ಲಿ ಅವರು ತಂದಂತಹ ವಿಧೇಯಕವನ್ನು ತಕ್ಷಣವೇ ಮಂಜೂರು ಮಾಡಿಕೊಟ್ಟಿದ್ದೇವೆ.

**ಶ್ರೀ. ಕೆ.ಎಸ್.ಈಶ್ವರಪ್ಪ:-** ಅಲ್ಲಿ ಯಾರದೋ ಹೆಣ ಬೀಳುತ್ತೆ ಎಂದರೆ ತಕ್ಷಣ ಅನುಮೋದನೆ ಕೊಡೋಣ. ಆದರೆ ಅಂತಹದೇನೂ urgency ಇಲ್ಲ. ಮುಂದಿನ ಅಧಿವೇಶನದಲ್ಲಿ ಚರ್ಚೆ ಮಾಡೋಣ.

**(ಗೊಂದಲ)**

**ಸಭಾಪತಿಯವರು:-** ಎರಡು ವಿಧೇಯಕಗಳ ಪ್ರತಿಗಳು ಬರಲಿಲ್ಲ. ಅದು ಬರಬೇಕು. ಈಗ ಬರುವುದಕ್ಕೆ ಪ್ರಾರಂಭವಾಗಿದೆ.

**ಶ್ರೀ. ಕೆ.ಎಸ್.ಈಶ್ವರಪ್ಪ:-** ವಿಧೇಯಕಗಳು ಬಂದಿಲ್ಲ ಎಂದರೆ ಅವರು ಕೇಳುವುದಕ್ಕೋಸ್ಕರ ನಾವು ಕಣ್ಣು ಮಚ್ಚಿಕೊಂಡು ಹೌದು ಎಂದು ಹೇಳಿದರೆ ಅದು ಎಷ್ಟರಮಟ್ಟಿಗೆ ಸರಿ ಎಂದು ನೀವೇ ಹೇಳಿ. ಮಾನ್ಯ ರಾಮಲಿಂಗಾರೆಡ್ಡಿಯವರೇ, ತೀರಾ ತುರ್ತು ಇದೆಯೇ? ಏನೂ ಇಲ್ಲವಲ್ಲ.

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು):-** ಅನುಮೋದನೆ ಮಾಡಿಕೊಟ್ಟರೆ ಒಳ್ಳೆಯದು.

**ಶ್ರೀ. ಕೆ.ಎಸ್.ಈಶ್ವರಪ್ಪ:-** ಈ ಪದ್ಧತಿ ಬೇಡ ಎಂದು ಹೇಳಿದೆ ಅಷ್ಟೆ.

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು):-** ನೀವು ಸಹಕಾರ ಕೊಟ್ಟರೆ ಆಗುತ್ತದೆ.

**ಶ್ರೀ. ಕೆ.ಎಸ್.ಈಶ್ವರಪ್ಪ:-** ನಾವು ಖಂಡಿತವಾಗಿ ಪೂರ್ತಿ ಸಹಕಾರ ಕೊಡುತ್ತೇವೆ. ಇದು ನ್ಯಾಯವೇ? ಇದು ಅಭ್ಯಾಸವಾಯಿತು ಎಂದರೆ, ಮುಗಿದು ಹೋಯಿತು. ಇದನ್ನು ತೆಗೆದುಕೊಂಡು ನಾವು ಏನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡೋಣ? ದಯವಿಟ್ಟು, ಈ ವಿಧೇಯಕಗಳನ್ನು ಇಷ್ಟು ತರಾತುರಿಯಲ್ಲಿ ತೆಗೆದುಕೊಳ್ಳುವುದು ಬೇಡ ಮುಂದಿನ ಸಲ ತೆಗೆದುಕೊಳ್ಳಿ.

**ಸಭಾಪತಿಯವರು:–** ಆಯಿತು.

**ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು):–** ಪ್ರತಿಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗಿದೆ.

**ಶ್ರೀ. ಕೆ.ಎಸ್.ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ತಾವೀಗ ಸದನವನ್ನು ಒಂದು ಗಂಟೆಯ ಕಾಲ ಮುಂದೂಡಿ, ನಾವು ವಿಧೇಯಕವನ್ನು ಓದಿಕೊಂಡು ಬರುತ್ತೇವೆ.

**ಕ್ಯಾಪ್ಟನ್ ಗಣೇಶ್ ಕಾರ್ಣಿಕ್:–** ಮಾನ್ಯ ಸಭಾಪತಿಯವರೇ ಯಾವ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಈಗಾಗಲೇ ತಾವು ಆದೇಶವನ್ನು ಕೊಟ್ಟಿದ್ದೀರಿ. ಯಾವುದು ಇಲ್ಲ ಎಂದು ಈಗಾಗಲೇ ಹೇಳಿಬಿಟ್ಟಿದ್ದಾರೆ. ಕೇವಲ ಎರಡು ವಿಧೇಯಕಗಳಿವೆ ಎಂದು ಆದೇಶವನ್ನು ಕೊಟ್ಟಿರುವುದರಿಂದ ಮತ್ತೆ ಅದನ್ನು ತೆಗೆದುಕೊಳ್ಳುವುದು ಬೇಡ.

**ಸಭಾಪತಿಯವರು:–** ಮಾನ್ಯ ಸಚಿವರೇ, ಈ ವಿಧೇಯಕಗಳನ್ನು ಮುಂದಿನ ಸಲ ತೆಗೆದುಕೊಳ್ಳೋಣ. ಬಹಳಷ್ಟು ಸಮಯ ಆಯಿತು. It is too late. ನಾನೀಗ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ, ಈಗಾಗಲೇ ಇವತ್ತಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ ಗಮನ ಸೆಳೆಯುವ ಸೂಚನೆಗಳನ್ನು ಪಟ್ಟಿ ಮಾಡಲಾಗಿದೆ. ಕನಿಷ್ಠ ಅದರ ಉತ್ತರಗಳನ್ನು ತರಿಸಿಕೊಡುವಂತಹ ಪ್ರಯತ್ನವನ್ನು ಮಾಡಬೇಕು. ಇವತ್ತು ಲಿಸ್ಟ್ ಆಗಿರುವಂತಹವುಗಳು ಹಾಗೆಯೇ ಅದು ಹಾಗೇ ಲ್ಯಾಪ್ಸ್ ಆಗಬಾರದು. ಇವತ್ತು ಲಿಸ್ಟ್ ಆಗಿರುವುದನ್ನು ಮಂಡಿಸಲಾಗಿದೆ ಎಂದು ಭಾವಿಸಿಕೊಂಡು ಉತ್ತರಗಳನ್ನು ತದನಂತರ ಕಳುಹಿಸಿಕೊಡುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಇನ್ನು ತಾವು ಏನಾದರೂ ಹೇಳುವಂಥದ್ದಿದ್ದರೆ ಹೇಳಬಹುದು

**14. ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳ ಮಂಡನೆ**

**ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):–** ಮಾನ್ಯ ಸಭಾಪತಿಯವರೇ, ದಿನಾಂಕ 06-06-2017 ರಿಂದ ದಿನಾಂಕ 19-06-2017 ರವರೆಗೆ ಸದನದಲ್ಲಿ ಲಿಖಿತ ಮೂಲಕ ಉತ್ತರಿಸುವ ಒಟ್ಟು 1150 ಪ್ರಶ್ನೆಗಳಲ್ಲಿ ವಿಳಂಬವಾಗಿ ಬಂದಿರುವ 376 ಪ್ರಶ್ನೆಗಳ ಉತ್ತರಗಳನ್ನು ತಮ್ಮ ಅಪ್ಪಣೆಯನ್ನು ಪಡೆದು ಸದನದಲ್ಲಿ ಮಂಡಿಸುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**“ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”**

(ಮುಂದು..)

910/21.06.2017/7.20/hv.bns

**(ಸಭಾಪತಿಯವರ ಉಪಸ್ಥಿತಿ)**

**15. ನಿಯಮ 330 ಮತ್ತು ನಿಯಮ 72ರಡಿಯಲ್ಲಿ ಸ್ವೀಕೃತವಾದ ಸೂಚನೆಗಳಿಗೆ ಲಿಖಿತ ಮೂಲಕ ಮಂಡಿಸಲಾದ ಉತ್ತರಗಳು.**

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾತ್‌ರಾಜ್ ಸಚಿವರು:–** ಸನ್ಮಾನ್ಯ ಸಭಾಪತಿಯವರೇ, ನಿಯಮ 330ರಡಿಯಲ್ಲಿ ಸ್ವೀಕೃತವಾಗಿರುವ 50 ಸೂಚನೆಗಳ ಪೈಕಿ 8 ಸೂಚನೆಗಳಿಗೆ ಹಾಗೂ ನಿಯಮ 72ರಡಿಯಲ್ಲಿ ಸ್ವೀಕೃತವಾಗಿರುವ 131 ಸೂಚನೆಗಳ ಪೈಕಿ 43 ಸೂಚನೆಗಳಿಗೆ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**16. ಸಚಿವರ ಹೇಳಿಕೆ**

**ವಿಷಯ: ಕರಾವಳಿ ಜಿಲ್ಲೆಯಲ್ಲಿ ಅದರಲ್ಲೂ ಬಂಟ್ವಾಳ ತಾಲ್ಲೂಕಿನ ಕಲ್ಲಡ್ಕದಲ್ಲಿ ಭಾರತೀಯ ಜನತಾ ಪಕ್ಷದ ಹಾಗೂ ಸಂಘ ಪರಿವಾರದ ಕಾರ್ಯಕರ್ತರ ಮೇಲೆ ಸ್ವಂತ ಸರ್ಕಾರವೇ ದೌರ್ಜನ್ಯ ಮಾಡುತ್ತಿರುವ ವರದಿಗಳು ರಾಜ್ಯದ ಎಲ್ಲ ಪತ್ರಿಕೆಗಳಲ್ಲಿ ಸುದ್ದಿಯಾಗಿರುವ ಬಗ್ಗೆ.**

– – –

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾತ್‌ರಾಜ್ ಸಚಿವರು:–** ಸನ್ಮಾನ್ಯ ಸಭಾಪತಿಯವರೇ, ಶ್ರೀಮತಿ ತಾರಾಅನೂರಾಧರವರು ಮತ್ತು ಶ್ರೀ ಕೋಟ ಶ್ರೀನಿವಾಸ ಪೂಜಾರಿಯವರು ದಿನಾಂಕ:19.06.2017ರಂದು ಸದನದಲ್ಲಿ ಪ್ರಸ್ತಾಪ ಮಾಡಿದ ಶೂನ್ಯವೇಳೆಯ ಪ್ರಸ್ತಾವಕ್ಕೆ ಸಂಬಂಧಪಟ್ಟ ಉತ್ತರವನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಸನ್ಮಾನ್ಯ ಸಭಾಪತಿಯವರೇ, ನಾವು ಕೇಳಿರುವಂತಹ ಶೂನ್ಯವೇಳೆಯ ಪ್ರಸ್ತಾವಕ್ಕೆ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ.

**ಸಭಾಪತಿಯವರು:–** ಉತ್ತರಗಳನ್ನು ಸರ್ಕಾರದವರು ಕಳುಹಿಸಿಕೊಡುತ್ತಾರೆ. It is a commitment by the Government. ಯಾವ ಶೂನ್ಯವೇಳೆಯ ಪ್ರಸ್ತಾವಗಳಿಗೆ

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಉತ್ತರವನ್ನು ಸದನದಲ್ಲಿ ಮಂಡಿಸುವುದಕ್ಕೆ ಸಾಧ್ಯವಾಗಿಲ್ಲ, ಅಂತಹ ಪ್ರಸ್ತಾವಗಳಿಗೆ ಉತ್ತರವನ್ನು ಸದನ ಮುಗಿದ ನಂತರ 15 ದಿನಗಳೊಳಗಾಗಿ ಸರ್ಕಾರದಿಂದ ಸಂಬಂಧಪಟ್ಟ ಎಲ್ಲ ಸದಸ್ಯರಿಗೆ ಕಳುಹಿಸಿಕೊಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಇದನ್ನು ಸರ್ಕಾರ ಒಪ್ಪಿಕೊಂಡಿದೆ. It is done.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಎಂ.ವಿ.ಜೆ. ಇಂಜಿನಿಯರಿಂಗ್ ಕಾಲೇಜ್‌ನ ವಿದ್ಯಾರ್ಥಿಗಳಿಗೆ ಎರಡು ಸೆಮಿಸ್ಟರ್ ಪರೀಕ್ಷೆಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಅದರ ಬಗ್ಗೆ ನಾನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆ. ಅದಕ್ಕೂ ಸರ್ಕಾರದಿಂದ ಉತ್ತರ ಬಂದಿಲ್ಲ.

**ಸಭಾಪತಿಯವರು:–** ಸರ್ಕಾರ ಉತ್ತರವನ್ನು ಕಳುಹಿಸಿಕೊಡುತ್ತದೆ.

**ಶ್ರೀ ವಿ.ಎಸ್.ಉಗ್ರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಇದು ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆಯಾಗಿದೆ. ಈ ಬಗ್ಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ಎನ್ನುವುದರ ಬಗ್ಗೆ ತಿಳಿಸಬೇಕಾಗಿದೆ. ಇಡೀ ರಾಜ್ಯದಲ್ಲಿನ ಘನತ್ಯಾಜ್ಯ ಸಂಸ್ಕರಣೆಯ ಬಗ್ಗೆ ನಿನ್ನೆ ದಿನ ಚರ್ಚೆ ಅಪೂರ್ಣವಾಗಿತ್ತು. ಅದಕ್ಕೆ ಸಂಬಂಧಪಟ್ಟಂತೆ ಈ ದಿನ ಚರ್ಚೆಯನ್ನು ಪೂರ್ಣಗೊಳಿಸಿ, ಸರ್ಕಾರದಿಂದ ಉತ್ತರ ಕೊಡಿಸಲಾಗುತ್ತದೆಂದು ಹೇಳಲಾಗಿತ್ತು.

**ಸಭಾಪತಿಯವರು:–** ಅದಕ್ಕೆ ಸಂಬಂಧಪಟ್ಟ ಉತ್ತರವನ್ನು ಕಳುಹಿಸಿಕೊಡಲಾಗುತ್ತದೆ. ಈ ರೀತಿ ಪೆಂಡಿಂಗ್ ಇರುವ ಎಲ್ಲ ಉತ್ತರಗಳನ್ನು ಸಂಬಂಧಪಟ್ಟ ಸದಸ್ಯರಿಗೆ ಕಳುಹಿಸಿಕೊಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಉತ್ತರವನ್ನು ಕಳುಹಿಸಿಕೊಡಲಾಗುತ್ತದೆ.

## ಸಾರಾಂಶ

**ಸಭಾಪತಿಯವರು:–** 133ನೇ ಅಧಿವೇಶನದ ಮುಂದುವರೆದ ಉಪವೇಶನವು ದಿನಾಂಕ:05.06.2017 ರಿಂದ 21.06.2017ರವರೆಗೆ ಒಟ್ಟು 13 ದಿನಗಳ ಕಾಲ ನಡೆದಿರುತ್ತದೆ. ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಗಣ್ಯರಿಗೆ ಸದನವು ಸಂತಾಪವನ್ನು ವ್ಯಕ್ತಪಡಿಸಿತು. ಸಭೆಯ ಮುಂದಿಡಲಾಗುವ ಕಾಗದಪತ್ರಗಳ 6, 7, 8 ಮತ್ತು 9ನೇ ಪಟ್ಟಿಗಳನ್ನು, ಘನತೆವೆತ್ತ ರಾಷ್ಟ್ರಪತಿಗಳು ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಲಾಯಿತು. 2017–18ನೇ ಸಾಲಿನ ಪೂರಕ ಅಂದಾಜುಗಳ ಮೊದಲನೆಯ ಕಂತು ವರದಿ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಲೆಕ್ಕ ಪರಿಶೋಧಕರ ಸ್ಥಳೀಯ ಸಂಸ್ಥೆಗಳ ಮೇಲಿನ ವರದಿ, ಕರ್ನಾಟಕದಲ್ಲಿನ ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿಧಾಮಗಳ ಆಡಳಿತ ನಿರ್ವಹಣೆ ಮೇಲಿನ ವರದಿ, ವಿಧಾನ ಪರಿಷತ್ತಿನ ಹಕ್ಕುಬಾಧ್ಯತೆ ಸಮಿತಿಯ 83ನೇ ಹಾಗೂ 84ನೇ ವರದಿಗಳನ್ನು ಹಾಗೂ ಕರ್ನಾಟಕ ವಿಧಾನ ಮಂಡಲದ ವಿವಿಧ ಸಮಿತಿಗಳ ವರದಿಗಳನ್ನು ಸದನದಲ್ಲಿ ಮಂಡಿಸಲಾಯಿತು. ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 165 ಹಾಗೂ ಭಾರತ ಸಂವಿಧಾನದ 183ನೇ ಅನುಚ್ಛೇದದ 'ಸಿ' ಖಂಡದ ರೀತ್ಯಾ ಮಾನ್ಯ ಸಭಾಪತಿಗಳನ್ನು ಸಭಾಪತಿಗಳ ಸ್ಥಾನದಿಂದ ತೆಗೆದು ಹಾಕಬೇಕೆಂದು ನೀಡಲಾಗಿದ್ದ ನಿರ್ಣಯವು ಅಲ್ಪಮತದಿಂದ ತಿರಸ್ಕೃತಗೊಂಡಿರುತ್ತದೆ. ಮಕ್ಕಳ ಹಕ್ಕುಗಳ ರಕ್ಷಣೆ ಕುರಿತಂತೆ ಸದನದಲ್ಲಿ ವಿಶೇಷವಾಗಿ ಚರ್ಚಿಸಿ ಸರ್ಕಾರದಿಂದ ಉತ್ತರವನ್ನು ಪಡೆಯಲಾಯಿತು. 2017–18ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಸ್ಥಾಯಿ ಸಮಿತಿಗಳ ಹಾಗೂ ವಿಧಾನ ಮಂಡಲಗಳ ಜಂಟಿ ಸಮಿತಿಗಳಿಗೆ ಸದಸ್ಯರುಗಳನ್ನು ಚುನಾಯಿಸುವ ಬದಲು ನಾಮ ನಿರ್ದೇಶನ ಮಾಡುವ ಪ್ರದತ್ತವಾದ ಅಧಿಕಾರವನ್ನು ಸದನವು ಮಾನ್ಯ ಸಭಾಪತಿಗಳಿಗೆ ನೀಡಿರುತ್ತದೆ. ಶೂನ್ಯವೇಳೆಯ 50 ಸೂಚನೆಗಳ ಪೈಕಿ 28 ಸೂಚನೆಗಳಿಗೆ ಉತ್ತರಿಸಲಾಯಿತು. ಪ್ರಸ್ತುತ ಅಧಿವೇಶನದಲ್ಲಿ 1300 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಆ ಪೈಕಿ 150 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಲಾಗಿದ್ದು, ಆ ಪೈಕಿ 137 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು. ಲಿಖಿತ ಮೂಲಕ ಉತ್ತರಿಸುವ ಒಟ್ಟು 1150 ಪ್ರಶ್ನೆಗಳ ಪೈಕಿ 1019 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಗಳನ್ನು ಮಂಡಿಸಲಾಯಿತು. ನಿಯಮ 72ರಡಿಯಲ್ಲಿ ಒಟ್ಟು 131 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ ಮೂರು ಸೂಚನೆಗಳ ಬಗ್ಗೆ ಸದನದಲ್ಲಿ ಚರ್ಚೆಯಾಗಿದ್ದು, 43 ಸೂಚನೆಗಳ ಉತ್ತರವನ್ನು ಸದನದಲ್ಲಿ ಮಂಡಿಸಲಾಯಿತು. ನಿಯಮ 330ರಡಿಯಲ್ಲಿ ಒಟ್ಟು 50 ಸೂಚನೆಗಳನ್ನು ಸ್ವೀಕರಿಸಲಾಗಿದ್ದು, ಆ ಪೈಕಿ ಸದನದಲ್ಲಿ ಎರಡು ಸೂಚನೆಗಳ ಮೇಲೆ ಚರ್ಚೆಯಾಗಿರುತ್ತದೆ ಹಾಗೂ 08 ಸೂಚನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು. ನಿಯಮ 330 'ಎ' ವಿಶೇಷ ಪ್ರಸ್ತಾವನೆಯಡಿಯಲ್ಲಿ 8 ಸೂಚನೆಗಳನ್ನು ಪ್ರಸ್ತಾಪ ಮಾಡಲಾಗಿದ್ದು, ಆ ಪೈಕಿ 3 ಸೂಚನೆಗಳಿಗೆ ಉತ್ತರಿಸಲಾಯಿತು. ನಿಯಮ 58ರಡಿಯಲ್ಲಿ ಒಂದು ಸೂಚನೆಯನ್ನು ಸ್ವೀಕರಿಸಲಾಗಿರುತ್ತದೆ. ನಿಯಮ 59ರಡಿಯ ಎರಡು ಸೂಚನೆಗಳನ್ನು ನಿಯಮ 68ಕ್ಕೆ ಪರಿವರ್ತಿಸಿ ಸರ್ಕಾರದಿಂದ ಉತ್ತರಿಸಲಾಯಿತು. ನಿಯಮ 68ರಡಿಯಲ್ಲಿ ಒಂದು ಸೂಚನೆಯನ್ನು ಸ್ವೀಕರಿಸಲಾಗಿರುತ್ತದೆ. ನಿಯಮ 74ರಡಿಯಲ್ಲಿ ಸ್ವೀಕರಿಸಲಾಗಿದ್ದ ಸದಸ್ಯರ ಖಾಸಗಿ ವಿಧೇಯಕ 2016ನೇ ಸಾಲಿನ ಕರ್ನಾಟಕ ಶಿಕ್ಷಣ (ತಿದ್ದುಪಡಿ)

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಧೇಯಕದ ಪ್ರಸ್ತಾಪಿತ ಅಂಶವನ್ನು ಸರ್ಕಾರವು ಕಾರ್ಯರೂಪಕ್ಕೆ ತಂದಿರುವುದರಿಂದ ಸದರಿ ವಿಧೇಯಕವನ್ನು ಮಾನ್ಯ ಸದಸ್ಯರು ಹಿಂಪಡೆದಿರುತ್ತಾರೆ. ವಿಧಾನಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ ಎರಡು ವಿಧೇಯಕಗಳು ಹಾಗೂ ವಿಧಾನಸಭೆಯಿಂದ ಅಂಗೀಕೃತರೂಪದಲ್ಲಿರುವ 12 ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಅಂಗೀಕಾರವನ್ನು ನೀಡಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ ಸಭಾನಾಯಕರಿಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ವಿರೋಧ ಪಕ್ಷದ ನಾಯಕರಿಗೆ ಎಲ್ಲ ಮಂತ್ರಿ ವರ್ಗದವರಿಗೆ, ಮುಖ್ಯ ಸಚೇತಕರುಗಳು ಹಾಗೂ ವಿವಿಧ ಶಾಸಕಾಂಗ ಪಕ್ಷದ ನಾಯಕರುಗಳಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿ/ನೌಕರ ವರ್ಗದವರಿಗೆ ಮತ್ತು ವಿಧಾನ ಪರಿಷತ್ತಿನ ಅಧಿಕಾರಿ/ನೌಕರ ವರ್ಗದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿರುವುದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಈ 13 ದಿನಗಳ ಅಧಿವೇಶನದಲ್ಲಿ ತಮ್ಮ ಮಾರ್ಗದರ್ಶನ ಹಾಗೂ ಅಧ್ಯಕ್ಷತೆಯಲ್ಲಿ ನಡೆದಿರುವಂತಹ ಅಧಿವೇಶನ ಅತ್ಯಂತ ಯಶಸ್ವಿ ಹಾಗೂ ಅರ್ಥಪೂರ್ಣವಾಗಿ ನಡೆಯಿತು ಅದಕ್ಕಾಗಿ ಮಾರ್ಗದರ್ಶನ ಮಾಡಿದಂತಹ ತಮಗೆ ಮೊದಲು ನನ್ನ ಧನ್ಯವಾದಗಳನ್ನು ಮತ್ತು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ದಿನಾಂಕ:05.06.2017ರಿಂದ 21.06.2017ರವರೆಗೆ ಹಲವಾರು ವಿಧೇಯಕಗಳ ಬಗ್ಗೆ ಈ ಸದನದಲ್ಲಿ ಚರ್ಚೆ ಮಾಡಿ, ಅನುಮೋದನೆ ನೀಡಿ, ಸರ್ಕಾರ ತನ್ನ ಕಾರ್ಯಭಾರವನ್ನು ನಿರ್ವಹಿಸುವುದಕ್ಕೆ ಈ ಸದನ ಅನುಕೂಲ ಮಾಡಿಕೊಟ್ಟಿದೆ. ಅಷ್ಟೇ ಅಲ್ಲ, ಸಾಕಷ್ಟು ಉತ್ತಮವಾಗಿರುವ ಸಲಹೆಗಳನ್ನು ನೀಡಿದೆ. ಈ ಒಟ್ಟು ಪ್ರಕ್ರಿಯೆಯಲ್ಲಿ ಭಾಗವಹಿಸಿ, ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸದನದ ಎಲ್ಲ ಸದಸ್ಯರಿಗೆ ಮತ್ತು ಸರ್ಕಾರಕ್ಕೆ ಸಹಕರಿಸಿದ ಅಧಿಕಾರಿಗಳಿಗೂ ಸಹ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ನಮ್ಮ ಸದನ ಯಶಸ್ವಿಯಾಗಿ ನಡೆಯಬೇಕಾದರೆ, ಅದರಲ್ಲೂ ಈ ಅಧಿವೇಶನದ ಸಂದರ್ಭದಲ್ಲಿ ಬಹಳ ದೊಡ್ಡ ಪಾತ್ರ ವಹಿಸಿದವರು ಮಾನ್ಯ ಉಪ ಸಭಾಪತಿಗಳು. ಅವರ ಪಾತ್ರ ಅತ್ಯಂತ ವಿಶೇಷವಾದ ರೀತಿಯಲ್ಲಿ ಇತ್ತು. ತಮ್ಮ ಗೈರು ಹಾಜರಿಯಲ್ಲಿ ಸದನದ ಅಧ್ಯಕ್ಷತೆಯನ್ನು ಅವರು ವಹಿಸಿದ್ದರು, ಆ ಸಂದರ್ಭದಲ್ಲಿಯೂ ಸಹ ಅತ್ಯಂತ ಉತ್ತಮವಾಗಿ ಸರ್ಕಾರಕ್ಕೆ ಹಾಗೂ ವಿರೋಧ ಪಕ್ಷಗಳಿಗೆ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/unedited copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾರ್ಗದರ್ಶನ ಮಾಡಿ, ಈ ಸದನದ ಒಟ್ಟು ನಡವಳಿಕೆಗಳನ್ನು ಅರ್ಥಪೂರ್ಣ ಮಾಡಿರುವ ಮಾನ್ಯ ಉಪ ಸಭಾಪತಿಗಳಿಗೆ ವಿಶೇಷವಾಗಿ ಧನ್ಯವಾದಗಳನ್ನು ಸಲ್ಲಿಸುವುದಕ್ಕೆ ಬಯಸುತ್ತಿದ್ದೇನೆ.

ಈ ಬಾರಿ ಸದನದಲ್ಲಿ ಏನು ನಡೆದಿದೆ ಎನ್ನುವುದನ್ನು ಪರಿಣಾಮಕಾರಿಯಾಗಿ ಜನರಿಗೆ ತಿಳಿಸುವ ನಿಟ್ಟಿನಲ್ಲಿ ಪತ್ರಿಕಾ ಮಿತ್ರರು ಬಹಳ ದೊಡ್ಡ ಪಾತ್ರವನ್ನು ವಹಿಸಿದ್ದಾರೆ. ವಿಧಾನ ಪರಿಷತ್ತಿನ ಬಗ್ಗೆ ಜನರಿಗೆ ಸುದ್ದಿ ಮುಟ್ಟಿಸುವಲ್ಲಿ ಎಲೆಕ್ಟ್ರಾನಿಕ್ ಮತ್ತು ಪ್ರಿಂಟ್ ಮಾಧ್ಯಮಗಳು ಬಹಳಷ್ಟು ಶ್ರಮಪಟ್ಟಿವೆ ಹಾಗೂ positive publicity and positive dissemination to people ಮಾಡುವುದಕ್ಕೆ ಸಾಧ್ಯ ಮಾಡಿಕೊಟ್ಟಿವೆ. ಅದಕ್ಕಾಗಿ ಪತ್ರಿಕಾ ರಂಗದ ಎಲ್ಲ ಸಹೋದರ ಸಹೋದರಿಯರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ನಮ್ಮ ಈ ಸದನ ಇಷ್ಟೊಂದು ಉಲ್ಲಾಸದಿಂದ ಹಾಗೂ ಸ್ನೇಹಪರವಾಗಿರುವ ವಾತಾವರಣದಲ್ಲಿ ನಡೆಯಬೇಕಾದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಜನರ ಬಗ್ಗೆ ಕಳಕಳಿಯಿಂದ ಅಥವಾ ಸರ್ಕಾರದ ಮೇಲಿನ ಪ್ರೀತಿ ಮತ್ತು ನಮ್ಮ ಮುಖ್ಯಮಂತ್ರಿಗಳ ಮೇಲಿನ ಅಭಿಮಾನದಿಂದ ಟೀಕೆ ಮಾಡಿರುತ್ತಾರೆ.

(ಮುಂದುವರಿದಿದೆ)

(911) 21.6.2017 7.30 ಟಿಸಿಹೆಚ್-ಕೆ.ಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಕೆ.ಪಾಟೀಲ್(ಮುಂದುವರೆದಿದೆ)**

ಕೆಲವು ಸಂದರ್ಭಗಳಲ್ಲಿ, ನಮಗೆ ಮನಸ್ಸಿರಲ್ಲಿ ಅಥವಾ ಇರದೇ ಇರಲಿ, ಸಭಾತ್ಯಾಗ ಮಾಡಿ ಮತ್ತೆ ಸದನಕ್ಕೆ ಆಗಮಿಸುವುದು ಮತ್ತು ಸರ್ಕಾರದ ಸಾಧನೆಗಳ ಬಗ್ಗೆ ಸಂತೋಷ ಪಡುವುದು ಇವೆಲ್ಲವೂ ಸಹಿತ ವಿರೋಧ ಪಕ್ಷದ ಇತರ ಸದಸ್ಯರಿಗೆ ಮಾರ್ಗದರ್ಶಕವಾಗಿವೆ. ಅವರಿಗೆ ನನ್ನ ವಿಶೇಷವಾದಂಥ ಅಭಿನಂದನೆ ಮತ್ತು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಹೊರಟ್ಟಿಯವರಂತೂ ಅವರಿಗೆ ಏನು ಅನಿಸುತ್ತದೆಯೋ ಅದನ್ನು ನೇರವಾಗಿ ಹೇಳಿಯೇಬಿಡುತ್ತಾರೆ. ಆ ರೀತಿಯಾಗಿರತಕ್ಕ ಹಲವಾರು ಸಂದರ್ಭಗಳಲ್ಲಿ ತಮ್ಮತನವನ್ನು ಜೆ.ಡಿ(ಎಸ್) ನಾಯಕರಾಗಿ ತೋರಿಸಿದ್ದಾರೆ. ಕೆಲವು ಸಂದರ್ಭಗಳಲ್ಲಿ ರಾಜಕಾರಣವನ್ನು ಮರೆತು ವಾಸ್ತವ ಪರಿಸ್ಥಿತಿಗೆ ತಕ್ಕಂತೆ ಪ್ರತಿಕ್ರಯಿಸುತ್ತಾರೆ. ನಮ್ಮ ಮುಖ್ಯಮಂತ್ರಿಗಳು ರೈತರಿಗೆ ಕಲ್ಯಾಣ ಮಾಡುವಂತಹ ಸಾಲ ಮನ್ನಾದಂಥ ಕಾರ್ಯಕ್ರಮದ ಬಗ್ಗೆ ಹೇಳುವಾಗ, ಆ ಕುರಿತು ತಾವು ನೀಡುವ ಹೇಳಿಕೆ ರಾಜಕೀಯವಾಗಿ ಏನು ಸೂಚಿಸುತ್ತದೆ ಎಂಬುದನ್ನೂ ಯೋಚಿಸದೇ ತಕ್ಷಣವೇ, ಒಂದು ಘಳಿಗೆಯೂ ಯೋಚನೆ ಮಾಡದೇ ಪ್ರಶಂಸೆ ವ್ಯಕ್ತಪಡಿಸಿದರು. ಆ ರೀತಿಯ ಸ್ವಭಾವವನ್ನು ನಾವು ಮಾನ್ಯ ಹೊರಟ್ಟಿಯವರಲ್ಲಿ ಕಾಣುತ್ತೇವೆ. ಈ ಸದನದ ಎಲ್ಲಾ ಸದಸ್ಯರಿಗೆ ತಮ್ಮ ಹಿರಿತನ ಮತ್ತು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅನುಭವದ ಹಿನ್ನೆಲೆಯಲ್ಲಿ ಮಾಗದರ್ಶನ ಮಾಡಿದ್ದಾರೆ ಎಂದು ಹೇಳಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಮಾನ್ಯ ಸಭಾಪತಿಗಳೆ, ಈ ಬಾರಿ ಸದನದಲ್ಲಿ ಸದಸ್ಯರ ಹಾಜರಾತಿ ಕಡೆ ಗಮನಿಸಿದರೆ, ನಮ್ಮ ಆಡಳಿತ ಪಕ್ಷದ ಸದಸ್ಯರ ಮತ್ತು ವಿರೋಧ ಪಕ್ಷದ ಸದಸ್ಯರೆಲ್ಲರ ಉಪಸ್ಥಿತಿ ಬಹಳಷ್ಟು ಇತ್ತು, ಇದು ಶ್ಲಾಘನೀಯವಾದುದು. ಇವರೆಲ್ಲರಿಗೂ ವಿಶೇಷವಾದ ಗೌರವ ಮತ್ತು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದೇರೀತಿ ವಿರೋಧ ಪಕ್ಷದ ಎಲ್ಲಾ ಸದಸ್ಯರುಗಳು ಈ ಸದನಕ್ಕೆ ಒಂದು ರೀತಿಯ ಗಾಂಭೀರ್ಯತೆ ಮತ್ತು ಗೌರವ, ಘನತೆ ಬರುವ ಹಾಗೆ ನಡೆದುಕೊಂಡಿದ್ದಾರೆ. ಅವರೆಲ್ಲರಿಗೂ ನನ್ನ ಧನ್ಯವಾದಗಳು.

ಮಾನ್ಯ ಸಭಾಪತಿಗಳೆ, ಸದನದ ಕಲಾಪಗಳ ಜೊತೆಗೆ, ಮಾಡುವಂತಹ ಇತರ ಅನೇಕ ಕೆಲಸಗಳೂ ಇರುತ್ತವೆ. ಅಂತಹ ಸಂದರ್ಭದಲ್ಲಿಯೂ ನಮ್ಮ ಆಡಳಿತ ಪಕ್ಷದ ಹಾಜರಾತಿ ಕಡಿಮೆ ಆಗದ ಹಾಗೆ, ಅವರು ಕೊಠಡಿಗೆ ಹೋಗಿದ್ದರೆ, ಅಲ್ಲಿ ಹೋಗಿ ಅವರನ್ನು ಕರೆದುಕೊಂಡು ಬರುವುದು, ಅವರು ಕ್ಯಾಂಟೀನ್‌ಗೆ ಹೋಗಿದ್ದರೆ ಕ್ಯಾಂಟೀನ್‌ಗೆ ಅಲ್ಲಿಗೆ ಹೋಗಿ ಕರೆದುಕೊಂಡು ಬರುವುದು ಮತ್ತು ಅದಕ್ಕಿಂತ ಹೆಚ್ಚಾಗಿ ಮಂತ್ರಿಗಳನ್ನು ಸದನಕ್ಕೆ ಬರುವ ಹಾಗೆ ಮಾಡುವುದು, Bill copy ಬರುವ ಹಾಗೆ ವ್ಯವಸ್ಥೆ ಮಾಡುವುದು ಮೊದಲ್ಗೊಂಡು, ಅಧಿಕಾರಿಗಳ ಗ್ಯಾಲರಿಯಲ್ಲಿ ಯಾರಿದ್ದಾರೆ, ಯಾರಿಲ್ಲ ಎನ್ನುವುದನ್ನು ನೋಡಿಕೊಂಡು ವ್ಯವಸ್ಥೆಯನ್ನು ಸುನಿಶ್ಚಿತಗೊಳಿಸುವುದರಲ್ಲಿ ನಮ್ಮ ಮುಖ್ಯ ಸಚೇತಕರಾದ ಮಾನ್ಯ ಐವನ್ ಡಿ'ಸೋಜಾರವರು ಯಶಸ್ವಿಯಾಗಿದ್ದಾರೆ. ಅವರಿಗೂ ಸಹಿತ ಸರ್ಕಾರದ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ನಮ್ಮ ಹಿರಿಯ ಸಚಿವರಾದಂಥ ಕಾಗೋಡು ತಿಮ್ಮಪ್ಪನವರು ಆಸಕ್ತಿ ವಹಿಸಿ ಮಾರ್ಗದರ್ಶನ ಮಾಡಿದ್ದಾರೆ.

ನಮ್ಮ ವಿರೋಧ ಪಕ್ಷದ ಮುಖ್ಯ ಸಚೇತಕರು, ಬಿಲ್ ಪಾಸ್ ಆಗುತ್ತಿದ್ದರೂ ಹೊರಗೆ ಹೋಗಿ ಮತ್ತೆ ಸದಸ್ಯರನ್ನು ಕರೆದುಕೊಂಡು ಬರುವುದು, ಆ ಬಿಲ್ ಪಾಸ್ ಆಗುವುದಕ್ಕೆ ಮುಂಚೆ ಹೆಚ್ಚು ಚರ್ಚೆ ಆಗುವ ಹಾಗೆ ಮಾಡುವುದು ಮತ್ತು ಅದರ ಮೂಲಕ ಜನರಿಗೆ ಹೆಚ್ಚು ಅನುಕೂಲ ಆಗಬೇಕು ಎಂದು ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ತಮ್ಮ ಕಾರ್ಯಭಾರವನ್ನು ಅತ್ಯಂತ ಗಾಂಭೀರ್ಯತೆಯಿಂದ ನಿರ್ವಹಿಸಿದ್ದಾರೆ. ಅವರಿಗೂ ಸರ್ಕಾರದ ಪರವಾಗಿ ನಾನು ಅಭಿನಂದನೆ ಸಲ್ಲಿಸುತ್ತೇನೆ. ಒಟ್ಟಾರೆ ನಮ್ಮ ಈ ಅಧಿವೇಶನ ಅತ್ಯಂತ ಯಶಸ್ವಿಯಾಗಿ ನಡೆಯಿತು. ಅದಕ್ಕೆ ಮಾನ್ಯ ಸಭಾಪತಿಗಳ ಸಹಕಾರ, ಮಾರ್ಗದರ್ಶನ ಕೂಡ ಕಾರಣವಾಗಿದೆ. ಹಲವಾರು ಘಟನೆಗಳು ಸದನದಲ್ಲಿ ನಡೆಯುತ್ತಿರುತ್ತವೆ. ಅಂತಹ ಘಟನೆಗಳು ನಡೆದಿದ್ದರೂ ಅದು ನಡೆದಿಲ್ಲ ಎನ್ನುವಂಥ ಮಾನಸಿಕ ಸ್ಥಿತಿ ಸದನದಲ್ಲಿ ರೂಪುಗೊಳ್ಳುವುದಕ್ಕೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ತಾವು, ಮಾನ್ಯ ಉಪಸಭಾಪತಿಗಳು ಹಾಗೂ ಮಾನ್ಯ ಉಗ್ರಪ್ಪನವರನ್ನು ಮೊದಲ್ಗೊಂಡು ಎಲ್ಲಾ ಸದಸ್ಯರುಗಳು ಆ ವಾತಾವರಣವನ್ನು ಸೃಷ್ಟಿ ಮಾಡಿದರು. ಮಾನ್ಯ ಎಸ್.ಆರ್.ಪಾಟೀಲರಂಥ ಹಿಂದಿನ ಸಭಾನಾಯಕರು ಸಹ ಮಾರ್ಗದರ್ಶನ ಮಾಡಿದರು. ಇವರೆಲ್ಲರಿಗೂ ನಾನು ಮತ್ತೊಮ್ಮೆ ಅಭಿನಂದನೆ ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್.ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೆ, ಈ ಬಾರಿಯ ಅಧಿವೇಶನ ಬಹಳ ಮಹತ್ವಪೂರ್ಣವಾದುದು. ಸಭಾಪತಿಗಳಾಗಿ ಈ ಅಧಿವೇಶನವನ್ನು ಯಶಸ್ವಿಗೊಳಿಸಿದ್ದಕ್ಕೆ ನಿಮಗೆ ಧನ್ಯವಾದಗಳು. ಅದಕ್ಕಿಂತಲೂ ಕೂಡ, ನಮ್ಮ ಸ್ನೇಹಿತರು ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದ ಸಂದರ್ಭ ಏನಿದೆ, ಆ ಹಿನ್ನೆಲೆಯಲ್ಲಿ ಈ ಅಧಿವೇಶನ ಜೀವನದಲ್ಲಿ ಎಂದಿಗೂ ಮರೆಯಲಾಗದೇ ಇರುವಂತಹ ಅಧ್ಯಾಯವಾಗಿರುತ್ತದೆ ಎಂದು ನಾನು ಭಾವಿಸುತ್ತೇನೆ. ಇಡೀ ಕರ್ನಾಟಕ ರಾಜ್ಯದ ಜನ, ಏನಾಗುತ್ತದೆ ಏನಾಗುತ್ತದೆ ಎಂದು ಎದುರು ನೋಡುತ್ತಿದ್ದರು. ಆದರೆ ಅದರಲ್ಲಿ ನೀವು ಯಶಸ್ವಿಯಾದಿರಿ. ಅದಕ್ಕೆ ನಾನು ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ಅವಿಶ್ವಾಸ ನಿರ್ಣಯ ಎನ್ನುವುದು ಒಂದು ಪ್ರಕ್ರಿಯೆ ಅಷ್ಟೆ. ಆಡಳಿತ ಪಕ್ಷ-ವಿರೋಧ ಪಕ್ಷ ಎಂದಿದ್ದಾಗ ಇಂಥದ್ದು ನಡೆದೇ ಇರುತ್ತದೆ. ಆದರೆ voting ಆದ ದಿನವೇ, ಆ ಘಟನೆ ಮರೆತು ಹೋಯಿತು. ಮತ್ತೆ ನಾವೆಲ್ಲರೂ ವಿಧಾನ ಪರಿಷತ್ತಿನ ಸದಸ್ಯರಾಗಿ ರಾಜ್ಯದ ಹಿತದೃಷ್ಟಿಯಿಂದ ಒಟ್ಟಾಗಿ ಶ್ರಮಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನವನ್ನು ಮುಂದುವರೆಸುತ್ತಿದ್ದೇವೆ. ಮುಂದಿನ ದಿನಗಳಲ್ಲಿಯೂ ಕೂಡ ತಮ್ಮ ಮಾರ್ಗದರ್ಶನ ಇರಲಿ ಎಂದು ಹೇಳಿ, ಮತ್ತೊಮ್ಮೆ ಅಭಿನಂದನೆ ಸಲ್ಲಿಸುತ್ತೇನೆ.

ನಮ್ಮ ಉಪ ಸಭಾಪತಿಗಳು ಅನೇಕ ಸಂದರ್ಭಗಳಲ್ಲಿ ಸಮಯೋಚಿತವಾದ ತೀರ್ಮಾನಗಳನ್ನು ತೆಗೆದುಕೊಂಡು ಉತ್ಕೃಷ್ಟವಾಗಿ ಮಾರ್ಗದರ್ಶನ ಮಾಡಿದ್ದಾರೆ, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಇಲ್ಲಿ ಬಂದಾಗ ವಿರೋಧ ಪಕ್ಷ-ಆಡಳಿತ ಪಕ್ಷ ಎಂದು ತಾರತಮ್ಯ ಮಾಡುವುದಿಲ್ಲ. ಇದನ್ನು ನಾನು ಗಮನಿಸಿದ್ದೇನೆ. ಅವರು ಎಲ್ಲರ ಜೊತೆ ಆತ್ಮೀಯ ಸ್ನೇಹಿತರಂತೆ ನಡೆದುಕೊಳ್ಳುತ್ತಾರೆ. ಅವರ ನಡವಳಿಕೆ ಬಗ್ಗೆ ನಮಗೆ ತುಂಬಾ ಸಂತೋಷವಾಗುತ್ತದೆ. ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಸಭಾನಾಯಕರಿಗೆ ಇವತ್ತು ಆರೋಗ್ಯ ಸರಿಯಿಲ್ಲ ಎನ್ನುವ ವಿಷಯ ಗೊತ್ತಾಯಿತು. ಅವರೂ ಕೂಡ ನಮ್ಮ ಜೊತೆ ಒಳ್ಳೆಯ ರೀತಿಯಲ್ಲಿ ನಡೆದುಕೊಂಡಿದ್ದಲ್ಲದೇ, ಒಳ್ಳೆಯ ಸಭಾನಾಯಕರಾಗಿ ನಾಯಕತ್ವವನ್ನು ವಹಿಸಿಕೊಂಡು ಹೋಗುತ್ತಿರುವ ಅವರನ್ನೂ ನಾನು ಅಭಿನಂದಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಮಂತ್ರಿ ಮಂಡಲದ ಎಲ್ಲಾ ಮಂತ್ರಿಗಳು ಸರ್ಕಾರದ ಮಂತ್ರಿಗಳಾಗಿ ಅವರ ಕರ್ತವ್ಯವನ್ನು ಮಾಡುವಾಗ, ನಾವು ಟೀಕೆ ಮಾಡುತ್ತೇವೆ. ಆ ಟೀಕೆಯನ್ನು sportive ಆಗಿ ತೆಗೆದುಕೊಂಡು ಅದಕ್ಕೆ ಸರಿಯಾದ ದಿಕ್ಕಿನಲ್ಲಿ ಉತ್ತರ ಕೊಡುತ್ತಿದ್ದಾರೆ ಮತ್ತು ಆ ನಿಟ್ಟಿನಲ್ಲಿ ಪ್ರಯತ್ನವನ್ನೂ ಮುಂದುವರೆಸಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಅವರೂ ಕೂಡ ಸಹಕಾರ ಕೊಟ್ಟಿದ್ದಾರೆ, ಅವರಿಗೂ ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುತ್ತೇನೆ.

ಸರ್ಕಾರದ ಮುಖ್ಯ ಸಚೇತಕರ ಬಗ್ಗೆ ಹೇಳುವುದಾದರೆ, ನಿಮ್ಮನ್ನು (ಶ್ರೀ ಐವನ್ ಡಿ'ಸೋಜಾ) ನೋಡಿದ ನಂತರ ಬೇರೆ ಯಾವ ಸ್ನೇಹಿತರಿಗೂ ಆ ಸ್ಥಾನ ಕೊಡುವುದನ್ನು ನಾನು ಒಪ್ಪುವುದಿಲ್ಲ. ಯಾವುದೋ ಜನ್ಮದಲ್ಲಿ ಮಾಡಿದಂತಹ ಪುಣ್ಯ ಅಲ್ಲ, ಕರ್ಮ ಮಾಡಿದ್ದರೆ ಆ ಸ್ಥಾನಕ್ಕೆ ಬರುತ್ತಾರೆ ಎಂದು ನನಗನಿಸುತ್ತದೆ. ಏಕೆಂದರೆ, ಮಂತ್ರಿಗಳು ಎಲ್ಲೆಲ್ಲೋ ಇರುತ್ತಾರೆ, ಅವರನ್ನು ಇವರು ಕರೆದುಕೊಂಡು ಬರುವುದಲ್ಲ, ಎಳೆದುಕೊಂಡು ಬಂದು ಸದನದಲ್ಲಿ ಕೂರಿಸುತ್ತಾರೆ. ಅದೇರೀತಿ ಅಧಿಕಾರಿಗಳಿಗೆ ಸಂಬಂಧಪಟ್ಟಂತೆಯೂ ಅವರು ಕೆಲಸ ಮಾಡುತ್ತಿದ್ದಾರೆ. ಅವರು ಬಹಳ ಒಳ್ಳೆಯ ಸಚೇತಕರಾಗಿದ್ದಾರೆ. ಇಂಥವರನ್ನು ಮಂತ್ರಿಯಾಗಿ ಮಾಡುವುದಕ್ಕೆ ಹೋಗಬೇಡಿ, ಅವರು ಅದೇ ಸ್ಥಾನದಲ್ಲಿರಲಿ. ಈ ಸದನ ನಡೆಯುವುದಕ್ಕೆ ಅವರೇ ಕಾರಣವಾಗಿರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅವರು ಇಲ್ಲದೇ ಇದ್ದಿದ್ದರೆ ಸಚಿವರನ್ನು ಕರೆದುಕೊಂಡು ಬಂದು ಸದನದಲ್ಲಿ ಕೂರಿಸುವುದು ಬಹಳ ಕಷ್ಟವಾಗುತ್ತಿತ್ತು. ಭಗವಂತ ಮಾನ್ಯ ಐವನ್ ಡಿ'ಸೋಜಾರವರಿಗೆ ಇನ್ನೂ ಉನ್ನತ ಸ್ಥಾನವನ್ನು ನೀಡಲಿ ಎಂದು ಬಯಸುತ್ತೇನೆ.

ಈ ಅಧಿವೇಶನದಲ್ಲಿ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಮಾನ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್‌ರವರು ಬಹಳ ಮುಖ್ಯ ಪಾತ್ರ ವಹಿಸಿದರು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರು ಹಿಂದಿನ ದಿನವೂ ದೂರವಾಣಿ ಮುಖಾಂತರ ಕರೆ ಮಾಡಿ ಮಾನ್ಯ ಸದಸ್ಯರಿಗೆ ತಿಳಿಸುತ್ತಾರೆ, ಸದನಕ್ಕೆ ಬಂದು, ಯಾರು ಬಂದಿರುವುದಿಲ್ಲವೋ ಅಂಥವರಿಗೆ ಇನ್ನೊಮ್ಮೆ ಕರೆ ಮಾಡಿ ಬರಹೇಳುತ್ತಾರೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಸದಸ್ಯರ attendance ಏನಿದೆ,.. . ಪತ್ರಿಕೆಗಳಲ್ಲಿ, ವಿಧಾನ ಮಂಡಲದಲ್ಲಿ ಎಲ್ಲಾ ಕುರ್ಚಿಗಳು ಖಾಲಿ ಎಂದು ಬರೆದಿರುವುದನ್ನು ಕಾಣುತ್ತೇವೆ. ವಿಧಾನಸಭೆಯೊಂದೇ ವಿಧಾನಮಂಡಲ ಅಲ್ಲ, ವಿಧಾನ ಪರಿಷತ್ತಿನಲ್ಲಿ ಯಾವಾಗಲೂ ಅತಿ ಹೆಚ್ಚು ಹಾಜರಾತಿ ಇರುತ್ತದೆ. ಇದಕ್ಕೆ ನಮ್ಮ ಇಬ್ಬರು ಮುಖ್ಯ ಸಚೇತಕರು ಕಾರಣರಾಗಿದ್ದಾರೆ. ಮಾನ್ಯ ಗಣೇಶ್ ಕಾರ್ಣಿಕ್‌ರವರು ನಮ್ಮ ಎಲ್ಲಾ ಸದಸ್ಯರನ್ನು ಪ್ರೀತಿ–ವಿಶ್ವಾಸದಿಂದ ಕರೆದುಕೊಂಡು ಬರುತ್ತಾರೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/**unedited copy**, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಾತ್ಯಾತೀತ ಜನತಾದಳದ ಹಿರಿಯ ಸದಸ್ಯರಾಗಿರುವ ಸನ್ಮಾನ್ಯ ಹೊರಟ್ಟಿಯವರು ಸದನದ ಕಾರ್ಯಕಲಾಪಗಳಲ್ಲಿನ ಭಾಗವಹಿಸುವಿಕೆ ಏನಿದೆ, ಅದು ಎಲ್ಲಾ ಸದಸ್ಯರಿಗೆ ಮಾದರಿಯಾಗಿದೆ. ಅವರಿಗೂ ನಾನು ಅಭಿನಂದನೆ ಸಲ್ಲಿಸುತ್ತೇನೆ. ಈಗೇನು ಸದನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರು ಹಾಜರಿರುತ್ತಾರೆಯೋ ಅದೇರೀತಿ ಅವರು ಇನ್ನೂ ಹೆಚ್ಚು ಭಾಗವಹಿಸುವಂತಾಗಲಿ ಎಂದು ಹಾರೈಸಿ, ವಿಧಾನ ಪರಿಷತ್ತಿನ ಕಾರ್ಯದರ್ಶಿ, ಸಿಬ್ಬಂದಿ ವರ್ಗ, ರಾಜ್ಯ ಸರ್ಕಾರದ ಬೇರೆ ಬೇರೆ ಇಲಾಖೆಗಳ ಸಿಬ್ಬಂದಿ ವರ್ಗದವರೆಲ್ಲರಿಗೂ ನಾನು ಅಭಿನಂದನೆ ಸಲ್ಲಿಸುತ್ತೇನೆ.

**(ಮುಂದು . . .)**

(912) 21.6.2017 7.40 ಪಿಕೆ:ಕೆಎಸ್

**ಶ್ರೀ ಕೆ.ಎಸ್.ಈಶ್ವರಪ್ಪ (ಮುಂದುವರೆದಿದೆ)**

ಮೊದಲು ಪತ್ರಿಕೆಗಳಲ್ಲಿ ಮತ್ತು ಬೇರೆ ಬೇರೆ ಮಾಧ್ಯಮಗಳಲ್ಲಿ ಅನೇಕ ಸಲ ವಿಧಾನಸಭೆಗೆ ಅತಿ ಹೆಚ್ಚು ಪ್ರಚಾರ ಕೊಡುತ್ತಿದ್ದುದ್ದನ್ನು ನೋಡುತ್ತಿದ್ದೆವು. ಈಗ ಹಾಗಿಲ್ಲ. ಮಾಧ್ಯಮದ ಮಿತ್ರರು ನಮಗಿಂತ active ಇರುತ್ತಾರೆ. ಒಂದೊಂದು ಘಟನೆಯ ಬಗ್ಗೆ ಪತ್ರಿಕೆಯಲ್ಲಿ ಓದಿದಾಗಲೂ, ಹೌದು ಇದು ನಡೆದಿದೆ, ನಡೆದಿದೆ ಎಂದೆನಿಸುತ್ತದೆ. ಇದು ನಮಗೆ ಖುಷಿ ಕೊಡುವಂಥದ್ದು. ಇಡೀ ರಾಜ್ಯದ ಜನತೆಗೆ ಸ್ಪಷ್ಟವಾದ, ಸತ್ಯವಾದ ವಿಚಾರಗಳು ಪತ್ರಿಕೆ ಮತ್ತಿತರ ಬೇರೆ ಬೇರೆ ಎಲೆಕ್ಟ್ರಾನಿಕ್ ಮಾಧ್ಯಮಗಳ ಮುಖಾಂತರ ಹೋಗುತ್ತದೆ. ಆದ್ದರಿಂದ ಅವರಿಗೂ ಅಭಿನಂದನೆ ಸಲ್ಲಿಸುತ್ತೇನೆ. ಒಟ್ಟಾರೆ ಈ ಅಧಿವೇಶನದಲ್ಲಿ ಕರ್ನಾಟಕ ರಾಜ್ಯದ ಜನತೆಯ ಒಳಿತಿಗಾಗಿ ಒಳ್ಳೆಯ ಚರ್ಚೆ ಆಗಿದೆ ಎನ್ನುವ ಸಂತೃಪ್ತಿ ಇದೆ. ಅವಿಶ್ವಾಸ ನಿರ್ಣಯದ ಸಂದರ್ಭದಲ್ಲಿ ಮಾನ್ಯ ಸಭಾಪತಿಗಳು ಯಶಸ್ವಿಯನ್ನು ಕಂಡಿದ್ದಾರೆ ಎನ್ನುವ ವಿಚಾರವನ್ನು ಮೊತ್ತೊಮ್ಮೆ ಪ್ರಸ್ತಾಪಿಸುವುದರ ಜೊತೆಗೆ ಅವರಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ನಿಮ್ಮ ಜೀವನದಲ್ಲಿ ಇದನ್ನು ನೀವು ಮರೆಯುವುದಕ್ಕಾಗುವುದಿಲ್ಲ, ನಮಗೂ ಮರೆಯುವುದಕ್ಕಾಗುವುದಿಲ್ಲ. ಆದರೆ ಅದು ಮುಗಿದ ಹೋದ ಘಟನೆ. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದ ಸದಸ್ಯರು ಒಟ್ಟಾಗಿ ರಾಜ್ಯದ ಅಭಿವೃದ್ಧಿಗೆ ಕೆಲಸ ಮಾಡುತ್ತೇವೆ ಎಂದು ಹೇಳಿ ಮತ್ತೊಮ್ಮೆ ಎಲ್ಲರಿಗೂ ಅಭಿನಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಮಾನ್ಯ ಸಭಾಪತಿಗಳೆ, ಇವತ್ತಿನ ಈ ಅಧಿವೇಶನದಲ್ಲಿ ಪಾಲ್ಗೊಂಡಿರುವಂತಹ ವಿಧಾನ ಪರಿತ್ತಿನ

"ತಿದ್ದುಪಡಿಯಾಗದ ಪ್ರತಿ/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಯದರ್ಶಿಯವರು ಮುಂದಿನ ತಿಂಗಳ ಕೊನೆಯಲ್ಲಿ ನಿವೃತ್ತಿ ಹೊಂದಲಿದ್ದಾರೆ. ಇದು ಅವರಿಗೆ ಕೊನೆಯ ಅಧಿವೇಶನ. ಈ ಅಧಿವೇಶನದ ಸಂದರ್ಭದಲ್ಲಿ ಹಾಗೂ ಬೇರೆ ಸಂದರ್ಭದಲ್ಲಿ ನಮ್ಮ ಒಟ್ಟು ವಿಧಾನ ಪರಿಷತ್ತಿನ ಸದಸ್ಯರ ಜೊತೆಗೆ ಉತ್ತಮ ನಡವಳಿಕೆಯನ್ನು ಹೊಂದಿರುತ್ತಿದ್ದರು. ಒಬ್ಬ ಅತ್ಯಂತ ಸಜ್ಜನ ವ್ಯಕ್ತಿ ಮತ್ತು ಎಲ್ಲರ ಜೊತೆ ಸ್ನೇಹಪರವಾಗಿ ನಡೆದುಕೊಳ್ಳುವಂತಹ, ಅಹಂ ಇಲ್ಲದೇ ಇರುವಂತಹ ಅಧಿಕಾರಿಯಾಗಿ ಕೆಲಸ ಮಾಡಿದ ಮಾನ್ಯ ಶ್ರೀನಿವಾಸ್ ಅವರಿಗೆ ನಾನು ವಿಶೇಷವಾದ ಅಭಿನಂದನೆ ಸಲ್ಲಿಸುತ್ತೇನೆ. ಇದರ ಜೊತೆಗೆ, ಈ ಅಧಿವೇಶನದಲ್ಲಿ ವಿಧಾನ ಪರಿಷತ್ತಿನ ಅಧಿಕೃತ ವರದಿಗಾರರೇನಿರುತ್ತಾರೋ, they will be in competition with Assembly also. ಅವರ ಪಾತ್ರ ಬಹಳಷ್ಟು ಮಹತ್ವದ್ದಾಗುತ್ತದೆ. ಅವರ ಬಗೆಗೆ ವಿರೋಧ ಪಕ್ಷದ ನಾಯಕರು ಏನು ಹೇಳಿದರೋ ಅದರ ಜೊತೆಗೆ ನಾನೂ ಧ್ವನಿಗೂಡಿಸುತ್ತೇನೆ ಎಂದು ಹೇಳುತ್ತಾ, ಮತ್ತೊಮ್ಮೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:-** ಈಗ ರಾಷ್ಟ್ರಗೀತೆಯೊಂದಿಗೆ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತಿದ್ದೇನೆ.

**(ಈ ಹಂತದಲ್ಲಿ ಸದನದಲ್ಲಿ ಉಪಸ್ಥಿರಿದ್ದವರೆಲ್ಲರೂ ಎದ್ದು ನಿಂತು ರಾಷ್ಟ್ರಗೀತೆಗೆ ಗೌರವ ಸಲ್ಲಿಸಿದರು. ಸದನದ ಕಲಾಪವು ರಾತ್ರಿ 7.45 ಗಂಟೆಗೆ ಮುಗಿಯಿತು ಹಾಗೂ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"